ಬುಧವಾರ, ಅಕ್ಟೋಬರ್ 15, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಣಜಿ ಅಭಿಯಾನ

ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಬುಧವಾರ ರಾಜ್‌ಕೋಟ್‌ನ ಕ್ರೀಡಾಂಗಣದಲ್ಲಿ ಸೌರಾಷ್ಟ್ರ ವಿರುದ್ಧ ರಣಜಿ ಟ್ರೋಫಿಯಲ್ಲಿ ಅಭಿಯಾನ ಆರಂಭಿಸಲಿದೆ

ಅಮೆರಿಕಕ್ಕೆ ಅಂಚೆ

ಭಾರತದಿಂದ ಅಮೆರಿಕಕ್ಕೆ ಅಂಚೆ ಸೇವೆಗಳನ್ನು ಬುಧವಾರದಿಂದಲೇ (ಅ.15) ಪುನರಾರಂಭಿಸಲಾಗುವುದು ಎಂದು ಭಾರತೀಯ ಅಂಚೆ ಇಲಾಖೆ ಹೇಳಿದೆ

ದೇವದಾರಿ: ಕಾಡು ಕಡಿತಲೆ ಶುರು

ಜನಸಂಗ್ರಾಮ ಪರಿಷತ್, ರಾಜ್ಯ ರೈತ ಸಂಘದಿಂದ ವಿರೋಧ • ಎಣಿಕೆಗೆ ಬಂದವರ ಹಿಮ್ಮೆಟ್ಟಿಸಿದ ಹೋರಾಟ

• ಹರಿಶಂಕರ್ ಆರ್.

ಬಳ್ಳಾರಿ: ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಅರಣ್ಯ ಪ್ರದೇಶದಲ್ಲಿ 'ದೇವದಾರಿ' ಗಣಿಗಾರಿಕೆಗೆ ಮುಂದಾಗಿರುವ ಕುದುರೆಮುಖ ಕಬ್ಬಿಣ ಅದಿರು ಕಂಪನಿ (ಕೆಐಒಸಿಎಲ್) ಅದಕ್ಕಾಗಿ ಕಾಡು ಕಡಿತಲೆಯ ಪ್ರಕ್ರಿಯೆಯನ್ನು ಮಂಗಳವಾರದಿಂದ ಆರಂಭಿಸಿದೆ.

401.57 ಹೆಕ್ಟೇರ್ ಅರಣ್ಯದ 338 ಹೆಕ್ಟೇರ್ ವಿಶಾಲ ಪ್ರದೇಶದಲ್ಲಿ ಕೆಐಒಸಿಎಲ್ ಗಣಿಗಾರಿಕೆಗೆ ಸಿದ್ಧತೆ ನಡೆಸಿದೆ. ಅರಣ್ಯ ಭೂಮಿ ಗುತ್ತಿಗೆ ಒಡಂಬಡಿಕೆಯೂ ಆಗಿದೆ. ಆದರೆ, ಗಣಿಗಾರಿಕೆಗೆ ಕಾರ್ಯಾದೇಶ ಇನ್ನೂ ಸಿಕ್ಕಿಲ್ಲ.

ಅದಕ್ಕೂ ಮೊದಲೇ ಅರಣ್ಯ ಪ್ರದೇಶದಲ್ಲಿ ಮರಗಳನ್ನು ಉರುಳಿಸುವ ಕಾರ್ಯಕ್ಕೆ ಕೆಐಒಸಿಎಲ್ ಚಾಲನೆ ನೀಡಿದ್ದು, ಏಜೆನ್ಸಿಗೆ ಗುತ್ತಿಗೆ ಕೊಟ್ಟಿದೆ. ಮರಗಳ ಎಣಿಕೆ, ಕಡಿತಕ್ಕೆ ಅರಣ್ಯ ಇಲಾಖೆಯಿಂದ ಪಡೆಯಬೇಕಾದ ಅನುಮತಿ ಮತ್ತು ಪ್ರಕ್ರಿಯೆಗಾಗಿ ₹8.99 ಲಕ್ಷಕ್ಕೆ (ಜಿಎಸ್‌ಟಿ ಸಹಿತ) ಗುತ್ತಿಗೆ ನೀಡಲಾಗಿದೆ.

ಆರಂಭದಲ್ಲಿ 100 ಹೆಕ್ಟೇರ್ ಪ್ರದೇಶದಲ್ಲಿ ಮರಗಳ ಗುರುತಿಸುವ ಕಾರ್ಯ ನಡೆಯುತ್ತದೆ. ಅದರಂತೆ 'ಎಸ್‌ಟಿಪಿ ಎಂಟರ್‌ಪ್ರೈಸಸ್' ಎಂಬ ಕಂಪನಿಯ ಸಿಬ್ಬಂದಿ ಮಂಗಳವಾರ ಸ್ವಾಮಿಮಲೆ ಅರಣ್ಯ ಪ್ರದೇಶದಲ್ಲಿ ಮರಗಳ ಎಣಿಕೆ ಮತ್ತು ಅವುಗಳಿಗೆ ಸಂಖ್ಯೆ ನೀಡುವ ಕಾರ್ಯವನ್ನು ಆರಂಭಿಸಿದರು. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಬಂದ ಜನಸಂಗ್ರಾಮ ಪರಿಷತ್, ರೈತ ಸಂಘದ ಕಾರ್ಯಕರ್ತರು ಆಕ್ಷೇಪಿಸಿದರು.

> ಗಣಿ ಗುತ್ತಿಗೆ ಒಪ್ಪಂದ ಬಳಿಕ ಮರಗಳ ಎಣಿಕೆಗೆ ಅನುಮತಿ ಅಗತ್ಯವಿಲ್ಲ. ಆದರೆ, ಮರಗಳನ್ನು ಕಡಿಯಲು ಅರಣ್ಯ ಇಲಾಖೆಯ ಅನುಮತಿ ಬೇಕು. ಗಣಿಗಾರಿಕೆ ಕಾರ್ಯಾದೇಶ ಇನ್ನೂ ಕೊಡಲಾಗಿಲ್ಲ
> **ಬಸವರಾಜು,** ಅರಣ್ಯ ಉಪ ಸಂರಕ್ಷಣಾಧಿಕಾರಿ, ಬಳ್ಳಾರಿ ವಲಯ

ಅನುಮತಿ ಪಡೆದಿಲ್ಲ ಎಂದ ಸಂಘಟನೆಗಳು: ಸ್ವಾಮಿಮಲೈ ಅರಣ್ಯ ಪ್ರದೇಶದಲ್ಲಿ ಮರಗಳ ಎಣಿಕೆ ಕಾರ್ಯ ನಡೆಯುತ್ತಿರುವುದನ್ನು ತಿಳಿದ ಜನಸಂಗ್ರಾಮ ಪರಿಷತ್ ಮತ್ತು ರೈತ ಸಂಘದ ಸದಸ್ಯರು ಕೂಡಲೇ ಸ್ಥಳಕ್ಕೆ ತೆರಳಿ ಸಿಬ್ಬಂದಿಯನ್ನು ತಡೆದು, ಹಿಡಿದಿಟ್ಟುಕೊಂಡರು. ಅಲ್ಲಿಯೇ ಹೋರಾಟ ಆರಂಭಿಸಿದರು.

'ಮರಗಳ ಎಣಿಕೆಗೆ ಅರಣ್ಯ ಇಲಾಖೆ ಅನುಮತಿಯನ್ನೇ ಕೊಟ್ಟಿಲ್ಲ. ಹೀಗಿರುವಾಗಲೇ ಏಜೆನ್ಸಿಯು ಎಣಿಕೆ ಆರಂಭಿಸಿದೆ. ಮರಗಳ ಎಣಿಕೆ ಇರಲಿ, ಕಾಡು ಪ್ರವೇಶ ಮಾಡುವುದಕ್ಕೂ ಏಜೆನ್ಸಿಯು ಅರಣ್ಯ ಇಲಾಖೆಯಿಂದ ಅನುಮತಿ ನೀಡಿಲ್ಲ' ಎಂದು ಜನಸಂಗ್ರಾಮ ಪರಿಷತ್, ರೈತ ಸಂಘದ ಕಾರ್ಯಕರ್ತರು ಆರೋಪಿಸಿದರು.

ಸ್ಥಳಕ್ಕೆ ಬಂದ ಕೆಐಒಸಿಎಲ್ ಅಧಿಕಾರಿಗಳು ಹೋರಾಟ ನಿಲ್ಲಿಸಲು ಮನವಿ ಮಾಡಿದರು. ಇದಕ್ಕೆ ಜಗ್ಗದ ಹೋರಾಟಗಾರರು ಅರಣ್ಯ ಇಲಾಖೆಗೆ ದೂರು ನೀಡಿದ್ದು, ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಸಂಡೂರಿನ ಸ್ವಾಮಿಮಲೈ ಅರಣ್ಯ ಪ್ರದೇಶದಲ್ಲಿ ಮರಗಳ ಎಣಿಕೆಗೆ ಬಂದಿದ್ದ ಸಿಬ್ಬಂದಿಯನ್ನು ಹಿಡಿದಿಟ್ಟುಕೊಂಡು ಪ್ರತಿಭಟನೆ ಕುಳಿತಿದ್ದ ಜಸಂಗ್ರಾಮ ಪರಿಷತ್, ರೈತ ಸಂಘದ ಹೋರಾಟಗಾರರು

ಕೆಐಒಸಿಎಲ್‌ಗೆ ಡಿಸೆಂಬರ್ ಭೀತಿ

'ಕೆಐಒಸಿಎಲ್‌ನ ದೇವದಾರಿ ಗಣಿಯ ಗುತ್ತಿಗೆ ಡಿಸೆಂಬರ್‌ಗೆ ಮುಗಿಯಲಿದೆ. ಅಷ್ಟರಲ್ಲಿ ಗಣಿಗಾರಿಕೆ ಆರಂಭಿಸಿ ಅದಿರು ಸಾಗಿಸುವ ಅನಿವಾರ್ಯ ಕಂಪನಿಗೆ ಇದೆ. ಗಣಿಗಾರಿಕೆ ಪ್ರಕ್ರಿಯೆ ತರಾತುರಿಯಲ್ಲಿ ನಡೆಸುತ್ತಿದೆ. ಆದರೆ, ಸಂಘಟನೆಗಳಿಂದ ಗಣಿಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಕಂಪನಿಗೆ ಬಿಸಿತುಪ್ಪವಾಗಿದೆ. ಒಂದು ಬಾರಿ ಗುತ್ತಿಗೆ ರದ್ದಾದರೆ ಕಂಪನಿ, ಎಲ್ಲ ಅನುಮತಿಗಳನ್ನು ಹೊಸದಾಗಿ ಪಡೆಯಬೇಕಾದ ಸಂದಿಗ್ಧತೆ ಇದೆ. ಈ ಮಧ್ಯೆ ಈ ವಿಷಯವನ್ನು ಕೇಂದ್ರ ಸರ್ಕಾರವೂ ಗಂಭೀರವಾಗಿ ಪರಿಗಣಿಸಿದೆ' ಎಂದು ಗೊತ್ತಾಗಿದೆ.

ಸುದ್ದಿ 2 ನಿಮಿಷ

ಡಿಕೆಶಿ ಹೇಳಿಕೆ ಮೂರ್ಖತನದ ಪರಮಾವಧಿ: ಶಾಸಕ ರಾಜಣ್ಣ

ತುಮಕೂರು: 'ಮುಖ್ಯಮಂತ್ರಿ ಆಗಬೇಕಾದರೆ ಶಾಸಕರು ಲೆಕ್ಕಕ್ಕೆ ಇಲ್ಲ. ಹೈಕಮಾಂಡ್ ಮುಖ್ಯ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿರುವುದು ಮೂರ್ಖತನದ ಪರಮಾವಧಿ' ಎಂದು ಶಾಸಕ ಕೆ.ಎನ್. ರಾಜಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಸಕರು ಲೆಕ್ಕಕ್ಕೆ ಇಲ್ಲ ಎಂದು ಹೇಳುವುದು ಮೂರ್ಖತನ. ಇಂತಹ ಗೊಂದಲಗಳಿಗೆ ಹೈಕಮಾಂಡ್ ತೆರೆ ಎಳೆಯಬೇಕು' ಎಂದರು.

'ಸಿದ್ದರಾಮಯ್ಯ ಅವರು ಶಾಸಕರಿಂದ ಆಯ್ಕೆಯಾಗಿ, ಮುಖ್ಯಮಂತ್ರಿ ಆಗಿದ್ದಾರೆ. ಮುಂದೆ ಮುಖ್ಯಮಂತ್ರಿ ಬದಲಾವಣೆ ವೇಳೆ ಹೈಕಮಾಂಡ್ ವೀಕ್ಷಕರನ್ನು ಕಳುಹಿಸಿ, ಶಾಸಕರಿಂದ ಅಭಿಪ್ರಾಯ ಸಂಗ್ರಹಿಸುತ್ತದೆ. ಈ ಹಿನ್ನೆಲೆ ಇಟ್ಟುಕೊಂಡೇ ಸಿದ್ದರಾಮಯ್ಯ ಅವರು ಶಾಸಕರ ಅಭಿಪ್ರಾಯ ಮುಖ್ಯ ಎಂದಿದ್ದಾರೆ' ಎಂದರು.

ದೇವರಾಜ ಅರಸು ಶಾಸಕ ಆಗಿರದಿದ್ದರೂ ಮುಖ್ಯಮಂತ್ರಿಯಾಗಿದ್ದರು. ಇದಕ್ಕೆಲ್ಲ ಶಾಸಕರ ಅಭಿಪ್ರಾಯ, ಬೆಂಬಲವೇ ಮುಖ್ಯವಾಗಿತ್ತು ಎಂದರು.

'ಸಚಿವ ಸ್ಥಾನದಿಂದ ವಜಾ ಮಾಡಿದ ನಂತರ ಹೈಕಮಾಂಡ್‌ಗೆ ಪತ್ರ ಬರೆಯುತ್ತಲೇ ಇದ್ದೇನೆ. ಭೇಟಿಯಾಗಲು ಅವಕಾಶ ನೀಡಿಲ್ಲ. ಸಮಯಕೊಟ್ಟರೆ ಭೇಟಿಯಾಗಿ ಎಲ್ಲ ವಿಚಾರಗಳನ್ನೂ ತಿಳಿಸುತ್ತೇನೆ' ಎಂದು ಹೇಳಿದರು.

'545 ಅಭ್ಯರ್ಥಿಗಳಿಗಿಲ್ಲ ನೇಮಕಾತಿ ಆದೇಶ'

ಬೆಂಗಳೂರು: 'ಕೆಎಸ್‌ಆರ್‌ಟಿಸಿಯ ಚಾಲಕ ಕಂ ನಿರ್ವಾಹಕ ಹುದ್ದೆಗಳಿಗೆ ಆಯ್ಕೆಯಾದ 545 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡದೇ ವಿಳಂಬ ನೀತಿ ಅನುಸರಿಸಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಘ ಆರೋಪಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಚ್.ಆರ್. ಜಗದೀಶ್, 'ಕೆಎಸ್‌ಆರ್‌ಟಿಸಿಗೆ 2020ರಲ್ಲಿ 2,545 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಇದರಲ್ಲಿ 2,000 ಅಭ್ಯರ್ಥಿಗಳಿಗೆ ಆದೇಶ ಪತ್ರ ನೀಡಿ, ಘಟಕಗಳಿಗೆ ನಿಯೋಜನೆ ಮಾಡಲಾಗಿದೆ. ಉಳಿದ 545 ಅಭ್ಯರ್ಥಿಗಳಿಗೆ ಆದೇಶಪತ್ರ ನೀಡುತ್ತಿಲ್ಲ. ಆಯ್ಕೆಯಾದ ಅಭ್ಯರ್ಥಿಗಳ ವಯೋಮಿತಿ ಹೆಚ್ಚಾಗುತ್ತಿದ್ದು, ಅಂತಹವರನ್ನು ಆಯ್ಕೆ ಪಟ್ಟಿಯಿಂದ ಹೊರಗಿಡುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಕೆಲಸ ಸಿಕ್ಕರೂ ನೇಮಕಾತಿ ಆದೇಶ ಸಿಗದೇ ನಿರುದ್ಯೋಗಿಗಳಾಗಿದ್ದೇವೆ. ಕುಟುಂಬ ನಿರ್ವಹಣೆಯೂ ಕಷ್ಟವಾಗಿದೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸದೇ ಇದ್ದರೆ ಮುಂದಿನ ದಿನಗಳಲ್ಲಿ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಚಿಟಿಕೆ ಸುದ್ದಿ

ರೌಡಿಶೀಟರ್ ಜೊತೆ ನಂಟು: ಪಿಎಸ್‌ಐ ಅಮಾನತು

ಯಾದಗಿರಿ: ಕರ್ತವ್ಯಲೋಪ, ಶಿಸ್ತು ಉಲ್ಲಂಘನೆ ಆರೋಪದಡಿ ಹುಣಸಗಿ ತಾಲ್ಲೂಕಿನ ನಾರಾಯಣಪುರ ಠಾಣೆಯ ಪಿಎಸ್‌ಐ ರಾಜಶೇಖರ್ ರಾಠೋಡ್ ಅವರನ್ನು ಅಮಾನತು ಮಾಡಲಾಗಿದೆ.

ರಾಜಶೇಖರ್ ಅವರು ರೌಡಿಶೀಟರ್ ನಾಗರಾಜ ಜತೆ ಫೋಟೊ ತೆಗೆಸಿಕೊಂಡು ಜನ್ಮದಿನ ಆಚರಿಸಿಕೊಂಡಿದ್ದರು ಎನ್ನಲಾದ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

'ಪಿಎಸ್‌ಐ ಅವರು ನಾಗರಾಜ ಜತೆ ಕೈಜೋಡಿಸಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದಾರೆ' ಎಂದು ಮಾಜಿ ಸಚಿವ ರಾಜುಗೌಡ ಆರೋಪಿಸಿದ್ದರು.

ಕಸದಲ್ಲಿ ನಾಡಪಿಸ್ತೂಲ್, 3 ಗುಂಡು ಪತ್ತೆ

ಕಾಳಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಚಿಂಚೋಳಿ (ಎಚ್) ಗ್ರಾಮದಲ್ಲಿ ಟೈಲರ್ ಅಂಗಡಿಯೊಂದರ ಬಟ್ಟೆಗಳ ಚಿಂದಿಯಲ್ಲಿ ನಾಡಪಿಸ್ತೂಲ್, ಒಂದು ಜೀವಂತ, ಎರಡು ನಿಷ್ಕ್ರಿಯ ಗುಂಡುಗಳು ಪತ್ತೆಯಾಗಿವೆ.

ಮಾಳಪ್ಪ ಅಂಬಣ್ಣ ಹೂಗೊಂಡ ಟೈಲರ್ ವೃತ್ತಿ ಮಾಡುತ್ತಾರೆ. ಅವರು ಬಟ್ಟೆ ಚಿಂದಿ ಕಸವನ್ನು ಅಂಗಡಿ ಬಲಭಾಗದಿಂದ ಸ್ವಲ್ಪ ದೂರದಲ್ಲಿ ಬೆಂಕಿಹಚ್ಚುತ್ತಾರೆ. ಮಂಗಳವಾರ ಬೆಳಿಗ್ಗೆ ಅಂಗಡಿ ತೆರೆದು ಗುಡಿಸಿದ ಕಸಕ್ಕೆ ಬೆಂಕಿ ಹಚ್ಚಿದ್ದರು. ಆಗ ಬೆಂಕಿಯಲ್ಲಿ ಗಾಜಿನ ಬಾಟಲಿ ಒಡೆದ ಶಬ್ದ ಕೇಳಿದೆ. ಗುಂಡೊಂದು ಸಿಡಿದಿದೆ.

ಶಂಕೆಯಿಂದ ನೀರು ಸುರಿದು ಬೆಂಕಿ ನಂದಿಸಿದ್ದಾರೆ. ಕಸ ಹರಡಿ ನೋಡಿದ್ದಾಗ ನಾಡಪಿಸ್ತೂಲ್, 3 ಗುಂಡು ಪತ್ತೆಯಾಗಿವೆ. ಎಚ್ಚೆತ್ತ ಮಾಳಪ್ಪ ಕೂಡಲೇ ಕಾಳಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು.ಬೆರಳಚ್ಚು ಘಟಕದ ತಜ್ಞರು, ಶ್ವಾನದಳದ ನೆರವನ್ನು ಪಡೆಯಲಾಯಿತು. ಕಾಳಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖೋಟಾ ನೋಟು ಮೂವರ ಬಂಧನ

ಚಿಂಚೋಳಿ (ಕಲಬುರಗಿ ಜಿಲ್ಲೆ): ಇಲ್ಲಿನ ಪುರಸಭೆ ವ್ಯಾಪ್ತಿಯ ಚಂದಾಪುರದಲ್ಲಿ ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಆರೋಪದಡಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಮಹಮ್ಮದ್ ಮೋಯಿನ್, ಮಹಮ್ಮದ್ ಸಮೀರ್, ಗೌಸ್ ಬಂಧಿತರು. ಗ್ರಾಮದ ಹೋಟೆಲ್‌ಗೆ ಬಂದಿದ್ದ ಆರೋಪಿಗಳು ಖೋಟಾ ನೋಟು ನೀಡಿ ಸಿಗರೇಟು ಖರೀದಿಸಿದ್ದಾರೆ. ಅನುಮಾನ ಬಂದು ವಿಚಾರಿಸಲು ಮುಂದಾದಾಗ ಓಡಿ ಹೋಗಿದ್ದರು. ಈ ಕುರಿತು ಹೋಟೆಲ್‌ನ ಯಲ್ಲಪ್ಪ ಅವರು ದೂರು ನೀಡಿದ್ದರು.

ಸಬ್ ಇನಸ್ಪೆಕ್ಟರ್ ಗಂಗಮ್ಮ ಜಿನಿಕೇರಿ ಎಫ್‌ಐಆರ್ ದಾಖಲಿಸಿದ್ದಾರೆ. ಆರೋಪಿಗಳಿಂದ ₹200, ₹500 ಮುಖಬೆಲೆಯ ಸುಮಾರು ₹8 ಸಾವಿರದಷ್ಟು ಖೋಟಾ ನೋಟು ಜಪ್ತಿ ಮಾಡಲಾಗಿದೆ.

ಬೆಂಗಳೂರಿನಲ್ಲಿ ರಾಜಕೀಯ ಪದವಿ ಕಾಲೇಜು

ಮಂಗಳೂರು: ಬೆಂಗಳೂರಿನಲ್ಲಿ ಜೂನ್‌ನಿಂದ 'ರಾಜಕೀಯ ಪದವಿ ಕಾಲೇಜು' ಪ್ರಾರಂಭಿಸಲು ನಿರ್ಧರಿಸಲಾಗಿದೆ' ಎಂದು ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜೊತೆ ಮಂಗಳವಾರ ಮಾತನಾಡಿದ ಅವರು, 'ಮೂರು ವರ್ಷ ಅವಧಿಯ ಈ ಕೋರ್ಸ್‌ಗೆ ರಾಜಕೀಯ ಸಂಹಿತೆಯನ್ನು ಒಳಗೊಂಡ ಪಠ್ಯಕ್ರಮವನ್ನು ರೂಪಿಸಲು ಕ್ಷೇತ್ರದ ತಜ್ಞರನ್ನು ಈಗಾಗಲೇ ಸಂಪರ್ಕಿಸಲಾಗಿದೆ' ಎಂದರು.

'ಒಂದು ತಿಂಗಳಲ್ಲಿ ಈ ಬಗ್ಗೆ ಸ್ಪಷ್ಟಚಿತ್ರಣ ಸಿಗಲಿದೆ. ಕಾಲೇಜು ಸ್ಥಾಪನೆ ಕುರಿತು ಸ್ಪೀಕರ್ ಯು.ಟಿ. ಖಾದರ್ ಜೊತೆಗೆ ಚರ್ಚಿಸಿದ್ದು, ಅನುದಾನ ನೀಡುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ' ಎಂದರು.

ಮಾಜಿ ಶಾಸಕ ಗೋಪಾಲ ಭಂಡಾರಿ ಪುತ್ರ ಆತ್ಮಹತ್ಯೆ

ಹೆಬ್ರಿ (ಉಡುಪಿ): ಕಾರ್ಕಳದ ಮಾಜಿ ಶಾಸಕ ದಿ. ಗೋಪಾಲ ಭಂಡಾರಿ ಅವರ ಪುತ್ರ ಸುದೀಪ್ ಭಂಡಾರಿ (48) ಸೋಮವಾರ ಬ್ರಹ್ಮಾವರ ತಾಲ್ಲೂಕಿನ ಬಾರ್ಕೂರಿನಲ್ಲಿ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿ ದ್ದಾರೆ.

ಸುದೀಪ್ ಭಂಡಾರಿ

ಸುದೀಪ್ ಅವರು ಹೆಬ್ರಿಯಲ್ಲಿ ವೈನ್ ಶಾಪ್ ನಡೆಸುತ್ತಿದ್ದರು. ಇತ್ತೀಚೆಗೆ ಹೆಬ್ರಿಯ ಚಾರ ಗ್ರಾಮದಲ್ಲಿ ಮನೆ ನಿರ್ಮಿಸಿದ್ದರು. ಆರ್ಥಿಕ ಸಮಸ್ಯೆ ಕೃತ್ಯಕ್ಕೆ ಕಾರಣ ಎನ್ನಲಾಗಿದೆ. ತಾಯಿ, ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಮತ್ತೆ ಸಾಕ್ಷಿ ದೂರುದಾರನ ವಿಚಾರಣೆ?

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಕೃತ್ಯಗಳಿಗೆ ಸಂಬಂಧಿಸಿ ಸಾಕ್ಷಿ ದೂರುದಾರನನ್ನು ಮತ್ತೆ ವಿಚಾರಣೆಗೆ ಒಳಪಡಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ನ್ಯಾಯಾಲಯದ ಅನುಮತಿ ಕೋರಿದೆ.

ಹಿಂದೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 183ರ ಅಡಿ ಈ ಹಿಂದೆ ಸಾಕ್ಷಿದೂರುದಾರನ ಹೇಳಿಕೆ ದಾಖಲಿಸಲಾಗಿತ್ತು. ಈ ವೇಳೆ ತಾನು, ಕೊಲೆ ಮತ್ತು ಲೈಂಗಿಕ ದೌರ್ಜನ್ಯ ನಡೆದಿರುವ 10 ಮೃತದೇಹಗಳನ್ನು ಹೂತುಹಾಕಿರುವ ಬಗ್ಗೆ ಸಾಕ್ಷಿದೂರುದಾರ ಹೇಳಿಕೊಂಡಿದ್ದ.

'ನಂತರದ ದಿನಗಳಲ್ಲಿ ಎಸ್‌ಐಟಿ ಇನ್ನಿತರ ಸಂಬಂಧಪಟ್ಟ ವ್ಯಕ್ತಿಗಳ ವಿಚಾರಣೆ ನಡೆಸಿದಾಗ, ಶವಗಳನ್ನು ಪೊಲೀಸ್ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಸಮ್ಮುಖದಲ್ಲಿ ಕಾನೂನುಬದ್ಧವಾಗಿ ಅಂತ್ಯಕ್ರಿಯೆ ಮಾಡಲಾಗಿದೆ ಎಂಬ ಸಂಗತಿ ಬಹಿರಂಗಗೊಂಡಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಸಾಕ್ಷಿದೂರುದಾರನ ಹೇಳಿಕೆಯಲ್ಲಿ ವ್ಯತಿರಿಕ್ತ ಅಂಶ ಕಂಡುಬಂದ ಕಾರಣ, ಅವುಗಳ ಮರು ಪರಿಶೀಲನೆಗೆ ಉದ್ದೇಶಿಸಲಾಗಿದೆ. ಸಾಕ್ಷಿ ದೂರುದಾರನನ್ನು ಮತ್ತೆ ಪೊಲೀಸ್ ಕಸ್ಟಡಿಗೆ ಕೇಳಿಲ್ಲ. ಬದಲಾಗಿ, ಆತ ಇರುವ ಶಿವಮೊಗ್ಗ ಜೈಲಿಗೆ ಭೇಟಿ ನೀಡಿ ಪ್ರಶ್ನಿಸಲು ಅನುಮತಿ ಕೇಳಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಮಣ್ಣಿನ ಗೂಡುದೀಪ

ಪ್ರಜಾವಾಣಿ ಚಿತ್ರ: ವಿಶ್ವಜ ಕಾಡದೇವರ

ದೀಪಾವಳಿಗೆ ಮೆರುಗು ತರುವ ಮಣ್ಣಿನ ಆಕರ್ಷಕ ಆಕಾಶ ಬುಟ್ಟಿ ಮತ್ತು ಹಣತೆಗಳನ್ನು ಬಾಗಲಕೋಟೆ ಜಿಲ್ಲೆಯ ರಬಕವಿಯಲ್ಲಿ ಮಾರಾಟಕ್ಕೆ ಇಟ್ಟ ನೋಟ

ಪ್ರಬುದ್ಧ ಭಾರತಕ್ಕೆ ಅಂಬೇಡ್ಕರ್–ಬುದ್ಧ ಮಾರ್ಗ ಪಾಲಿಸುವ ಸಂಕಲ್ಪ

ಬೌದ್ಧ ಮಹಾ ಸಮ್ಮೇಳನದಲ್ಲಿ ಮಯನ್ಮಾರ್‌ನ ಭಿಕ್ಕು ಪನಿಂದ ಸಯಡೋ, ಬಿಕ್ಕುಗಳಾದ ಲಾವೋಸ್‌ನ ರಾಂಡಿಸೋಟ್, ವಿಯೆಟ್ನಾಂನ ತಿಚ್‌ಮಿನ್ ಹಾನ್, ಮನೋರಕ್ಷಿತ ಭಂತೇಜಿ, ಕರ್ಮ ರಾನ್ರಿಯನ್ ಪುಂಚೆ, ವಿಸುದ್ಧಶೀಲ ಭಂತೇಜಿ, ಭಂತೆ ಬೋಧಿರತ್ನ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ಮಂಗಳವಾರ ಇಲ್ಲಿ ಆರಂಭವಾದ ಅಂತರರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನದಲ್ಲಿ ದೇಶ, ವಿದೇಶದ ನೂರಾರು ಭಿಕ್ಕುಗಳ ಸಮ್ಮುಖದಲ್ಲಿ ಸಾವಿರಾರು ಜನರು ಪ್ರಬುದ್ಧ ಭಾರತ ನಿರ್ಮಾಣಕ್ಕೆ ಬುದ್ಧ- ಅಂಬೇಡ್ಕರ್ ಮಾರ್ಗ ಅನುಸರಣೆ ಮಾಡುವ ಸಂಕಲ್ಪ ಮಾಡಿದರು.

ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಸಮ್ಮೇಳನವನ್ನು ಮಯನ್ಮಾರ್‌ನ ಭಿಕ್ಕು ಪನಿಂದ ಸಯಡೊ ಉದ್ಘಾಟಿಸಿದರು. 500ಕ್ಕೂ ಹೆಚ್ಚು ಪರಿಶಿಷ್ಟ ಕುಟುಂಬದವರು ಬೌದ್ಧ ಧರ್ಮ ಸ್ವೀಕರಿಸಿದರು.

'ಶೂದ್ರರು, ದಲಿತರು ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಕೊಡಿಸಿದರಷ್ಟೇ ಹಿಂದೂ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಿಂದ ವಿಮೋಚನೆ ಪಡೆಯಬಹುದು' ಎಂದು ಚಿಂತಕ ಕಾಂಚಾ ಐಲಯ್ಯ ಪ್ರತಿಪಾದಿಸಿದರು.

'ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನಿಜವಾದ ಬೌದ್ಧ. ತಮ್ಮತ್ತ ಶೂ ತೂರಿದವನ ಬಗ್ಗೆ ಕೋಪಗೊಳ್ಳದೇ ಕ್ಷಮಿಸಿದರು. ಇದಲ್ಲವೇ ಬುದ್ಧ ಹಾಗೂ ಅಂಬೇಡ್ಕರ್ ಮಾರ್ಗ' ಎಂದರು.

> ಆರ್‌ಎಸ್‌ಎಸ್ ಅನ್ನು ಟೀಕಿಸುತ್ತಿರುವುದರಿಂದ ನನ್ನನ್ನು ಕೊಲ್ಲುವುದಾಗಿ ಹೇಳುತ್ತಾರೆ. ಇತಿಹಾಸದಲ್ಲಿ ಕೊಂದವರ ಹೆಸರು ಉಳಿಯುವುದಿಲ್ಲ. ಕೊಲೆಯಾದವರು ಮಹಾತ್ಮರಾಗಿದ್ದಾರೆ
> **ಕಾಂಚಾ ಐಲಯ್ಯ,** ಚಿಂತಕ

ಭಿಕ್ಕುಗಳಾದ ಲಾವೋಸ್‌ನ ರಾಂಡಿಸೋಟ್, ವಿಯೆಟ್ನಾಂನ ತಿಚ್‌ಮಿನ್ ಹಾನ್, ನಳಂದ ವಿಶ್ವವಿದ್ಯಾಲಯದ ಧಮ್ಮಗುರು ಕರ್ಮ ರಾನ್ರಿಯನ್ ಪುಂಚೆ, ಅರುಣಾಚಲ ಪ್ರದೇಶದ ಭಂತೆ ವಿಸುದ್ದಶೀಲ, ಕೊಳ್ಳೇಗಾಲದ ಮನೋರಕ್ಷಿತ ಭಂತೇಜಿ, ಭಂತೆ ಬೋಧಿರತ್ನ, ಭಂತೆ ಮೈತ್ರಿಮಾತಾ ಅಮ್ಮ ಪಾಲ್ಗೊಂಡಿದ್ದರು.

ಸಂಘದ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸದಿರಲಿ: ದಿನೇಶ ಗುಂಡೂರಾವ್

'ಆರ್‌ಎಸ್‌ಎಸ್ ಅನ್ನೇ ನಿಷೇಧಿಸಬೇಕು'

ಪ್ರಜಾವಾಣಿ ವಾರ್ತೆ

ಬೆಳಗಾವಿ/ಕಲಘಟಗಿ: 'ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ರಾಜಕೀಯ ಸಂಘಟನೆಯೇ ಹೊರತು ಸಾಮಾಜಿಕ ಸಂಘಟನೆ ಅಲ್ಲ. ಆರ್‌ಎಸ್‌ಎಸ್ ಅನ್ನೇ ನಿಷೇಧಿಸಬೇಕಿದೆ' ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಇಲ್ಲಿ ಅಭಿಪ್ರಾಯಪಟ್ಟರು.

ದಿನೇಶ ಗುಂಡೂರಾವ್

ಮಂಗಳವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು 'ಆರ್‌ಎಸ್‌ಎಸ್ ಕಾರ್ಯಕ್ರಮ ಅಥವಾ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸಬಾರದು' ಎಂದು ಹೇಳಿದರು.

'ಆರ್‌ಎಸ್‌ಎಸ್ ನಾಯಕರು ವಿವಿಧ ಸರ್ಕಾರಗಳನ್ನು ರಚಿಸುವಲ್ಲಿ ಮತ್ತು ಉರುಳಿಸುವಲ್ಲಿ ಭಾಗಿಯಾಗಿದ್ದಾರೆ. ಚುನಾವಣೆಯಲ್ಲೂ ಆ ಸಂಘಟನೆಯ ನಾಯಕರು ಸ್ಪರ್ಧಿಸುತ್ತಾರೆ. ಹೀಗಾಗಿ ಅದು ಸಾಮಾಜಿಕ ಸಂಘಟನೆಯಲ್ಲ' ಎಂದು ಪ್ರತಿಪಾದಿಸಿದರು.

ಧಾರವಾಡ ಜಿಲ್ಲೆ ಕಲಘಟಗಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಮತ್ತು ಬಿಜೆಪಿ ಎರಡೂ ಒಂದೇ ಆಗಿದ್ದು, ರಾಜಕೀಯ ಸಂಘಟನೆಗಳು' ಎಂದು ಪುನರುಚ್ಚರಿಸಿದರು.

ಸರ್ಕಾರಿ ಕಚೇರಿ, ಶಾಲೆ ಹಾಗೂ ಆವರಣದಲ್ಲಿ ರಾಜಕೀಯ ಸಂಘಟನೆಗಳು ಕಾರ್ಯಕ್ರಮ ಆಯೋಜಿಸಬಾರದು. ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದರಲ್ಲಿ ಏನೂ ತಪ್ಪಿಲ್ಲ. ಕಾನೂನು ಎಲ್ಲರಿಗೂ ಒಂದೇ' ಎಂದು ಹೇಳಿದರು.

'ತಪ್ಪು ಗ್ರಹಿಕೆ: ಶಾಖೆಗೆ ಬನ್ನಿ, ನಿವಾರಿಸುತ್ತೇವೆ'

ಬೆಳಗಾವಿ: 'ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆ ಆಧಾರ ರಹಿತ ಹೇಳಿಕೆಗಳಿಂದ ದೇಶದ ಏಕಾಗ್ರತೆಗೆ ಧಕ್ಕೆಯಾಗಿದೆ. ತಪ್ಪುಗ್ರಹಿಕೆ ದೂರವಾಗಬೇಕಾದರೆ, ಅವರು ಎಂಟು ದಿನ ಆರ್‌ಎಸ್‌ಎಸ್ ಶಾಖೆಗೆ ಬರಲಿ' ಎಂದು ಬಿಜೆಪಿ ವಕ್ತಾರ ಎಂ.ಬಿ.ಝಿರಲಿ ಹೇಳಿದರು.

'ಆರ್‌ಎಸ್‌ನಲ್ಲಿ ಜಾತಿ, ಸ್ವಾರ್ಥ ಇಲ್ಲ. ಆದರೆ, ದೇಶದ ಏಕತೆ ಮತ್ತು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಆರ್‌ಎಸ್‌ಎಸ್‌ನಿಂದ ಜನರಿಗೆ ನಕಾರಾತ್ಮಕ ಆಲೋಚನೆ ತುಂಬಲಾಗುತ್ತಿದೆ ಎಂದು ಪ್ರಿಯಾಂಕ್ ತಿಳಿಸಿದ್ದಾರೆ. ಯಾವ ರೀತಿಯ ನಕಾರಾತ್ಮಕ ಆಲೋಚನೆ ಎಂದು ಸಾಬೀತುಪಡಿಸಬೇಕು. ಇಲ್ಲದಿದ್ದರೆ ತಕ್ಷಣವೇ ಸಚಿವ ಸಂಪುಟದಿಂದ ಅವರನ್ನು ವಜಾಗೊಳಿಸಬೇಕು' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ ಸಂವಿಧಾನದ ಬಗ್ಗೆ ಪ್ರಸ್ತಾಪಿಸುತ್ತ, ಆರ್ಟಿಕಲ್ 19 ಉಲ್ಲಂಘಿಸಿದ್ದಾರೆ. ಸಂವಿಧಾನದ ವಿಧಿ 19ರಡಿ ಸಂಘವನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯ ನೀಡುತ್ತದೆ ಎಂದು ಹೇಳಿದ್ದಾರೆ.

'ಆರ್‌ಎಸ್‌ಎಸ್‌ನಲ್ಲಿ ಇದ್ದವರಷ್ಟೇ ದೇಶಭಕ್ತರಲ್ಲ'

ಬೀದರ್: 'ಆರ್‌ಎಸ್‌ಎಸ್‌ನಲ್ಲಿ ಇದ್ದವರಷ್ಟೇ ದೇಶಭಕ್ತರಲ್ಲ, ಈ ದೇಶದಲ್ಲಿ ಇರುವ ಎಲ್ಲರೂ ದೇಶ ಭಕ್ತರೇ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೇಶದ ಗೃಹಮಂತ್ರಿ ಇದ್ದಾಗ ಎರಡು ಸಲ ಆರ್‌ಎಸ್‌ಎಸ್ ನಿಷೇಧಿಸಿದ್ದರು. ಬಿಜೆಪಿಯವರು ಅದನ್ನು ಮರೆತಿದ್ದಾರೆ' ಎಂದು ನೆನಪಿಸಿದರು.

ಪ್ರಿಯಾಂಕ್ ಖರ್ಗೆ ಅವರು ಯಾವುದೇ ಬೆದರಿಕೆಗಳಿಗೆ ಹೆದರುವ ಅಗತ್ಯವಿಲ್ಲ. ತಾಲಿಬಾನ್ ಹಾಗೂ ಮನುಸ್ಮೃತಿ ಇಬ್ಬರದೂ ಒಂದೇ ಮನಸ್ಥಿತಿ' ಎಂದು ಟೀಕಿಸಿದರು.

'ಇತಿಹಾಸವೇ ಬದಲಾಗುತ್ತಿತ್ತು'

ಹಾಸನ: 'ನರಿಯ ಕೂಗು ಗಿರಿಗೆ ಮುಟ್ಟಲಾರದು. ಯಾರು ಎಷ್ಟೇ ಕಿರುಚಿದರೂ ಗಿರಿ ಕಳಚಿ ಬೀಳದು. ಸಂಘದ ಶಕ್ತಿ ಅಂಥದ್ದು. ಅದಿಲ್ಲದಿದ್ದರೆ ದೇಶದ ಚರಿತ್ರೆ ಬೇರೆ ಆಗುತ್ತಿತ್ತು' ಎಂದು ಮೇಲ್ಮನೆ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಮಂಗಳವಾರ ಇಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್ ವಿರೋಧಿ ಹೇಳಿಕೆಗಳಿಂದ ನಮ್ಮನ್ನು ಹಿಮ್ಮೆಟ್ಟಿಸಲಾಗದು. ಈ ಸಂಘಟನೆಯಿಂದಲೇ ದೇಶ ಸುರಕ್ಷಿತವಾಗಿದೆ. ಮುಂದೆಯೂ ಬಲಿಷ್ಠವಾಗಿ ಬೆಳೆಯಲಿದೆ' ಎಂದರು.

'ಆರ್‌ಎಸ್‌ಎಸ್ ನೋಂದಾಯಿಸಿಕೊಳ್ಳಲಿ'

ಬೆಂಗಳೂರು: 'ಆರ್‌ಎಸ್‌ಎಸ್ ಸಂಘಟನೆಯು ಅಧಿಕೃತವಾಗಿ ನೋಂದಾಯಿಸಿಕೊಳ್ಳಬೇಕು ಮತ್ತು ಅದರ ಎಲ್ಲ ಲೆಕ್ಕಪತ್ರಗಳನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸಬೇಕು' ಎಂದು ಜಾಗೃತ ನಾಗರಿಕರು ಕರ್ನಾಟಕ ಸಂಘಟನೆಯು ಒತ್ತಾಯಿಸಿದೆ.

ಸರ್ಕಾರಿ, ಮುಜರಾಯಿ ಇಲಾಖೆಗೆ ಸೇರಿದ ಸ್ಥಳಗಳಲ್ಲಿ, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಆರ್‌ಎಸ್‌ಎಸ್‌ನ ಚಟುವಟಿಕೆಗಳಿಗೆ ಅನುಮತಿ ಕೊಡಬಾರದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಬರೆದ ಪತ್ರವನ್ನು ಬೆಂಬಲಿಸಿ ಸಂಘಟನೆಯು ಪತ್ರಿಕಾ ಹೇಳಿಕೆ ನೀಡಿದೆ.

ಜಿ.ರಾಮಕೃಷ್ಣ, ಕೆ.ಮರುಳಸಿದ್ದಪ್ಪ, ಎಸ್.ಜಿ.ಸಿದ್ದರಾಮಯ್ಯ, ವಿಜಯಾ, ಮಾವಳ್ಳಿ ಶಂಕರ್, ಬಂಜಗೆರೆ ಜಯಪ್ರಕಾಶ, ಜಾಣಗೆರೆ ವೆಂಕಟರಾಮಯ್ಯ, ಶ್ರೀಪಾದ ಭಟ್, ವಿಮಲಾ ಕೆ.ಎಸ್., ಮೀನಾಕ್ಷಿ ಬಾಳಿ, ವಸುಂಧರಾ ಭೂಪತಿ, ಎನ್.ಗಾಯತ್ರಿ ಈ ಹೇಳಿಕೆಗೆ ಸಹಿ ಮಾಡಿದ್ದಾರೆ.

'ಪ್ರಿಯಾಂಕ್ ಖರ್ಗೆ ಅವರ ಪತ್ರ ಸಂವಿಧಾನದ ಆಶಯಕ್ಕೆ ಪೂರಕವಾಗಿದೆ. ಆದರೆ ಬಿಜೆಪಿಯ ನಾಯಕರು ಅವರ ಹೇಳಿಕೆಯನ್ನು ತಿರುಚಿ, 'ಆರ್‌ಎಸ್‌ಎಸ್ ಅನ್ನು ನಿಷೇಧಿಸಬೇಕು ಎಂದಿದ್ದಾರೆ' ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಇದನ್ನು ನಾವು ಖಂಡಿಸುತ್ತೇವೆ' ಎಂದಿದ್ದಾರೆ.

'ಬಿಜೆಪಿಗೆ ಭಯವೇಕೆ?'

ಬೆಂಗಳೂರು: 'ಆರ್‌ಎಸ್‌ಎಸ್ ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ ಎಂದಾದರೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಪತ್ರಕ್ಕೆ ಬಿಜೆಪಿ ಮತ್ತು ಸಂಘ ಪರಿವಾರ ಹೆದರುತ್ತಿರುವುದು ಏಕೆ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಘ ಪರಿವಾರದಿಂದ ಬಿಜೆಪಿ ನಾಯಕರು ಸಭ್ಯತೆ ಕಲಿತಿದ್ದರೆ, ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಬರೆದಿರುವ ಪತ್ರದ ಬಗ್ಗೆ ಚರ್ಚೆಯಾಗಲಿ ಎಂದು ಹೇಳಬೇಕು' ಎಂದರು.

> ಆರ್‌ಎಸ್‌ಎಸ್‌ನ ಕಾರ್ಯ ಮತ್ತು ಅದರ ಸ್ಥಾಪಕರ ಧ್ಯೇಯೋದ್ದೇಶ ಅರಿತು ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಬೇಕು. ಅಸಂಬದ್ಧವಾಗಿ ಹೇಳಿಕೆ ನೀಡುವುದು ಶೋಭೆ ತರಲ್ಲ
> **ಅರವಿಂದ ಬೆಲ್ಲದ** ವಿರೋಧ ಪಕ್ಷದ ಉಪನಾಯಕ, ವಿಧಾನಸಭೆ

> ಆಡಳಿತ ವೈಫಲ್ಯ ಮರೆಮಾಚಿ ಜನರ ಗಮನ ಬೇರೆಡೆ ಸೆಳೆಯಲು ಆರ್‌ಎಸ್‌ಎಸ್ ಟೀಕಿಸುತ್ತಾರೆ. ಸಂಘದ ನೂರು ವರ್ಷದ ಆಚರಣೆ ಅವರಿಗೆ ಸಹಿಸಲು ಆಗುತ್ತಿಲ್ಲ
> **ವಿಶ್ವೇಶ್ವರ ಹೆಗಡೆ ಕಾಗೇರಿ** ಸಂಸದ, ಉತ್ತರಕನ್ನಡ

ಅಧಿಕಾರಿಗಳ ಬಳಿ ಕೋಟಿ ಕೋಟಿ ಆಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, ರಾಜ್ಯ ಸರ್ಕಾರದ ಅಧಿಕಾರಿಗಳು ಅಪಾರ ಪ್ರಮಾಣದ ಸ್ಥಿರಾಸ್ತಿ ಹೊಂದಿರುವುದು ಪತ್ತೆಯಾಗಿದೆ. ಅಧಿಕಾರಿಗಳ ಒಟ್ಟು ಆಸ್ತಿ ವಿವರ ಹೀಗಿದೆ.

ಮಂಜುನಾಥ ಜಿ. ವೈದ್ಯಾಧಿಕಾರಿ, ಹೆರಿಗೆ ಆಸ್ಪತ್ರೆ, ಮಲ್ಲಸಂದ್ರ, ಬೆಂಗಳೂರು
₹1.85 ಕೋಟಿ ಮೌಲ್ಯದ 1 ನಿವೇಶನ, 1 ಮನೆ, 1 ಫ್ಲ್ಯಾಟ್
₹1.39 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹3.24 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಎಂ.ಕೆ.ಗಂಗಮರಿಗೌಡ
ಸರ್ವೇಯರ್, ಕೆಐಎಡಿಬಿ, ಬೆಂಗಳೂರು
₹3.58 ಕೋಟಿ ಮೌಲ್ಯದ 2 ನಿವೇಶನ, 2 ಮನೆ, 2 ಎಕರೆ ಕೃಷಿ ಜಮೀನು
₹1.08 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹4.66 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಎನ್.ಚಂದ್ರಶೇಖರ್
ಸಹಾಯಕ ನಿರ್ದೇಶಕ, ಕೃಷಿ ಇಲಾಖೆ, ಹೊಳಲ್ಕೆರೆ, ಚಿತ್ರದುರ್ಗ
₹4.02 ಕೋಟಿ ಮೌಲ್ಯದ 4 ನಿವೇಶನ, 4 ಮನೆ, 15 ಎಕರೆ 8 ಗುಂಟೆ ಕೃಷಿ ಜಮೀನು
₹1.12 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹5.14 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಕೆ.ಎಚ್.ಜಗದೀಶ ನಾಯ್ಕ
ಸಹಾಯಕ ಎಂಜಿನಿಯರ್, ಕೆಆರ್‌ಐಡಿಎಲ್, ದಾವಣಗೆರೆ
₹1.55 ಕೋಟಿ ಮೌಲ್ಯದ 5 ನಿವೇಶನ, 3 ಮನೆ, 17 ಎಕರೆ ಕೃಷಿ ಜಮೀನು
₹48.82 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹2.04 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಬಿ.ಎಸ್.ನಡುವಿನ ಮನೆ
ಕಿರಿಯ ಸಹಾಯಕ, ಆಹಾರ ನಿಗಮ, ದಾವಣಗೆರೆ
₹1.70 ಕೋಟಿ ಮೌಲ್ಯದ 1 ನಿವೇಶನ, 4 ಮನೆ, 20 ಎಕರೆ ಕೃಷಿ ಜಮೀನು
₹59.75 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹2.30 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಬಸವೇಶ ಶಿವಪ್ಪ ಶಿಡೆನೂರ
ಕಾರ್ಯನಿರ್ವಾಹಕ ಅಧಿಕಾರಿ (ಪ್ರಭಾರ), ಸವಣೂರು ತಾಲ್ಲೂಕು ಪಂಚಾಯಿತಿ, ಹಾವೇರಿ
₹65.07 ಲಕ್ಷ ಮೌಲ್ಯದ 6 ನಿವೇಶನ, 1 ಮನೆ
₹1.02 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹1.67 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಅಶೋಕ್ ಶಂಕರಪ್ಪ ಅರಳೇಶ್ವರ
ರೆವಿನ್ಯೂ ಇನ್‌ಸ್ಪೆಕ್ಟರ್, ರಾಣೆಬೆನ್ನೂರು ತಾಲ್ಲೂಕು ಕಚೇರಿ, ಹಾವೇರಿ
₹1.26 ಕೋಟಿ ಮೌಲ್ಯದ 2 ನಿವೇಶನ, 2 ಮನೆ, 11 ಎಕರೆ 20 ಗುಂಟೆ ಕೃಷಿ ಜಮೀನು
₹99.90 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹2.25 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಧೂಳಪ್ಪ ಸಹಾಯಕ ನಿರ್ದೇಶಕ, ತೋಟಗಾರಿಕೆ ಇಲಾಖೆ, ಔರಾದ್, ಬೀದರ್
₹1.82 ಕೋಟಿ ಮೌಲ್ಯದ 2 ನಿವೇಶನ, 1 ಮನೆ, 33 ಎಕರೆ ಕೃಷಿ ಜಮೀನು
₹1.56 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹3.39 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಲಕ್ಷ್ಮೀನಾರಾಯಣ ಪಿ.ನಾಯಕ್
ಆರ್‌ಟಿಒ, ಸಾರಿಗೆ ಇಲಾಖೆ, ಉಡುಪಿ
₹47.50 ಲಕ್ಷ ಮೌಲ್ಯದ 3 ನಿವೇಶನ, 3 ಮನೆ
₹1.73 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹2.21 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಚೇತನ್
ಕಿರಿಯ ಎಂಜಿನಿಯರ್, ಕೆಬಿಜೆಎನ್‌ಎಲ್, ಕಮಟಗಿ, ಬಾಗಲಕೋಟೆ
₹1.20 ಕೋಟಿ ಮೌಲ್ಯದ 3 ನಿವೇಶನ, 1 ಮನೆ, 5 ಎಕರೆ 20 ಗುಂಟೆ ಕೃಷಿ ಜಮೀನು
₹47.28 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹1.67 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಜ್ಯೋತಿ ಮೇರಿ
ಎಫ್‌ಡಿಎ, ಲೆಕ್ಕಪತ್ರ ಶಾಖೆ, ಆರೋಗ್ಯ ಇಲಾಖೆ, ಹಾಸನ
₹1.12 ಕೋಟಿ ಮೌಲ್ಯದ 3 ನಿವೇಶನ, 1 ಮನೆ, 5 ಎಕರೆ 20 ಗುಂಟೆ ಕೃಷಿ ಜಮೀನು
₹1.04 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹2.17 ಕೋಟಿ. ಆಸ್ತಿಯ ಒಟ್ಟು ಮೌಲ್ಯ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.70	8,278	8,021
ಹಾರಂಗಿ	2,859	2,857.79	636	1,000
ಕಬಿನಿ	2,284.00	2,283.43	1,225	1,350
ಹೇಮಾವತಿ	2,922	2,917.35	5,217	6,610
ಲಿಂಗನಮಕ್ಕಿ	1,819	1,815.80	2,027	5,566
ಸೂಪಾ (ಮೀ)	564	559	955.59	4,627
ಮಾಣಿ	595	593.86	583	808
ತುಂಗಭದ್ರಾ	1,633	1,626.06	13,326	12,865
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.73	369	698
ಭದ್ರಾ *	186	184.1	3,505	3,204
ಆಲಮಟ್ಟಿ (ಮೀ)	519.6	519.60	16,140	16,140
ನಾರಾಯಣಪುರ (ಮೀ)	492.25	492.24	15,000	13,943

* ನೆಲಮಟ್ಟದಿಂದ

ಹೂವಿನ ಕೊಯ್ಲು
ಶ್ರೀನಗರದಲ್ಲಿ ರೈತ ಮಹಿಳೆಯೊಬ್ಬರು ಆಹಾರ ಪದಾರ್ಥ ಮತ್ತು ಆಲಂಕಾರಿಕ ವಸ್ತುವಾಗಿ ಬಳಸುವ ಕೋಳಿ ಜುಟ್ಟನ ಹೂವು ಕೊಯ್ಲಿನಲ್ಲಿ ನಿರತರಾಗಿದ್ದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗುಕೇಶ್‌ಗೆ ಅಗ್ರ ಶ್ರೇಯಾಂಕ
ಇದೇ 31ರಂದು ಗೋವಾದಲ್ಲಿ ಆರಂಭವಾಗಲಿರುವ ಫಿಡೆ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಅಗ್ರ ಶ್ರೇಯಾಂಕ ಪಡೆದಿದ್ದಾರೆ

ಸೆನ್ಸೆಕ್ಸ್ 82,029 | ನಿಫ್ಟಿ 25,145 | $/₹ 88.81 | ಚಿನ್ನ (Std. 10g) ₹1,32,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,98,700 (ಬೆಂಗಳೂರು)

ಬಸ್‌ಗೆ ಬೆಂಕಿ 20 ಮಂದಿ ಸಜೀವ ದಹನ

ಜೈಸಲ್ಮೇರ್(ಪಿಟಿಐ): ರಾಜಸ್ಥಾನದಲ್ಲಿ ಖಾಸಗಿ ಬಸ್‌ವೊಂದಕ್ಕೆ ಮಂಗಳವಾರ ಬೆಂಕಿ ಹೊತ್ತಿಕೊಂಡ ಪರಿಣಾಮ 20 ಪ್ರಯಾಣಿಕರು ಸಜೀವ ದಹನವಾಗಿದ್ದು, 16 ಮಂದಿ ಗಾಯಗೊಂಡಿದ್ದಾರೆ.

ವಿವರ 5C

‘ಬಿಪಿಎಲ್’ ಅರ್ಹತೆ: 45 ದಿನ ಗಡುವು

ಅನರ್ಹ ಪಡಿತರ ಚೀಟಿ ಎಪಿಎಲ್‌ಗೆ ಪರಿವರ್ತನೆ: ಮುಖ್ಯಮಂತ್ರಿ ಅಸ್ತು

• ರಾಜೇಶ್ ರೈ ಚಟ್ಲ

ಬೆಂಗಳೂರು: ಅನರ್ಹ ಬಿಪಿಎಲ್ (ಆದ್ಯತಾ) ಫಲಾನುಭವಿಗಳನ್ನು ಪತ್ತೆ ಹಚ್ಚಿ, ಅವರಲ್ಲಿರುವ ಪಡಿತರ ಚೀಟಿಗಳನ್ನು ಎಪಿಎಲ್ (ಆದ್ಯತೆಯೇತರ) ಪಡಿತರ ಚೀಟಿಗಳಾಗಿ ಪರಿವರ್ತಿಸಲು ಆಹಾರ ಇಲಾಖೆ ಮುಂದಾಗಿದೆ.

ಇಲಾಖೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಮೋದನೆ ನೀಡಿದ್ದಾರೆ.

ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ಪೈಕಿ ವಿವಿಧ ಕಾರಣಗಳಿಗೆ 7,76,206 ಪಡಿತರ ಚೀಟಿಗಳು ಅನರ್ಹ ಎಂದು ಕೇಂದ್ರ ಸರ್ಕಾರ ಗುರುತಿಸಿದೆ. ರಾಜ್ಯ ಸರ್ಕಾರದ ‘ಕುಟುಂಬ ತಂತ್ರಾಂಶ’ದ ಪ್ರಕಾರ 13,87,651 ಅನರ್ಹ ಪಡಿತರ ಚೀಟಿಗಳಿವೆ.

‘ಅನರ್ಹ’ ಕಾರಣಕ್ಕೆ ಎಪಿಎಲ್ ಪಡಿತರ ಚೀಟಿಯಾಗಿ ಪರಿವರ್ತಿಸಲಾದ ಪಡಿತರದಾರರು, ಬಿಪಿಎಲ್ ಪಡಿತರ ಚೀಟಿ ಹೊಂದಲು ಅರ್ಹರಾಗಿದ್ದರೆ 45 ದಿನಗಳ ಒಳಗೆ ಅಗತ್ಯ ದಾಖಲೆಗಳ ಸಹಿತ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ಮನವಿ ಸಲ್ಲಿಸಬೇಕು. ದಾಖಲೆ ಪರಿಶೀಲನೆ ಬಳಿಕ, ಬಿಪಿಎಲ್ ಪಡಿತರ ಚೀಟಿ ಹೊಂದಲು ಅರ್ಹರಿದ್ದರೆ ಅಂಥವರ ಬಿಪಿಎಲ್ ಪಡಿತರ ಚೀಟಿಯನ್ನು ಮರು ಸ್ಥಾಪಿಸುವ ಪ್ರಸ್ತಾವಕ್ಕೂ ಮುಖ್ಯಮಂತ್ರಿ ಒಪ್ಪಿಗೆ ನೀಡಿದ್ದಾರೆ.

ಈವರೆಗೆ ಅನರ್ಹ ಕಾರ್ಡ್ ಪತ್ತೆ

● ಒಟ್ಟು ಕಾರ್ಡ್ ● ಫಲಾನುಭವಿಗಳು

	ಒಟ್ಟು ಕಾರ್ಡ್	ಫಲಾನುಭವಿಗಳು
ರದ್ದುಗೊಳಿಸಿದ್ದು	10,076	17,676
ಅಮಾನತು	5,526	11,907
ಎಪಿಎಲ್‌ಗೆ ಪರಿವರ್ತನೆಯಾಗಿದ್ದು	1,85,156	4,59,128
ಅನರ್ಹಗೊಂಡ ಒಟ್ಟು ಕಾರ್ಡ್‌ಗಳು	2,00,758	4,88,711

ಅನರ್ಹರು ಹೊಂದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳಾಗಿ ಪರಿವರ್ತಿಸಿದ ನಂತರ ಯಾವುದೇ ಆಕ್ಷೇಪಣೆ ಸ್ವೀಕೃತ ಆಗದೇ ಇದ್ದರೆ, ಅಂತಹ ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಯಾಗಿ ಮುಂದುವರಿಸಲಾಗುವುದು. ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವ ಅನರ್ಹರನ್ನು ಪತ್ತೆ ಹಚ್ಚಿ, ಅವುಗಳನ್ನು ಎಪಿಎಲ್ ಪಡಿತರ ಚೀಟಿಗಳಾಗಿ ಮಾರ್ಪಡಿಸಿದ ನಂತರ ಅಷ್ಟೇ ಸಂಖ್ಯೆಯ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಸತಾಗಿ ಅರ್ಹ ಫಲಾನುಭವಿಗಳಿಗೆ ನೀಡುವ ಪ್ರಸ್ತಾವಕ್ಕೂ ಮುಖ್ಯಮಂತ್ರಿ ಒಪ್ಪಿಗೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

▶8

ಷರತ್ತುಗಳೇನು?

- ಹೊಸದಾಗಿ ಪಡಿತರ ಚೀಟಿಗೆ ಈಗಾಗಲೇ ಸಲ್ಲಿಕೆಯಾಗಿರುವ 2.96 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡುವವರೆಗೆ ಬಿಪಿಎಲ್‌ಗೆ ಹೊಸದಾಗಿ ಅರ್ಜಿ ಆಹ್ವಾನಿಸಬಾರದು
- ಆರ್ಥಿಕ ನಿರ್ಬಂಧಗಳ ಕಾರಣದಿಂದ, ಸದ್ಯಕ್ಕೆ ಎಪಿಎಲ್ ಪಡಿತರ ಚೀಟಿಗಾಗಿ ಹೊಸ ಅರ್ಜಿ ಆಹ್ವಾನಿಸಬಾರದು. ಅಲ್ಲದೆ, ಈಗಾಗಲೇ ಸಲ್ಲಿಕೆ ಆಗಿರುವ ಅರ್ಜಿಗಳನ್ನೂ ವಿಲೇವಾರಿ ಮಾಡಬಾರದು
- 2.96 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿದ ನಂತರ, ಸದ್ಯ ಇರುವ ಒಟ್ಟು ಬಿಪಿಎಲ್, ಎಎವೈ (ಅಂತ್ಯೋದಯ ಅನ್ನ ಯೋಜನೆ) ಕಾರ್ಡ್‌ಗಳ ಸಂಖ್ಯೆ ಮೀರಬಾರದು

▶8

ಜಾತಿವಾರು ಸಮೀಕ್ಷೆಯಲ್ಲಿ ‘ಕಲ್ಯಾಣ’ದ 6 ಜಿಲ್ಲೆ ಹಿಂದೆ

• ಮಲ್ಲಿಕಾರ್ಜುನ ನಾಲವಾರ

ಯಾದಗಿರಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮಾಹಿತಿ ಸಂಗ್ರಹದಲ್ಲಿ ಕಲ್ಯಾಣ ಕರ್ನಾಟಕದ 6 ಜಿಲ್ಲೆಗಳು ಹಿಂದೆ ಬಿದ್ದಿವೆ.

ರಾಜ್ಯದಲ್ಲಿ 1.48 ಕೋಟಿ ಕುಟುಂಬಗಳ ಸುಮಾರು 6.14 ಕೋಟಿ ಜನಸಂಖ್ಯೆಯನ್ನು ಸಮೀಕ್ಷೆಗೆ ಒಳಪಡಿಸುವುದು ಗುರಿ. ಅಕ್ಟೋಬರ್ 13ರ ಸಂಜೆ 6.30ರ ವೇಳೆಗೆ ಸಮೀಕ್ಷೆಯಲ್ಲಿ 4.92 ಕೋಟಿ ಜನರ ಮಾಹಿತಿಯನ್ನು ಕ್ರೋಡೀಕರಣ ಮಾಡಿ ಶೇ 80.15ರಷ್ಟು ಪೂರ್ಣಗೊಳಿಸಲಾಗಿದೆ.

ಕೊಪ್ಪಳ ಹೊರತುಪಡಿಸಿ ‘ಕಲ್ಯಾಣ’ದ ಉಳಿದ ಆರು ಜಿಲ್ಲೆಗಳು ಕೊನೆಯಲ್ಲಿರುವ 10 ಜಿಲ್ಲೆಗಳಲ್ಲಿ ಸ್ಥಾನ ಪಡೆದಿವೆ. ಅದರಲ್ಲಿ ಕೊಡಗು, ಚಿಕ್ಕಬಳ್ಳಾಪುರ, ಮೈಸೂರು ಹಾಗೂ ವಿಜಯಪುರ ಜಿಲ್ಲೆಗಳೂ ಇವೆ.

▶2B

ಅವಧಿ ವಿಸ್ತರಣೆ ಇಲ್ಲ: ಶಾಲಿನಿ ರಜನೀಶ್

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅವಧಿಯನ್ನು ವಿಸ್ತರಿಸಲು ಸಾಧ್ಯವಿಲ್ಲ. ಅ.18ರ ಒಳಗೆ ಬಾಕಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದ್ದಾರೆ.

ನಂಜೇಗೌಡ ಆಯ್ಕೆ ಅಸಿಂಧು ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2023ರ ವಿಧಾನಸಭಾ ಚುನಾವಣೆಯಲ್ಲಿ ಮಾಲೂರು ಕ್ಷೇತ್ರದಿಂದ ಗೆದ್ದಿರುವ ಕಾಂಗ್ರೆಸ್‌ನ ಕೆ.ವೈ. ನಂಜೇಗೌಡ ಅವರ ಆಯ್ಕೆ ರದ್ದುಪಡಿಸಿದ್ದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ನಂಜೇಗೌಡ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜಾಯ್‌ಮಲ್ಯ ಬಾಗ್ಚಿ ಪೀಠವು ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.

▶5

ಕೆಮ್ಮಿನ ಕಲುಷಿತ ಸಿರಪ್: ಡಬ್ಲ್ಯುಎಚ್‌ಒ ಎಚ್ಚರಿಕೆ

ನವದೆಹಲಿ (ಪಿಟಿಐ): ಭಾರತದಲ್ಲಿ ಮಾರಾಟವಾದ ಕಳಪೆ ಗುಣಮಟ್ಟದ ಕೆಮ್ಮಿನ ಸಿರಪ್ ಕುರಿತು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಎಚ್ಚರಿಕೆ ನೀಡಿದೆ.

ಕೋಲ್ಡ್ರಿಫ್, ರೆಸ್ಪಿಫ್ರೆಶ್ ಟಿಆರ್, ಮತ್ತು ರಿಲೈಫ್ ಕಂಪನಿಗಳ ಕೆಮ್ಮಿನ ಕಲುಷಿತ ಸಿರಪ್‌ಗಳು ವಿಶ್ವದಾದ್ಯಂತ ಎಲ್ಲಿ ಪತ್ತೆಯಾದರೂ ತಕ್ಷಣ ತಿಳಿಸುವಂತೆ ಸೂಚಿಸಿದೆ.

ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಇಂಥ ಸಿರಪ್ ಸೇವಿಸಿ 5 ವರ್ಷದೊಳಗಿನ 22 ಮಕ್ಕಳು ಮೃತಪಟ್ಟಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಡಬ್ಲ್ಯುಎಚ್‌ಒ, ವಿಶ್ವದಾದ್ಯಂತ ಈ ಎಚ್ಚರಿಕೆ ರವಾನಿಸಿದೆ.

▶5

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ತುಂತುರು ಮಳೆ ಸಾಧ್ಯತೆ

ಕಿರಣ್ ಮಜುಂದಾರ್ ಹೇಳಿಕೆಗೆ ತಿರುಗೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೆಟ್ಟ ರಸ್ತೆಗಳಿವೆ, ತ್ಯಾಜ್ಯದ ಸಮಸ್ಯೆ ಇದೆ' ಎಂದು ಬಯೊಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಅವರು 'ಎಕ್ಸ್' ಮೂಲಕ ನೀಡಿರುವ ಹೇಳಿಕೆಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

'ರಸ್ತೆಗಳು ಏಕೆ ಇಷ್ಟೊಂದು ಕೆಟ್ಟದಾಗಿವೆ ಮತ್ತು ಸುತ್ತಮುತ್ತ ತ್ಯಾಜ್ಯ ಏಕಿದೆ? ಹೂಡಿಕೆಗೆ ಸರ್ಕಾರ ನೆರವು ನೀಡುವುದಿಲ್ಲವೇ? ನಾನು ಚೀನಾದಿಂದ ಈಗ ತಾನೇ ಬಂದೆ. ವಾತಾವರಣದ ಅನುಕೂಲವಿದ್ದರೂ ಭಾರತ ಏಕೆ ಒಟ್ಟಾಗಿ ಕಾರ್ಯನಿರ್ವಹಿಸುತ್ತಿಲ್ಲ?' ಎಂದು ಬಯೊಕಾನ್ ಪಾರ್ಕ್‌ಗೆ ಬಂದಿದ್ದ ಉದ್ಯಮಿಯೊಬ್ಬರು ನನ್ನನ್ನು ಹೀಗೆ ಕೇಳಿದರು' ಎಂದು ಕಿರಣ್ ಮಜುಂದಾರ್ ಷಾ ಅವರು 'ಎಕ್ಸ್' ಮಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಟ್ಯಾಗ್ ಮಾಡಿದ್ದರು.

ಕಿರಣ್ ಮಜುಂದಾರ್

ಇದಕ್ಕೆ ಪ್ರತಿಕ್ರಿಯಿಸಿರುವ, ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, 'ಕಿರಣ್ ಮಜುಂದಾರ್ ಅವರು ಕರ್ನಾಟಕ ಹಾಗೂ ದೇಶಕ್ಕೆ ದೊಡ್ಡ ಆಸ್ತಿ. ಬಯೊಕಾನ್‌ನೊಂದಿಗೆ ಬೆಂಗಳೂರಿಗೆ ಅವರು ಹೆಸರು ಸೃಷ್ಟಿಸಿದ್ದಾರೆ. ಬೆಂಗಳೂರು ಕೂಡ ಅವರಿಗೆ ಸಾಕಷ್ಟು ನೀಡಿದೆ. ಇದು ಪರಸ್ಪರ ಅನುಕೂಲಕರ. ಹೆಚ್ಚು ಮಳೆಯಾದ ಕಾರಣ ರಸ್ತೆಗಳಲ್ಲಿ ಗುಂಡಿಗಳು ಇದ್ದವು. ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಸಾವಿರಾರು ಕೋಟಿಯನ್ನು ನೀಡಲಾಗಿದೆ. ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ನಡೆಯುತ್ತಿರುವ ಸಂದರ್ಭದಲ್ಲಿ ನೀವು ಮತ್ತೆ ಮತ್ತೆ 'ಎಕ್ಸ್' ಮಾಡುವುದು ಉತ್ತಮ ಅಭಿರುಚಿಯಲ್ಲ' ಎಂದಿದ್ದಾರೆ.

'ಬೆಂಗಳೂರಿನ ಯಾವ ಭಾಗವನ್ನು ಅವರು ನೋಡಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಕಾಮಗಾರಿ ನಡೆಯುತ್ತಿದೆ. ಕ್ಷಿಪ್ರ ವೇಗದಲ್ಲಿ ಕೆಲಸ ನಡೆಯುತ್ತಿದ್ದು, ಮೂಲಸೌಕರ್ಯ ಅಭಿವೃದ್ಧಿಗೆ ಏನು ಅಗತ್ಯವಿದೆಯೋ ಅದನ್ನು ನಾವು ಮಾಡುತ್ತಿದ್ದೇವೆ' ಎಂದು ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದರು.

ಮಂಗಳಾರತಿ: 'ಕಿರಣ್ ಮಜುಂದಾರ್ ಅವರ 'ಎಕ್ಸ್' ಹೇಳಿಕೆ, ಸರ್ಕಾರ ಹಾಗೂ ಡಿ.ಕೆ. ಶಿವಕುಮಾರ್ ಅವರ ಮುಖಕ್ಕೆ ಮಂಗಳಾರತಿ ಎತ್ತಿದಂತಲ್ಲವೇ? ಬ್ಲ್ಯಾಕ್ ಬಕ್ ಸಂಸ್ಥೆಗೆ ಬೇಕಾದರೆ ಇಲ್ಲಿಂದ ಹೋಗಲಿ ಎಂದಿದ್ದ ಶಿವಕುಮಾರ್ ಅವರು, ಈಗ ಕಿರಣ್ ಮಜುಂದಾರ್ ಅವರಿಗೂ ಅದೇ ರೀತಿ ಹೇಳಲಿ ನೋಡೋಣ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಸವಾಲು ಹಾಕಿದ್ದಾರೆ.

ಆರ್. ಅಶೋಕ

ಬೆಂಗಳೂರಿಗೆ ಋಣಿಯಾಗಿರೋಣ: ಡಿಕೆಶಿ

'ಬೆಂಗಳೂರು ಲಕ್ಷಾಂತರ ಜನರಿಗೆ ಅವಕಾಶಗಳು, ಗುರುತು ಮತ್ತು ಯಶಸ್ಸನ್ನು ನೀಡಿದೆ. ಇದಕ್ಕೆ ಕಾರಣ ಸಾಮೂಹಿಕ ಪ್ರಯತ್ನ. ನಿರಂತರ ಟೀಕೆಯಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಹೌದು, ಸವಾಲುಗಳಿವೆ, ಅವುಗಳನ್ನು ತುರ್ತಾಗಿ ಬಗೆಹರಿಸುತ್ತಿದ್ದೇವೆ. ರಸ್ತೆಗಳ ದುರಸ್ತಿಗಾಗಿ ₹1,100 ಕೋಟಿ ಮಂಜೂರು ಮಾಡಲಾಗಿದೆ. 10 ಸಾವಿರಕ್ಕೂ ಹೆಚ್ಚು ಗುಂಡಿಗಳನ್ನು ಗುರುತಿಸಲಾಗಿದೆ, ಐದು ಸಾವಿರಕ್ಕೂ ಹೆಚ್ಚು ಗುಂಡಿಗಳನ್ನು ಮುಚ್ಚಲಾಗಿದೆ. ಬೆಂಗಳೂರನ್ನು ಜಾಗತಿಕವಾಗಿ ಹೆಚ್ಚು ಸ್ಪರ್ಧಾತ್ಮಕವಾಗಿಸಲು ಪ್ರಮುಖ ಮೂಲಸೌಕರ್ಯ ಕಾರ್ಯಗಳು ನಡೆಯುತ್ತಿವೆ' ಎಂದು ಹೇಳಿದ್ದಾರೆ.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ, ಪೂರ್ವ ನಗರ ಪಾಲಿಕೆ ತನ್ನದೇ ಆದ ₹1,673 ಕೋಟಿ ಆದಾಯವನ್ನು ಉಳಿಸಿಕೊಂಡು, ಅದನ್ನು 50 ವಾರ್ಡ್‌ಗಳಲ್ಲಿ ಮೂಲಸೌಕರ್ಯಕ್ಕಾಗಿ ನೇರವಾಗಿ ಬಳಸಿಕೊಳ್ಳಲಿದೆ. ಇದು ನಮ್ಮ ಐಟಿ ಕಾರಿಡಾರ್‌ಗಳಿಗೆ ನೇರವಾಗಿ ಪ್ರಯೋಜನವಾಗುತ್ತದೆ. ಸೆಂಟ್ರಲ್ ಸಿಲ್ಕ್ ಬೋರ್ಡ್–ಕೆ.ಆರ್. ಪುರದ ಮರುಅಭಿವೃದ್ಧಿ, ಎಲಿವೇಟೆಡ್ ಕಾರಿಡಾರ್‌ಗಳಂತಹ ಪ್ರಮುಖ ಕಾಮಗಾರಿಗಳೊಂದಿಗೆ ನಾಗರಿಕರು, ಉದ್ಯೋಗಿಗಳು ಮತ್ತು ಕಂಪನಿಗಳಿಗೆ ಮೂಲಸೌಕರ್ಯವನ್ನು ನೀಡಲಿದ್ದೇವೆ' ಎಂದಿದ್ದಾರೆ.

'ಬೆಂಗಳೂರನ್ನು ಕಡೆಗಣಿಸಿ ಮಾತನಾಡುವ ಬದಲು, ಒಟ್ಟಾಗಿ ಅದನ್ನು ನಿರ್ಮಿಸೋಣ. ಜಗತ್ತು ಬೆಂಗಳೂರಿನ ಮೂಲಕ ಭಾರತವನ್ನು ನೋಡುತ್ತಿದೆ. ಒಗ್ಗಟ್ಟಿನಿಂದ ನಮ್ಮ ನಗರಕ್ಕೆ ಋಣಿಯಾಗಿರೋಣ' ಎಂದು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಅಭಿವೃದ್ಧಿ ಸಮಿತಿ ಡಿ.ಆರ್. ಪಾಟೀಲ ನೇಮಕ



ಬೆಂಗಳೂರು: ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರನ್ನಾಗಿ ಗದಗ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಡಿ.ಆರ್. ಪಾಟೀಲ ಅವರನ್ನು ನೇಮಿಸಲಾಗಿದೆ. ಅವರಿಗೆ ರಾಜ್ಯ ಸಚಿವರ ಸ್ಥಾನಮಾನ ಮತ್ತು ಸೌಲಭ್ಯಗಳನ್ನು ನೀಡಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 310-ಬಿ ಉಪ-ಪ್ರಕರಣ (2) ಅಡಿ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಸರ್ಕಾರಿ ಸದಸ್ಯರನ್ನು ನೇಮಿಸಲು ಅವಕಾಶವಿದೆ. ಅದರ ಅನ್ವಯ, ಪಾಟೀಲರನ್ನು ನೇಮಿಸಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಅದರ ಮುಂದುವರಿಕೆಯಾಗಿಯೇ ಈಗ ಅವರನ್ನು ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಲಾಲ್‌ಬಾಗ್ ಕೆಳಗೆ ದಶಪಥ

50 ಅಡಿಯಿಂದ 100 ಅಡಿ ಕೆಳಗೆ ಸುರಂಗ ರಸ್ತೆ; ಬಂಡೆಯ ಕೆಳಗೂ ಮಾರ್ಗ

● ನವೀನ್ ಮಿನೇಜಸ್

ಬೆಂಗಳೂರು: ಎಕ್ಸ್‌ಪ್ರೆಸ್ ಹೈವೇಯಂತೆ ಒಟ್ಟು ಹತ್ತು ಪಥಗಳು ಲಾಲ್‌ಬಾಗ್‌ನ 50 ಅಡಿಯಿಂದ 100 ಅಡಿ ಕೆಳಭಾಗದಲ್ಲಿ ಸಾಗಲಿವೆ.

16.5 ಕಿ.ಮೀ ಉದ್ದದ ಉತ್ತರ–ದಕ್ಷಿಣ ಸುರಂಗ ರಸ್ತೆಯ ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ಲಾಲ್‌ಬಾಗ್ ಕೆಳಭಾಗದಲ್ಲಿ ಸುರಂಗ ರಸ್ತೆ ಸಾಗಲಿದೆ ಎಂದು ತಿಳಿಸಲಾಗಿದೆ. ಇದರಿಂದ, ಜೈವಿಕ ಸೂಕ್ಷ್ಮ ಪ್ರದೇಶವಷ್ಟೇ ಆಗಿರದೆ, ಬೆಂಗಳೂರಿನ ಕಿರೀಟದಂತಿರುವ ಲಾಲ್‌ಬಾಗ್ ಉದ್ಯಾನದ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಅಶೋಕ ಪಿಲ್ಲರ್ ವೃತ್ತದಲ್ಲಿ ಪ್ರವೇಶ ರ‍್ಯಾಂಪ್ ನಿರ್ಮಾಣಕ್ಕೆ ಪ್ರಸ್ತಾಪಿಸಿರುವ ಎರಡು ಪಥಗಳು, ಲಾಲ್‌ಬಾಗ್ ಕೆರೆಗೆ ಸಮೀಪವೇ ಹಾದುಹೋಗಿ, ಆರು ಪಥಗಳ ಸುರಂಗ ರಸ್ತೆಯನ್ನು ಹೆಬ್ಬಾಳದತ್ತ ಸೇರಿಕೊಳ್ಳಲಿವೆ. ಮತ್ತೊಂದು, 1.1 ಕಿ.ಮೀ ಉದ್ದದ ಎರಡು ಪಥಗಳ ರ‍್ಯಾಂಪ್, ಲಾಲ್‌ಬಾಗ್ ಒಳಗಿರುವ ಮೂರು ಶತಕೋಟಿ ವರ್ಷಗಳಿಗೂ ಹಿಂದೆ ನಿರ್ಮಾಣವಾಗಿರುವ ಬೃಹತ್ ಬಂಡೆಯ ಕೆಳಭಾಗದಲ್ಲಿ ಹಾದುಹೋಗಿ, ಸಿದ್ದಾಪುರ ರಸ್ತೆ ಮರಿಗೌಡ ಜಂಕ್ಷನ್‌ನಲ್ಲಿ ಈಗಾಗಲೇ ಸಂಚಾರ ದಟ್ಟಣೆ ಇರುವ ಪ್ರದೇಶದಲ್ಲಿ ನಿರ್ಗಮನ ಹೊಂದಲಿದೆ.



ಒಟ್ಟಾರೆಯಾಗಿ, 2.56 ಲಕ್ಷ ಚದರ ಅಡಿ (ಆರು ಎಕರೆಗೂ ಹೆಚ್ಚು) ಭೂಮಿ ಈ ಯೋಜನೆಗೆ ಅಗತ್ಯವಿದೆ. ಲಾಲ್‌ಬಾಗ್‌ನೊಳಗೆ ಸುರಂಗ ರಸ್ತೆಯ ಪ್ರವೇಶ–ನಿರ್ಗಮನದ ಸೌಲಭ್ಯಗಳ ತಾಣ (ಶಾಫ್ಟ್) ನಿರ್ಮಾಣವಾಗುವ ಯೋಜನೆ ಇದೆ. ಇಲ್ಲಿಂದ, ಸುರಂಗ ಕೊರೆಯುವ ಯಂತ್ರ (ಟಿಬಿಎಂ) ಲಾಲ್‌ಬಾಗ್‌ನಿಂದ 700 ಮೀಟರ್ ಕೆಳಭಾಗದಲ್ಲಿ ಸಾಗಲಿದೆ.

ಈ ವರ್ಷದ ಮೇನಲ್ಲಿ, ಸರ್ಕಾರ ರಚಿಸಿದ ತಜ್ಞರ ಸಮಿತಿ ಸುರಂಗ ರಸ್ತೆಯ ಅಲೈನ್‌ಮೆಂಟ್ ಹಾಗೂ ಲಾಲ್‌ಬಾಗ್‌ನಲ್ಲಿ ಜೀವವೈವಿಧ್ಯದ ಸೂಕ್ಷ್ಮತೆ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದೆ. ಶಾಫ್ಟ್ ಅನ್ನು ಬೇರೆಡೆಗೆ ಸ್ಥಳಾಂತರಿಸಬೇಕು ಎಂದು ಸಮಿತಿ ಸಲಹೆ ನೀಡಿದೆ. ಆದರೆ, ಇದು ಇನ್ನೂ ಯೋಜನೆಯಲ್ಲಿ ಸೇರ್ಪಡೆಯಾಗಿಲ್ಲ.

ಹೆಬ್ಬಾಳ– ಸರ್ಜಾಪುರದ ನಮ್ಮ ಮೆಟ್ರೊ ಮಾರ್ಗ ರಸ್ತೆಯ ಕೆಳಭಾಗದಲ್ಲೇ ಬಹುತೇಕ ಸಾಗಿ, ಹೆಚ್ಚುವರಿ ನಷ್ಟ ಹಾಗೂ ಆಸ್ತಿ ನಾಶವನ್ನು ತಡೆಯುತ್ತದೆ. ಆದರೆ, ಕೇಂದ್ರ ರೇಷ್ಮೆ ಬೋರ್ಡ್‌ನಿಂದ ಹೆಬ್ಬಾಳದವರೆಗಿನ ಸುರಂಗ ರಸ್ತೆ ಅಲೈನ್‌ಮೆಂಟ್ ಉದ್ಯಾನದ ಕೆಳಭಾಗದಲ್ಲಿ ಮಾತ್ರ ಸಾಗದೆ, ವಸತಿ ಹಾಗೂ ವಾಣಿಜ್ಯ ಪ್ರದೇಶದ ಕೆಳಗೂ ಸಾಗಲಿದೆ.

'ಲಾಲ್‌ಬಾಗ್ ಉದ್ಯಾನ ಮಾತ್ರ ಆಗಿರದೆ, ಹಸಿರಿನ ಮ್ಯೂಸಿಯಂ ಆಗಿದೆ. ಸಂರಕ್ಷಣೆ, ಶಿಕ್ಷಣ ಮತ್ತು ಮನರಂಜನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಸುರಂಗ ಯೋಜನೆ ಜೀವವೈವಿಧ್ಯಕ್ಕೆ ಸಂಪೂರ್ಣ ಹಾನಿ ಮಾಡಲಿದ್ದು, ಈ ಯೋಜನೆಯನ್ನು ಸರ್ಕಾರ ಕೈಬಿಡಬೇಕು' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್‌ನ ಸಂಚಾಲಕ ರಾಜ್‌ಕುಮಾರ್ ದುಗಾರ್ ಆಗ್ರಹಿಸಿದರು.

ಆರು ಎಕರೆ ಜಾಗವನ್ನು ತಾತ್ಕಾಲಿಕ ಬಳಕೆ

'ಉದ್ಯಾನದ ಆರು ಎಕರೆ ಜಾಗವನ್ನು ತಾತ್ಕಾಲಿಕವಾಗಿ ಉಪಯೋಗಿಸಲಾಗುತ್ತದೆ. ಇದರಲ್ಲಿ ಬಹುತೇಕ ಭೂಮಿಯನ್ನು ಉಳಿಸಿ, ಹೀಗಿರುವಂತೆಯೇ ವಾಪಸ್ ನೀಡಲಾಗುತ್ತದೆ. ಉದ್ದೇಶಿತ ಶಾಫ್ಟ್ ಉದ್ಯಾನದ ಒಳಭಾಗದಲ್ಲಿದ್ದು, ಬಂಡೆಗೆ ಯಾವುದೇ ರೀತಿಯ ಸಮಸ್ಯೆ ಉಂಟಾಗುವುದಿಲ್ಲ. ಈ ಪ್ರದೇಶದಲ್ಲೇ ತೋಟಗಾರಿಕೆ ಇಲಾಖೆ ಈ ಹಿಂದೆ ಬಹು–ಅಂತಸ್ತಿನ ಕಾರು ನಿಲುಗಡೆ ಸೌಲಭ್ಯವನ್ನು ಪ್ರಸ್ತಾಪಿಸಿತ್ತು' ಎಂದು ಬಿ–ಸ್ಮೈಲ್‌ನ ಹಿರಿಯ ಅಧಿಕಾರಿಗಳು ತಿಳಿಸಿದರು.

'ತೇಜಸ್ವಿ, ಪೈ ಚಿಂತನೆ ಆಘಾತಕಾರಿ'

'ಬಿಎಂಟಿಸಿ ಬೇಕಿಲ್ಲ' ಮಾತಿಗೆ ರಾಮಲಿಂಗಾರೆಡ್ಡಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನೇ ಮುಚ್ಚಬೇಕೆಂಬ ಸಂಸದ ತೇಜಸ್ವಿ ಸೂರ್ಯ ಹಾಗೂ ಉದ್ಯಮಿ ಮೋಹನ್ ದಾಸ್ ಪೈ ಅವರ ಚಿಂತನೆ ಆಘಾತಕಾರಿಯಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಇತ್ತೀಚೆಗೆ ವಿಚಾರಸಂಕಿರಣವೊಂದರಲ್ಲಿ ತೇಜಸ್ವಿ ಸೂರ್ಯ ಮತ್ತು ಮೋಹನ್ ದಾಸ್ ಪೈ ಅವರು 'ನೋ ಮೋರ್ ಬಿಎಂಟಿಸಿ', 'ನೋ ಮೋರ್ ಮೊನಾಪಲಿ' (ಬಿಎಂಟಿಸಿ ಬೇಕಿಲ್ಲ, ಏಕಸ್ವಾಮ್ಯವೂ ಬೇಕಿಲ್ಲ) ಎಂದು ಮಾತನಾಡಿರುವುದು ಖಂಡನೀಯ' ಎಂದರು.

'ಕಾರ್ಖಾನೆ, ಕಂಪನಿಗಳಿಗೆ ಬಾಡಿಗೆ ಆಧಾರದಲ್ಲಿ ಕಾರು, ಶಟಲ್ ಬಸ್, ಇತರೆ ಸಾರಿಗೆ ಸಂಬಂಧಿತ ವ್ಯವಸ್ಥೆ ಕಲ್ಪಿಸುವ 'ಮೊವೆಲ್ಸಿಂಕ್' ಎಂಬ ಸಂಸ್ಥೆ ಹಮ್ಮಿಕೊಂಡಿದ್ದ ವಿಚಾರಸಂಕಿರಣದಲ್ಲಿ ಸರ್ಕಾರಿ ಸಾರಿಗೆ ವ್ಯವಸ್ಥೆಯನ್ನೇ ಮುಚ್ಚಿಬಿಡಬೇಕು ಎಂಬ ಅರ್ಥದಲ್ಲಿ ಅವರಿಬ್ಬರೂ ಮಾತನಾಡಿದ್ದಾರೆ' ಎಂದರು.

'ಬೆಂಗಳೂರಿನಲ್ಲಿ 1.44 ಕೋಟಿ ಜನಸಂಖ್ಯೆಯಿದೆ. ಈ ಪೈಕಿ, ಮೂರನೇ ಒಂದರಷ್ಟು ಅಂದರೆ, 48 ಲಕ್ಷ ಮಂದಿ ಬಿಎಂಟಿಸಿ ಬಸ್‌ನಲ್ಲಿ ಸಂಚರಿಸುತ್ತಾರೆ. ಕಾರ್ಮಿಕರು, ಉದ್ಯೋಗಸ್ಥರು, ಬಡವರು, ದುರ್ಬಲರು, ಮಧ್ಯಮ ವರ್ಗದವರು ಸಾರಿಗೆ ಬಸ್‌ಗಳಲ್ಲಿ ಹೆಚ್ಚು ಸಂಚರಿಸುತ್ತಾರೆ. ಸ್ಥಿತಿವಂತರ ಪೈಕಿ ಶೇ 10ರಿಂದ 20ರಷ್ಟು ಮಂದಿ ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುತ್ತಾರೆ. ಶಕ್ತಿ ಯೋಜನೆಯಡಿ 570 ಕೋಟಿ ಸುತ್ತುಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣ ಸೇವೆ ಪಡೆದಿದ್ದಾರೆ. ಶಕ್ತಿ ಯೋಜನೆಯ ನಂತರ ಬೆಂಗಳೂರಿನಲ್ಲಿ ಶೇ 23, ಹುಬ್ಬಳ್ಳಿ- ಧಾರವಾಡದಲ್ಲಿ ಶೇ 21ರಷ್ಟು ಉದ್ಯೋಗಿಗಳ ಸಂಖ್ಯೆ ಹೆಚ್ಚಳವಾಗಿದೆ ಎಂಬುದಾಗಿ ಅಧ್ಯಯನ ವರದಿ ಹೇಳಿದೆ' ಎಂದರು.

'ಸರ್ಕಾರಿ ಸಾರಿಗೆ ವ್ಯವಸ್ಥೆಗೆ ಜನಪ್ರತಿನಿಧಿಗಳು ಬೆಂಬಲ ನೀಡಬೇಕು. ಆದರೆ, ತೇಜಸ್ವಿ ಸೂರ್ಯ ಅವರು ಖಾಸಗಿ ಕಂಪನಿಗಳ ಪರ ಮಾತನಾಡುತ್ತಿರುವುದು ಖಂಡನೀಯ. ತೇಜಸ್ವಿ ಸೂರ್ಯ, ಮೋಹನ್ ದಾಸ್ ಪೈ ಅವರು ಬಂಡವಾಳಶಾಹಿಗಳಿಗೆ ಬೆಂಬಲ ನೀಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ತನ್ನ ಅವಧಿಯಲ್ಲಿ ಒಂದೂ ಬಸ್ ಖರೀದಿಸಿಲ್ಲ. ನಮ್ಮ ಪಕ್ಷ ಅಧಿಕಾರ ವಹಿಸಿಕೊಂಡ ಬಳಿಕ 5,800 ಬಸ್‌ಗಳನ್ನು ಖರೀದಿಸಿದ್ದು, 10 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಹೇಳಿಕೆಗಳಿಂದ ಪಕ್ಷಕ್ಕೆ ಹಾನಿ

'ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ವಿಚಾರಗಳ ಬಗ್ಗೆ ನಮ್ಮವರೇ ಹೇಳಿಕೆ ನೀಡುತ್ತಿರುವುದರಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ. ಇಂತಹ ಹೇಳಿಕೆಗಳನ್ನು ನೀಡದಂತೆ ನಮ್ಮ ಬಾಯಿಗೆ ನಾವೇ ಬ್ರೇಕ್ ಹಾಕಿಕೊಳ್ಳಬೇಕು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದರು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆದ ವಕೀಲ ರಾಕೇಶ್ ಕಿಶೋರ್ ವಿರುದ್ಧ ಕರ್ನಾಟಕ ರಾಜ್ಯ ಆದಿ ಜಾಂಬವ ಸಂಘಟನೆಯಿಂದ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಯಿತು. ಸಂಘಟನೆ ಜಂಬೂದ್ವೀಪ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಸಿ.ವಿ. ರಮೇಶ್ ಕುಮಾರ್, ಉಪಾಧ್ಯಕ್ಷ ಹನುಮಂತರಾಜು ಮಾಚೋಹಳ್ಳಿ ಮತ್ತಿತರರು ಹಾಜರಿದ್ದರು

353 ಪಟಾಕಿ ಬಾಕ್ಸ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯ ಹಾಗೂ ಕುಂಬಳಗೂಡು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪೊಲೀಸರು ದಾಳಿ ನಡೆಸಿ, ಪರವಾನಗಿ ಇಲ್ಲದೆ ದಾಸ್ತಾನು ಮಾಡಿದ್ದ ₹15.3 ಲಕ್ಷ ಮೌಲ್ಯದ ಪಟಾಕಿಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಕುಂಬಳಗೂಡು ಪೊಲೀಸ್ ಠಾಣೆ ವ್ಯಾಪ್ತಿಯ ಧನ ನಾಯಕನಹಳ್ಳಿಯ ಮನೆಯಲ್ಲಿ ಪರವಾನಗಿ ಇಲ್ಲದ ₹10.13 ಲಕ್ಷ ಮೌಲ್ಯದ 317 ಪಟಾಕಿ ಬಾಕ್ಸ್‌ಗಳನ್ನು ವಶಪಡಿಸಿಕೊಂಡು, ಸಮೃದ್ಧಿ ಲೇಔಟ್ ನಿವಾಸಿ ಶ್ರೀನಿವಾಸ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಸುರಕ್ಷಿತ ಹಾಗೂ ಮುಂಜಾಗ್ರತಾ ಕ್ರಮ ಅನುಸರಿಸದೆ ಪಟಾಕಿ ಸಂಗ್ರಹಿಸಿಟ್ಟಿದ್ದರು. ಪಟಾಕಿ ಬಾಕ್ಸ್‌ಗಳನ್ನು ವಶಕ್ಕೆ ಪಡೆದು ಸ್ಫೋಟಕ ವಸ್ತು ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಕಲಾಸಿಪಾಳ್ಯ ಠಾಣೆ ಪೊಲೀಸರು ₹5 ಲಕ್ಷ ಮೌಲ್ಯದ 36 ಪಟಾಕಿ ಬಾಕ್ಸ್‌ಗಳನ್ನು ಜಪ್ತಿ ಮಾಡಿದ್ದಾರೆ. ಕಲಾಸಿಪಾಳ್ಯ ಮುಖ್ಯರಸ್ತೆಯ ಅಯ್ಯಪ್ಪಸ್ವಾಮಿ ದೇವಸ್ಥಾನ ಪಕ್ಕದಲ್ಲಿರುವ ಟ್ರಸ್ಟ್‌ನ ನೆಲಮಹಡಿಯಲ್ಲಿ ಪರವಾನಗಿ ಇಲ್ಲದೆ ಸಂಗ್ರಹಿಸಿದ ಕಾರಣ ಅಧಿ ಸುಬ್ರಹ್ಮಣ್ಯ ಎಂಬುವರನ್ನು ಬಂಧಿಸಿದ್ದಾರೆ.

'ದಾಸ್ತಾನು ಮಾಡಿರುವ ಸ್ಥಳ ಜನನಿಬಿಡ ಪ್ರದೇಶವಾಗಿತ್ತು. ಆಕಸ್ಮಿಕವಾಗಿ ಸ್ಫೋಟ ಸಂಭವಿಸಿದರೆ ಜೀವಹಾನಿ ಮತ್ತು ಸಾರ್ವಜನಿಕ ಆಸ್ತಿ-ಪಾಸ್ತಿಗೆ ಹಾನಿಯಾಗುವ ಸಂಭವ ಇರುವುದರಿಂದ ದಾಳಿ ನಡೆಸಿ ಲಕ್ಷಾಂತರ ರೂಪಾಯಿ ಮೌಲ್ಯದ ಪಟಾಕಿಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ತಿಳಿಸಿದ್ದಾರೆ.

'2,300 ಸಮೀಕ್ಷಕರು ಯಾವುದೇ ಕಾರಣ ನೀಡದೆ, ಅನಧಿಕೃತ ಗೈರು'

ಸಮೀಕ್ಷೆಗೆ ಗೈರು: ಶಿಸ್ತು ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ– ಶೈಕ್ಷಣಿಕ ಸಮೀಕ್ಷೆಗೆ ಗೈರು ಹಾಜರಾಗುತ್ತಿರುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ಮಹೇಶ್ವರ್ ರಾವ್

ನಗರದಲ್ಲಿ ಸುಮಾರು 46 ಲಕ್ಷ ಮನೆಗಳಲ್ಲಿ ಸಮೀಕ್ಷೆ ನಡೆಸಬೇಕಾಗಿದ್ದು, 21 ಸಾವಿರ ಸಮೀಕ್ಷಕರನ್ನು ನಿಯೋಜಿಸಲಾಗಿದೆ. ಇದರಲ್ಲಿ 18 ಸಾವಿರಕ್ಕೂ ಹೆಚ್ಚು ಮಂದಿ ಪ್ರಾಮಾಣಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಅವರು ಪ್ರಶಂಸೆಗೆ ಅರ್ಹರಾಗಿದ್ದಾರೆ ಎಂದರು.

ಗರ್ಭಿಣಿಯರು, ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವುಳ್ಳ ತಾಯಂದಿರು ಹಾಗೂ ಗಂಭೀರ ಆರೋಗ್ಯ ಸಮಸ್ಯೆಯುಳ್ಳ ಸಮೀಕ್ಷಾದಾರರನ್ನು ಸಮೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

ಆದರೆ, ಉಳಿದವರಿಗೆ ಪ್ರತಿದಿನ ಪದೇ ಪದೇ ನೋಟಿಸ್ ಹಾಗೂ ಎಸ್‌ಎಂಎಸ್ ಮೂಲಕ ಸಂದೇಶ ಕಳುಹಿಸುತ್ತಿದ್ದರೂ 2,300 ಸಮೀಕ್ಷಕರು ಯಾವುದೇ ಕಾರಣ ನೀಡದೆ, ಅನಧಿಕೃತವಾಗಿ ಗೈರುಹಾಜರಿದ್ದಾರೆ. ಇದು ಗಂಭೀರ ಶಿಸ್ತುಉಲ್ಲಂಘನೆಯಾಗಿದೆ. ಆದ್ದರಿಂದ ಅನಧಿಕೃತ ಗೈರುಹಾಜರಿ ಅವಧಿಯ ವೇತನ ನೀಡದಂತೆ ಕ್ರಮ ಕೈಗೊಳ್ಳಲು ಆದೇಶ ಹೊರಡಿಸಲಾಗಿದೆ ಎಂದರು.

'ಸಮೀಕ್ಷೆ ಕಾರ್ಯಕ್ಕೆ ತಕ್ಷಣ ಹಾಜರಾಗಿ, ತಮಗೆ ಹಂಚಿಕೆಯಾಗಿರುವ ಮನೆಗಳ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು. ಇಲ್ಲವಾದರೆ, ಅನಧಿಕೃತವಾಗಿ ಗೈರಾಗಿರುವ ಸಮೀಕ್ಷಕರ ವಿರುದ್ಧ ಪ್ರತಿದಿನ ಕ್ರಮ ಕೈಗೊಳ್ಳಲಾಗುತ್ತದೆ. ಗೈರುಹಾಜರಾಗುವುದನ್ನು ಮುಂದುವರಿಸಿದರೆ ಅಮಾನತು ಸೇರಿದಂತೆ ಶಿಸ್ತು ಕ್ರಮಕ್ಕೆ ಅವರೇ ಹೊಣೆಗಾರರಾಗಿರುತ್ತಾರೆ' ಎಂದರು.

'ಸಮೀಕ್ಷೆ ಕಾರ್ಯ ನಿರೀಕ್ಷಿತ ಮಟ್ಟದಲ್ಲಿಲ್ಲ'

ಶಾಲಿನಿ ರಜನೀಶ್

'ಜಿಬಿಎ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಕಾರ್ಯ ನಿರೀಕ್ಷಿತ ರೀತಿಯಲ್ಲಿ ಆಗುತ್ತಿಲ್ಲ. ಜಿಬಿಎ ಮುಖ್ಯ ಆಯುಕ್ತರು, ನಗರ ಪಾಲಿಕೆಗಳ ಆಯುಕ್ತರು ಸಮೀಕ್ಷೆಯ ಪ್ರಗತಿ ಬಗ್ಗೆ ಗಮನ ಹರಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದ್ದಾರೆ.

'ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಸಮೀಕ್ಷಕರೊಬ್ಬರು ಪ್ರತಿ ದಿನ 16 ಮನೆಗಳನ್ನು ಪೂರ್ಣಗೊಳಿಸುತ್ತಾರೆ ಎಂದು ತಿಳಿಸಲಾಗಿತ್ತು. ಅದರಂತೆ ನಡೆದರೆ, ಅಕ್ಟೋಬರ್ 18 ಅಥವಾ 19ರೊಳಗೆ ಸಮೀಕ್ಷೆ ಪೂರ್ಣಗೊಳ್ಳುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ, ಅ.13ರ ವೇಳೆಗೆ ಶೇ 30ರಷ್ಟು ಮನೆಗಳ ಸಮೀಕ್ಷೆ ಮಾತ್ರ ಪೂರ್ಣಗೊಂಡಿದೆ. ಸಮೀಕ್ಷಕರೊಬ್ಬರು ದಿನಕ್ಕೆ 7ರಿಂದ 8 ಮನೆಗಳಷ್ಟೇ ಸಮೀಕ್ಷೆ ನಡೆಸುತ್ತಿದ್ದಾರೆ. ಅವರ ಮೇಲ್ವಿಚಾರಕರ ಕಾರ್ಯ ದಕ್ಷತೆಯಲ್ಲಿ ಕೊರತೆಯಾಗಿರುವುದು ಗೋಚರಿಸುತ್ತಿದೆ' ಎಂದಿದ್ದಾರೆ.

'ಸಮೀಕ್ಷೆ ಅವಧಿಯನ್ನು ವಿಸ್ತರಿಸುವುದು ತುಂಬಾ ಕಷ್ಟಕರವಾಗಿದ್ದು, ಸಮೀಕ್ಷಕರಿಗೆ ನೀಡಿರುವ ಇಲಾಖೆಗಳ ಕೆಲಸ ಕಾರ್ಯದಲ್ಲಿ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ, ಕೂಡಲೇ ಈ ಬಗ್ಗೆ ಗಮನಹರಿಸಬೇಕು' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದಿದ್ದಾರೆ.

14.27 ಲಕ್ಷ ಮನೆ ಸಮೀಕ್ಷೆ

ಜಿಬಿಎ ವ್ಯಾಪ್ತಿಯಲ್ಲಿ ಅ.14ರ ಅಂತ್ಯಕ್ಕೆ 14,27,759 ಮನೆಗಳಲ್ಲಿ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ಅ.14ರಂದು 1,07,006 ಮನೆಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಕೇಂದ್ರ ನಗರ ಪಾಲಿಕೆಯಲ್ಲಿ 1,87,085, ಪೂರ್ವ ನಗರ ಪಾಲಿಕೆಯಲ್ಲಿ 2,16,538, ಉತ್ತರ ನಗರ ಪಾಲಿಕೆಯಲ್ಲಿ 3,47,416, ದಕ್ಷಿಣ ನಗರ ಪಾಲಿಕೆಯಲ್ಲಿ 2,57,549, ಪಶ್ಚಿಮ ನಗರ ಪಾಲಿಕೆಯಲ್ಲಿ 4,19,171 ಮನೆಗಳಲ್ಲಿ ಈವರೆಗೆ ಸಮೀಕ್ಷೆ ನಡೆಸಲಾಗಿದೆ.

ಸಮೀಕ್ಷೆಗೆ ತೆರಳಿದ್ದ ಶಿಕ್ಷಕಿ ನಾಪತ್ತೆ

ಕೋಲಾರ: ಸಾಮಾಜಿಕ ಹಾಗೂ ಶೈಕ್ಷಣಿಕ ಜಾತಿವಾರು ಸಮೀಕ್ಷೆ ನಡೆಸಲು ತಾಲ್ಲೂಕಿನ ನರಸಾಪುರ ಗ್ರಾಮಕ್ಕೆ ನಿಯೋಜನೆಯಾಗಿದ್ದ ಶಿಕ್ಷಕಿಯೊಬ್ಬರು ನಾಪತ್ತೆಯಾಗಿದ್ದಾರೆ. ತಾಲ್ಲೂಕಿನ ಕೆ.ಬಿ.ಹೊಸಹಳ್ಳಿ ಶಾಲೆಯ ಶಿಕ್ಷಕಿ ಅಕ್ತರ್ ಬೇಗಂ (50) ಕಾಣೆಯಾಗಿರುವ ಶಿಕ್ಷಕಿ. ಅವರು ಕೋಲಾರ ನಗರ ಮಹಾಲಕ್ಷ್ಮಿ ಬಡಾವಣೆಯಲ್ಲಿ ವಾಸವಾಗಿದ್ದಾರೆ. ಸರಿಯಾಗಿ ಕುಟುಂಬಗಳು ಸಿಗದ ಒತ್ತಡದಿಂದ ಶಿಕ್ಷಕಿಯು ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ. ಸೋಮವಾರ ಬೆಳಿಗ್ಗೆಯಿಂದ ಅವರು ಸಂಪರ್ಕಕ್ಕೆ ಸಿಕ್ಕಿಲ್ಲ. ಮೊಬೈಲ್ ಮನೆಯಲ್ಲಿಟ್ಟು, ಗುರುತಿನ ಚೀಟಿ ಮಾತ್ರ ತೆಗೆದುಕೊಂಡು ಸಮೀಕ್ಷೆಗೆ ಹೋಗಿದ್ದರು ಎಂಬುದು ಗೊತ್ತಾಗಿದೆ.

ಅವರ ಪತ್ತೆಗೆ ಸಿಬ್ಬಂದಿ, ಅಧಿಕಾರಿಗಳು ಹಾಗೂ ಕುಟುಂಬಸ್ಥರು ಹುಡುಕಾಟ ನಡೆಸುತ್ತಿದ್ದಾರೆ. ಪತಿ ಶೌಕತ್ ಅಲಿ ಕೋಲಾರ ನಗರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಸಂಬಂಧ ದೂರು ದಾಖಲಿಸಿದ್ದಾರೆ.

485 ಗ್ರಾಂ ಚಿನ್ನಾಭರಣ ದೋಚಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಟ ನಿವಾರಣೆ ಹಾಗೂ ನಿಧಿ ಸಿಗುವಂತೆ ಮಾಡುವುದಾಗಿ ನಂಬಿಸಿ ಪೂಜೆಯ ನೆಪದಲ್ಲಿ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಲಾರದ ಜಮಾಲ್ ಶಾ ನಗರದ ದಾದಾಪೀರ್ ಅಲಿಯಾಸ್ ವೆಂಕಟರಮಣ ಅಲಿಯಾಸ್ ಲಕ್ಷ್ಮೀನಾರಾಯಣ ಎಂಬಾತನನ್ನು ಬಂಧಿಸಿ, ₹53 ಲಕ್ಷ ಮೌಲ್ಯದ 485.4 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

ಠಾಣಾ ವ್ಯಾಪ್ತಿಯ ಬನ್ನೇರುಘಟ್ಟ ಮುಖ್ಯರಸ್ತೆ ಕೋಳಿಫಾರಂ ಗೇಟ್ ಬಸ್ ನಿಲ್ದಾಣದಲ್ಲಿ ಅನುಮಾನಾಸ್ಪದವಾಗಿ ನಿಂತಿದ್ದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

'ನಾರಾಯಣ, ವೆಂಕಟರಮಣ ಮತ್ತಿತರ ಹೆಸರುಗಳಲ್ಲಿ ಪರಿಚಯಿಸಿಕೊಳ್ಳುತ್ತಿದ್ದ ಆರೋಪಿ, ಮಾಟ-ಮಂತ್ರ ನಿವಾರಣೆ ಹಾಗೂ ನಿಧಿ ದೊರಕಿಸಿಕೊಡಲು ಪೂಜೆ ಮಾಡುವುದಾಗಿ ಸ್ವಾಮೀಜಿಯ ಸೋಗಿನಲ್ಲಿ ಅಮಾಯಕರನ್ನು ನಂಬಿಸುತ್ತಿದ್ದ. ಹಲವರು ಪೂಜೆಗೆಂದು ಮನೆಗೆ ಕರೆದೊಯ್ಯುತ್ತಿದ್ದರು. ಪೂಜೆ ವೇಳೆ ಅವರಿಂದ ಪಾತ್ರೆ ಪಡೆದು, ಅದಕ್ಕೆ ಮನೆಯವರ ಚಿನ್ನಾಭರಣಗಳನ್ನು ತುಂಬಿಸುತ್ತಿದ್ದ. ನಂತರ 30 ನಿಮಿಷದ ಪೂಜೆ ಇದೆ ಎಂದು ಹೇಳಿ, ಎಲ್ಲರನ್ನು ಹೊರಗಡೆ ಕಳುಹಿಸಿ, ಚಿನ್ನಾಭರಣಗಳನ್ನು ತನ್ನ ಜೋಳಿಗೆಗೆ ತುಂಬಿಕೊಂಡು, ಪಾತ್ರೆಗೆ ಬಟ್ಟೆ ಸುತ್ತಿ ಕಟ್ಟುತ್ತಿದ್ದ. ಬಳಿಕ ಮನೆಯವರನ್ನು ಕರೆದು, ಒಂದೂವರೆ ತಿಂಗಳವರೆಗೂ ಈ ಪಾತ್ರೆಯ ಬಟ್ಟೆಯನ್ನು ಬಿಚ್ಚಬಾರದು. ಬಳಿಕ ತಾನೇ ಬಂದು ತೆರೆಯುತ್ತೇನೆ ಎಂದು ಹೇಳಿ ಪರಾರಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ದಾದಾಪೀರ್

'ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿದ್ದ. ಪರಾರಿಯಾದ ಬಳಿಕ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು, ಸಿಮ್ ಕಾರ್ಡ್‌ಗಳನ್ನು ಬದಲಾಯಿಸುತ್ತಿದ್ದ. ಈ ರೀತಿ ಹುಳಿಮಾವು, ಶಿವಮೊಗ್ಗ, ಭದ್ರಾವತಿ, ಹೊಸಕೋಟೆ, ಗಿರಿನಗರ ಹಾಗೂ ಆಂಧ್ರಪ್ರದೇಶದ ಮೂರು ಠಾಣೆಗಳ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಅಪರಾಧ ಸುದ್ದಿ

ಕಳವು ಆಭರಣಗಳ ಪೈಕಿ ಅರ್ಧದಷ್ಟು ಆಭರಣಗಳನ್ನು ಕೋಲಾರದ ತನ್ನ ವಾಸದ ಮನೆಯಲ್ಲಿ ಇಟ್ಟಿರುವುದಾಗಿ, ಉಳಿದ ಚಿನ್ನಾಭರಣಗಳನ್ನು ನಗರದ ಬಿಟಿಎಂ ಲೇಔಟ್‌ನ ಆಭರಣ ಅಂಗಡಿ ಹಾಗೂ ಮಹಾರಾಷ್ಟ್ರದ ನಾಗಪುರದಲ್ಲಿರುವ ಆಭರಣ ಅಂಗಡಿಯೊಂದರಲ್ಲಿ ಅಡವಿಟ್ಟಿರುವುದಾಗಿ ತಿಳಿಸಿದ್ದ. ಎಲ್ಲಾ ಆಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಆರೋಪಿ ಬಂಧನದಿಂದ ಹುಳಿಮಾವು ಪೊಲೀಸ್ ಠಾಣೆಯ 2, ಭದ್ರಾವತಿ ಪೊಲೀಸ್ ಠಾಣೆ ಹಾಗೂ ಬಳ್ಳಾರಿ ಪೊಲೀಸ್ ಠಾಣೆಯ ತಲಾ ಒಂದು ಕಳವು ಪ್ರಕರಣಗಳು ಪತ್ತೆಯಾಗಿವೆ.

ಸಮೀಕ್ಷೆ: ಮೃತ ಶಿಕ್ಷಕರ ಕುಟುಂಬಕ್ಕೆ ತಲಾ ₹20 ಲಕ್ಷ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅವಧಿಯಲ್ಲಿ ಮೃತಪಟ್ಟ ಇಬ್ಬರು ಶಿಕ್ಷಕರ ಕುಟುಂಬಕ್ಕೆ ಸರ್ಕಾರ ತಲಾ ₹20 ಲಕ್ಷ ಪರಿಹಾರ ಬಿಡುಗಡೆ ಮಾಡಿದೆ.

ಬಾಗಲಕೋಟೆ ಜಿಲ್ಲೆಯ ದಾನಮ್ಮ ಐ ನಂದರಗಿ ಅವರು ರಸ್ತೆ ಅಪಘಾತದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯ ವೈ.ವಿ.ರಾಮಕೃಷ್ಣಪ್ಪ ಅವರು ಹೃದಯಾಘಾತದಿಂದ ಮೃತಪಟ್ಟಿದ್ದರು. ಮೃತರ ಅವಲಂಬಿತರಿಗೆ ಪರಿಹಾರ ಧನ ಮಂಜೂರು ಮಾಡುವಂತೆ ಎರಡೂ ಜಿಲ್ಲಾಡಳಿತಗಳು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದವು. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪರಿಹಾರ ಮೊತ್ತವನ್ನು ಬಾಗಲಕೋಟೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಖಾತೆಗೆ ಜಮೆ ಮಾಡಿದೆ.

ನಿಧನ ವಾರ್ತೆ

ಗೀತಾ ಜಯಣ್ಣ



ಬೆಂಗಳೂರು: ರಾಜರಾಜೇಶ್ವರಿ ನಗರದ ಪಟ್ಟಣಗೆರೆ ಜಯಣ್ಣ ಅವರ ಪತ್ನಿ ಗೀತಾ ಜಯಣ್ಣ (66) ಅವರು ಅನಾರೋಗ್ಯದಿಂದ ಸೋಮವಾರ ತಡರಾತ್ರಿ ನಿಧನರಾದರು.

ಅವರಿಗೆ ಪತಿ ಹಾಗೂ ಪುತ್ರಿ ಇದ್ದಾರೆ. ಪಟ್ಟಣಗೆರೆಯಲ್ಲಿ ಮಂಗಳವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಕನ್ನಡ ಮತ್ತು ಇಂಗ್ಲಿಷ್ ತರಬೇತಿ ಶಿಬಿರದ ಉದ್ಘಾಟನೆ: ಆಯೋಜನೆ ಮತ್ತು ಸ್ಥಳ: ರಾಯಲ್ ಇಂಗ್ಲಿಷ್ ಸ್ಕೂಲ್, ಚಂದ್ರಾ ಲೇಔಟ್, ಬೆಳಿಗ್ಗೆ 11

ಪಾಲನೇತ್ರ ಅವರಿಗೆ ಅಭಿನಂದನೆ, ಕನ್ನಡ ಜಂಗಮ ಪುಸ್ತಕದ ಬಿಡುಗಡೆ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಪುಸ್ತಕ ಬಿಡುಗಡೆ: ವಿ. ಸೋಮಣ್ಣ, ಕನ್ನಡ ಹೋರಾಟಗಾರರಿಗೆ ಗೌರವಾರ್ಪಣೆ: ಎಚ್. ಎಂ. ರೇವಣ್ಣ, ಅಭಿನಂದನಾ ನುಡಿ: ಸಿ. ಸೋಮಶೇಖರ್, ಅತಿಥಿಗಳು: ಬೈರಮಂಗಲ ರಾಮೇಗೌಡ, ಕೆ.ವಿ. ನಾಗರಾಜಮೂರ್ತಿ, ಗುರುನಾಥ ಕೊಳ್ಳೂರು, ಆಯೋಜನೆ: ಪಾಲನೇತ್ರ ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

'ಪಂಚತತ್ತ್ವ' ಕರ್ನಾಟಕ ಸೌಹಾರ್ದದ ನೃತ್ಯ ಪ್ರದರ್ಶನ: ಕಾವ್ಯ ಅವಧಾನಿ ಮತ್ತು ತಂಡ, ಅತಿಥಿಗಳು: ಚಿರಂಜೀವಿ ಸಿಂಘ್, ತೇಜಸ್ವಿನಿ ಅನಂತ್ ಕುಮಾರ್, ಮನೀಶ್ ಮೈಕಲ್, ವಿನಯ್ ಶಿಂಧೆ, ಆಯೋಜನೆ: ವಿಮೋವೇ ಫೌಂಡೇಷನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4

ವಿಶ್ವ ಮಾನಸಿಕ ಆರೋಗ್ಯ ದಿನ–2025: ಅತಿಥಿಗಳು: ಹುಲಿಕಲ್ ನಟರಾಜ್, ಡಾ. ವಿರುಪಾಕ್ಷ ಎಚ್.ಎಸ್., ಡಾ. ಪೂಜಾ ಆರ್.ರಾಯ್ಕರ್, ಡಾ. ಕೆ.ಎಸ್. ಗಂಗಾಧರ್, ಡಾ. ಕೃಷ್ಣಮೂರ್ತಿ ವಿ.ಆರ್., ಡಾ. ವಿರುಪಾಕ್ಷಿ ಜಾಲಿಹಾಳ, ಆಯೋಜನೆ ಮತ್ತು ಸ್ಥಳ: ಬಿಜಿಎಸ್ ಎಸಿಎಚ್ ಆಸ್ಪತ್ರೆ, ನಗರೂರು, ಬೆಳಿಗ್ಗೆ 11

ಕೆ.ಎಂ. ರಘು ಅವರ 'ಡಿ.ಕೆ. ಶಿವಕುಮಾರ್' ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಆರ್.ಕೆ. ನಲ್ಲೂರು ಪ್ರಸಾದ್, ಅತಿಥಿಗಳು: ಎಲ್.ಎನ್. ಮುಕುಂದರಾಜ್, ಕರೀಗೌಡ ಬೀಚನಹಳ್ಳಿ, ಕೆ. ಷರೀಫಾ, ವೆಂಕಟಶಿವಾರೆಡ್ಡಿ, ಭಕ್ತರಹಳ್ಳಿ ಕಾಮರಾಜ್, ವೇದಮೂರ್ತಿ ರುದ್ರಾರಾಧ್ಯ, ವಿ. ಯೋಗೇಶ್, ಆಯೋಜನೆ: ಪ್ರೇಕ್ಷಿತ್ ಪಬ್ಲಿಕೇಶನ್, ಸ್ಥಳ: ಎಫ್‌ಕೆಸಿಸಿಐ ಸಭಾಂಗಣ, ಕೆ.ಜಿ. ರಸ್ತೆ, ಸಂಜೆ 6

ಚಂದ್ರಶೇಖರ ಕಂಬಾರ

ಎಸ್.ಜಿ. ಸಿದ್ಧರಾಮಯ್ಯ ಅವರ 'ಕಂಗಳೇ ಕರುಳಾಗಿ', ಎಲ್. ಹನುಮಂತಯ್ಯ ಅವರ 'ಜನ ಮನೆಯ ಜನ ಗಣ ಮನ' ಪುಸ್ತಕಗಳ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಎಂ.ಎಸ್. ಆಶಾದೇವಿ, ಉಪಸ್ಥಿತಿ: ಕೆ. ರೇವಣ್ಣ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಚಾರುಮತಿ ಪ್ರಕಾಶನ, ಬಾಗವತರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.30

ಎಸ್.ಜಿ. ಸಿದ್ಧರಾಮಯ್ಯ

'ಅವತರಣಮ್ ಭ್ರಾಂತಾಲಯಮ್' ನಾಟಕ ಪ್ರದರ್ಶನ: ನಿರ್ದೇಶನ: ಶಂಕರ ವೆಂಕಟೇಶ್ವರನ್, ಆಯೋಜನೆ: ನೀನಾಸಮ್ ತಿರುಗಾಟ–2025, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಟಿಕೆಟ್‌ಗಾಗಿ ಧರಣಿ
ಟಿಕೆಟ್ ನೀಡುವಂತೆ ಆಗ್ರಹಿಸಿ ಶಾಸಕ ಗೋಪಾಲ್ ಮಂಡಲ್ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಮನೆ ಮುಂದೆ ಧರಣಿ ನಡೆಸಿದರು

ವಿಶೇಷ ಪ್ರದರ್ಶನ
ಗುರುಗ್ರಾಮದ ಎನ್‌ಎಸ್‌ಜಿನ 41ನೇ ಸಂಸ್ಥಾಪನಾ ದಿನದ ಅಂಗವಾಗಿ ಅಪರಾಧ ಪತ್ತೆ ತರಬೇತಿ ಪಡೆದ ಶ್ವಾನದ ಜೊತೆ ಕಮಾಂಡೊ ಒಬ್ಬರು ವಿಶೇಷ ಪ್ರದರ್ಶನ ನೀಡಿದರು

ಅನುದಾನ ವಿಳಂಬ: ಶಾಸಕ ರಿಟ್ 5 ಕೈಗಾರಿಕೆ: ಮಹಿಳಾ ಮೀಸಲಿಗೆ ಒತ್ತಾಯ 8

₹38 ಕೋಟಿ ಆಸ್ತಿ: 'ಲೋಕಾ' ಪತ್ತೆ

ಸುಮಂಗಲ ಆಸ್ತಿ ₹7.32 ಕೋಟಿ, ಧೂಳಪ್ಪ ಬಳಿ ₹500 ಮುಖಬೆಲೆಯ 166 ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ 12 ಅಧಿಕಾರಿಗಳ ಮನೆ ಮತ್ತು ಕಚೇರಿಗಳಲ್ಲಿ ಶೋಧ ನಡೆಸಿದ ಲೋಕಾಯುಕ್ತ ಪೊಲೀಸರು ₹24.34 ಕೋಟಿ ಮೌಲ್ಯದ ಸ್ಥಿರಾಸ್ತಿಗಳು ಸೇರಿ, ಒಟ್ಟು ₹38.10 ಕೋಟಿಯ ಸ್ವತ್ತುಗಳನ್ನು ಪತ್ತೆ ಮಾಡಿದ್ದಾರೆ.

ಈ ಅಧಿಕಾರಿಗಳ ವಿರುದ್ಧ ದಾಖಲಾಗಿದ್ದ 'ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ' ದೂರಿನ ಆಧಾರದಲ್ಲಿ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಬೀದರ್, ಉಡುಪಿ, ಬಾಗಲಕೋಟೆ ಮತ್ತು ಹಾಸನದ 48 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಮಂಗಳವಾರ ಬೆಳಿಗ್ಗೆಯೇ ಶೋಧ ನಡೆಸಿದ್ದರು.

ಹನ್ನೆರಡೂ ಅಧಿಕಾರಿಗಳು, ತಮ್ಮ ಕುಟುಂಬದವರು ಮತ್ತು ಆಪ್ತರ ಹೆಸರಿನಲ್ಲಿ ಚರಾಸ್ತಿ ಹಾಗೂ ಸ್ಥಿರಾಸ್ತಿಗಳನ್ನು ಹೊಂದಿದ್ದಾರೆ. ಈ ಪೈಕಿ ಶಾಲಾ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ನಿರ್ದೇಶಕಿ ಹುದ್ದೆಯಲ್ಲಿದ್ದಾಗ ಅಮಾನತಾಗಿದ್ದ ವಿ.ಸುಮಂಗಲ ಅವರು ಅತಿಹೆಚ್ಚು ಮೌಲ್ಯದ ಆಸ್ತಿ (₹7.32 ಕೋಟಿ) ಹೊಂದಿದ್ದಾರೆ.

ವಿ.ಸುಮಂಗಲ

ಸುಮಂಗಲ ಅವರಿಗೆ ಸೇರಿದ ಆರು ಸ್ಥಳಗಳಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ₹5.08 ಕೋಟಿ ಮೌಲ್ಯದ 4 ನಿವೇಶನಗಳು, 5 ವಾಸದ ಮನೆ, 19 ಎಕರೆ ಕೃಷಿ ಭೂಮಿಗೆ ಸಂಬಂಧಿಸಿದ ದಾಖಲೆಪತ್ರಗಳನ್ನು ಪತ್ತೆ ಮಾಡಿದ್ದಾರೆ. ಸುಮಂಗಲ ಅವರು ಹೊಂದಿರುವ ವಾಹನಗಳು, ಚಿನ್ನಾಭರಣ, ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆ ಮೌಲ್ಯವೇ ₹2.24 ಕೋಟಿಯಷ್ಟಾಗುತ್ತದೆ. ಶಾಲಾ ಶಿಕ್ಷಣ ಇಲಾಖೆಯು ಕರೆದಿದ್ದ ₹1.62 ಕೋಟಿ ಮೊತ್ತದ ಟೆಂಡರ್‌ನಲ್ಲಿ ಅಕ್ರಮ ಎಸಗಿದ ಆರೋಪದಲ್ಲಿ ಅವರನ್ನು 2024ರ ಜುಲೈನಲ್ಲಿ ಅಮಾನತು ಮಾಡಲಾಗಿತ್ತು.

2B

ಕೋಟಿ ಮೌಲ್ಯದ ಮನೆ, ಚಿನ್ನಾಭರಣ, ವಾಹನಗಳು

- **₹24.34 ಕೋಟಿ** — 12 ಅಧಿಕಾರಿಗಳ ಬಳಿ ಪತ್ತೆಯಾದ ಸ್ಥಿರಾಸ್ತಿಗಳ ಮೌಲ್ಯ
- **₹1.20 ಕೋಟಿ** — ನಗದು
- **₹3.87 ಕೋಟಿ** — ಚಿನ್ನಾಭರಣಗಳ ಮೌಲ್ಯ
- **₹3.20 ಕೋಟಿ** — ವಾಹನಗಳ ಮೌಲ್ಯ
- **₹5.48 ಕೋಟಿ** — ಗೃಹಬಳಕೆ ವಸ್ತುಗಳು, ಬ್ಯಾಂಕ್ ಠೇವಣಿ ಮತ್ತು ಹೂಡಿಕೆಗಳ ಮೌಲ್ಯ

ನೂರಾರು ಟನ್ ಅಕ್ಕಿ–ಗೋಧಿ ಹುಳುಗಳ ಪಾಲು


ಗೋದಾಮಿನಲ್ಲಿ ಸಂಗ್ರಹಿಸಲಾಗಿರುವ ಅಕ್ಕಿ ಮತ್ತು ಗೋಧಿಗೆ ಹುಳು ಬಿದ್ದಿದೆ

ಅಕ್ರಮ ಆಸ್ತಿ ಮತ್ತು ನಗದನ್ನು ನಿರೀಕ್ಷಿಸಿ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರಿಗೆ, ಪಡಿತರ ವಿತರಣೆಗಾಗಿ ಮೀಸಲಾಗಿದ್ದ ನೂರಾರು ಟನ್‌ಗಳಷ್ಟು ಕೊಳೆತ ಅಕ್ಕಿ ಮತ್ತು ಗೋಧಿ ಸಿಕ್ಕಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಆಹಾರ ನಿಗಮದ ದಾವಣಗೆರೆ ಜಿಲ್ಲೆಯ ಕಿರಿಯ ಎಂಜಿನಿಯರ್ ಬಿ.ಎಸ್. ನಡುವಿನಮನೆ ಅವರ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಲಾಗಿತ್ತು. ಅವರ ಸುಪರ್ದಿಯಲ್ಲಿರುವ ಗೋದಾಮಿನ ಮೇಲೂ ದಾಳಿ ನಡೆಸಿ, ಅದರ ಬಾಗಿಲನ್ನು ತೆರೆದಾಗ ಕಮಟು ವಾಸನೆ ಬಡಿಯುತ್ತಿತ್ತು. ಅಲ್ಲಿ ಸಾವಿರಾರು ಚೀಲ ಅಕ್ಕಿ ಮತ್ತು ಗೋಧಿ ಕೊಳೆತಿತ್ತು. ಅವುಗಳಿಗೆ ಬಿದ್ದಿದ್ದ ಹುಳುಗಳು ಚೀಲಗಳ ಮೇಲೆಲ್ಲಾ ಓಡಾಡುತ್ತಿದ್ದವು. ಇಲಿ–ಹೆಗ್ಗಣಗಳು ಮೂತ್ರ ಮತ್ತು ಹಿಕ್ಕೆ ಮಾಡಿದ್ದವು. ಇಡೀ ಗೋದಾಮಿನಲ್ಲಿದ್ದ ಪಡಿತರ ಹಾಳಾಗಿತ್ತು' ಎಂದು ಮಾಹಿತಿ ನೀಡಿವೆ.

'ಈ ಬಗ್ಗೆ ವಿವರಣೆ ಕೇಳಿದಾಗ, ಪಡಿತರ ಯೋಜನೆ ಅಡಿ ಹಾಗೂ ವಿವಿಧ ವಸತಿನಿಲಯಗಳಿಗೆ ವಿತರಿಸಲು ಅಕ್ಕಿ ಹಾಗೂ ಗೋಧಿಯನ್ನು ಸಂಗ್ರಹಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದು 2,500 ಟನ್ ಸಾಮರ್ಥ್ಯದ ಗೋದಾಮು. 2023ರಿಂದಲೂ ಈ ದಾಸ್ತಾನು ಇಲ್ಲಿಯೇ ಇದೆ. ಎಷ್ಟು ಪ್ರಮಾಣದ ಅಕ್ಕಿ ಮತ್ತು ಗೋಧಿ ಹಾಳಾಗಿದೆ ಎಂಬುದರ ಮಾಹಿತಿ ದೊರೆತಿಲ್ಲ. ಈ ಬಗ್ಗೆ ವಿವರಣೆ ನೀಡುವಂತೆ ಸಂಬಂಧಿತ ಅಧಿಕಾರಿಗೆ ಸೂಚಿಸಲಾಗಿದೆ' ಎಂದು ವಿವರಿಸಿವೆ.

'ಕ್ಲೀನ್‌ಸ್ವೀಪ್' ಮಾಡಿದ ಭಾರತ

ನವದೆಹಲಿ: ಶುಭಮನ್ ಗಿಲ್ ನಾಯಕತ್ವದ ಭಾರತ ತಂಡವು ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಮಂಗಳವಾರ ಏಳು ವಿಕೆಟ್‌ಗಳಿಂದ ಸುಲಭವಾಗಿ ಗೆದ್ದುಕೊಂಡಿತು. ಸರಣಿಯನ್ನು ನಿರೀಕ್ಷೆಯಂತೆ 2–0 ಯಿಂದ ಕ್ಲೀನ್‌ಸ್ವೀಪ್ ಮಾಡಿತು.

- ನಾಯಕನಾಗಿ ಶುಭಮನ್ ಗಿಲ್ ಅವರಿಗೆ ಮೊದಲ ಸರಣಿ ಗೆಲುವು
- ವಿಂಡೀಸ್ ವಿರುದ್ಧ ಇದು ಭಾರತಕ್ಕೆ ಸತತ ಹತ್ತನೇ ಸರಣಿ ಜಯ

ಸರಣಿಯ ಆಟಗಾರ ರವೀಂದ್ರ ಜಡೇಜ 104 ರನ್, 8 ವಿಕೆಟ್

ಪಂದ್ಯದ ಆಟಗಾರ ಕುಲದೀಪ್ ಯಾದವ್ 82ಕ್ಕೆ 5, 104ಕ್ಕೆ 3

ಫಲಿತಾಂಶ
ಭಾರತಕ್ಕೆ 7 ವಿಕೆಟ್‌ಗಳ ಜಯ
2-0 ಸರಣಿ ವಶ

ಸಂಕ್ಷಿಪ್ತ ಸ್ಕೋರ್

ಮೊದಲ ಇನಿಂಗ್ಸ್
- ಭಾರತ: 5ಕ್ಕೆ518 ಡಿಕ್ಲೇರ್ಡ್
- ವೆಸ್ಟ್ ಇಂಡೀಸ್: 248

ಎರಡನೇ ಇನಿಂಗ್ಸ್
- ವೆಸ್ಟ್ ಇಂಡೀಸ್: (ಫಾಲೊ ಆನ್) 390
- ಭಾರತ 3ಕ್ಕೆ 124 (ಗುರಿ 121)

ಶುಭಮನ್ ಗಿಲ್

ಸುದ್ದಿ ವಿವರ 9

ಹೊಸ ನೀತಿಗೆ 'ಸುಪ್ರೀಂ' ಒಪ್ಪಿಗೆ

ಪೂರ್ವಭಾವಿ ಪರೀಕ್ಷೆ ಬಳಿಕ ತಾತ್ಕಾಲಿಕ ಕೀ– ಉತ್ತರ ಪ್ರಕಟ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಪೂರ್ವಭಾವಿ (ಪ್ರಿಲಿಮಿನರಿ) ಪರೀಕ್ಷೆಯ ಬಳಿಕ ತಕ್ಷಣವೇ ತಾತ್ಕಾಲಿಕ ಕೀ– ಉತ್ತರಗಳನ್ನು ಪ್ರಕಟಿಸುವ ಹೊಸ ನೀತಿಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ. ಇದು ಲಕ್ಷಾಂತರ ಅಭ್ಯರ್ಥಿಗಳಲ್ಲಿ ನಿರಾಳ ಭಾವ ಮೂಡಿಸಿದೆ.

ಯುಪಿಎಸ್‌ಸಿ

ನ್ಯಾಯಮೂರ್ತಿಗಳಾದ ಪಿ.ಎಸ್ ನರಸಿಂಹ ಮತ್ತು ಎ.ಎಸ್ ಚಂದೂರ್‌ಕರ್ ಅವರ ಪೀಠವು ಯುಪಿಎಸ್‌ಸಿ ಹೊಸ ನೀತಿ ಬಗ್ಗೆ ತೃಪ್ತಿ ವ್ಯಕ್ತಪಡಿಸಿತಲ್ಲದೆ, 'ಇದು ತುಂಬಾ ಒಳ್ಳೆಯ ಬೆಳವಣಿಗೆ' ಎಂದು ಮಂಗಳವಾರ ಹೇಳಿತು.

ಪೂರ್ವಭಾವಿ ಪರೀಕ್ಷೆಯ ಕೀ– ಉತ್ತರಗಳು, ಅಭ್ಯರ್ಥಿಗಳ ಕಟ್–ಆಫ್ ಅಂಕಗಳು ಮತ್ತು ಅಂಕಗಳನ್ನು ಬಹಿರಂಗಪಡಿಸುವಂತೆ ಯುಪಿಎಸ್‌ಸಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಪೀಠವು ವಿಲೇವಾರಿ ಮಾಡಿತು.

ಅರ್ಜಿದಾರರು ಬಾಕಿಯಿರುವ ಕುಂದುಕೊರತೆಗಳಿಗೆ ಪರಿಹಾರ ಕಂಡುಕೊಳ್ಳಲು ತಮ್ಮ ವ್ಯಾಪ್ತಿಯ ಹೈಕೋರ್ಟ್‌ಗಳ ಮೊರೆಹೋಗಬಹುದು. ಆ ಅರ್ಜಿಗಳ ತ್ವರಿತ ವಿಚಾರಣೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಪೀಠವು ಹೇಳಿತು.

ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯ ನೇಮಿಸಿದ್ದ ಅಮಿಕಸ್ ಕ್ಯೂರಿ, ಹಿರಿಯ ವಕೀಲ ಜೈದೀಪ್ ಗುಪ್ತಾ ಅವರು ಈ ವಿಷಯದಲ್ಲಿ ಯುಪಿಎಸ್‌ಸಿ ಈಚೆಗೆ ಪ್ರಮಾಣಪತ್ರ ಸಲ್ಲಿಸಿದ್ದನ್ನು ಪೀಠದ ಗಮನಕ್ಕೆ ತಂದರು. ಅದಕ್ಕೆ ಪೀಠ, 'ತುಂಬಾ ಸಕಾರಾತ್ಮಕವಾದ ಏನೋ ಒಂದು ಬೆಳವಣಿಗೆ ನಡೆದಿದೆ' ಎಂದಿತು.

ಪೂರ್ವಭಾವಿ ಪರೀಕ್ಷೆ ಬಳಿಕ ತಾತ್ಕಾಲಿಕ ಕೀ– ಉತ್ತರಗಳನ್ನು ಹಾಗೂ ಅಂತಿಮ ಫಲಿತಾಂಶದ ಬಳಿಕ ಅಂತಿಮ ಕೀ– ಉತ್ತರಗಳನ್ನು ಪ್ರಕಟಿಸಲಾಗುವುದು ಎಂದು ಕಳೆದ ತಿಂಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಯುಪಿಎಸ್‌ಸಿ ತಿಳಿಸಿತ್ತು.

ಅರ್ಜಿದಾರರ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್, 'ಪೂರ್ವಭಾವಿ ಪರೀಕ್ಷೆಯಲ್ಲಿ 'ತಪ್ಪು ಪ್ರಶ್ನೆ'ಗಳು ಬಂದಿರುವುದಕ್ಕೆ ಅರ್ಜಿಗಳನ್ನು ಸಲ್ಲಿಸಲಾಗಿದೆ ಮತ್ತು ಅರ್ಜಿದಾರರು ಹಲವು ವರ್ಷಗಳನ್ನು ಹಾಳುಮಾಡಿಕೊಂಡಿದ್ದಾರೆ' ಎಂದು ಹೇಳಿದರು.

ಸುಪ್ರೀಂ ಕೋರ್ಟ್‌ನ ಆದೇಶವು ಮುಂಬರುವ ಪರೀಕ್ಷೆಗಳಿಗೆ ಯುಪಿಎಸ್‌ಸಿಯ ನೀತಿಯಲ್ಲಿ ಆಗಿರುವ ಬದಲಾವಣೆಯನ್ನು ಅನುಮೋದಿಸಿದೆ. ಇದು ಪ್ರಮುಖ ನಾಗರಿಕ ಸೇವೆಗಳ ನೇಮಕಾತಿ ಪ್ರಕ್ರಿಯೆಯ ಪಾರದರ್ಶಕತೆಯನ್ನು ಮರುರೂಪಿಸುವ ಸಾಧ್ಯತೆಯಿದೆ.

ಆರ್‌ಎಸ್‌ಎಸ್ ಟೀಕೆ: ಪ್ರಿಯಾಂಕ್‌ಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ಪ್ರಶ್ನಿಸುವ ಹಾಗೂ ತಡೆಯುವ ಧೈರ್ಯ ಮಾಡಿದ್ದರಿಂದ ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಬೆದರಿಕೆಗಳು ಮತ್ತು ಅತ್ಯಂತ ಕೀಳು ಪದಗಳ ನಿಂದನೆಗಳಿಂದ ತುಂಬಿದ ಕರೆಗಳು ಬರುತ್ತಿವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಪ್ರಿಯಾಂಕ್

> **ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆ ಬಂದಿರುವ ಕುರಿತು ಮಾಹಿತಿ ಪಡೆಯುತ್ತೇನೆ. ಪ್ರಿಯಾಂಕ್ ಜತೆ ಈ ಕುರಿತು ಚರ್ಚಿಸುತ್ತೇನೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಈ ಬಗ್ಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿರುವ ಪ್ರಿಯಾಂಕ್, 'ಇದರಿಂದ ವಿಚಲಿತನಾಗುವುದಿಲ್ಲ ಅಥವಾ ನನಗೆ ಅಚ್ಚರಿಯೂ ಆಗಿಲ್ಲ. ಮಹಾತ್ಮ ಗಾಂಧಿ ಅಥವಾ ಬಾಬಾಸಾಹೇಬ್ ಅಂಬೇಡ್ಕರ್ ಅವರಂತಹ ಮಹಾನ್ ನಾಯಕರನ್ನೇ ಆರ್‌ಎಸ್‌ಎಸ್ ಬಿಟ್ಟಿಲ್ಲ. ಇನ್ನು ಅವರು ನನ್ನನ್ನು ಹೇಗೆ ಬಿಡುತ್ತಾರೆ' ಎಂದು ಪ್ರಶ್ನಿಸಿದ್ದಾರೆ.

'ಇದು ಬುದ್ಧ, ಬಸವಣ್ಣ ಮತ್ತು ಬಾಬಾಸಾಹೇಬ್ ಅವರ ತತ್ವಗಳ ಮೇಲೆ ಸಮಾಜವನ್ನು ನಿರ್ಮಿಸುವ ಕಾಲ. ಸಮಾನತೆ, ವಿವೇಚನೆ ಮತ್ತು ಕರುಣೆಯಲ್ಲಿ ಬೇರೂರಿರುವ ಸಮಾಜ ಹಾಗೂ ಈ ರಾಷ್ಟ್ರವನ್ನು ಅತ್ಯಂತ ಅಪಾಯಕಾರಿ ವೈರಸ್‌ಗಳಿಂದ (viRuSS) ಶುದ್ಧೀಕರಿಸುವ ಸಮಯ ಇದಾಗಿದೆ' ಎಂದು ಪ್ರಿಯಾಂಕ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

8

'ಹಿಂದಿ, ಇಂಗ್ಲಿಷ್‌ನಲ್ಲಿ ನಿಂದನೆ'

'ಕರೆ ಮಾಡಿದವರು ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಕೆಟ್ಟ ಭಾಷೆಯಿಂದ ನನ್ನನ್ನು, ನನ್ನ ಕುಟುಂಬದವರನ್ನು ಹಾಗೂ ಕುಟುಂಬದ ಪರಿಸ್ಥಿತಿ ಬಗ್ಗೆ ನಿಂದಿಸಿ ಮಾತನಾಡುತ್ತಾರೆ. 'ನೋ ನಂಬರ್', 'ಇಂಟರ್‌ನ್ಯಾಷನಲ್ ನಂಬರ್' ಎಂದು ಕಾಲರ್ ಐಡಿ ತೋರಿಸುತ್ತಿದೆ. ಇಂತಹ ಕರೆಗಳಿಗೆ ನಾನು ಹೆದರುವುದಿಲ್ಲ' ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

8

ನ.21ಕ್ಕೆ ಮಾರ್ನಮಿ ತೆರೆಗೆ

ರಿಶಿತ್ ಶೆಟ್ಟಿ ನಿರ್ದೇಶನದ 'ಮಾರ್ನಮಿ' ಚಿತ್ರ ನ.21ರಂದು ತೆರೆಕಾಣಲಿದೆ.

'ಗಿಣಿರಾಮ', 'ನಿನಗಾಗಿ' ಧಾರಾವಾಹಿಗಳ ಮೂಲಕ ಖ್ಯಾತಿ ಪಡೆದಿರುವ ನಟ ರಿತ್ವಿಕ್ ಮಠದ್ ಈ ಸಿನಿಮಾದಲ್ಲಿ ನಾಯಕನಾಗಿ ರಗಡ್ ಅವತಾರವೆತ್ತಿದ್ದಾರೆ. ಶೀಘ್ರದಲ್ಲೇ ಸಿನಿಮಾದ ಟ್ರೇಲರ್ ಬರಲಿದೆ. ನಿಶಾಂತ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಚಿತ್ರದಲ್ಲಿ ನಾಯಕಿಯಾಗಿ ಚೈತ್ರಾ ಜೆ.ಆಚಾರ್ ನಟಿಸಿದ್ದಾರೆ. ದಸರಾ ಸುತ್ತಮುತ್ತ ಚಿತ್ರದ ಕಥೆಯಿದ್ದು, ಗ್ಯಾಂಗ್‌ಗಳ ನಡುವಿನ ಗಲಾಟೆ, ಅದರ ನಡುವೆಯೊಂದು ಪ್ರೇಮಕಥೆ ಸಿನಿಮಾದಲ್ಲಿದೆ. 'ದೀಕ್ಷಾ' ಎನ್ನುವ ಪಾತ್ರದಲ್ಲಿ ಚೈತ್ರಾ ಕಾಣಿಸಿಕೊಂಡಿದ್ದಾರೆ.

ರಿಶಿತ್ ಶೆಟ್ಟಿ ಈ ಚಿತ್ರಕ್ಕೆ ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸುಮನ್ ತಲ್ವಾರ್, ಪ್ರಕಾಶ್ ತುಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಸ್ವರಾಜ್ ಶೆಟ್ಟಿ, ಮೈಮ್ ರಾಮದಾಸ್ ಹಾಗೂ ಚೈತ್ರಾ ಶೆಟ್ಟಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಶಿವಸೇನ ಛಾಯಾಚಿತ್ರಗ್ರಹಣ, ಚರಣ್‌ರಾಜ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ಆರು ಭಾಷೆಗಳಲ್ಲಿ 'ಕೊರಗಜ್ಜ'

ದಕ್ಷಿಣ ಕನ್ನಡದ ದೈವಗಳ ಕಥೆಯನ್ನು ಹೊಂದಿರುವ 'ಕೊರಗಜ್ಜ' ಚಿತ್ರ ಆರು ಭಾಷೆಗಳಲ್ಲಿ ತೆರೆಗೆ ಬರಲು ಸಿದ್ಧವಾಗಿದೆ. ಸುಧೀರ್ ಅತ್ತಾವರ್ ನಿರ್ದೇಶನದ ಚಿತ್ರವಿದು. ಚಿತ್ರದ ಫಸ್ಟ್‌ಲುಕ್ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

'ಮೂರು ವರ್ಷಗಳ ಹಿಂದೆ ಆರಂಭವಾದ ಸಿನಿಮಾ ಈಗ ಅನೇಕ ಅಡೆತಡೆಗಳನ್ನು ದಾಟಿ ಬಿಡುಗಡೆಯ ಹಂತ ತಲುಪಿದೆ. ಕೊರಗಜ್ಜನ ಆಶೀರ್ವಾದದಿಂದ ಸಿನಿಮಾ ಅಂದುಕೊಂಡಂತೆ ಬಂದಿದೆ. ಚಿತ್ರದಲ್ಲಿ ಆರು ಭಾಷೆಗಳಿಂದ ಒಟ್ಟು 31 ಹಾಡುಗಳಿವೆ. ಗೋಪಿ ಸುಂದರ್ ಅವರ ಸಂಗೀತ ಸಂಯೋಜನೆಯಲ್ಲಿ ಪ್ರಸಿದ್ಧ ಗಾಯಕ-ಗಾಯಕಿಯರು ಹಾಡಿದ್ದಾರೆ. ಸುಮಾರು ಇಪ್ಪತ್ತನಾಲ್ಕು ವರ್ಷದ ತನಿಯ ದೈವತ್ವಕ್ಕೇರಿ ಕೊರಗಜ್ಜನಾದ ಕಥೆಯನ್ನು ಈ ಚಿತ್ರದಲ್ಲಿ ತೋರಿಸಲಾಗುತ್ತಿದೆ' ಎಂದರು ನಿರ್ದೇಶಕ.

ತ್ರಿವಿಕ್ರಮ ಸಪಲ್ಯ ಬಂಡವಾಳ ಹೂಡಿದ್ದಾರೆ. ಕಬೀರ್ ಬೇಡಿ, ಶ್ರುತಿ, ಭವ್ಯ ಮುಂತಾದವರು ಚಿತ್ರದಲ್ಲಿದ್ದಾರೆ.

'ಬಿಳಿಚುಕ್ಕಿ ಹಳ್ಳಿಹಕ್ಕಿ'ಗೆ ಶ್ರೀಮುರಳಿ ಸಾಥ್

ಕಾಜಲ್ ಕುಂದರ್, ಮಹೇಶ್ ಗೌಡ

ಮಹೇಶ್ ಗೌಡ ನಿರ್ದೇಶಿಸಿ, ನಾಯಕನಾಗಿ ನಟಿಸಿರುವ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಚಿತ್ರ ಅ.24ರಂದು ತೆರೆ ಕಾಣುತ್ತಿದೆ. ಚಿತ್ರವನ್ನು ನಟ ಶ್ರೀಮುರಳಿ ಅರ್ಪಿಸುತ್ತಿದ್ದಾರೆ.

'ವಿಟಿಲಿಗೋ ಎಂಬ ಸಮಸ್ಯೆಯ ಸುತ್ತ ರೂಪುಗೊಂಡಿರುವ ಈ ಸಿನಿಮಾದ ಕೆಲ ತುಣುಕುಗಳನ್ನು ಶ್ರೀಮುರಳಿ ವೀಕ್ಷಿಸಿ, ಸಿನಿಮಾವನ್ನು ತಾವೇ ಅರ್ಪಿಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ' ಎಂದು ಚಿತ್ರತಂಡ ಹೇಳಿದೆ.

ಹೊನ್ನುಡಿ ಪ್ರೊಡಕ್ಷನ್ಸ್ ಬ್ಯಾನರಿನಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ. 'ಇದು ಸಂಪೂರ್ಣ ಕಮರ್ಷಿಯಲ್ ಸಿನಿಮಾ. ವಿಟಿಲಿಗೋ ಅಂದರೆ, ತೊನ್ನಿನ ಸಮಸ್ಯೆ ಕುರಿತಾದ ಕಥೆ ಹೊಂದಿರುವ ಚಿತ್ರವಿದು. ಸಾಮಾನ್ಯವಾಗಿ ಇಂಥ ಕಥಾ ಹಂದರದ ಯಾವುದೇ ಸಿನಿಮಾದಲ್ಲಿ ಪಾತ್ರಧಾರಿಗಳು ಮೇಕಪ್ ಮೂಲಕ ಅದಕ್ಕೆ ಜೀವ ತುಂಬುತ್ತಾರೆ. ಆದರೆ ನಾನೇ ಆ ಸಮಸ್ಯೆ ಹೊಂದಿರುವುದರಿಂದ ಪಾತ್ರ ನಿರ್ವಹಿಸಿದ್ದೇನೆ' ಎಂದಿದ್ದಾರೆ ಮಹೇಶ್ ಗೌಡ.

ಕಾಜಲ್ ಕುಂದರ್ ಚಿತ್ರದ ನಾಯಕಿ. ರಿಯೊ ಆಂಟೋನಿ ಸಂಗೀತ, ಕಿರಣ್ ಸಿ.ಎಚ್. ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



ವಿಜಯ್ ದೇವರಕೊಂಡ, ಕೀರ್ತಿ ಸುರೇಶ್

ವಿಜಯ್‌ಗೆ ಕೀರ್ತಿ ಜೋಡಿ

ಟಾಲಿವುಡ್ ನಟ ವಿಜಯ್ ದೇವರಕೊಂಡ ನಟನೆಯ ಹೊಸ ಸಿನಿಮಾ ಸೆಟ್ಟೇರಿದೆ. ವಿಜಯ್‌ಗೆ ಜೋಡಿಯಾಗಿ ಈ ಬಾರಿ ಕೀರ್ತಿ ಸುರೇಶ್ ನಟಿಸುತ್ತಿದ್ದು, ಹೈದರಾಬಾದ್‌ನಲ್ಲಿ ಇತ್ತೀಚೆಗೆ ಚಿತ್ರದ ಮುಹೂರ್ತ ನಡೆದಿದೆ.

ನಿರ್ಮಾಪಕ ಅಲ್ಲು ಅರವಿಂದ್ ಅವರು ಚಿತ್ರಕ್ಕೆ ಕ್ಲ್ಯಾಪ್ ಮಾಡಿದರು. ನಿರ್ಮಾಪಕ ನಿರಂಜನ್ ರೆಡ್ಡಿ ಚಿತ್ರೀಕರಣಕ್ಕೆ ಚಾಲನೆ ನೀಡಿದರೆ, ನಿರ್ದೇಶಕ ಹನು ರಾಘವಪುಡಿ ಮೊದಲ ದೃಶ್ಯವನ್ನು ನಿರ್ದೇಶಿಸಿದರು. ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಪಕರಾದ ದಿಲ್ ರಾಜು ಮತ್ತು ಶಿರೀಶ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. 'ರಾಜಾ ವಾರು ರಾಣಿ ಗಾರು' ಚಿತ್ರದ ಮೂಲಕ ಖ್ಯಾತಿ ಪಡೆದ ನಿರ್ದೇಶಕ ರವಿಕಿರಣ್ ಕೋಲಾ ಈ ಪ್ರಾಜೆಕ್ಟ್‌ಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಮೂಡಿ ಬರುತ್ತಿರುವ 59 ನೇ ಚಿತ್ರ ಇದಾಗಿದೆ. ಗ್ರಾಮೀಣ ಆ್ಯಕ್ಷನ್ ಡ್ರಾಮಾ ಹಿನ್ನೆಲೆಯಲ್ಲಿ ಸಿನಿಮಾ ಮೂಡಿ ಬರಲಿದ್ದು, ಇದೇ 16ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಮುಂದಿನ ವರ್ಷ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

16 ಶಾಸಕರಿಗೆ ಟಿಕೆಟ್ ನೀಡದ ಬಿಜೆಪಿ

ಬಿಹಾರ ವಿಧಾನಸಭಾ ಚುನಾವಣೆ 71 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಗೆ 71 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಮಂಗಳವಾರ ಬಿಡುಗಡೆ ಮಾಡಿದೆ.

ಬಿಹಾರ ವಿಧಾನಸಭಾಧ್ಯಕ್ಷ ನಂದ ಕಿಶೋರ್ ಯಾದವ್, ಸಂಸ್ಕೃತಿ ಸಚಿವ ಮೋತಿಲಾಲ್ ಪ್ರಸಾದ್ ಸೇರಿದಂತೆ 16 ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ಯಾದವ್ ಬದಲಿಗೆ ಪಾಟ್ನಾ ಸಾಹಿಬ್ ಕ್ಷೇತ್ರದ ಅಭ್ಯರ್ಥಿಯನ್ನಾಗಿ ರತ್ನೇಶ್ ಕುಶ್ವಾಹ ಅವರಿಗೆ ಟಿಕೆಟ್ ನೀಡಲಾಗಿದೆ. ಯಾದವ್ ಅವರು ಈ ಕ್ಷೇತ್ರದಲ್ಲಿ ಏಳು ಬಾರಿ ಜಯಗಳಿಸಿದ್ದಾರೆ.

ಉಪ ಮುಖ್ಯಮಂತ್ರಿಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಅವರನ್ನು ಕ್ರಮವಾಗಿ ತಾರಾಪುರ ಮತ್ತು ಲಖಿಸರಾಯ್ ಕ್ಷೇತ್ರಗಳಿಂದ ಕಣಕ್ಕಿಳಿಸಲಾಗಿದೆ. ಸಾಮ್ರಾಟ್ ಪ್ರಸ್ತುತ ಎಂಎಲ್‌ಸಿ ಆಗಿದ್ದು, ಅವರ ವಯಸ್ಸಿನ ಪ್ರಮಾಣ ಪತ್ರದ ವಿವಾದದಲ್ಲಿ ಸಿಲುಕಿದ್ದಾರೆ. ಚೌಧರಿ ಅವರು ಆರ್‌ಜೆಡಿ ಅಭ್ಯರ್ಥಿಯಾಗಿ ಪರ್ಬಟ್ಟಾ ಕ್ಷೇತ್ರದಲ್ಲಿ 2010ರಲ್ಲಿ ಗೆಲುವು ಸಾಧಿಸಿದ್ದರು.

ವಿಜಯ್ ಕುಮಾರ್ ಸಿನ್ಹಾ ಅವರು ಪಟ್ನಾ ಹಾಗೂ ಲಖಿಸರಾಯ್ ಕ್ಷೇತ್ರದ ಮತದಾರರಾಗಿರುವುದು ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆಯ ಸಂದರ್ಭದಲ್ಲಿ ಬಯಲಿಗೆ ಬಂದಿತ್ತು. ಮಾಜಿ ಉಪ ಮುಖ್ಯಮಂತ್ರಿ ತಾರ ಕಿಶೋರ್ ಪ್ರಸಾದ್ ಕತಿಹಾರ್‌ನಿಂದ ಸ್ಪರ್ಧಿಸಲಿದ್ದಾರೆ.

ಪಕ್ಷದ ಅನುಭವಿ ಸುಶೀಲ್ ಕುಮಾರ್ ಮೋದಿ ಬದಲಿಗೆ 2020ರ ನವೆಂಬರ್‌ನಲ್ಲಿ ನಿತೀಶ್ ಸಂಪುಟದಲ್ಲಿ ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ್ದ ಮಾಜಿ ಉಪ ಮುಖ್ಯಮಂತ್ರಿಗಳಾದ ತಾರಕಿಶೋರ್ ಪ್ರಸಾದ್ ಮತ್ತು ರೇಣು ದೇವಿ ಅವರಿಗೆ ಕ್ರಮವಾಗಿ ಕತಿಹಾರ್ ಮತ್ತು ಬೆಟ್ಟಯ್ಯದಿಂದ ಟಿಕೆಟ್ ನೀಡಲಾಗಿದೆ.

ರೇಣು ದೇವಿ ಸೇರಿದಂತೆ ಒಂಬತ್ತು ಮಹಿಳಾ ಅಭ್ಯರ್ಥಿಗಳು ಪಟ್ಟಿಯಲ್ಲಿದ್ದಾರೆ. ಶಾಸಕಿ ಶ್ರೇಯಸಿ ಸಿಂಗ್ ಜಮುಯಿ ಸ್ಥಾನದಿಂದ ಸ್ಪರ್ಧಿಸಲಿದ್ದಾರೆ.

ವಿಧಾನ ಪರಿಷತ್ ಸದಸ್ಯರೂ ಆಗಿರುವ ಆರೋಗ್ಯ ಸಚಿವ ಮಂಗಲ್ ಪಾಂಡೆ ಅವರು ಸಿವಾನ್‌ನಿಂದ ಸ್ಪರ್ಧಿಸುತ್ತಿದ್ದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಆರ್‌ಜೆಡಿಯ ಮೀಸಾ ಭಾರ್ತಿ (ಲಾಲೂ ಪ್ರಸಾದ್ ಪುತ್ರಿ) ವಿರುದ್ಧ ಸೋತಿದ್ದ ರಾಮ್ ಕೃಪಾಲ್ ಯಾದವ್ ಅವರನ್ನು ದಾನಾಪುರ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ರಾಮ್‌ಕೃಪಾಲ್ ಅವರು ಕೇಂದ್ರದ ಮಾಜಿ ಸಚಿವ. 2014ರಲ್ಲಿ ಬಿಜೆಪಿಗೆ ಸೇರಿದ್ದ ಅವರು ಮೀಸಾ ಭಾರ್ತಿ ಅವರನ್ನು ಎರಡು ಸಲ ಸೋಲಿಸಿದ್ದರು.

ಆದಾಗ್ಯೂ, ಭೋಜ್‌ಪುರಿ ನಟ ಪವನ್ ಸಿಂಗ್ ಮತ್ತು ಗಾಯಕಿ ಮೈಥಿಲಿ ಠಾಕೂರ್‌ಗೆ ಪಕ್ಷ ಟಿಕೆಟ್ ನಿರಾಕರಿಸಿದೆ. ಪಕ್ಷಾಂತರಿಗಳಿಗೂ ಮಣೆ ಹಾಕಲಾಗಿದೆ.

ಎನ್‌ಡಿಎ ಮೈತ್ರಿಕೂಟದಲ್ಲಿ ಬಿಜೆಪಿ ಹಾಗೂ ಜೆಡಿಯು ತಲಾ 101 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ. ಉಳಿದ ಕ್ಷೇತ್ರಗಳನ್ನು ಮೈತ್ರಿಕೂಟದ ಇತರ ಪಕ್ಷಗಳಿಗೆ ಬಿಟ್ಟುಕೊಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಭಾನುವಾರ ಸಂಜೆ ಸಭೆ ಸೇರಿ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಿತ್ತು.

ಮುಖ್ಯಾಂಶಗಳು
- ಬಿಜೆಪಿ- ಜೆಡಿಯು ತಲಾ 101 ಕ್ಷೇತ್ರಗಳಲ್ಲಿ ಸ್ಪರ್ಧೆ
- ವಿಧಾನಸಭಾ ಸ್ಪೀಕರ್ ನಂದಕಿಶೋರ್, ಸಂಸ್ಕೃತಿ ಸಚಿವರಿಗಿಲ್ಲ ಟಿಕೆಟ್
- ಪಕ್ಷಾಂತರಿಗಳಿಗೂ ಮಣೆ

ಬಿಹಾರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಪಟ್ನಾದಲ್ಲಿರುವ ಬಿಜೆಪಿ ರಾಜ್ಯ ಘಟಕ ಕಚೇರಿ ಒಳಗಡೆ ಮಂಗಳವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಭಾರಿ ಸಂಖ್ಯೆಯ ಎಸ್‌ಎಂಎಸ್ ರವಾನೆ ನಿಷೇಧ

ಪ್ರಜಾಮತ ಜನತಂತ್ರದ ಹಬ್ಬ
ಬಿಹಾರ ವಿಧಾನಸಭಾ ಚುನಾವಣೆ - 2025

ನವದೆಹಲಿ (ಪಿಟಿಐ): ಮತದಾನ ಮುಗಿಯುವುದಕ್ಕೂ 48 ಗಂಟೆಗಳ ಮುನ್ನ (ಮೌನ ಅವಧಿ) ಭಾರಿ ಸಂಖ್ಯೆಯಲ್ಲಿ ಎಸ್‌ಎಂಎಸ್ ಮತ್ತು ಆಡಿಯೊ ಸಂದೇಶಗಳನ್ನು ರವಾನಿಸುವುದನ್ನು ಕೇಂದ್ರ ಚುನಾವಣಾ ಆಯೋಗ ನಿಷೇಧಿಸಿದೆ.

ಬಿಹಾರ ವಿಧಾನಸಭೆಗೆ ನ.6ರಂದು ಮೊದಲ ಹಂತದ ಮತದಾನ ನಡೆಯಲಿದ್ದು, ಅದಕ್ಕೆ ಪೂರಕವಾಗಿ ಆಯೋಗ ಅಕ್ಟೋಬರ್ 9ರಂದು ಈ ಸೂಚನೆ ನೀಡಿದೆ.

ಈ ಅವಧಿಯಲ್ಲಿ ಟಿ.ವಿ., ಕೇಬಲ್ ನೆಟ್‌ವರ್ಕ್‌ಗಳು, ರೇಡಿಯೊ, ಚಿತ್ರ ಮಂದಿರಗಳಲ್ಲಿ ಯಾವುದೇ ರೀತಿಯ ಚುನಾವಣಾ ವಿಷಯ ಕುರಿತು ರಾಜಕೀಯ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ. ಅಂತೆಯೇ ಭಾರಿ ಸಂಖ್ಯೆಯಲ್ಲಿ ಎಸ್‌ಎಂಎಸ್‌ಗಳು, ಧ್ವನಿ ಸಂದೇಶಗಳನ್ನು ಕಳುಹಿಸುವಂತಿಲ್ಲ. ಅಲ್ಲದೆ ಯಾವುದೇ ಮತಗಟ್ಟೆಯಲ್ಲಿ ಆಡಿಯೊ, ವಿಡಿಯೊ ದೃಶ್ಯಗಳನ್ನು ಪ್ರದರ್ಶಿಸುವುದನ್ನು ನಿಷೇಧಿಸಲಾಗಿದೆ ಎಂದು ಆಯೋಗ ತಿಳಿಸಿದೆ.

ಎಲ್ಲ ನೋಂದಾಯಿತ ಮತ್ತು ರಾಷ್ಟ್ರೀಯ, ರಾಜ್ಯ ರಾಜಕೀಯ ಪಕ್ಷಗಳು ಹಾಗೂ ಪ್ರತಿ ಅಭ್ಯರ್ಥಿಯು ತಾನು ಪ್ರಕಟಿಸುವ ಜಾಹೀರಾತುಗಳಿಗೆ ಸಂಬಂಧಿಸಿದಂತೆ ಪೂರ್ವಾನುಮತಿ ಪಡೆಯಲು ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಸಮಿತಿಗೆ (ಎಂಸಿಎಂಸಿ) ಅರ್ಜಿ ಸಲ್ಲಿಸಬೇಕು ಎಂದು ಆಯೋಗ ಮಂಗಳವಾರ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜೀನಾಮೆ ಇಂಗಿತ ವ್ಯಕ್ತಪಡಿಸಿದ ಜೆಡಿಯು ಸಂಸದ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಅಭ್ಯರ್ಥಿಗಳ ಆಯ್ಕೆ ಕುರಿತು ತಮ್ಮೊಂದಿಗೆ ಯಾವುದೇ ಚರ್ಚೆ ನಡೆಸಿಲ್ಲ ಎಂದು ಬೇಸರ ವ್ಯಕ್ತಪಡಿಸಿರುವ ಬಾಗಲ್ಪುರದ ಜೆಡಿಯು ಸಂಸದ ಅಜಯ್ ಕುಮಾರ್ ಮಂಡಲ್ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಲು ಬಯಸಿರುವುದಾಗಿ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮಂಡಲ್, 'ನಾನು ಬಾಗಲ್ಪುರದ ಸಂಸದ. ಆದರೆ ಪಕ್ಷವು ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭ್ಯರ್ಥಿಗಳ ಆಯ್ಕೆಗೆ ನನ್ನ ಸಲಹೆಯನ್ನು ಪಡೆದಿಲ್ಲ. ಹೀಗಿರುವಾಗ ಸಂಸದನಾಗಿ ಮುಂದುವರಿಯುವುದರಲ್ಲಿ ಏನು ಅರ್ಥವಿದೆ' ಎಂದು ಅವರು ಕೇಳಿದ್ದಾರೆ.

ಆದರೆ ಈ ಕುರಿತು ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಅಧಿಕಾರಿ ವಿರುದ್ಧ ವ್ಯವಸ್ಥಿತ ತಾರತಮ್ಯ'

ಪೂರನ್ ಕುಟುಂಬ ಸದಸ್ಯರ ಭೇಟಿಯಾದ ರಾಹುಲ್

ಚಂಡೀಗಢ (ಪಿಟಿಐ): ಹರಿಯಾಣದ ಐಪಿಎಸ್ ಅಧಿಕಾರಿ ವೈ.ಪೂರನ್ ಕುಮಾರ್ ಅವರ ಆತ್ಮಹತ್ಯೆ ಘಟನೆಯು ಕೇವಲ ಒಂದು ಕುಟುಂಬದ ವಿಷಯವಲ್ಲ. ದೇಶದ ಪ್ರತಿಯೊಬ್ಬ ದಲಿತ ಸಹೋದರ, ಸಹೋದರಿಯರ ಗೌರವಕ್ಕೆ ಸಂಬಂಧಿಸಿದ ವಿಷಯ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ರಾಹುಲ್ ಅವರು ಮಂಗಳವಾರ ಚಂಡೀಗಢದಲ್ಲಿ ಪೂರನ್ ಅವರ ಕುಟುಂಬ ಸದಸ್ಯರನ್ನು ಭೇಟಿಯಾಗಿ ಸಾಂತ್ವನ ಹೇಳಿದರು. ಜಾತಿ ಆಧಾರಿತ ತಾರತಮ್ಯವೆಸಗಿ ಕಿರುಕುಳ ನೀಡಲಾಗುತ್ತಿದೆ ಎಂದು ನೊಂದು ಪೂರನ್ ಅವರು ಅ.7ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ತನ್ನ ಸಾವಿಗೆ ಇಲಾಖೆಯ ಕೆಲವು ಅಧಿಕಾರಿಗಳು ಕಾರಣ ಎಂದು ಮರಣಪತ್ರದಲ್ಲಿ ಉಲ್ಲೇಖಿಸಿದ್ದರು.

'ಹರಿಯಾಣ ಡಿಜಿಪಿ ಶತ್ರುಜೀತ್ ಕಪೂರ್ ಹಾಗೂ ರೋಹಟಕ್ ಎಸ್‌ಪಿ ನರೇಂದ್ರ ಬಿಜಾರಾಣಿಯಾ ಅವರು ಕಿರುಕುಳ ನೀಡುವ ಜೊತೆಗೆ ನನ್ನನ್ನು ಸದಾ ಅವಮಾನಿಸುತ್ತಿದ್ದರು' ಎಂದು ಮರಣಪತ್ರದಲ್ಲಿ ಆರೋಪಿಸಿದ್ದರು.

ಹರಿಯಾಣ ಸರ್ಕಾರವು ಸೋಮವಾರ ತಡರಾತ್ರಿ ಡಿಜಿಪಿ ಶತ್ರುಜೀತ್ ಕಪೂರ್ ಅವರನ್ನು ರಜೆಯ ಮೇಲೆ ಕಳುಹಿಸಿದರೆ, ಅದಕ್ಕೂ ಮೊದಲು ಬಿಜಾರಾಣಿಯಾ ಅವರನ್ನು ವರ್ಗಾವಣೆ ಮಾಡಿದೆ.

ಪೂರನ್ ಕುಟುಂಬ ಸದಸ್ಯರ ಭೇಟಿಯಾದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರಾಹುಲ್, 'ಈ ಅಧಿಕಾರಿಯ ಮನೋಸ್ಥೈರ್ಯ ಕುಗ್ಗಿಸಲು ಮತ್ತು ಅವರ ವೃತ್ತಿಜೀವನ, ಖ್ಯಾತಿಗೆ ಕೇಡು ಉಂಟುಮಾಡಲು ಅವರ ವಿರುದ್ಧ ಹಲವು ವರ್ಷಗಳಿಂದ ವ್ಯವಸ್ಥಿತ ತಾರತಮ್ಯ ಎಸಗಲಾಗಿದೆ' ಎಂದು ಆರೋಪಿಸಿದರು.

'ಈ ಘಟನೆಯಿಂದಾಗಿ ದೇಶದ ಕೋಟ್ಯಂತರ ದಲಿತ ಸಹೋದರ, ಸಹೋದರಿಯರಿಗೆ ತಪ್ಪು ಸಂದೇಶ ಹೋಗುತ್ತಿದೆ. ಜೀವನದಲ್ಲಿ ನೀವು ಎಷ್ಟೇ ಯಶಸ್ಸು ಗಳಿಸಿದರೂ ಅಥವಾ ಬುದ್ಧಿವಂತ ಮತ್ತು ಸಮರ್ಥರಾಗಿದ್ದರೂ ನೀವು ದಲಿತರಾಗಿದ್ದರೆ ನಿಮ್ಮನ್ನು ದಮನಿಸುತ್ತಾರೆ ಎಂಬ ತಪ್ಪು ಸಂದೇಶ ಹೋಗುತ್ತಿದೆ. ಇದನ್ನು ಒಪ್ಪಲಾಗದು' ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ವೈ. ಪೂರನ್ ಕುಮಾರ್ ಅವರ ಕುಟುಂಬದ ಸದಸ್ಯರನ್ನು ಚಂಡೀಗಢದಲ್ಲಿ ಮಂಗಳವಾರ ಭೇಟಿಯಾದರು –ಪಿಟಿಐ ಚಿತ್ರ

ಎಎಸ್‌ಐ ಆತ್ಮಹತ್ಯೆ: ಪೂರನ್ ಹೆಸರು?

ಚಂಡೀಗಢ: ರೋಹಟಕ್ ಜಿಲ್ಲೆಯಲ್ಲಿ ಹರಿಯಾಣ ಪೊಲೀಸ್ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಸಂದೀಪ್ ಕುಮಾರ್ ಎಂಬವರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆಗೂ ಮುನ್ನ ಆರು ನಿಮಿಷಗಳ ವಿಡಿಯೊ ಮಾಡಿಟ್ಟುಕೊಂಡಿದ್ದರಲ್ಲದೆ, ಮೂರು ಪುಟಗಳ ಮರಣ ಪತ್ರ ಬರೆದಿದ್ದಾರೆ. ಮರಣ ಪತ್ರದಲ್ಲಿ ದಿವಂಗತ ಐಪಿಎಸ್ ಅಧಿಕಾರಿ ವೈ.ಪೂರನ್ ಕುಮಾರ್ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದಾರೆ ಎನ್ನಲಾಗಿದೆ. ವಿಡಿಯೊ ಮತ್ತು ಮರಣ ಪತ್ರದ ಸತ್ಯಾಸತ್ಯತೆಯನ್ನು ತಕ್ಷಣ ಪರಿಶೀಲಿಸಲು ಸಾಧ್ಯವಾಗಿಲ್ಲ.

ಸಂದೀಪ್ ಅವರ ಮೃತದೇಹ ರೋಹಟಕ್‌ನ ಲಾಡೌಟ್–ಧಾಮಡ್ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಪತ್ತೆಯಾಗಿದೆ. 'ಸಂದೀಪ್ ಅವರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಡಿಯೊ ಮತ್ತು ಮರಣ ಪತ್ರದ ಬಗ್ಗೆ ಕೇಳಿದಾಗ, 'ಈ ಹಂತದಲ್ಲಿ ಯಾವುದೇ ಹೇಳಿಕೆ ನೀಡುವುದು ಕಷ್ಟ. ವಿಧಿವಿಜ್ಞಾನ ತಂಡವು ತನಿಖೆ ನಡೆಸುತ್ತಿದೆ' ಎಂದಿದ್ದಾರೆ.

> **ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ತಕ್ಷಣವೇ ಕ್ರಮ ಕೈಗೊಂಡು ಈ ಘಟನೆಗೆ ಕಾರಣರಾದ ಅಧಿಕಾರಿಗಳ ಬಂಧನವನ್ನು ಖಚಿತಪಡಿಸಬೇಕು**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> **ಪೂರನ್ ಕುಮಾರ್ ಆತ್ಮಹತ್ಯೆ ಘಟನೆಯು, ಬಿಜೆಪಿ ಸರ್ಕಾರದಡಿ ದಲಿತರು ಸುರಕ್ಷಿತವಾಗಿಲ್ಲ ಎಂಬುದಕ್ಕೆ ಪುರಾವೆಯಾಗಿದೆ**
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ನಾಯಕಿ

ವಾಂಗ್ಚುಕ್: ಅರ್ಜಿ ವಿಚಾರಣೆ ಇಂದು

ಸೋನಮ್ ವಾಂಗ್ಚುಕ್

ನವದೆಹಲಿ (ಪಿಟಿಐ): ಬಂಧನದಲ್ಲಿರುವ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರ ಬಿಡುಗಡೆ ಕೋರಿ, ಅವರ ಪತ್ನಿ ಗೀತಾಂಜಲಿ ಆಂಗ್ಮೊ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್, ಅಕ್ಟೋಬರ್ 15ಕ್ಕೆ ಮುಂದೂಡಿದೆ.

ನ್ಯಾಯಮೂರ್ತಿ ಅರವಿಂದ್ ಕುಮಾರ್, ಎನ್.ವಿ.ಅಂಜಾರಿಯಾ ನೇತೃತ್ವದ ನ್ಯಾಯಪೀಠವು ಸಮಯದ ಕೊರತೆಯಿಂದ ಅರ್ಜಿ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ವಾಂಗ್ಚುಕ್ ಬಂಧನದ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಮತ್ತು ಲಡಾಖ್ ಸರ್ಕಾರಗಳಿಗೆ ಅ.6ರಂದು ನಿರ್ದೇಶನ ನೀಡಿತ್ತು.

ದೆಹಲಿ ಕಾಂಗ್ರೆಸ್ ಅಧ್ಯಕ್ಷ ವಶಕ್ಕೆ

ನವದೆಹಲಿ (ಪಿಟಿಐ): ಇಲ್ಲಿನ ನಜಾಫಗಢ ಪ್ರದೇಶದಲ್ಲಿ ಮತಗಳವು ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ದೆಹಲಿ ಕಾಂಗ್ರೆಸ್ ಸಮಿತಿ ಅಧ್ಯಕ್ಷ ದೇವೇಂದರ್ ಯಾದವ್ ಮತ್ತು ಪಕ್ಷದ ಇತರ ಕಾರ್ಯಕರ್ತರು ಸೇರಿ ಒಟ್ಟು 56 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಅವರು ಪ್ರತಿಭಟನೆ ನಡೆಸುತ್ತಾ ಜವಾಹರ್ ಚೌಕ ಪ್ರದೇಶದ ಕಡೆಗೆ ತೆರಳುತ್ತಿದ್ದರು. ಪ್ರತಿಭಟನೆ ನಡೆಸಲು ಅನುಮತಿ ಇಲ್ಲದ ಕಾರಣ ನಾವು ಅವರನ್ನು ವಶಕ್ಕೆ ಪಡೆದಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮತಗಳವು ವಿರುದ್ಧದ ಧ್ವನಿಯೆತ್ತುವುದನ್ನು ನಾವು ಮುಂದುವರೆಸಲಿದ್ದೇವೆ. ಸರ್ಕಾರ ಮತ್ತು ಪೊಲೀಸ್ ನಮ್ಮ ನೈತಿಕಶಕ್ತಿಯನ್ನು ಮುರಿಯಲು ಸಾಧ್ಯವಿಲ್ಲ ಎಂದು ದೇವೇಂದರ್ ಹೇಳಿದ್ದಾರೆ.

ಜಾತಿ ಸಮೀಕ್ಷೆಯಲ್ಲಿ 'ಕಲ್ಯಾಣ'ದ 6 ಜಿಲ್ಲೆಗಳು ಹಿಂದೆ

ಒಂದನೇ ಪುಟದಿಂದ...

ಯಾದಗಿರಿ ಜಿಲ್ಲೆಯಲ್ಲಿ ಶೇ 69.37ರಷ್ಟು ಪ್ರಗತಿಯಾಗಿದ್ದು, ರಾಜ್ಯದಲ್ಲೇ ಕೊನೆಯ ಸ್ಥಾನದಲ್ಲಿದೆ. ಜನಸಂಖ್ಯೆ ಮಾಹಿತಿ ಸಂಗ್ರಹದಲ್ಲಿ ಚಿಕ್ಕಮಗಳೂರು (ಶೇ 91.32), ತುಮಕೂರು (90.03), ಮಂಡ್ಯ (90) ಮೊದಲ ಮೂರು ಸ್ಥಾನಗಳಲ್ಲಿವೆ. ಹಾವೇರಿ (89.87), ದಾವಣಗೆರೆ (87), ಬೆಂಗಳೂರು ದಕ್ಷಿಣ (87.35), ಹಾಸನ (86), ಶಿವಮೊಗ್ಗ (86), ಚಿತ್ರದುರ್ಗ (86.11), ಉಡುಪಿ (85.11) ಅಗ್ರ 10 ಸ್ಥಾನಗಳಲ್ಲಿವೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 1.44 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸುವ ಗುರಿ ಇತ್ತು. ಈವರೆಗೆ 1.07 ಕೋಟಿ ಜನರ ಮಾಹಿತಿ ಸಂಗ್ರಹಿಸಲಾಗಿದೆ. ಕೊಪ್ಪಳ (ಶೇ 82.27) ರಾಜ್ಯದಲ್ಲಿ 14ನೇ ಸ್ಥಾನದಲ್ಲಿದೆ. ಉಳಿದಂತೆ ಬೀದರ್ 25, ರಾಯಚೂರು 26, ಬಳ್ಳಾರಿ 27, ಕಲಬುರಗಿ 28ನೇ ಸ್ಥಾನದಲ್ಲಿವೆ.

'ಕೆಲ ಕುಟುಂಬಗಳು ಹಳೇ, ಹೊಸ ಪಡಿತರ ಚೀಟಿ ಹೊಂದಿವೆ. ಹೊಸ ಪಡಿತರ ಚೀಟಿ ಅನ್ವಯ ಕುಟುಂಬದ ಸದಸ್ಯರ ಹೆಸರು ಸೇರ್ಪಡೆ ಮಾಡಿದ್ದರೂ ಹಳೇ ಪಡಿತರ ಚೀಟಿಯಲ್ಲಿನ ಹೆಸರುಗಳು ಸಮೀಕ್ಷೆಯ ಉಳಿಕೆ ಪಟ್ಟಿಯಲ್ಲಿ ಕಾಣಿಸಿಕೊಳ್ಳುತ್ತಿವೆ' ಇದೂ ಹಿನ್ನಡೆಗೆ ಕಾರಣ' ಎನ್ನುತ್ತಾರೆ ಡಿಡಿಪಿಐ ಚನ್ನಬಸಪ್ಪ ಮುಧೋಳ.

'ಕಲ್ಯಾಣ' ಜಿಲ್ಲೆಗಳಲ್ಲಿ ಪ್ರಗತಿ (ಲಕ್ಷಗಳಲ್ಲಿ)

ಜಿಲ್ಲೆಗಳು	ಗುರಿ	ಸಮೀಕ್ಷೆ	ಶೇ
ಕೊಪ್ಪಳ	17.15	14.11	82.27
ವಿಜಯನಗರ	16.90	13.03	77.15
ಬೀದರ್	20.30	15.08	74.28
ರಾಯಚೂರು	23.60	17.47	74.04
ಬಳ್ಳಾರಿ	18.67	13.72	73.49
ಕಲಬುರಗಿ	32.35	23.11	71.42
ಯಾದಗಿರಿ	15.65	10.86	69.37
ಒಟ್ಟು	1.44 ಕೋಟಿ	1.07 ಕೋಟಿ	74.24

18ರೊಳಗೆ ಮುಗಿಯಲಿದೆ –ಸಚಿವ ತಂಗಡಗಿ

ಬೆಳಗಾವಿ: 'ಬೆಂಗಳೂರು ಬಿಟ್ಟರೆ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಸಮೀಕ್ಷೆಯನ್ನು ಅ.18ರೊಳಗೆ ಪೂರ್ಣಗೊಳಿಸುತ್ತೇವೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

'ಈವರೆಗೆ 5.34 ಕೋಟಿ ಜನರು ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರು ನಗರದಲ್ಲಿ 41 ಲಕ್ಷ ಜನರು ಭಾಗಿಯಾಗಿದ್ದಾರೆ. ಕೆಲ ಜಿಲ್ಲೆಗಳಲ್ಲಿ ಶೇ 100ರಷ್ಟು ಮುಗಿದಿದೆ. ಬೆಂಗಳೂರಿನಲ್ಲಿ ಮಾತ್ರ ವಿಳಂಬವಾಗುತ್ತಿದೆ. ಅದನ್ನು ಬೇಗ ಮುಗಿಸುವ ಸವಾಲು ಮುಂದಿದೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

> **ತಾಂತ್ರಿಕ ಸಮಸ್ಯೆ ಜತೆಗೆ ಕೆಲವೆಡೆ ಕುಟುಂಬದ ಸದಸ್ಯರು ಇದ್ದರೂ ಇಲ್ಲ ಎನ್ನುವ ಮಾಹಿತಿ ನೀಡಲಾಗುತ್ತಿದೆ. ಇದರಿಂದಲೂ ವಿಳಂಬ ಆಗುತ್ತಿದೆ**
> **ಹರ್ಷಲ್ ಭೋಯರ್,**
> ಯಾದಗಿರಿ ಜಿಲ್ಲಾಧಿಕಾರಿ

ಎಸ್‌ಐಆರ್ ಮುಂದೂಡಿ: ಮನವಿ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಸುವ ಆಲೋಚನೆ ಇದ್ದರೆ, 2026ರ ಜನವರಿ ತಿಂಗಳವರೆಗೂ ಈ ಪ್ರಕ್ರಿಯೆಯನ್ನು ಮುಂದೂಡಬೇಕು ಎಂದು ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗವು ಕೇಂದ್ರ ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

'ಸುಪ್ರೀಂ ಕೋರ್ಟ್ 2025ರ ಮೇ 6ರಂದು ನೀಡಿದ ತೀರ್ಪಿನ ಪ್ರಕಾರ, ನಾಲ್ಕು ತಿಂಗಳ ಒಳಗಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಆದೇಶ ನೀಡಿದೆ. ಸೂಕ್ತವಾದ ಪ್ರಕರಣದಲ್ಲಿ ಮಾತ್ರ ಅವಧಿ ವಿಸ್ತರಿಸಲು ಆಯೋಗಕ್ಕೆ ಅವಕಾಶ ನೀಡಿದೆ. ನ್ಯಾಯಾಲಯದ ಆದೇಶದಂತೆ ಸದ್ಯದಲ್ಲಿಯೇ ಚುನಾವಣೆ ನಡೆಸಬೇಕಿದ್ದು, ಚುನಾವಣಾ ಸಿಬ್ಬಂದಿ ಈ ಪ್ರಕ್ರಿಯೆಯಲ್ಲಿ ನಿರತರಾಗಿದ್ದಾರೆ' ಎಂದು ಸೆ.9ರಂದು ಚುನಾವಣಾ ಆಯೋಗಕ್ಕೆ ಬರೆದ ಪತ್ರದಲ್ಲಿ ತಿಳಿಸಲಾಗಿದೆ.

'ರಾಜ್ಯದ 29 ಮಹಾನಗರ ಪಾಲಿಕೆಗಳು, 247 ನಗರಸಭೆಗಳು, 42 ನಗರ ಪಂಚಾಯತಿ, 147 ಪಟ್ಟಣ ಪಂಚಾಯತಿ, 32 ಜಿಲ್ಲಾ ಪಂಚಾಯತಿ ಸೇರಿದಂತೆ 336 ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ. ಹೀಗಾಗಿ, ಎಸ್‌ಐಆರ್ ಪ್ರಕ್ರಿಯೆ ಮುಂದೂಡಬೇಕು' ಎಂದು ಪತ್ರದಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ಭೇಟಿ: ಮತದಾನ ಪ್ರಕ್ರಿಯೆಗಳಲ್ಲಿ ನಡೆಯುತ್ತಿರುವ ಅಕ್ರಮದ ಕುರಿತಂತೆ ವಿರೋಧ ಪಕ್ಷಗಳ ಮುಖಂಡರ ನಿಯೋಗವು ಮಹಾರಾಷ್ಟ್ರ ಮುಖ್ಯ ಚುನಾವಣಾ ಅಧಿಕಾರಿಯನ್ನು ಮಂಗಳವಾರ ಭೇಟಿಯಾಗಿ ಮಾತುಕತೆ ನಡೆಸಿತು.

₹38.10 ಕೋಟಿ ಆಸ್ತಿ: 'ಲೋಕಾ' ಪತ್ತೆ...

ಎರಡನೇ ಮುಖಪುಟದಿಂದ...

ತೋಟಗಾರಿಕಾ ಇಲಾಖೆಯ ಔರಾದ್ (ಬೀದರ್ ಜಿಲ್ಲೆ) ಸಹಾಯಕ ನಿರ್ದೇಶಕ ಧೂಳಪ್ಪ ಅವರ ಮನೆಯಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರಿಗೆ ₹500ರ ಮುಖಬೆಲೆಯ ತಲಾ ನೂರು ನೋಟುಗಳಿರುವ 166 ಕಟ್ಟುಗಳು ಪತ್ತೆಯಾಗಿವೆ. ನೋಟು ಎಣಿಸುವ ಯಂತ್ರದ ಜತೆಗೆ, ನಾಲ್ವರು ಸಿಬ್ಬಂದಿ ಈ ನೋಟುಗಳನ್ನು ಲೆಕ್ಕಾಚಾರ ಮಾಡಿದ್ದಾರೆ. ಧೂಳಪ್ಪ ಅವರ ಮನೆಯಲ್ಲಿ ಒಟ್ಟು ₹83.09 ಲಕ್ಷ ನಗದು ಪತ್ತೆಯಾಗಿದೆ. ಒಟ್ಟಾರೆ ಹನ್ನೆರಡೂ ಅಧಿಕಾರಿಗಳ ಮನೆಗಳಲ್ಲಿ ₹1.20 ಕೋಟಿಯಷ್ಟು ನಗದು ದೊರೆತಿದೆ.

ಈ ಎಲ್ಲ ಅಧಿಕಾರಿಗಳ ಬಳಿ ಹತ್ತಾರು ಸಾವಿರ ರೂಪಾಯಿ ಮೌಲ್ಯದ ದ್ವಿಚಕ್ರ ವಾಹನಗಳಿಂದ ಆರಂಭವಾಗಿ ₹40 ಲಕ್ಷ–₹50 ಲಕ್ಷದ ಐಷಾರಾಮಿ ಎಸ್‌ಯುವಿಗಳು ಪತ್ತೆಯಾಗಿವೆ. ಈ ಎಲ್ಲ ವಾಹನಗಳ ಮೌಲ್ಯ ₹3.20 ಕೋಟಿಯಷ್ಟಾಗುತ್ತದೆ. ಎಲ್ಲ ಅಧಿಕಾರಿಗಳ ಮನೆಗಳಲ್ಲಿ ದೊರೆತಿರುವ ಆಸ್ತಿ ಪತ್ರಗಳು, ಚರಾಸ್ತಿಗಳು ಮತ್ತು ನಗದಿನ ಮಹಜರು ನಡೆಸಿದ್ದು, ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿ ಎಂದು ಸೂಚಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.



ತೋಟಗಾರಿಕಾ ಇಲಾಖೆಯ ಔರಾದ್ (ಬೀದರ್ ಜಿಲ್ಲೆ) ಸಹಾಯಕ ನಿರ್ದೇಶಕ ಧೂಳಪ್ಪ ಅವರ ಮನೆಯಲ್ಲಿ ಪತ್ತೆಯಾದ ₹83 ಲಕ್ಷ ನಗದು

ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಆರ್‌ಎಸ್‌ಎಸ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ

ರಾಜಕೀಯ ತಿರುವು ಪಡೆದ ಟೆಕಿ ಆತ್ಮಹತ್ಯೆ ಪ್ರಕರಣ

ನವದೆಹಲಿ (ಪಿಟಿಐ): ಕೇರಳದ ಕೊಟ್ಟಾಯಂ ಜಿಲ್ಲೆಯ ಐಟಿ ಉದ್ಯೋಗಿ ಆನಂದು ಅಜಿ (26) ಆತ್ಮಹತ್ಯೆ ಪ್ರಕರಣ ಮತ್ತು ಸಾವಿನ ನಂತರ ಈ ಯುವಕನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪ್ರಕಟವಾದ ಬರಹವೊಂದು ಅಲ್ಲಿನ ರಾಜಕೀಯ ವಲಯದಲ್ಲಿ ಭಾರಿ ವಾಕ್ಸಮರ ಹುಟ್ಟುಹಾಕಿದೆ.

'ಬಾಲ್ಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕ್ಯಾಂಪ್‌ನಲ್ಲಿ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದೆ, ಈ ಮಾನಸಿಕ ಆಘಾತದಿಂದ ದೀರ್ಘಾವಧಿ ಖಿನ್ನತೆಯಿಂದ ಬಳಲುತ್ತಿದ್ದೆ' ಎಂದು ಆರೋಪಿಸಲಾಗಿರುವ ಇನ್‌ಸ್ಟಾಗ್ರಾಂ ಪೋಸ್ಟ್, ರಾಜಕೀಯ ಚರ್ಚೆಗೆ ಕಾರಣ ಆಗಿದೆ.

ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ 'ಆರ್‌ಎಸ್‌ಎಸ್' ಹೆಸರನ್ನು ಹಲವು ಬಾರಿ ಉಲ್ಲೇಖಿಸಿದ್ದರೂ ಎಫ್‌ಐಆರ್‌ನಲ್ಲಿ 'ಆರ್‌ಎಸ್‌ಎಸ್' ಹೆಸರನ್ನು ಸೇರ್ಪಡೆ ಮಾಡಿಲ್ಲ ಎಂದು ಆರೋಪಿಸಿ ಕೇಂದ್ರ ಸರ್ಕಾರ ಮತ್ತು ಕೇರಳದ ಎಲ್‌ಡಿಎಫ್ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

'ಆನಂದು ಅಜಿ ಆತ್ಮಹತ್ಯೆ ಪ್ರಕರಣಕ್ಕೆ ಕಾಂಗ್ರೆಸ್ ರಾಜಕೀಯ ಬಣ್ಣ ಕೊಟ್ಟಿದ್ದು, ನೀಚ ರಾಜಕಾರಣ ಮಾಡುತ್ತಿದೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗುರು ಪ್ರಕಾಶ್ ಹೇಳಿದ್ದಾರೆ.

'ಆರ್‌ಎಸ್‌ಎಸ್ ಹೆಸರನ್ನು ಎಫ್‌ಐಆರ್‌ನಲ್ಲಿ ಸೇರಿಸಬೇಕು ಮತ್ತು ಆತ್ಮಹತ್ಯೆ ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಒತ್ತಾಯಿಸಿದ್ದಾರೆ.

ಸಾವಿನ ನಂತರ ಪೋಸ್ಟ್ ಪ್ರಕಟ: ಕೊಟ್ಟಾಯಂನ ತಂಬಲಕ್ಕಾಡ್ ನಿವಾಸಿ ಆನಂದು ಅಜಿ ಮೃತದೇಹವು, ಅ. 9ರಂದು ತಿರುವನಂತಪುರದ ಸಮೀಪದ ತಂಬಾನೂರ್‌ನ ಲಾಡ್ಜ್‌ನಲ್ಲಿ ಪತ್ತೆಯಾಗಿತ್ತು. ಇದರ ಬೆನ್ನಲ್ಲೇ, ಅ.10ರಂದು ಅವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ, 'ಬಾಲ್ಯದಲ್ಲಿ ಆರ್‌ಎಸ್‌ಎಸ್‌ನ ಕ್ಯಾಂಪ್‌ನಲ್ಲಿ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದೆ. ತಮ್ಮ ಕುಟುಂಬಕ್ಕೆ ಪರಿಚಿತರಾದ 'ಎನ್.ಎಂ' ಎಂಬವರು ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿದ ಪೋಸ್ಟ್ ಪ್ರಕಟವಾಗಿತ್ತು. ಈ ಪೋಸ್ಟ್ ಅನ್ನು ಸಾವಿನ ನಂತರ ಪ್ರಕಟಗೊಳ್ಳುವ ಹಾಗೆ 'ಸಮಯ ನಿಗದಿ' ಮಾಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

> **ಯುವಕನ ಆತ್ಮಹತ್ಯೆಗೆ ಸಂಬಂಧಿಸಿದ ವಿಷಯಗಳು ಅನುಮಾನಾಸ್ಪದವಾಗಿವೆ. ಆರ್‌ಎಸ್‌ಎಸ್ ಹೆಸರಿಗೆ ಕಳಂಕ ತರಲು ಕಾಂಗ್ರೆಸ್ ನೀಚ ರಾಜಕಾರಣ ಮಾಡುತ್ತಿದೆ**
> **ಸುಧಾಂಶು ತ್ರಿವೇದಿ,**
> ಬಿಜೆಪಿ ರಾಷ್ಟ್ರೀಯ ವಕ್ತಾರ

> **ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಆನಂದು ಅಜಿ, ಪೋಸ್ಟ್‌ನಲ್ಲಿ ಹೇಳಿದ್ದಾರೆ. ಈ ಆರೋಪಗಳ ಸಮಗ್ರ ತನಿಖೆಗೆ ಆರ್‌ಎಸ್‌ಎಸ್ ಅವಕಾಶ ಮಾಡಿಕೊಡಬೇಕು**
> **ಪ್ರಿಯಾಂಕಾ ಗಾಂಧಿ ವಾದ್ರಾ,**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ತನಿಖೆಗೆ ಆರ್‌ಎಸ್‌ಎಸ್ ಆಗ್ರಹ

'ಕೇರಳದ ಟೆಕಿಯ ಅಸಹಜ ಸಾವಿನ ಕುರಿತು ಸಮಗ್ರ ತನಿಖೆ ನಡೆಯಬೇಕು' ಎಂದು ಒತ್ತಾಯಿಸಿರುವ ಆರ್‌ಎಸ್‌ಎಸ್, ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾದ ಪೋಸ್ಟ್ 'ಅನುಮಾನಾಸ್ಪದ ಆತ್ಮಹತ್ಯೆ ಪತ್ರ' ಎಂದು ಹೇಳಿದೆ.

'ಟೆಕಿ ಆತ್ಮಹತ್ಯೆ ಮಾಡಿಕೊಂಡ ಕೆಲವೇ ಗಂಟೆಗಳಲ್ಲಿ ಇನ್‌ಸ್ಟಾಗ್ರಾಂ ಮತ್ತಿತರ ಸಾಮಾಜಿಕ ಜಾಲತಾಣದಲ್ಲಿ ಸಂಘದ ವಿರುದ್ಧ ಕೆಲವು ಸಂಶಯಾಸ್ಪದ ಮತ್ತು ಆಧಾರರಹಿತ ಆರೋಪಗಳಿರುವ ಪೋಸ್ಟ್ ಪ್ರಕಟಗೊಂಡಿದೆ. ಇದರ ಬಗ್ಗೆಯೂ ತನಿಖೆ ನಡೆಯಬೇಕು' ಎಂದು ಆರ್‌ಎಸ್‌ಎಸ್‌ನ ದಕ್ಷಿಣ ಕೇರಳ ಪ್ರಾಂತ ಜಂಟಿ ಕಾರ್ಯದರ್ಶಿ ಕೆ.ಬಿ. ಶ್ರೀಕುಮಾರ್ ಆಗ್ರಹಿಸಿದ್ದಾರೆ.

ಕೆಟ್ಟು ನಿಂತ ಬಿಎಂಟಿಸಿ ಬಸ್, ಸಂಚಾರ ವ್ಯತ್ಯಯ

ಹೊರ ವರ್ತುಲ ರಸ್ತೆಯಲ್ಲಿ ವಿಪರೀತ ದಟ್ಟಣೆ • ವಾಹನ ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರ ವರ್ತುಲ ರಸ್ತೆಯಲ್ಲಿ ಮಂಗಳವಾರ ಸಂಜೆ ಬಿಎಂಟಿಸಿ ಬಸ್ ಕೆಟ್ಟು ನಿಂತ ಪರಿಣಾಮ ಸಂಚಾರದಲ್ಲಿ ಭಾರೀ ವ್ಯತ್ಯಯ ಉಂಟಾಯಿತು.

ಇಕೋ ಸ್ಪೇಸ್ ಜಂಕ್ಷನ್ ಬಳಿ ರಸ್ತೆಯ ಮಧ್ಯದಲ್ಲೇ ತಾಂತ್ರಿಕ ಸಮಸ್ಯೆಯಿಂದಾಗಿ ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್ ಸಂಚಾರ ಸ್ಥಗಿತವಾಯಿತು. ಬಸ್ ಚಾಲನೆಗೊಳಿಸಲು ಪ್ರಯತ್ನಿಸಿದರೂ ಸಾಧ್ಯವಾಗದ ಕಾರಣ ಸಂಚಾರ ದಟ್ಟಣೆ ಅಧಿಕವಾಯಿತು.

ಮಾಹಿತಿ ತಿಳಿದು ಸಂಚಾರ ಪೊಲೀಸರು ಸ್ಥಳಕ್ಕೆ ಧಾವಿಸಿದರೂ ಪ್ರಯೋಜನವಾಗಲಿಲ್ಲ. ಎಕ್ಸ್‌ನಲ್ಲಿ ಸಂದೇಶ ಹಾಕಿದ ಸಂಚಾರ ಪೊಲೀಸರು, 'ಇಕೋ ಸ್ಪೇಸ್ ಜಂಕ್ಷನ್ ಬಳಿ ವಾಹನ ಕೆಟ್ಟು ನಿಂತಿರುವುದರಿಂದ ಮಾರತ್‌ಹಳ್ಳಿ, ಕಾಡುಬೀಸನಹಳ್ಳಿ, ದೇವರಬೀಸನಹಳ್ಳಿ, ಬೆಳ್ಳಂದೂರು ಕಡೆಗೆ ನಿಧಾನಗತಿಯ ಸಂಚಾರವಿರುತ್ತದೆ' ಎನ್ನುವ ಸೂಚನೆ ನೀಡಿದರು.

ಇದಾದ ಎರಡು ಗಂಟೆವರೆಗೆ ವಾಹನ ಸಂಚಾರ ವ್ಯತ್ಯಯಗೊಂಡು ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೈಕ್ ಸವಾರರು ಕಷ್ಟಪಟ್ಟುಕೊಂಡು ತೆರಳಿದರೆ, ಕಾರು, ಬಸ್, ಲಾರಿ ಸಹಿತ ಇತರೆ ವಾಹನ ಸವಾರರು ಪರದಾಡಬೇಕಾಯಿತು.

ಸಾಮಾಜಿಕ ಮಾಧ್ಯಮದಲ್ಲೂ ಈ ಕುರಿತು ಆಕ್ರೋಶ ವ್ಯಕ್ತವಾಯಿತು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರನ್ನು ಟ್ಯಾಗ್ ಮಾಡಿ, 'ವಾಹನ ಸವಾರರು 15 ಕಿಲೋಮೀಟರ್ ದೂರ ಕ್ರಮಿಸಲು ಮೂರು ಗಂಟೆ ಬೇಕಾಗಿದೆ ' ಎಂದು ಆಕ್ರೋಶ ಹೊರ ಹಾಕಿದರು.

'ಬಿಎಂಟಿಸಿ ಬಸ್ ಕೆಟ್ಟು ನಿಂತಿದ್ದು ಒಂದು ಕಡೆಯಾದರೆ, ಮತ್ತೊಂದು ಭಾಗದಲ್ಲಿ ರಸ್ತೆ ದುರಸ್ತಿ ಕಾರ್ಯ ನಡೆದು ಸಂಚಾರ ನಿಧಾನವಾಗಿದೆ. ಗಣ್ಯ ವ್ಯಕ್ತಿಗಳ ಸಂಚಾರದಿಂದಲೂ ಆಗಾಗ ಸಮಸ್ಯೆ ಇದ್ದೇ ಇರುತ್ತದೆ. ಸಂಜೆ ಹೊತ್ತಿನಲ್ಲಿ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದವರು ಗಂಟೆಗಟ್ಟಲೇ ಕಾಯಬೇಕಾಯಿತು' ಎಂದು ವಾಹನ ಸವಾರರು ಬೇಸರ ಹೊರ ಹಾಕಿದರು.

'ಸಾವಿರಕ್ಕೂ ಅಧಿಕ ಕಂಪನಿಗಳು ಮಾರತ್‌ಹಳ್ಳಿ-ಬೆಳ್ಳಂದೂರು ಭಾಗದಲ್ಲಿವೆ. ಒಮ್ಮೆಲೆ ಕಂಪನಿಗಳ ಉದ್ಯೋಗಿಗಳು ಬರುವುದು ಕೂಡ ದಟ್ಟಣೆ ಹೆಚ್ಚಳಕ್ಕೆ ದಾರಿ ಮಾಡಿಕೊಟ್ಟಿದೆ. ಬಿಎಂಟಿಸಿ ಬಸ್‌ಗಳು ಪ್ರಯಾಣಿಕರನ್ನು ಇಳಿಸಲು ಹಾಗೂ ಹತ್ತಿಸಿಕೊಳ್ಳಲು ರಸ್ತೆಯಲ್ಲಿ ನಿಲ್ಲುವುದು ಕೂಡ ಸಮಸ್ಯೆಗಳನ್ನು ತಂದೊಡ್ಡಿದೆ. ಕೆಟ್ಟು ನಿಂತರಂತೂ ಮುಗಿದೇ ಹೋಯಿತು' ಎನ್ನುವ ಅಭಿಪ್ರಾಯಗಳು ಕೇಳಿ ಬಂದವು.


ಕೆಟ್ಟು ನಿಂತ ಬಿಎಂಟಿಸಿ ಬಸ್ (ಎಡ ಚಿತ್ರ) ಹೊರ ವರ್ತುಲ ರಸ್ತೆ ಬಳಿ ನಿಂತಿದ್ದ ವಾಹನಗಳ ಸಾಲು

ಆಯ್ಕೆಪಟ್ಟಿ ಪ್ರಕಟ ವಿಳಂಬ: ಅಭ್ಯರ್ಥಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯಲ್ಲಿ (ಜೆಸ್ಕಾಂ) 199 ಮಂದಿ ಕಿರಿಯ ಪವರ್ ಮ್ಯಾನ್‌ಗಳ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷದ ಅಕ್ಟೋಬರ್ ನಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಒಂದು ವರ್ಷವಾದರೂ, ನೇಮಕಾತಿ ಪೂರ್ಣಗೊಳಿಸಿಲ್ಲ, ಬೇರೆ ಕಂಪನಿಗಳಲ್ಲಿ ನೇಮಕಾತಿ ನಡೆದಿದೆ. ಜೆಸ್ಕಾಂನಲ್ಲಿ ಮಾತ್ರ ವಿಳಂಬವಾಗಿದೆ ಎಂದು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅಭ್ಯರ್ಥಿಗಳು ಅಳಲು ತೋಡಿಕೊಂಡರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಕಳೆದ ಆಗಸ್ಟ್‌ನಲ್ಲಿ ದೈಹಿಕ ಪರೀಕ್ಷೆ, ಶ್ರವಣದೋಷವುಳ್ಳ ಅಭ್ಯರ್ಥಿಗಳಿಗೆ ವೈದ್ಯಕೀಯ ತಪಾಸಣೆ ನಡೆಸಲಾಗಿದೆ. ಆದರೆ, ಇದುವರೆಗೂ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಕೌನ್ಸೆಲಿಂಗ್‌ಗೆ ದಿನಾಂಕ ನಿಗದಿಪಡಿಸಿಲ್ಲ ಎಂದು ದೂರಿದರು.

ಒಟ್ಟು 2,800 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅದರಲ್ಲಿ 1:5ರ ಪ್ರಕಾರ ಅಭ್ಯರ್ಥಿಗಳನ್ನು ದೈಹಿಕ ಪರೀಕ್ಷೆಗೆ ಕರೆಯಲಾಗಿತ್ತು. ಇದಾಗಿ ಎರಡು ತಿಂಗಳಾಗುತ್ತಿದೆ. ಇದುವರೆಗೆ ತಾತ್ಕಾಲಿಕ ಪಟ್ಟಿ ಕೂಡ ಪ್ರಕಟಿಸಿಲ್ಲ. ಸಾಮಾನ್ಯವಾಗಿ ಆರು ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆ ಮುಗಿಯುತ್ತದೆ. ಆದರೆ, ಇಲ್ಲಿ ಒಂದು ವರ್ಷವಾದರೂ ಪೂರ್ಣ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತುಷಾರ್ ಕಾಂತಿ ಬೆಹೇರಾ, ನಿಸ್ಸಾರ್ ಅಹ್ಮದ್, ಸಂಘಟಕಿ ಎಂ.ಎಸ್. ದಿವ್ಯಾರಾಣಿ, ವಿಜ್ಞಾನಿಗಳು ಹಾಗೂ ಪ್ರಾಧ್ಯಾಪಕರು ಉಪಸ್ಥಿತರಿದ್ದರು

ಪ್ರೆಸಿಡೆನ್ಸಿ ವಿವಿ: 'ಚಿಪ್ ಟು ಕ್ರಾಪ್' ಹ್ಯಾಕಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯವು 'ಚಿಪ್ ಟು ಕ್ರಾಪ್' ಶೀರ್ಷಿಕೆಯಡಿ ನಗರದಲ್ಲಿ 24 ಗಂಟೆಗಳ ಹ್ಯಾಕಥಾನ್ ನಡೆಸಿತು.

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಸಹಯೋಗದಲ್ಲಿ ಈ ಹ್ಯಾಕಥಾನ್ ಹಮ್ಮಿಕೊಳ್ಳಲಾಗಿತ್ತು. ಐಸಿಎಆರ್–ಐಐಎಚ್‌ಆರ್ ಬೆಂಗಳೂರಿನ ನಿರ್ದೇಶಕ ತುಷಾರ್ ಕಾಂತಿ ಬೆಹೇರಾ ಹಾಗೂ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಪತಿ ನಿಸ್ಸಾರ್ ಅಹ್ಮದ್ ಅವರು ಈ ಹ್ಯಾಕಥಾನ್‌ನ ಅಂತಿಮ ಸುತ್ತನ್ನು ಉದ್ಘಾಟಿಸಿದರು.

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೈಜ ಸಮಯದಲ್ಲಿ ಪರಿಹಾರೋಪಾಯ ಒದಗಿಸಬೇಕಾದ ಈ ಹ್ಯಾಕಥಾನ್‌ನಲ್ಲಿ, ನೂರಕ್ಕೂ ಅಧಿಕ ಮಂದಿ ಹೆಸರು ನೋಂದಾಯಿಸಿ ಕೊಂಡಿದ್ದರು. 30 ತಂಡಗಳಾಗಿ ಅಭ್ಯರ್ಥಿಗಳನ್ನು ವಿಂಗಡಿಸಲಾಗಿತ್ತು.

ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದ ತಂಡಗಳು, ಕೃಷಿ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತಂತ್ರಜ್ಞಾನ ಆಧಾರಿತ ಪರಿಹಾರೋಪಾಯಗಳನ್ನು ಸೂಚಿಸಿ ದರು. ಇದನ್ನು ಐಐಎಚ್‌ಆರ್ ವಿಜ್ಞಾನಿಗಳು ಮೌಲ್ಯಮಾಪನ ಮಾಡಿದರು ಎಂದು ಪ್ರಕಟಣೆ ತಿಳಿಸಿದೆ.

ರಾಬ್ಸನ್: ಅಣುರಚನೆಯ ಚಂದಕ್ಕೆ ಸಂದ ನೊಬೆಲ್



ರಿಚರ್ಡ್ ರಾಬ್ಸನ್ ಕೃಪೆ: ನೊಬೆಲ್ ಅಧಿಕೃತ ವೆಬ್‌ಸೈಟ್

• ಕ್ಷಮಾ ವಿ. ಭಾನುಪ್ರಕಾಶ್

ಪ್ರತಿ ಹೊಸ ಅನ್ವೇಷಣೆಯಲ್ಲೂ ಏನಾದರೊಂದು ಹೊಸದಾದ ಕಥೆಯಿದ್ದೇ ಇರುತ್ತದೆ. ಆದರೆ, ಎಲ್ಲ ಅನ್ವೇಷಣೆಯ ಹಿಂದೆಯೂ ಸುಲಭವಾಗಿ ತಣಿಯದ ಕುತೂಹಲ, ಹಿಡಿದ ಕೆಲಸ ಮುಗಿಯುವವರೆಗೂ ಬಿಡದ ಛಲ, ಸಮಸ್ಯೆಗಿಂತಲೂ ಅದಕ್ಕೆ ಇರಬಹುದಾದ ಪರಿಹಾರದ ಮೇಲೆ ಗಮನವಿಡುವ ಮನಃಸ್ಥಿತಿ - ಇವು ಇದ್ದೇ ಇರುತ್ತವೆ. ಪ್ರತಿ ಬಾರಿ ನೊಬೆಲ್ ಬಹುಮಾನದ ಘೋಷಣೆಯಾದಾಗಲೂ ಇಂತಹ ಕೆಲವು ವಿಜ್ಞಾನಿಗಳ ಹಲವು ಆಸಕ್ತಿಕರ, ಸ್ಫೂರ್ತಿದಾಯಕ ಕಥೆಗಳು ಹೊರಬರುತ್ತವೆ; ಸಾಮಾನ್ಯ ಜನರೂ ವಿಜ್ಞಾನಲೋಕದೆಡೆಗೆ ಮತ್ತೊಮ್ಮೆ, ಮಗದೊಮ್ಮೆ ಅಚ್ಚರಿಯಿಂದ ಕಣ್ಣರಳಿಸುವಂತೆ ಮಾಡುತ್ತವೆ.

2025ನೇ ಸಾಲಿನ ರಸಾಯನವಿಜ್ಞಾನದ ನೊಬೆಲ್ ಲಭಿಸಿದ್ದು ಸುಸುಮು ಕಿಟಾಗವಾ, ರಿಚರ್ಡ್ ರಾಬ್ಸನ್ ಮತ್ತು ಓಮರ್ ಯಾಘಿ ಅವರಿಗೆ; ಬೇರೆ ಬೇರೆ ಹಿನ್ನೆಲೆಯ ಈ ಮೂವರು ರಸಾಯನವಿಜ್ಞಾನಿಗಳನ್ನು ಒಂದೆಡೆ ಸೇರಿಸಿದ್ದು ಲೋಹ-ಸಾವಯವ ಚೌಕಟ್ಟುಗಳು!

'ಲೋಹ-ಸಾವಯವ ಚೌಕಟ್ಟು'ಗಳು ಎಂಬ ಈ ಅಪರಿಮಿತ ಅನ್ವಯಿಕೆಗಳನ್ನುಳ್ಳ ರಚನೆ ತಯಾರಾಗಲು ನಾಂದಿ ಹಾಡಿದ್ದು ರಾಬ್ಸನ್. ಇಂಗ್ಲೆಂಡ್‌ನಲ್ಲಿ 1937ರ ಜೂನ್ 4ರಂದು ಜನಿಸಿದ ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಇಂಗ್ಲೆಂಡಿನಲ್ಲೇ ಮುಗಿಸಿ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣವನ್ನು ಮುಂದುವರೆಸಿದರು; ಕ್ಯಾಲ್ ಟೆಕ್ ಮತ್ತು ಸ್ಟಾನ್ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಪೋಸ್ಟ್ ಡಾಕ್ಟರಲ್ ಸಂಶೋಧನೆಗಳನ್ನು ನಡೆಸಿ, ನಂತರ ಮೆಲ್ಬೋರ್ನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ವೃತ್ತಿಯನ್ನು ಪ್ರಾರಂಭಿಸಿ, ಅಲ್ಲಿಯೇ, ತಮ್ಮ ನಿವೃತ್ತಿಯವರೆಗೂ ಕಾರ್ಯನಿರ್ವಹಿಸಿದರು.

ರಸಾಯನವಿಜ್ಞಾನದ ವಿದ್ಯಾರ್ಥಿಗಳಿಗೆ 'ಬಾಲ್ ಅಂಡ್ ಸ್ಟಿಕ್ ಮಾಡೆಲ್' ಗೊತ್ತೇ ಇರುತ್ತದೆ; ರಾಸಾಯನಿಕ ಸಂಯುಕ್ತ ಪದಾರ್ಥಗಳ 3-ಆಯಾಮದ ರಚನೆಯನ್ನು ಅರ್ಥೈಸಿಕೊಳ್ಳಲು ಪುಟಾಣಿ ಚೆಂಡುಗಳು ಮತ್ತು ಕಡ್ಡಿಗಳನ್ನು ಬಳಸಿ ಮಾದರಿಗಳನ್ನು ತಯಾರಿಸಬಹುದು. ರಾಸಾಯನಿಕ ಬಂಧವನ್ನು, ಅಣುವಿನ ಜೋಡಣೆಯನ್ನು ಸರಳವಾಗಿ ತಿಳಿದುಕೊಳ್ಳುವುದಕ್ಕೆ ಈ ಮಾದರಿ ಅತ್ಯಂತ ಸಹಾಯಕ. ಮೊದಲ ಬಾರಿಗೆ 1883ರಲ್ಲಿ ಆಗಸ್ಟ್ ಹಾಫ್ಮನ್ ಎಂಬ ಜರ್ಮನ್ ವಿಜ್ಞಾನಿ ಉಲನ್ ಉಂಡೆಗಳು ಮತ್ತು ಕ್ರೋಷಕಡ್ಡಿಗಳನ್ನು ಬಳಸಿ ಆಣ್ವಿಕ ರಚನೆಯನ್ನು ಸರಳವಾಗಿ ಎಲ್ಲರಿಗೂ ಅರ್ಥಮಾಡಿಸಲು ಮೊದಲ 'ಬಾಲ್ ಅಂಡ್ ಸ್ಟಿಕ್ ಮಾಡೆಲ್' ತಯಾರಿಸಿದರು. ಮುಂದಿನ ದಿನಗಳಲ್ಲಿ ಮರದಲ್ಲಿ ಕೆತ್ತಿ, ಕೊರೆದು ತಯಾರಿಸುತ್ತಿದ್ದರು.

ರಿಚರ್ಡ್ ರಾಬ್ಸನ್ ಅವರು ತಮ್ಮ ರಸಾಯನವಿಜ್ಞಾನದ ಸಂಶೋಧಕರಿಗೊಂದು ಕಾರ್ಯಾಗಾರ ನಡೆಸುತ್ತಿದರು. ಅಲ್ಲಿ ಅವರೆಲ್ಲ ಮರದಲ್ಲಿ ಕೊರೆದು ತಯಾರಿಸುತ್ತಿದ್ದ ಗುಂಡುಗಳು ಮತ್ತು ಕಡ್ಡಿಗಳಿಗೆ ನಿರ್ದಿಷ್ಟವಾದ ರೂಪ, ಆಕಾರವಿರಬೇಕಾಗುತ್ತಿತ್ತು. ಆ ಗುಂಡುಗಳಲ್ಲಿ ಎಷ್ಟು ರಂಧ್ರಗಳಿರಬೇಕು ಎಂಬುದು ಅದು ಯಾವ ಅಣುವಿನ ಪ್ರತಿರೂಪ ಎಂಬುದರ ಮೇಲೆ ಆಧಾರಿತ. ಉದಾಹರಣೆಗೆ, ಅದು ಇಂಗಾಲವಾದರೆ ನಾಲ್ಕು ರಂಧ್ರ, ಆಮ್ಲಜನಕವಾದರೆ ಎರಡು ರಂಧ್ರ - ಹೀಗೆ! ಅಷ್ಟೇ ಅಲ್ಲದೆ, ಆ ರಂಧ್ರಗಳು ಯಾವ ಕೋನದಲ್ಲಿರಬೇಕು ಎಂಬುದು ಕೂಡ, ಆ ಪರಮಾಣುವು ಎಂತಹ ರಾಸಾಯನಿಕ ಬಂಧದಲ್ಲಿ ಪಾಲ್ಗೊಳ್ಳುತ್ತದೆ ಎಂಬುದರ ಮೇಲೆ ನಿರ್ಭರವಾಗುತ್ತದೆ. ಇಂತಹ ವಿವರಗಳನ್ನು ಗಮನಿಸುತ್ತಾ, ರಾಬ್ಸನ್ ಅವರಿಗೆ ಈ 3-ಡಿ ರಚನೆಗಳಲ್ಲಿರುವ ನಿಗಧಿತ ಅಂತರಗಳು ಗಮನ ಸೆಳೆದವು; ಒಂದಕ್ಕೊಂದು ಸೇರುತ್ತಾ ಈ ಲೋಹದ ಮತ್ತು ಇಂಗಾಲದ ಅಣುಗಳು ಉಂಟುಮಾಡುವ ಚೌಕಟ್ಟುಗಳಲ್ಲಿ, ನಿರ್ದಿಷ್ಟವಾಗಿಯೇ ಇರುವ ಕೋನ, ರಂಧ್ರ, ಜೋಡಣೆಯಂತಹ ವಿಷಯಗಳು ಅವರಲ್ಲಿ ಹೊಸ ಹೊಳಹನ್ನು ಹುಟ್ಟಿಸಿತ್ತು.

ಸುಮಾರು ಹತ್ತು ವರ್ಷಗಳು ಅದೇ ಯೋಚನೆಯಲ್ಲಿದ್ದ ರಾಬ್ಸನ್ ಅವರು, ಪ್ರತಿ ವರ್ಷದ ಕಾರ್ಯಾಗಾರದಲ್ಲೂ ಅದೇ ನಿಟ್ಟಿನಲ್ಲಿ ಯೋಚಿಸುತ್ತಿದ್ದರು. ಇಂತಹ ಚೌಕಟ್ಟುಗಳಲ್ಲಿ ಹೇಗೆ ಅನಿಲಗಳನ್ನು ಸೆರೆಹಿಡಿಯಬಹುದು, ವೇಗವರ್ಧಕಗಳನ್ನು ಹಿಡಿದಿಡಬಹುದು ಎಂಬಂತಹ ಯೋಚನೆಗಳು ಯೋಜನೆಗಳಾಗಿ ಬದಲಾದವು. ತಾಮ್ರದ ಅಣುಗಳೊಂದಿಗೆ ಸಾವಯವ ಆಣ್ವಿಕ ಗುಂಪುಗಳಾದ 'ನೈಟ್ರೈಲ್'ಗಳನ್ನು ಸೇರಿಸಿದಾಗ, 3-ಆಯಾಮದ ರಚನೆ ಹೇಗಿರುತ್ತದೆಂಬ ಸಿದ್ಧಾಂತವನ್ನು ರಾಬ್ಸನ್ ಸೃಜಿಸಿದರು. ಈ ಲೋಹ-ಸಾವಯವ ಉತ್ಪನ್ನದ ಭೌತಿಕ ರಚನೆಯ ಮಾದರಿಯನ್ನು ತಯಾರಿಸಿದಾಗ, ವಜ್ರವು ಇಂಗಾಲದ ಅಣುಗಳ ಜೋಡಣೆಯಿಂದ ಹೇಗೆ ರಚನೆಯಾಗಿರುತ್ತದೋ, ಅಂತಹದ್ದೇ ಸ್ಫಟಿಕದ ರೂಪ ತಯಾರಾಗುತ್ತದೆ ಎಂದು ಪ್ರತಿಪಾದಿಸಿದರು. ಆ ರಚನೆಯಲ್ಲಿ, ಅಣುಗಳು ಮತ್ತು ಬಂಧಗಳ ನಡುವೆ ಇರುವ ನಿರ್ದಿಷ್ಟ ರೂಪದ, ಆಕಾರದ, ಗಾತ್ರದ ಅಂತರಗಳಲ್ಲಿ ನಿರ್ದಿಷ್ಟ ಪರಮಾಣುಗಳನ್ನು, ಅಯಾನುಗಳನ್ನು, ಅಣುಗಳನ್ನು ಕೂರಿಸಬಹುದು ಎಂಬುದನ್ನು ವಿವರಿಸಿದರು. ಇದನ್ನು ಅವರು ಅನೇಕ ಕೋಣೆಗಳಿರುವ ಹೋಟೆಲ್ ಮಳಿಗೆಗೆ ಹೋಲಿಸಿದರು; ತಮಗೆ ಹೊಂದುವ ಕೋಣೆಗೆ ಸೂಕ್ತ ಅತಿಥಿ ಬಂದು ಹೋಗುವ ಹಾಗೆ, ವಿವಿಧ ಅಣುಗಳಿಗೆ ತಕ್ಕ ಹಾಗೆ ಚೌಕಟ್ಟಿನೊಳಗಿನ ಅಂತರಗಳನ್ನು ರಚಿಸಬಹುದು ಎಂಬುದನ್ನು ರಾಬ್ಸನ್ ಅವರ ಮಾದರಿಯು ವಿವರಿಸಿತು. ಈ ಮೂಲಭೂತ ಕಲ್ಪನೆಯ ಮೇಲೆ ಮತ್ತಿಬ್ಬರು ರಸಾಯನ ವಿಜ್ಞಾನಿಗಳಾದ ಸುಸುಮು ಕಿಟಾಗವಾ ಮತ್ತು ಓಮರ್ ಯಾಘಿ ತಮ್ಮ ಪರಿಶ್ರಮ ಮತ್ತು ಪರಿಣಿತಿಯನ್ನು ಧಾರೆಯೆರೆದು, ರಾಬ್ಸನ್ ಅವರೊಂದಿಗೆ ನೊಬೆಲ್ ಪ್ರಶಸ್ತಿಗೆ ಭಾಜನರಾದರು.

ರಾಬ್ಸನ್ ಅವರು ನೊಬೆಲ್ ಪಡೆದ ಸುದ್ದಿ ತಿಳಿದ ನಂತರ, ಫೋನಿನಲ್ಲಿ ನೀಡಿದ ಸಂದರ್ಶನದಲ್ಲಿ ತಮ್ಮ ಸಂಶೋಧನೆಯ ಬಗ್ಗೆ ಹಂಚಿಕೊಳ್ಳುತ್ತಾ, 'ತಾನೇನೂ ವಿಶೇಷವಾಗಿ ಮಾಡಿಲ್ಲ; ಯಾವುದೋ ಅಣುಗಳನ್ನು ಮಿಕ್ಸ್ ಮಾಡಿ, ಏನೋ ಒಂದನ್ನು ತಯಾರಿಸಿದೆ ಅಷ್ಟೇ' ಎಂದು ವಿನಮ್ರರಾಗಿ ಹೇಳಿ ನಗೆಯಾಡಿದರು. 'ಆದರೆ, ಎಲ್ಲಾ ಜವಾಬ್ದಾರಿಗಳನ್ನೂ ಮರೆತು ವಿಜ್ಞಾನದ ಬಗ್ಗೆ, ಸಂಶೋಧನೆಯ ಬಗ್ಗೆ ಒಂದು ಬಗೆಯ ಗೀಳಿದ್ದರೆ ಮಾತ್ರ ಇಂತಹದ್ದೇನಾದರೂ ಸಾಧ್ಯವಾಗುತ್ತದೆಯಷ್ಟೇ! ಹತ್ತು ವರ್ಷಗಳಿಂದಲೂ ಗುಂಗು ಹಿಡಿಸಿದ್ದ ಆಣ್ವಿಕ ರಚನೆಯ ನಡುವಿನ ಅಂತರಗಳು, ಹೀಗೆ ಮುಂದೆ ಅನೇಕ ಅದ್ಭುತ ಬೆಳವಣಿಗೆಗಳಿಗೆ ಕಾರಣವಾಗುತ್ತದೆ ಎಂಬ ಅಚಲ ನಂಬಿಕೆಯಿತ್ತು' ಎಂದು ತಮ್ಮ ಮನದ ಮಾತನ್ನು ಹಂಚಿಕೊಂಡರು. ಮಾಡುವ ಕೆಲಸದಲ್ಲಿ ಸಂಪೂರ್ಣ ತೊಡಗಿಸಿಕೊಳ್ಳುವಿಕೆ ಮತ್ತು ಅಪರಿಮಿತ ಶ್ರದ್ಧೆ, ಅನನ್ಯ ಫಲಿತಾಂಶಗಳನ್ನು ನೀಡುತ್ತದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದರು. ❖

ಎ.ಐ. ನೀರಾವರಿ

• ಪೂರ್ಣಿಮಾ ಗೊಂದೆನಾಯ್ಕರ

ಇದು ಎ.ಐ. ಜಮಾನಾ. ಇದೀಗ ಕೃಷಿಕ್ಷೇತ್ರದಲ್ಲೂ ಎ.ಐ. ಬಳಕೆ ಶುರುವಾಗಿದ್ದು, ಇದೊಂದು ಕ್ರಾಂತಿಕಾರಕ ಹೆಜ್ಜೆ ಎನ್ನಬಹುದು.

ಮೈಸೂರಿನ ಮೊಬಿಟೆಕ್ ಸಂಸ್ಥೆ ಅಭಿವೃದ್ಧಿ ಪಡಿಸಿರುವ 'ಎ.ಐ. ಆಧಾರಿತ ನೀರಾವರಿ ಹಾಗೂ ಗೊಬ್ಬರ ಯಾಂತ್ರಿಕೃತ ವ್ಯವಸ್ಥೆ' ತಂತ್ರಜ್ಞಾನ ಈಗ ಕೃಷಿಕ್ಷೇತ್ರವನ್ನು ಮತ್ತಷ್ಟು ಸ್ಮಾರ್ಟ್ ಆಗಿಸುತ್ತಿದೆ. ರೈತರು ತಮ್ಮ ಜಮೀನಿನಲ್ಲಿ ಈ ತಂತ್ರಜ್ಞಾನ ಅಳವಡಿಸಿದರೆ ತಮ್ಮ ಬೆಳೆಗಳಿಗೆ ಎಷ್ಟು ನೀರು ಕೊಡಬೇಕು, ಯಾವ ಬೆಳೆಗೆ ಎಷ್ಟು ಗೊಬ್ಬರ ನೀಡಬೇಕು, ಹವಾಮಾನ ಹೇಗಿದೆ, ಮಣ್ಣಿನ ತೇವಾಂಶ ಹೇಗಿದೆ, – ಎಂಬಿತ್ಯಾದಿ ಮಾಹಿತಿಗಳನ್ನು 'ಡಿಕಾನ್‌ಎಜ್' ಮೊಬೈಲ್ ಆ್ಯಪ್ ಮೂಲಕ ರೈತರಿಗೆ ತಲುಪುತ್ತದೆ.

ಕೃಷಿಭೂಮಿಗೆ ನೀರುಣಿಸಲು ಬಳಸುವ ಪಂಪ್‌ಸೆಟ್‌ಗಳಿಗೆ ರೈತರು ವಿದ್ಯುತ್‌ಚ್ಛಕ್ತಿಯ ಮೊರೆ ಹೋಗುವುದು ಸಾಮಾನ್ಯ. ಆದರೆ, ಲೋಡ್‌ಶೆಡ್ಡಿಂಗ್, ಸಿಂಗಲ್ ಫೇಸ್‌ನಂತಹ ಹಲವಾರು ಕಾರಣಗಳಿಂದ ಯಾವಾಗ ವಿದ್ಯುತ್ ಬರುತ್ತದೆ, ಯಾವಾಗ ಹೋಗುತ್ತದೆ ಎಂಬುದು ರೈತರಿಗೆ ಗೊತ್ತೇ ಆಗುವುದಿಲ್ಲ. ವೋಲ್ಟೇಜ್ ಹೆಚ್ಚು ಕಡಿಮೆಯಿಂದ ಮೋಟಾರ್ ಪಂಪ್‌ಸೆಟ್‌ಗಳು ಸುಟ್ಟುಹೋಗುವ ಸಾಧ್ಯತೆಗಳೂ ಹೆಚ್ಚಿರುತ್ತವೆ. ಸುಟ್ಟ ಪಂಪ್‌ಸೆಟ್‌ಗಳನ್ನು ಸರಿಪಡಿಸಿ, ಮತ್ತೆ ಅವನ್ನು ಅಳವಡಿಸಲು ರೈತರಿಗೆ ಸಾಕಷ್ಟು ಸಮಯ ಬೇಕಾಗುತ್ತದೆ; ಜೊತೆಗೆ ಸಾಕಷ್ಟು ಹಣವನ್ನೂ ವ್ಯಯಿಸಬೇಕಾಗುತ್ತದೆ. ಇದರಿಂದ ತೋಟ, ಗದ್ದೆಗಳ ಕೆಲಸಗಳಿಗೂ ಸಮಸ್ಯೆ ಉಂಟಾಗುತ್ತದೆ. ಆದರೆ, ಎ.ಐ. ಆಧಾರಿತ ತಂತ್ರಜ್ಞಾನ ಇದಕ್ಕೆಲ್ಲ ಪರಿಹಾರ ಎನಿಸಿದೆ.

ರೈತರು ತಮ್ಮ ಮನೆಯಲ್ಲಿಯೇ ಕುಳಿತು ಅಥವಾ ಯಾವುದೇ ಸ್ಥಳದಿಂದಲಾದರೂ ತಮ್ಮ ತೋಟ ಅಥವಾ ಹೊಲಗಳಿಗೆ ವಿದ್ಯುತ್ ಚಾಲಿತ ಪಂಪ್‌ಸೆಟ್ ಮೋಟಾರನ್ನು ಮೊಬೈಲ್ ಮೂಲಕ ನಿಯಂತ್ರಿಸಬಹುದು. ಕರೆಂಟ್ ಯಾವಾಗ ಬರುತ್ತೆ, ಯಾವಾಗ ಹೋಗುತ್ತದೆ ಎಂಬುದನ್ನು ತಿಳಿಯಬಹುದು. ಇದರಿಂದ ರಾತ್ರಿ ಹೊತ್ತು ಬೆಳೆಗಳಿಗೆ ನೀರುಣಿಸಲು ಜಮೀನಿಗೆ ಹೋಗುವುದು ತಪ್ಪುತ್ತದೆ.

ಎಲ್ಲ ರೀತಿಯ ಅಳತೆಯ ತೋಟ ಮತ್ತು ಗದ್ದೆಗಳಿಗೆ ಉಪಯುಕ್ತವಾಗಿದ್ದು, ಒಂದು ಮೊಬೈಲ್ ಸಿಮ್ ಕಾರ್ಡ್‌ನಿಂದ ಹಲವು ತೋಟಗಳನ್ನು ನಿಯಂತ್ರಿಸಬಹುದು. ಸೋಲಾರ್ ಆಧಾರಿತ ಕಾರ್ಯನಿರ್ವಹಣೆ ಸೌರಫಲಕದೊಂದಿಗೆ 24 ಗಂಟೆ ಕಾರ್ಯ ನಿರ್ವಹಿಸಲಿದೆ. ಅಷ್ಟೇ ಅಲ್ಲದೆ ಸದೃಢ ಬ್ಯಾಟರಿ ನೆರವು, ಮೋಡ ಕವಿದ ವಾತಾವರಣದಲ್ಲೂ 24 ಗಂಟೆ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿದೆ.

ಕಾರ್ಯವಿಧಾನ ಹೇಗೆ ?

ಮೋಟಾರ್ ಪಂಪ್‌ಸೆಟ್ ಸ್ಟಾರ್ಟರ್ ಬೋರ್ಡ್‌ನಲ್ಲಿ 'ಡಿಒಲ್ ಸ್ಟಾರ್ಟರ್' (ಮೇನ್ ಕಂಟ್ರೋಲರ್) ಇರುತ್ತದೆ. ಇದನ್ನು ಕಂಟ್ರೋಲ್ ಮಾಡಲು ಎಂಸಿಯು (ಮೋಟಾರ್ ಕಂಟ್ರೋಲ್ ಯುನಿಟ್) ಹಾಗೂ ಎಂಎಸ್‌ಯು (ಮೋಟಾರ್ ಸ್ಟಾರ್ಟರ್ ಯೂನಿಟ್) ಬರುತ್ತದೆ. ಇವೆರಡು ಡಿವೈಸ್‌ಗಳನ್ನು ವೈಯರ್‌ಲೆಸ್ ಮೂಲಕ ಮೇನ್ ಮಾಸ್ಟರ್ ಕಂಟ್ರೋಲರ್ ಡಿಕ್ಯಾನ್ ಏಜ್‌ಗೆ ಕನೆಕ್ಟ್ ಮಾಡಲಾಗಿರುತ್ತದೆ. ಮೇನ್ ಕಂಟ್ರೋಲ್ ಬೋರ್ಡ್‌ನಲ್ಲಿ ಆಟೋ ಬ್ಯಾಕ್‌ವರ್ಡ್ (ಎಬಿಡಬ್ಲು) ಎನ್ನುವ ಡಿವೈಸ್ ಕೂಡ ಇರುತ್ತದೆ. ಇದು ನೀರಿನ ಹಾಗೂ ಗೊಬ್ಬರದ ಫಿಲ್ಟರ್ ಕ್ಲೀನ್ ಮಾಡಲು ಸಹಾಯ ಮಾಡುತ್ತದೆ. ವಾಟರ್ ಲೆವೆಲ್ ಕಂಟ್ರೋಲ್ ಯುನಿಟ್ ಅಳವಡಿಸಲಾಗುತ್ತದೆ. ಹವಾಮಾನ ಮಾಹಿತಿ ಯುನಿಟ್ ರೈತರಿಗೆ ತಮ್ಮ ಜಮೀನಿನ ಮಣ್ಣಿನಲ್ಲಿರುವ ತೇವಾಂಶದ ಕುರಿತು ಮಾಹಿತಿಯನ್ನು ನೀಡುತ್ತದೆ. ಈ ಎಲ್ಲಾ ಡಿವೈಸ್‌ಗಳು ಸೌರ ವಿದ್ಯುತ್ತನ್ನು ಬಳಸುವುದರಿಂದ ದಿನದ 24 ಗಂಟೆಯೂ ವಿದ್ಯುತ್ ಸಹಾಯವಿಲ್ಲದೆ ಕಾರ್ಯನಿರ್ವಹಿಸುತ್ತವೆ. ಈ ಎಲ್ಲಾ ಡಿವೈಸ್‌ಗಳು ಕಾರ್ಯನಿರ್ವಹಿಸಲು ಕೇವಲ ಒಂದು ಸಿಮ್ ಕಾರ್ಡ್ ಮಾತ್ರ ಸಾಕು. ಈ ಸಿಮ್ ಕಾರ್ಡ್ ಅಳವಡಿಸಿದರೆ ಸಾಕು, ರೈತರಿಗೆ ಪ್ರತಿ ದಿನ ತಮ್ಮ ಬೆಳೆಗಳು, ಅದಕ್ಕೆ ಬೇಕಾಗುವ ನೀರು, ಗೊಬ್ಬರದ ಮಾಹಿತಿಗಳು ಅವರನ್ನು ತಲುಪುತ್ತದೆ. ಮೊಬಿಟೆಕ್ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಮೊಬೈಲ್ ಆ್ಯಪ್ ಮೂಲಕವೂ ಮಾಹಿತಿ ಪಡೆಯಬಹುದಾಗಿದೆ. ❖

ಆ್ಯಪಲ್ ಐಒಎಸ್ 26

• ಅವಿನಾಶ್ ಬಿ.

ಆ್ಯಪಲ್ ತನ್ನ ಕಾರ್ಯಾಚರಣಾ ವ್ಯವಸ್ಥೆ 'ಐಒಎಸ್'' ಪರಿಷ್ಕರಣೆಗಳಿಗಾಗಿ ಹೊಸ ಕ್ರಮಾಂಕ ನಿರ್ಣಯಕ್ಕೆ ಮುಂದಾದ ಬಳಿಕ, ಐಒಎಸ್ 18ರ ಬಳಿಕ, ಮುಂದಿನ ವರ್ಷದ ಇಸವಿಯ ಸಂಖ್ಯೆಯ ಆಧಾರದಲ್ಲಿ ಐಒಎಸ್ 26ರನ್ನು ಇತ್ತೀಚೆಗೆ ತನ್ನೆಲ್ಲ ಸಾಧನಗಳಿಗೆ ಬಿಡುಗಡೆ ಮಾಡಿದೆ. ಈ ಕಾರ್ಯಾಚರಣಾ ವ್ಯವಸ್ಥೆ ಅಳವಡಿಸಿಕೊಂಡ ಬಳಿಕ ಐಒಎಸ್ ಸಾಧನಗಳು (ಐಫೋನ್, ಮ್ಯಾಕ್, ಐಪ್ಯಾಡ್, ಆ್ಯಪಲ್ ವಾಚ್, ಆ್ಯಪಲ್ ಟಿವಿ) ಹೊಸ ವಿನ್ಯಾಸ ಹಾಗೂ ನೋಟದೊಂದಿಗೆ ಗಮನ ಸೆಳೆಯುತ್ತಿವೆ. ಆದರೆ ಯಾವ ಬಟನ್ ಎಲ್ಲಿದೆ, ಹೇಗೆ ಬಳಸುವುದು ಎಂಬಿತ್ಯಾದಿಯಾಗಿ ಸಾಂಪ್ರದಾಯಿಕ ಆ್ಯಪಲ್ ಬಳಕೆದಾರರಲ್ಲಿ ಕೆಲವೊಂದು ಗೊಂದಲಗಳು ಮೂಡಿವೆ. ಅವುಗಳನ್ನು ನಿವಾರಿಸುವ ಪ್ರಯತ್ನ ಇಲ್ಲಿದೆ.

ಹೊಸ ಕಾರ್ಯಾಚರಣ ವ್ಯವಸ್ಥೆಯೊಂದಿಗೆ ಮಾರುಕಟ್ಟೆಗೆ ಬಂದಿರುವ ಐಒಎಸ್ ಸಾಧನಗಳು, ವಿಶೇಷವಾಗಿ ಐಫೋನ್ 17ನೇ ಸರಣಿಯ ಸಾಧನಗಳ ಯೂಸರ್ ಇಂಟರ್ಫೇಸ್ ಬಹುತೇಕ ಬದಲಾಗಿದೆ. ವಿಶೇಷವಾಗಿ, ಸ್ಕ್ರೀನ್ ನೋಡಿದಾಗ ಲಿಕ್ವಿಡ್ ಗ್ಲಾಸ್(ದ್ರವೀಕೃತ ಗಾಜು)ನಂತೆ ಗೋಚರಿಸುತ್ತಿದ್ದು, ಆ್ಯಪ್‌ಗಳೆಲ್ಲ ನೀರಿನಲ್ಲಿ ತೇಲುವಂತೆ ಭಾಸವಾಗುತ್ತದೆ. ಜೊತೆಗೆ, ಆ್ಯಪ್‌ಗಳ ನೋಟವನ್ನೂ ಬದಲಿಸಬಹುದಾದ ವ್ಯವಸ್ಥೆಯನ್ನು ಕಲ್ಪಿಸಿದೆ.

ನಮ್ಮ ದೈನಂದಿನ ಬಳಕೆಗೆ ಸಂಬಂಧಿಸಿದಂತೆ ಐಒಎಸ್ 26ರಲ್ಲಿ ಮುಖ್ಯವಾಗಿ ಬದಲಾಗಿದ್ದೇನು? ಪ್ರಧಾನವಾಗಿ ಮೆನುಗಳು ಸರಳೀಕೃತವಾಗಿವೆ, ಪಾರದರ್ಶಕ ಮೆನುಗಳು ಮತ್ತು ಗಮನ ಸೆಳೆಯುವ ಅನಿಮೇಶನ್‌ಗಳು, ಆ್ಯಪ್ ಐಕಾನ್‌ಗಳನ್ನು ಪಾರದರ್ಶಕವಾಗಿಸುವ ಟಿಂಟಿಂಗ್ ಆಯ್ಕೆಗಳನ್ನು ನೀಡಲಾಗಿದೆ.

ಫೋನ್ ಆ್ಯಪ್: ಫೋನ್ ಆ್ಯಪ್‌ನಲ್ಲಿ ಇತ್ತೀಚಿನ ಕರೆಗಳು ಮತ್ತು ಮಿಸ್ಡ್ ಕರೆಗಳು ಒಂದೇ ಕಡೆ ಕಾಣಿಸುತ್ತವೆ. ಆದರೆ, ಹಿಂದಿನ ಪಾರಂಪರಿಕ ನೋಟಕ್ಕೆ ಇದನ್ನು ಬದಲಾಯಿಸಿಕೊಳ್ಳುವ ಆಯ್ಕೆಯನ್ನೂ (ಬಲ ಮೇಲ್ಭಾಗದಲ್ಲಿ ಮೂರು ಗೆರೆಗಳನ್ನು ಸ್ಪರ್ಶಿಸಿದರೆ, ಅಲ್ಲಿ ಕ್ಲಾಸಿಕ್ ಹಾಗೂ ಯುನಿಫೈಡ್ ಎಂಬ ಲೇಔಟ್) ನೀಡಲಾಗಿದೆ. ಅಲ್ಲಿಂದಲೇ ಕರೆಗಳು, ಮಿಸ್ಡ್ ಕರೆಗಳು, ವಾಯ್ಸ್ ಮೇಲ್ ಆಯ್ಕೆ ಮಾಡಿಕೊಳ್ಳುವುದಕ್ಕೂ ಸಾಧ್ಯ. ಅಪರಿಚಿತ ಸಂಖ್ಯೆಗಳ ಕರೆಗಳ ಕಿರಿಕಿರಿ ತಪ್ಪಿಸಲು, ಫಿಲ್ಟರಿಂಗ್ ಆಯ್ಕೆ ನೀಡಲಾಗಿದೆ.

ಫೋನ್ ಆ್ಯಪ್‌ನಲ್ಲಿ ಹೊಸದಾದ ಯುನಿಫೈಡ್ ಲೇಔಟ್ ಆಯ್ಕೆ ಮಾಡಿಕೊಂಡರೆ, ತಳಭಾಗದಲ್ಲಿ ಕರೆಗಳು, ಸಂಪರ್ಕಗಳು ಮತ್ತು ಕೀಪ್ಯಾಡ್, ನಂತರ ಸರ್ಚ್ ಬಟನ್ ಕಾಣಿಸುತ್ತದೆ. (ಈ ಮೊದಲು ಇದು ಮೇಲ್ಭಾಗದಲ್ಲಿತ್ತು). ಇದರ ಜೊತೆಗೆ 'ಹೋಲ್ಡ್ ಅಸಿಸ್ಟ್' ಎಂಬ ಆಯ್ಕೆಯ ಮೂಲಕ, ನಾವು ಸಂಪರ್ಕಿಸಲು ಯತ್ನಿಸಿದವರು ಕರೆಯನ್ನು ಹೋಲ್ಡ್ ಮಾಡಿ, ಪುನಃ ಮಾತನಾಡುವ ಸಂದರ್ಭದಲ್ಲಿ ಫೋನ್ ನಮಗೆ ಸೂಚನೆ ನೀಡುತ್ತದೆ. ಸಂದೇಶಗಳಲ್ಲಿ (ಮೆಸೇಜಸ್ ಆ್ಯಪ್) ಕೂಡ, ಅಪರಿಚಿತ ಸಂಪರ್ಕ ಸಂಖ್ಯೆಗಳನ್ನು ಫಿಲ್ಟರ್ ಮಾಡುವ ಆಯ್ಕೆ ನೀಡಲಾಗಿದೆ.

ಕ್ಯಾಮೆರಾ ಮತ್ತು ಫೋಟೊ ಆ್ಯಪ್

ಹೊಸ ವಿನ್ಯಾಸದಲ್ಲಿ ಕ್ಯಾಮೆರಾ ತೆರೆದಾಗ ಪ್ರಧಾನವಾಗಿ ಎರಡೇ ಆಯ್ಕೆಗಳು - ಫೋಟೊ ಮತ್ತು ವಿಡಿಯೊ - ಮಾತ್ರ ಕಾಣಿಸುತ್ತವೆ. ಅದರಲ್ಲಿ ಪೋರ್ಟ್ರೇಟ್, ಪನೋರಮ ಅಥವಾ ಸ್ಲೋ ಮೋಷನ್ ಮುಂತಾದ ಮೋಡ್‌ಗಳು ಬೇಕೆಂದಾದರೆ, ನಾವು ಆ ಬಟನ್ ಮೇಲೆ ಸ್ವೈಪ್ ಮಾಡಬೇಕು.

iOS 26 ಇರುವ ಆ್ಯಪಲ್ ಸಾಧನಗಳು

ವಿಡಿಯೊ ರೆಕಾರ್ಡ್ ಮಾಡುವಾಗ, ಒಂದು ಪುಟ್ಟ ವಿಂಡೋದಲ್ಲಿ ನಮ್ಮನ್ನೂ ಕಾಣಿಸುವಂತೆ ಪ್ರಧಾನ (ಹಿಂಭಾಗ) ಕ್ಯಾಮೆರಾದ ಜೊತೆಗೆ ಮುಂಭಾಗದ (ಸ್ಕ್ರೀನ್ ಮೇಲಿರುವ) ಕ್ಯಾಮೆರಾವನ್ನೂ ಆನ್ ಮಾಡಬಹುದು. ವಿಡಿಯೊ ಬಟನ್ ಒತ್ತಿದಾಗ ಬಲ ಮೇಲ್ಭಾಗದಲ್ಲಿ ಕಂಡುಬರುವ ಆರು ಚುಕ್ಕಿಗಳ ಮೆನುವಿನ ಮೇಲೆ ಸ್ಪರ್ಶಿಸಿದಾಗ, 'ಡ್ಯುಯಲ್ ಕ್ಯಾಪ್ಚರ್' ಕಾಣಿಸುತ್ತದೆ. ಇದನ್ನು ಆಯ್ಕೆ ಮಾಡಿಕೊಂಡರೆ, ಎರಡೂ ಕ್ಯಾಮೆರಾಗಳಿಂದ ವಿಡಿಯೊ ಏಕಕಾಲಕ್ಕೆ ಸೆರೆಯಾಗುತ್ತದೆ.

ಇದಲ್ಲದೆ ಕೃತಕ ಬುದ್ಧಿಮತ್ತೆಯೂ ಸಾಕಷ್ಟು ಬಳಕೆಯಾಗಿದೆ. ಬಳಕೆದಾರರು ಇಮೇಜ್ ಪ್ಲೇಗ್ರೌಂಡ್ ಅಥವಾ ಚಾಟ್‌ಜಿಪಿಟಿಯಂಥ ಇತರ ಎಐ ಮಾಡೆಲ್‌ಗಳನ್ನು ಸುಲಭವಾಗಿ ಬಳಸಬಹುದು. ಅದೇ ರೀತಿ ಇಮೇಲ್ ಅಥವಾ ಎಸ್‌ಎಂಎಸ್ ಸಂದೇಶದಿಂದ, ವೆಬ್ ಸೈಟುಗಳಿಂದ ಮಾಹಿತಿಯನ್ನು ನೇರವಾಗಿ ಜ್ಞಾಪನ ವ್ಯವಸ್ಥೆಗೆ (ರಿಮೈಂಡರ್ ಆ್ಯಪ್) ಸೇರಿಸಬಹುದು. ಇದಲ್ಲದೆ, ಚಿತ್ರವನ್ನು ನೋಡುತ್ತಿರುವಾಗ ಅದರಲ್ಲಿ ಪಠ್ಯವೇನಾದರೂ ಇದ್ದರೆ ಅಲ್ಲಿಂದಲೇ ಅನುವಾದಿಸುವ, ನಕಲಿಸುವ ಅಥವಾ ಫೋನ್ ಸಂಖ್ಯೆಯಿದ್ದರೆ ಕರೆ ಮಾಡುವ ಆಯ್ಕೆಗಳೂ ಗೋಚರಿಸುತ್ತವೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ– ಕನ್ನಡ ಮಾಧ್ಯಮ

Second Language ENGLISH

Dr. B.R. Ambedkar

Questions and Answers

5. 'They brought about a veritable revolution in social thought.'
a) Who are 'they' ?
b) What 'revolution' is referred to here?
c) How did they bring about the revolution?

Ans: a) Mahatma Gandhiji. and Dr. B.R. Ambedker.
b) The revolution referred here is repudiated (means deny) the caste system and to proclaim the oneness of the Hindu community.
c) Gandhiji brings the revolution by reminding the higher castes of their duty towards depression. Babasaheb did the same by reminding the depressed, classes about their inherent rights to equality with the higher and powerful castes.

6. Why did Nehru describe Dr. Ambedkar as 'a symbol of revolt'?

Ans: Nehru described Ambedkar as 'a symbol of revolt' because Ambedkar had the courage and conviction to rouse up the depressed classes of society which had suffered for long in the past. By doing this, Ambedkar also ensured that people belonging to the higher classes didnot grow complacent with the idea that with constitutional amendment every thing will be fine for the depressed classes

Think About The Text

1. Ambedkar had a great thirst for books when he was a student, explain.

Ans: Ambedkar was a voracious reader. His hunger for books was never satisfied. What is remarkable is that he bought books by sacrificing other needs. The author cites two instances to show what an avid reader Ambedkar was in New York, where he was a student, he is said to have bought 2000 old books. Later, when he went to London for the Second Round Table Conference he bought so many books that they had to be sent to India in 32 boxes. If others would have thought of bringing home attractive foreign goods, Ambedkar's interest was solely in books.

2. How did the fourteenth amendment to the U.S. Constitution and Mahatma Phule influence on Ambedkar?

Ans: Dr. Ambedkar was very much influenced by the fourteenth amendment of the Constitution of the USA which gave freedom to the Black Americans. He saw that there was the same situation of the Depressed Classes in India. On returning home, Babasaheb came to be greatly influenced by the life and work of Mahatma Phule, the votary of a classless society and women's uplift. It was then that Dr.Ambedkar decided to devote all his time and talents for the amelioration of his underprivileged class of the society. He decided to change the social status of the depressed class after getting influenced by the fourteenth amendment of the constitution of the USA.

3. There were great luminaries on the Drafting Committee. Dr. Ambedkar is remembered as the pilot. Give reasons.

Ans:- As a chairman of the Drafting Committee, Dr. Ambedkar followed the examples and experience of other nations and the distinctive needs of our own society. He considered every point one by one and worked hard towards it. Though there were other luminaries on the committee, but it was Dr. Ambedkar who had this strong vision and worked towards it with utmost patience. It is important to note that he explained the most complicated legal concepts in a language which the laymen understood.

4. Write a short note on Dr. Ambedkar's idea/perception of the three pillars of State.

Ans: Dr. Ambedkar had a clear perception of the three pillars of the state. He realized that; the Jurisdiction of each should be clear and not hampered legal bars. He had a sense of the importance of the role of citizens. According to him, the constitution should define the position and powers of the three organs of the State the executive, the Judiciary, and the legislature

5. What are the significant observation of Dr. Ambedkar on the constitution?

Ans: Dr. Ambedkar made significant observations. The Constitution is a fundamental document. It defines the position and power of the three organs viz., the executive, the legislative and the Judiciary. It also defines the powers of the organs against the citizens. Its main purpose is not merely to create the organs but to limit their authority to check, other wise, there will be tyranny or oppression.

6. Nehru chose Dr. Ambedkar as the law minister. What might have prompted Nehru to do so?

Ans: Dr. Ambedkar had talented skills in the field of law and legislation. He had a foresighte dvision of Social Justice. Above all, he had succeeded in his own campaigns against social injustice. From all points of view, he deserved a person to choose as the law minister.Therefore Nehru chose him as the first law minister of free India.

(Contd..........)

CHEMISTRY

II PUC : CHEMISTRY

Coordination Compound

Multiple Choice Questions

1.Fac-mer isomerism is associated with which one of the following complexes?
(a) $[M(AA)_2]$ (b) $[MA_3B_3]$
(c) $[M(AA)_3]$ (d) $[MA_4B_2]$
Ans:(b) $[MA_3B_3]$

2. A coordination complex's core atom/ion is also known as ________
a) Bronsted-Lowry acid b) Lewis base
c) Lewis acid d) Bronsted-Lowry base
Answer: c

3.The IUPAC name of complex ion $[Fe(CN)_6]^{3-}$ is
(a) Hexacyanidoiron(III)ion
(b) Hexacyanatoferrate (III)ion
(c) Hexacyanidoferrate (III)ion
(d) Tricyanoiron(III)ion
Ans:- (c) Hexacyanidoferrate (III)ion

4.The geometry and magnetic behaviour of the complex $[Ni(CO)_4]$ are
(a) Square planar and paramagnetic
(b) Tetrahedral and diamagnetic
(c) Square planar and diamagnetic
(d) Tetrahedral and paramagnetic
Ans:- (b) Tetrahedral and diamagnetic

5. Which of the following has a coordination number as a feature?
a) Coordination entity b) Ligand
c) Central atom d) Coordination compound
Answer: c

6.Which type of isomerism is shown by the complex compounds $[Co(NH_3)_5Br]SO_4$ and $[Co(NH_3)_5SO_4]Br$
(a) Ionisation (b) Optical
(c) Linkage (d) Coordination
Answer:(a) Ionisation

7.Which of the following is a hexadentate ligand?
(a) $EDTA^{4-}$ (b) $(COO)_2^{2-}$
(c) en (d) NH_3
Answer:(a) $EDTA^{4-}$

Answer the following

8. Aqueous copper sulphate solution (blue in colour) gives:
(i) a green precipitate with aqueous potassium fluoride and
(ii) a bright green solution with aqueous potassium chloride. Explain these experimental results.

Ans: The blue colour of the aqueous $CuSO_4$ solution is because of the presence of $[Cu(H_2O)_4]^{2+}$ ions.

(i) So when KF is added, H_2O ligands are replaced by F^- ligands which yield green-coloured $[CuF_4]^{2+}$ ions.

$$[Cu(H_2O)_4]^{2+} + 4F^- \rightarrow [CuF_4]^{2-} + 4H_2O$$

(ii) So when KCL is added, H_2O ligands are replaced by Cl^- ligands which yield bright green coloured $[CuCl_4]^{2+}$ ions.

$$[Cu(H_2O)_4]^{2+} + 4Cl^- \rightarrow [CuCl_4]^{2-} + 4H_2O$$

9. What is the coordination entity formed when an excess of aqueous KCN is added to an aqueous solution of copper sulphate? Why is it that no precipitate of copper sulphide is obtained when $H_2S(g)$ is passed through this solution?

Ans:

$$2[CuSO_4](aq) + 10KCN(aq) \rightarrow 2K_2[Cu(CN)_4](aq) + 2K_2SO_4(aq) + (CN)_2$$

Therefore, the coordination entity obtained in the above process is $K_2[Cu(CN)_4]$. As the above coordination entity is highly stable, it does not ionise to yield Cu^{2+} ions. Thus, no precipitate is obtained when hydrogen sulphide gas is bubbled through it.

10. Discuss the nature of bonding in the following coordination entities on the basis of valence bond theory:
(i) $[Fe(CN)_6]^{4-}$ (ii) $[FeF_6]^{3-}$
(iii) $[Co(C_2O_4)_3]^{3-}$ (iv) $[CoF_6]^{3-}$

Ans:
(i) $[Fe(CN)_6]^{4-}$
In this coordination complex, the oxidation state of Fe is +3.
Fe^{2+}: Electronic configuration is $3d^6$
Orbitals of Fe^{2+} ion:



Since CN^- is a strong field ligand, it causes the unpaired 3d electrons to pair up:



As there are six ligands around the central metal ion, the most practical hybridisation is d^2sp^3; d^2sp^3 hybridised orbitals of Fe^{2+} are:



6 electron pairs from CN^- ions take the place of the six hybrid d^2sp^3 orbitals.
Then,



(Contd.........)

ಅನುದಾನ ವಿಳಂಬ: ಶಾಸಕ ರಿಟ್

ಬಿಜೆಪಿ, ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ಹಣ ಬಿಡುಗಡೆ ಮಾಡದ ಸರ್ಕಾರ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಮತ್ತು ಬಿಜೆಪಿ ಶಾಸಕರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿಲ್ಲ' ಎಂದು ಆಕ್ಷೇಪಿಸಿ, ಕೋಲಾರ ಜಿಲ್ಲೆಯ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಕೆ.ವೆಂಕಟ ಶಿವಾರೆಡ್ಡಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತಂತೆ ರಿಟ್ ಅರ್ಜಿ ಸಲ್ಲಿಸಲಾಗಿದ್ದು ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. 'ಕ್ಷೇತ್ರದ ಅಭಿವೃದ್ಧಿಗಾಗಿ ಪದೇ ಪದೇ ಮನವಿ ಮಾಡಿದರೂ ಸರ್ಕಾರ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಇರುವ ಕ್ಷೇತ್ರಗಳಿಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಬದಲಿಗೆ, ಕಾಂಗ್ರೆಸ್ ಶಾಸಕರಿಗೆ ತಲಾ ₹50 ಕೋಟಿ ಬಿಡುಗಡೆ ಮಾಡಿದೆ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

'ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದರೂ ಈತನಕ ಹಣ ಬಿಡುಗಡೆ ಮಾಡಲಾಗಿಲ್ಲ. ಇದರಿಂದ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗುತ್ತಿದೆ. ಅಷ್ಟೇ ಅಲ್ಲ, ಇದು ಸರ್ಕಾರದ ತಾರತಮ್ಯ ಧೋರಣೆಯಾಗಿದೆ ಮತ್ತು ಸಂವಿಧಾನದ 14ನೇ ವಿಧಿಯ ಉಲ್ಲಂಘನೆಯೂ ಆಗಿದೆ' ಎಂದು ಆಕ್ಷೇಪಿಸಲಾಗಿದೆ.

ಅರ್ಜಿಯಲ್ಲಿ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸೇರಿದಂತೆ ಒಟ್ಟು ಐವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಹೈಕೋರ್ಟ್ ವಕೀಲ ರಾಹುಲ್ ಎಸ್.ರೆಡ್ಡಿ ಅರ್ಜಿದಾರರ ಪರ ವಕಾಲತ್ತು ವಹಿಸಿದ್ದಾರೆ.

ಕೃಷಿ ವಿವಿ ಲೆಕ್ಕ ಪರಿಶೋಧನೆಗೆ ಆದೇಶ: ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ 2018ರಿಂದ 2025ರವರೆಗೆ ನಡೆದಿರುವ ಎಲ್ಲ ಹಣಕಾಸು ವ್ಯವಹಾರಗಳ ಲೆಕ್ಕ ಪರಿಶೋಧನೆ ನಡೆಸುವಂತೆ ಕರ್ನಾಟಕ ಲೆಕ್ಕಪತ್ರ ಇಲಾಖೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಿ.ವಿಯ ಲೆಕ್ಕಪರಿಶೋಧನಾ ಸ್ಥಾನಕ್ಕೆ ಪೂಜಾ ದೊಡ್ಡಮನಿ ಅವರನ್ನು ನೇಮಕ ಮಾಡಿದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಶಿವಪುತ್ರ ಎಂ.ಹೊನ್ನಾಳಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕಂಬಳಕ್ಕೆ ನಿಯಮ ಸರ್ಕಾರದ ವಿವೇಚನೆ'

'ರಾಜ್ಯದ ಬೇರೆ ಕಡೆಗಳಲ್ಲಿ ಕಂಬಳ ಆಯೋಜನೆಗೆ ಸಂಬಂಧಿಸಿದಂತೆ ಕಾನೂನು ರೀತ್ಯಾ ರಾಜ್ಯ ಸರ್ಕಾರ ತೀರ್ಮಾನ ಕೈಗೊಳ್ಳಬಹುದು' ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

'ಪಿಲಿಕುಳ ಜೈವಿಕ ಪಾರ್ಕ್ ಸಮೀಪ ಕಂಬಳ ಓಟಕ್ಕೆ ಅವಕಾಶ ನೀಡಬಾರದು ಮತ್ತು ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಹೊರಗೂ ಕಂಬಳ ನಿಷೇಧಿಸಬೇಕು' ಎಂದು ಕೋರಿ 'ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್' (ಪೆಟಾ) ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಪಿಲಿಕುಳ ನಿಸರ್ಗಧಾಮವು ಜೈವಿಕ ಉದ್ಯಾನವನ ಎಂಬುದಾಗಿ ಮಾಸ್ಟರ್ ಪ್ಲಾನ್ ಯೋಜನೆ ಇದ್ದರೆ ಅಲ್ಲಿ ಕಂಬಳ ಆಯೋಜನೆಗೆ ಅವಕಾಶ ಇರುವುದಿಲ್ಲ. ಜೈವಿಕ ಉದ್ಯಾನವನ್ನು ಹಬ್ಬದ ಮೈದಾನವನ್ನಾಗಿ ಮಾಡಲಾಗದು. ಆದ್ದರಿಂದ, ಪಿಲಿಕುಳಕದ ವಾಸ್ತವ ಸ್ಥಿತಿಗತಿಯ ಬಗ್ಗೆ ಸರ್ಕಾರ ವಿವರಣೆ ನೀಡಬೇಕು. ಬಳಿಕವಷ್ಟೇ ಪಿಲಿಕುಳದಲ್ಲಿ ಕಂಬಳ ಆಯೋಜನೆಯ ವಿಷಯವನ್ನು ಪರಿಶೀಲಿಸಲಾಗುವುದು' ಎಂದು ನ್ಯಾಯಪೀಠ ಹೇಳಿದೆ. ವಿಚಾರಣೆಯನ್ನು ನವೆಂಬರ್ 11ಕ್ಕೆ ಮುಂದೂಡಲಾಗಿದೆ. ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮತ್ತು ಅರ್ಜಿದಾರ ಪೆಟಾ ಪರ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ವಾದ ಮಂಡಿಸಿದರು.

ಭವಾನಿ ರೇವಣ್ಣ ಅರ್ಜಿ ತಿರಸ್ಕೃತ

'ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯನ್ನು ಅಪಹರಣ ಮಾಡಿದ ಆರೋಪದಿಂದ ನಮ್ಮನ್ನು ಕೈಬಿಡಬೇಕು' ಎಂದು ಕೋರಿ ಪ್ರಜ್ವಲ್ ತಾಯಿ ಭವಾನಿ ರೇವಣ್ಣ ಮತ್ತು ಇನ್ನೊಬ್ಬ ಆರೋಪಿ ಕೆ.ಎ.ರಾಜಗೋಪಾಲ್ ಸಲ್ಲಿಸಿದ್ದ ಅರ್ಜಿಗಳನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ. 'ದೋಷಾರೋಪ ಪಟ್ಟಿ ಪರಿಶೀಲಿಸಿದಾಗ ಸಂತ್ರಸ್ತೆಯ ಅಪಹರಣದಲ್ಲಿ ಭವಾನಿ ರೇವಣ್ಣ ಮತ್ತು ರಾಜಗೋಪಾಲ್ ಪಾತ್ರದ ಬಗ್ಗೆ ಸಾಕಷ್ಟು ದಾಖಲೆಗಳು ಕಂಡು ಬಂದಿರುವ ಕಾರಣ ಇವರನ್ನು ಈ ಹಂತದಲ್ಲಿ ಆರೋಪ ಮುಕ್ತಗೊಳಿಸಲು ಸಾಧ್ಯವಿಲ್ಲ' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ನಂಜೇಗೌಡ ಆಯ್ಕೆ ಅಸಿಂಧು ಆದೇಶಕ್ಕೆ ತಡೆ

ಒಂದನೇ ಪುಟದಿಂದ...

ವಿಚಾರಣೆಯನ್ನು ನವೆಂಬರ್ 24ಕ್ಕೆ ಮುಂದೂಡಿದೆ. ಹೈಕೋರ್ಟ್ ಆದೇಶದ ಪ್ರಕಾರ, ಮತಗಳ ಮರುಎಣಿಕೆ ನಡೆಸಿ, ಫಲಿತಾಂಶದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಪೀಠ ನಿರ್ದೇಶನ ನೀಡಿದೆ. ಸುಪ್ರೀಂ ಕೋರ್ಟ್‌ನ ಅನುಮತಿಯಿಲ್ಲದೆ ಮರುಎಣಿಕೆಯ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸುವಂತಿಲ್ಲ ಎಂದು ಪೀಠ ತಾಕೀತು ಮಾಡಿದೆ.

ನಂಜೇಗೌಡ ಪರ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ವಾದ ಮಂಡಿಸಿದರು.

'ಮತ ಎಣಿಕೆ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆದಿಲ್ಲ. ಭಾರಿ ಅಕ್ರಮ ಎಸಗಲಾಗಿದೆ' ಎಂದು ಆರೋಪಿಸಿ ಪರಾಜಿತ ಅಭ್ಯರ್ಥಿ ಬಿಜೆಪಿಯ ಕೆ.ಎಸ್.ಮಂಜುನಾಥ್ ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ಏಕಸದಸ್ಯ ಪೀಠವು ನಂಜೇಗೌಡ ಆಯ್ಕೆಯನ್ನು ಅಸಿಂಧುಗೊಳಿಸಿತ್ತು.

'ಈ ಕ್ಷೇತ್ರದ ಮತಗಳನ್ನು ನಾಲ್ಕು ವಾರಗಳಲ್ಲಿ ಪುನಃ ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಬೇಕು. ಅದರಲ್ಲಿ ಯಾರು ಹೆಚ್ಚು ಮತಗಳಿಸಿದವರು ಎಂದು ಕಂಡುಬರುತ್ತದೆಯೋ ಅಂಥವರನ್ನು ಆಯ್ಕೆಯಾದ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ನ್ಯಾಯಪೀಠವು ಚುನಾವಣಾ ಆಯೋಗಕ್ಕೆ ಆದೇಶಿಸಿತ್ತು.

'ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲ 15 ಸ್ಪರ್ಧಿಗಳ ಏಜೆಂಟರುಗಳಿಗೆ ಮತ ಎಣಿಕೆ ಕೇಂದ್ರದಲ್ಲಿ ಸಮರ್ಪಕ ವ್ಯವಸ್ಥೆ ಮಾಡಿರಲಿಲ್ಲ. ಮತಗಳ ಎಣಿಕೆ ಒಂದೇ ಕೊಠಡಿಯಲ್ಲಿ ನಡೆಯಬೇಕಿತ್ತು. ಆದರೆ, ಎರಡು ಪ್ರತ್ಯೇಕ ಕೊಠಡಿಗಳಲ್ಲಿ ನಡೆದಿದೆ. ಈ ಮೂಲಕ ಜನಪ್ರಾತಿನಿಧ್ಯ ಕಾಯ್ದೆ-1951 ಮತ್ತು ಚುನಾವಣಾ ಆಯೋಗ ಪ್ರಕಟಿಸಿದ್ದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಆದ್ದರಿಂದ, ನಂಜೇಗೌಡ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಚುನಾವಣಾ ಆಯೋಗದ ಕ್ರಮವನ್ನು ರದ್ದುಪಡಿಸಬೇಕು. ಮತಗಳ ಮರು ಎಣಿಕೆಗೆ ನಿರ್ದೇಶಿಸಬೇಕು' ಎಂದು ಮಂಜುನಾಥ್ ಗೌಡ ಕೋರಿದ್ದರು.

ಸುಪ್ರಿಂ ಕೋರ್ಟ್‌ನಲ್ಲಿ ನನಗೆ ನ್ಯಾಯ ಸಿಕ್ಕಿದೆ. ಸಂತೋಷ, ತೃಪ್ತಿ ಆಗಿದೆ. ಮರು ಮತ ಎಣಿಕೆ ಬೇಡ ಎಂದು ನಾನು ಯಾವತ್ತೂ ಹೇಳಿಲ್ಲ. ಮರು ಎಣಿಕೆಯಲ್ಲೂ ನಾನು ಗೆಲ್ಲುತ್ತೇನೆ

ಕೆ.ವೈ. ನಂಜೇಗೌಡ

ಮರು ಮತ ಎಣಿಕೆ ಮಾಡಲು ಸುಪ್ರೀಂ ಕೋರ್ಟ್ ಆದೇಶ ಮಾಡಿದೆ. ಗೆಲುವಿನ ಅಂತರದ ಬಗ್ಗೆ ಅನುಮಾನ ಇತ್ತು. ಈ ಸಂಬಂಧ ದಾಖಲೆಗಳನ್ನು ಕೊಟ್ಟಿರಲಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ಜಯ ಸಿಗುವ ವಿಶ್ವಾಸ ಇದೆ.

ಕೆ.ಎಸ್.ಮಂಜುನಾಥ್ ಗೌಡ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೆಮ್ಮಿನ ಕಲುಷಿತ ಸಿರಪ್: ಎಚ್ಚರಿಕೆ

ಒಂದನೇ ಪುಟದಿಂದ...

'ರಾಷ್ಟ್ರೀಯ ನಿಯಂತ್ರಣ ಪ್ರಾಧಿಕಾರದ ಅಧಿಕಾರಿಗಳು (ಎನ್‌ಆರ್‌ಎ) ತಮ್ಮ ದೇಶದಲ್ಲಿ ಕೆಮ್ಮಿನ ಕಳಪೆ ಸಿರಪ್ ಮಾರಾಟ ಆಗುತ್ತಿಲ್ಲ ಎನ್ನುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು. ಎಲ್ಲಾದರೂ ಕಂಡುಬಂದರೆ ತಕ್ಷಣವೇ ಕ್ರಮ ವಹಿಸಬೇಕು' ಎಂದು ಡಬ್ಲ್ಯುಎಚ್‌ಒ ಹೇಳಿದೆ.

ಕೆಮ್ಮಿನ ಕಳಪೆ ಸಿರಪ್ ಮಾರಾಟ ಮತ್ತು ಇಂತಹ ಸಿರಪ್ ಸೇವನೆಯಿಂದ ಮಕ್ಕಳಲ್ಲಿ ಅಡ್ಡ ಪರಿಣಾಮಗಳು ಕಂಡುಬಂದರೆ ವೈದ್ಯರು, ಆರೋಗ್ಯ ಕಾರ್ಯಕರ್ತರು ಅದನ್ನು ತಕ್ಷಣ ರಾಷ್ಟ್ರೀಯ ಔಷಧ ವಿಜಿಲೆನ್ಸ್ ಕೇಂದ್ರ ಮತ್ತು ರಾಷ್ಟ್ರೀಯ ನಿಯಂತ್ರಣ ಪ್ರಾಧಿಕಾರದ ಗಮನಕ್ಕೆ ತರಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಕೆಮ್ಮಿನ ಕಳಪೆ ಸಿರಪ್ ಪೂರೈಕೆ ಜಾಲದ ಮೇಲೆ ಕಣ್ಗಾವಲು ಇರಿಸುವಂತೆ ಮತ್ತು ಇಂತಹ ಕಳಪೆ ಉತ್ಪನ್ನದಿಂದ ಭಾದಿತವಾಗಿರುವ ಪ್ರದೇಶಗಳಲ್ಲಿ ಅತೀವ ಶ್ರದ್ಧೆ ವಹಿಸುವಂತೆಯೂ ವಿಶ್ವ ಆರೋಗ್ಯ ಸಂಸ್ಥೆ ಭಾರತಕ್ಕೆ ಸೂಚಿಸಿದೆ.

ಸಿರಪ್‌ನಲ್ಲಿ 'ಡಿಇಜಿ' ವಿಷ

ಭಾರತದಲ್ಲಿ ಸ್ರೇಸನ್ ಫಾರ್ಮಾಸ್ಯುಟಿಕಲ್ಸ್, ರೆಡ್‌ನೆಕ್ಸ್ ಮತ್ತು ಶೇಪ್ ಫಾರ್ಮಾ ತಯಾರಿಸಿದ ಕೆಮ್ಮಿನ ಸಿರಪ್‌ಗಳಲ್ಲಿ ಡಿ- ಎಥಿಲೀನ್ ಗ್ಲೈಕಾಲ್ (ಡಿಇಜಿ) ಎಂಬ ವಿಷಕಾರಿ ಅಂಶ ಇದೆ ಎಂದು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣಾ ಸಂಸ್ಥೆ (ಸಿಡಿಎಸ್‌ಸಿಒ) ವಿಶ್ವ ಆರೋಗ್ಯ ಸಂಸ್ಥೆಗೆ ಅಕ್ಟೋಬರ್ 8ರಂದು ಸಲ್ಲಿಸಿದ ವರದಿಯಲ್ಲಿ ಹೇಳಿತ್ತು. ಡಬ್ಲ್ಯುಎಚ್‌ಒ ಕೂಡ ಇದನ್ನು ದೃಢಪಡಿಸಿತ್ತು. ಇದರ ಬೆನ್ನಲ್ಲೇ, ಈ ಸಿರಪ್‌ಗಳ ತಯಾರಿಕೆ ಮತ್ತು ಮಾರಾಟವನ್ನು ನಿಷೇಧಿಸಲಾಗಿತ್ತು. ಈ ಸಿರಪ್‌ಗಳನ್ನು ಭಾರತದಿಂದ ಬೇರೆಲ್ಲಿಗೂ ರಫ್ತು ಮಾಡುತ್ತಿಲ್ಲ ಎಂದು ಸಿಡಿಎಸ್‌ಸಿಒ ಹೇಳಿದೆ.

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು–01

ಹೆಚ್‌ಸಿಸಿ ಸಂ.8/2025 ದಿನಾಂಕ: 13.10.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಬೆಂಗಳೂರು ರಲ್ಲಿ ಸೈಬರ್ ವರ್ಕ್‌ಸ್ಟೇಷನ್ ಮತ್ತು ವಿವಿಧ ಸಾಫ್ಟ್‌ವೇರ್ ಗಳೊಂದಿಗೆ ಸೈಬರ್ ಫಾರೆನ್ಸಿಕ್ ಪ್ರಯೋಗಾಲಯ/ವಿಶೇಷ ಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ ಟೆಂಡರನ್ನು Karnataka Public Procurement Portal ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು ದಿನಾಂಕ: 29.10.2025 ರ 4:00 ಗಂಟೆಯೊಳಗೆ ಆಸಕ್ತರು upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/–
(ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಮತ್ತು ಸ್ವೀಕರಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/3250/ಎಂಎಎ/25–26

ಉನ್ನತ ಶಿಕ್ಷಣ ಇಲಾಖೆ

7ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ/405/ಯುಬಿವಿ/2025(ಭಾಗ–1) ದಿನಾಂಕ: 14.10.2025

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಇಲ್ಲಿಗೆ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾವಿಲಯಗಳ ಅಧಿನಿಯಮ 2000ರ ಪ್ರಕರಣ 14(2)ರ ಉಪಬಂಧಗಳನುಸಾರ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಇಲ್ಲಿಗೆ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ https://hed.karnataka.gov.in ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/– ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು)

ವಾಸಾಸಂಇ/ವಾಪ್ರ/ಜಿಎ/3237/2025–26

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಧಾರವಾಡ

ದೂರವಾಣಿ ಸಂಖ್ಯೆ:0836–2742221 Email: dszpdharwad@gmail.com

ನಂ: ಧಾಜಿಪಂ/ಆಡಳಿತ/ಸಿ–8/ಸಿಆರ್–/2025–26 ದಿನಾಂಕ: 13/10/2025

ಇ–ಟೆಂಡರ್ ಪ್ರಕಟಣೆ

ವಿಷಯ: 2025–26ನೇ ಸಾಲಿಗಾಗಿ ಜಿಲ್ಲಾ ಪಂಚಾಯತಿ ಧಾರವಾಡ ಕಾರ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯುವ ಬಗ್ಗೆ.

2025–26 ನೇ ಸಾಲಿಗಾಗಿ ಜಿಲ್ಲಾ ಪಂಚಾಯತಿ ಧಾರವಾಡ ಕಚೇರಿಗೆ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯಲು ಇ–ಟೆಂಡರ್ ಕರೆಯಲಾಗಿದೆ. ಟೆಂಡರ್‌ದಾರರು ವಿವರಗಳನ್ನು https://kppp.karnataka.gov.in ನಲ್ಲಿ ಪಡೆದು ಅಪ್ಲೋಡ್ ಮಾಡಬಹುದಾಗಿದೆ.

ಕ್ರ. ಸಂ	ವಿವರ	ಟೆಂಡರ್ ಪ್ರಾಧಿಕಾರ ಹಾಗೂ ಪ್ರಕಟಣಾ ವಿವರ
1	ಟೆಂಡರ್ ಕರೆದ ಪ್ರಾಧಿಕಾರದ ಹೆಸರು ಮತ್ತು ವಿಳಾಸ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ ಧಾರವಾಡ.
2	ಟೆಂಡರ್ ಸಲ್ಲಿಸಲು ಆರಂಭ ದಿನಾಂಕ	14/10/2025
3	ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ	29/10/2025
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	31/10/2025
5	ಟೆಂಡರ್ ತೆರೆಯುವ ಸ್ಥಳ	ಜಿಲ್ಲಾ ಪಂಚಾಯತ್ ಕಾರ್ಯಾಲಯ ಧಾರವಾಡ.
6	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ನಂತರ ತಿಳಿಸಲಾಗುವುದು

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಧಾರವಾಡ.

ವಾ.ಸಾ.ಇ/ಧಾರವಾಡ/760/ದೇಶಪಾಂಡೆಪಬ್ಲಿಸಿಟಿ/2025–26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ನಂ.2, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು, ಮಂಡ್ಯ ಜಿಲ್ಲೆ
ಇ–ಮೇಲ್ : vcdnmaddur@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :02/2025–26 ದಿ:10.10.2025
ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:02/2025–26 ದಿನಾಂಕ: 10.10.2025 ರಲ್ಲಿ ಒಟ್ಟು 03 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ 80.00 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ.99.00 ಲಕ್ಷ ರೂಪಾಯಿ)ಗಳಿಗೆ ಅರ್ಹ ಕೆಪಿಡಬ್ಲ್ಯೂಡಿ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ನಂ.2, ವಿ.ಸಿ.ವಿಭಾಗ, ಮದ್ದೂರು

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/495/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ : ಬೆಂಗಳೂರು

ಸಂ:ಕರಾಸಾ/ಕೆಂಬನಿ/ವಾ–4/623/2025–26 ದಿನಾಂಕ:13.10.2025

ಸ್ವಚ್ಛತಾ ಪರವಾನಗಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ–07/2025–26

ಕೆಂಪೇಗೌಡ ಬಸ್ ನಿಲ್ದಾಣ, ದೇವನಹಳ್ಳಿ ಟ್ರಂಪೆಟ್ ಬಸ್ ನಿಲ್ದಾಣ ಮತ್ತು ಶಾಂತಿನಗರದಲ್ಲಿರುವ ಕ್ರೀಡಾ ಸಂಕೀರ್ಣ ಸೇರಿದಂತೆ ಶೌಚಾಲಯಗಳ ನಿರ್ವಹಣೆ ಹಾಗೂ ಯಾಂತ್ರಿಕ / ಯಾಂತ್ರಿಕ ರಹಿತ ಸ್ವಚ್ಛತಾ ಕಾರ್ಯಕ್ಕಾಗಿ ಸ್ವಚ್ಛತಾ ಪರವಾನಗಿದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿ ಪೋರ್ಟಲ್) ಅಂತರ್ಜಾಲದ ಮೂಲಕ ಮೂರು ವರ್ಷಗಳ ಅವಧಿಗೆ ಹಾಗೂ ಅತೀ ಹೆಚ್ಚಿನ ಬಿಡ್ ನಿರೀಕ್ಷಿಸಿ, ಆಸಕ್ತಿದಾರರಿಂದ ದಿನಾಂಕ: 16.10.2025ರಿಂದ 05.11.2025 ರವರೆಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ https://ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು – 560 009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990550, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 9240214000 / 9240214001 / 8068948777 / 8046010000,
e-mail : support@eprochelpdesk.com

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ

ವಾಸಾಸಂಇ/ವಾಪ್ರ/ಜಿಎ/3256/2025–26

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080–22861611 / 22866302
ಇ–ಮೇಲ್: sedmatech@gmail.com ವೆಬ್‌ಸೈಟ್: www.municipaladmn.gov.in

ಸಂಖ್ಯೆ: 1436047 DMA/TECH/MISC/78/2024 ದಿನಾಂಕ: 13–10–2025

ಟೆಂಡರ್ ಪ್ರಕಟಣೆ

ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಧಿ (UIDF) ಯೋಜನೆಯಡಿ ವಿದ್ಯುತ್/ಅನಿಲ ಚಿತಾಗಾರಗಳನ್ನು ಸ್ಥಾಪಿಸಲು ಈ ಕೆಳಕಂಡಂತೆ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.

ಕ್ರ ಸಂ.	ಕಾಮಗಾರಿ ವಿವರ	ಯೋಜನೆ ಮೊತ್ತ (ರೂ. ಲಕ್ಷಗಳಲ್ಲಿ)
1	**Package-16:** Construction of Electric Crematorium at Nanjangudu CMC and Gauribidanur CMC under UIDF scheme. **(Indent No: DMA/2025-26/BD/WORK_INDENT43274/Call-3)**	800.00

ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಪ್ರಚುರಪಡಿಸಲಾಗಿದ್ದು, ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್/ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/–
ಅಧೀಕ್ಷಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು

ವಾಸಾಸಂಇ/ವಾ.ಪ್ರ/3273/ಸ್ಪ್ಯಾನ್/2025–26

ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ನಿಯಮಿತ

(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಜಂಟಿ ಉದ್ಯಮ)
(CIN: U74999KA2018PLC118247)
ನೊಂದಾಯಿತ ಕಚೇರಿ: ನಂ.49, 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. ದೂರವಾಣಿ ಸಂ. +91–80–22267383, ಇ–ಮೇಲ್: mdcbic24@gmail.com

ನಂ. ಸಿಬಿಐಸಿ–ಟಿಐಟಿಎಲ್/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–04/2142/2025–26 ದಿನಾಂಕ: 14.10.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಇಪಿಸಿ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : EPC ಆಧಾರದ ಮೇಲೆ ಚೆನ್ನೈ ಬೆಂಗಳೂರು ಕೈಗಾರಿಕಾ ಕಾರಿಡಾರ್ (CBIC) ಅಡಿಯಲ್ಲಿ ತುಮಕೂರು ನೋಡ್ ಹಂತ–ಎ ರಲ್ಲಿ (ಮೂಲಸೌಕರ್ಯ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡ ನಂತರ) ನಾಲ್ಕು ವರ್ಷಗಳ ದೋಷ ಹೊಣೆಗಾರಿಕೆ ಅವಧಿಯೊಂದಿಗೆ ಅಗತ್ಯವಿರುವ ಎತ್ತರದವರೆಗೆ ಮಾರ್ಗ ಹಕ್ಕು (ROW) ಅಂಚಿನಲ್ಲಿ ಉದ್ದಕ್ಕೂ ತಡೆಗೋಡೆಯ ವಿನ್ಯಾಸ ಮತ್ತು ನಿರ್ಮಾಣ ಮಾಡುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31.10.2025 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು, ಸಿಬಿಐಸಿ–ಟಿಐಟಿಎಲ್

DIPR/CP/3271/Zen/2025-26

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶೇಷ ವಿಭಾಗ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 10/2025–26 ದಿನಾಂಕ : 13–10–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2025–26 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 01 ಸಂಖ್ಯೆಯ ಅಂದಾಜು ಮೊತ್ತ ರೂ. 200.00 ಲಕ್ಷದ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 16–10–2025 ರಿಂದ 03–11–2025 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 03–11–2025 ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸುವುದು. 3) ಪೂರ್ವಭಾವಿ ಸಭೆಯ ದಿನಾಂಕ : 27–10–2025 ರ ಬೆಳಿಗ್ಗೆ 11.30 ಗಂಟೆಗೆ, 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 04–11–2025 ರ ಸಂಜೆ 4.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ರಾಮನಗರ/387/ಮಣಿಪಾಲ್/2025–26

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560 001. ದೂರವಾಣಿ : 080–22867172/22866302
ಫ್ಯಾಕ್ಸ್: 080–22863576/22861665 ಇ–ಮೇಲ್: dmablr@gmail.com
ವೆಬ್‌ಸೈಟ್: www.municipaladmn.gov.in

ನಂ: 1472186/DMA/DEV/AMRT/44/2024 ದಿನಾಂಕ : 14.10.2025

ಅಧಿಸೂಚನೆ

ಪೌರಾಡಳಿತ ನಿರ್ದೇಶನಾಲಯ ಈ ಕೆಳಗಿನ ಕೆಲಸಕ್ಕಾಗಿ ಸೂಕ್ತ ಕ್ರೆಡಿಟ್ ರೇಟಿಂಗ್ ಏಜೆನ್ಸಿರವರನ್ನು ಆಯ್ಕೆ ಮಾಡಲು ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

Sl. No.	Notification No.	Description of work
1	DMA/2025-26/SE5176/Call 3	Consulting Services for Carrying out Credit Rating for 36 ULBs in Package 1 (South)

ಕ್ಯಾಲೆಂಡರ್: 1) ಬಿಡ್ ಡಾಕ್ಯುಮೆಂಟ್‌ಗಳನ್ನು ಪ್ರಕಟಿಸುವ ದಿನಾಂಕ: 14.10.2025. 2) ಪ್ರೀ–ಬಿಡ್ ಮೀಟಿಂಗ್: 17.10.2025. 3) ಪ್ರಸ್ತಾವನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 28.10.2025. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29.10.2025. 5) ಕಾರ್ಯ ವಿಧಾನದ ಪ್ರಸ್ತುತಿ (Presentation on Approach and Methodology): 31.10.2025. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಆಯ್ಕೆಯಾದವರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

ವೆಬ್‌ಸೈಟ್ ಲಿಂಕ್ – https://kppp.karnataka.gov.in
ಸೂಚನೆ: ಹೆಚ್ಚುವರಿ ಮಾಹಿತಿಗೆ ಸಂಪರ್ಕಿಸುವುದು (ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು)

ಜಂಟಿ ನಿರ್ದೇಶಕರು(ಅಭಿವೃದ್ಧಿ),
ಪೌರಾಡಳಿತ ನಿರ್ದೇಶನಾಲಯ, 10ನೇ ಮಹಡಿ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು–560 001. ದೂರವಾಣಿ ಸಂಖ್ಯೆ 080–22863731
ಇ–ಮೇಲ್: dmablr.jdd1@gmail.com

ಸಹಿ/–
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

ವಾಸಾಸಂಇ/ವಾ.ಪ್ರ/3270/ಎಂಎಎ/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2025–26/1130
ದಿನಾಂಕ 09–10–2025

ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024–25 ನೇ ಸಾಲಿನ 5054 ಮಳೆ ಪರಿಹಾರ ಕಾರ್ಯಕ್ರಮ ಯೋಜನೆ, 2024–25 ನೇ ಸಾಲಿನ ಅಲ್ಪಸಖ್ಯಾಂತರ ಕಲ್ಯಾಣ ಇಲಾಖೆ ಶಾದಿಮಹಲ್ ಕಟ್ಟಡ ನಿರ್ಮಾಣ, 2024–25 ನೇ ಸಾಲಿನ ರಾಜ್ಯವಲಯ ಯೋಜನೆಯಡಿ ಸರ್ಕಾರಿ ಶಾಲಾ ಕೊಠಡಿ ಮೇಜರ್ ಮತ್ತು ಮೈನರ್ ದುರಸ್ತಿ 4202–01–201–1–08–132/423, 2024–25 ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಕೆ.ಪಿ.ಎಸ್ ಶಾಲೆ ದುರಸ್ಥಿ ಮತ್ತು 2024–25 ನೇ ಕೆ.ಕೆ.ಆರ್.ಡಿ.ಬಿ ಯೋಜನೆ ಒಟ್ಟು 05 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/RD/WORK_INDENT19364
2.RDPR/2025-26/BD/WORK_INDENT19556
3.RDPR/2025-26/BD/WORK_INDENT19554
4.RDPR/2025-26/BD/WORK_INDENT19553
5.RDPR/2025-26/BD/WORK_INDENT19560

ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 09–10–2025 ರಿಂದ ದಿನಾಂಕ 24–10–2025 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 24–10–2025 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 27–10–2025 ರಂದು ಬೆಳ್ಳಗೆ 10.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯುನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/519/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂ:08539–220054.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/3533
ದಿ: 14.10.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ 18 ಟೆಂಡರ ಕಾಮಗಾರಿಗಳನ್ನು ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. 15.00 ಹಾಗೂ ಗರಿಷ್ಠ ಅಂದಾಜು ಮೊತ್ತ. ರೂ 935.00 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 16–10–2025 ರಿಂದ ದಿನಾಂಕ: 27–10–2025 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ 21–10–2025 ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 29–10–2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 31–10–2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆಪಿಪಿ" ವೆಬ್‌ಸೈಟ್ https://kppp.karnataka.gov.in/ ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ಡಿಐಪಿಆರ್/ಕೊಪ್ಪಳ/391/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು

ಸಂ: ಕರಾಸಾ/ಕೆಂಬನಿ/ವಾ–4/625/2025–26 ದಿನಾಂಕ: 13/10/2025

ಸ್ವಚ್ಛತಾ ಪರವಾನಗಿ
ಇ–ಟೆಂಡರ್ ಪ್ರಕಟಣೆ ಸಂಖ್ಯೆ–08/2025–26

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯ ಮೈಸೂರು ರಸ್ತೆ ಬಸ್ ನಿಲ್ದಾಣದ ಯಾಂತ್ರಿಕ / ಯಾಂತ್ರಿಕ ರಹಿತ ಸ್ವಚ್ಛತಾ ಕಾರ್ಯಕ್ಕಾಗಿ ಶೌಚಾಲಯಗಳ ನಿರ್ವಹಣೆಗೆ ಸ್ವಚ್ಛತಾ ಪರವಾನಗಿದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆ.ಪಿ.ಪಿ ಪೋರ್ಟಲ್) ಅಂತರ್ಜಾಲದ ಮೂಲಕ ಮೂರು ವರ್ಷಗಳ ಅವಧಿಗೆ ಹಾಗೂ ಅತೀ ಹೆಚ್ಚಿನ ಬಿಡ್ ನಿರೀಕ್ಷಿಸಿ ಆಸಕ್ತಿದಾರರಿಂದ ದಿನಾಂಕ: 16.10.2025ರಿಂದ 05.11.2025ರವರೆಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು – 560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990550, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 9240214000 / 9240214001 / 8068948777 / 8046010000. support@eprochelpdesk.com

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂ.ಬ.ನಿ ವಿಭಾಗ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3262/ಆಕಾರ್/2025–26

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210

ಸಂ: ಕಾಅ/ಕವಿ.1/ಎಇ–4/2025–26/46 ದಿನಾಂಕ: 10.10.2025

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಸೂಚಿತ ಸ್ಥಳಗಳಲ್ಲಿ ಭದ್ರತಾ ವ್ಯವಸ್ಥೆ ಒದಗಿಸುವುದು, ಬಂಗಲೆಯ ವಾರ್ಷಿಕ ನಿರ್ವಹಣೆ, ಬೋರ್‌ವೆಲ್, ಗಾರ್ಡನ್ ಪಂಪ್‌ಗಳು, ಸಂಪ್ ಟ್ಯಾಂಕ್‌ಗಳು, ಬೂಸ್ಟರ್ ಪಂಪ್‌ಗಳ ನಿರ್ವಹಣೆ, ಹೊರಾಂಗಣಗಳನ್ನು ಗುಡಿಸುವುದು, ರಸ್ತೆಗಳ ಕ್ಲೀನಿಂಗ್, ಪೇಂಟಿಂಗ್, ಪಾಲಿಷಿಂಗ್ ಒದಗಿಸುವುದು, ಶೌಚಾಲಯಗಳ ದುರಸ್ತಿ, ಪಾರ್ಟೀಷನ್ ಒದಗಿಸುವುದು, ಸ್ಯಾನಿಟರಿಯ ವಾರ್ಷಿಕ ನಿರ್ವಹಣೆ, ನೀರು ಸರಬರಾಜು, ಕಾರ್ಪೆಂಟರಿ, ಆರ್ನಮೆಂಟಲ್ ಸ್ಟೋನ್ ವರ್ಕ್, ಆರ್‌ಸಿಸಿ ಪೆಡೇಸ್ಟಾಲ್, ಫ್ಲಾಟ್‌ಫಾರಂ, ಪಾಥ್‌ವೇ ಒದಗಿಸುವುದು, ಅಗತ್ಯ ಮಾನವಶಕ್ತಿ ಸೇವೆಗಳನ್ನು ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ **ಒಟ್ಟು 11 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.1.02 ಲಕ್ಷಗಳು, ಗರಿಷ್ಠ ರೂ.112.86 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.2,600/-, ಗರಿಷ್ಠ ರೂ.2,00,000/-.** ಪ್ರತೀ ಕಾಮಗಾರಿಗಳ ದಸ್ತಾವೇಜು ಬೆಲೆ: ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಲಾವಧಿ: **3 ರಿಂದ 10 ತಿಂಗಳು.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **ಸಂ. 1,2,3,5,6,7,8 ಮತ್ತು 9ನೇ ಕೆಲಸಕ್ಕೆ 18.10.2025, ಸಂ.4ನೇ ಕೆಲಸಕ್ಕೆ 27.10.2025, ಮತ್ತು ಸಂ.10 ಮತ್ತು 11ನೇ ಕೆಲಸಕ್ಕೆ 21.10.2025, ಸಂಜೆ 4.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಅಂದಾಜು ಮೊತ್ತ, ಇಎಂಡಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/3266/ಕೆಎಸ್‌ಎಂಸಿಎ/2025–26

ಅಮೆರಿಕ, ಕೆನಡಾ ಪ್ರಜೆಗಳಿಗೆ ವಂಚನೆ

ಡಿಜಿಟಲ್ ಅರೆಸ್ಟ್: ನಕಲಿ ಕಾಲ್ ಸೆಂಟರ್ ಕಚೇರಿ ಸ್ಥಾಪಿಸಿ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲ್ ಸೆಂಟರ್ ಕಚೇರಿ ತೆರೆದು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಅಮೆರಿಕ, ಕೆನಡಾ ದೇಶದ ಪ್ರಜೆಗಳನ್ನು ವಂಚಿಸುತ್ತಿದ್ದ ಜಾಲವನ್ನು ಭೇದಿಸಿರುವ ಎಚ್.ಎಸ್.ಆರ್. ಲೇಔಟ್ ಠಾಣೆ ಪೊಲೀಸರು, ವಿವಿಧ ರಾಜ್ಯಗಳ 16 ಮಂದಿಯನ್ನು ಬಂಧಿಸಿದ್ದಾರೆ.

ಗುಜರಾತ್‌ನ ಮಾಧೇವ್ ಸಿಂಗ್ ರಾಥೋಡ್, ಮಹಾರಾಷ್ಟ್ರದ ಫ್ರಾನ್ಸಿಸ್ ಅಂಥೋನಿ, ಕಾರ್ತಿಕ್ ರಾಜು, ಅರವಿಂದ್ ಪೂಜಾರಿ, ರೋಹನ್, ರಿಷಿತ್ ರಮೇಶ್, ಇಂದರ್ ಲಾಲ್ಮನಿ, ಮುಂಬೈನ ಸುನಿಲ್ ನಾಯ್ಡು, ಗುರು ಪ್ರಸನ್ನ ಆಚಾರ್ಯ, ಮೇಘಾಲಯದ ಮಿನೋಟ್ ಕಂಕೈ, ಫಣಿ ಲೇಭಾ, ರೆಮಿಸನ್ ಬಾಮನ್, ಎಲ್ವಿಬಾ ಮೇರಿ, ಒಡಿಶಾದ ರಾಕೇಶ್ ಕುಮಾರ್ ಸಿಂಗ್, ಮಧ್ಯಪ್ರದೇಶದ ರಾಮಕೃಷ್ಣ ಸೋನಿ ಹಾಗೂ ಪಶ್ಚಿಮ ಬಂಗಾಳದ ಪ್ರಿಯಾಂಕಾ ಗುರುಂಗ್ (24) ಎಂಬುವರನ್ನು ಬಂಧಿಸಲಾಗಿದೆ.

ಪ್ರಕರಣ ಸಂಬಂಧ 41 ಕಂಪ್ಯೂಟರ್, 40ಕ್ಕೂ ಹೆಚ್ಚು ವಿಜಿಎಸ್ ಕೇಬಲ್, 82 ಪವರ್ ಕೇಬಲ್, 21 ಲ್ಯಾನ್ ಕೇಬಲ್, 2 ದಾಖಲಾತಿ ಪುಸ್ತಕ, 4 ನೋಟ್ ಪುಸ್ತಕ, 25 ಮೊಬೈಲ್ ಫೋನ್, ಗುರುತಿನ ಚೀಟಿ, 1 ಕಂಪ್ಯೂಟರ್ ಡಿವೈಸ್, 4 ಡಿಲಿಂಕ್ ಸ್ವೀಚ್, 4 ರೂಟರ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ವಶಕ್ಕೆ ಪಡೆಯಲಾಗಿದೆ.

ಸೈಬರ್ ಅಪರಾಧ ಕೃತ್ಯಕ್ಕಾಗಿ ಠಾಣಾ ವ್ಯಾಪ್ತಿಯಲ್ಲಿ 'ಸಿಬಿಟ್ಸ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್' ಎಂಬ ನಕಲಿ ಕಂಪನಿ ತೆರೆಯಲಾಗಿತ್ತು. ಕಂಪನಿಯಲ್ಲಿ ಹೊರ ರಾಜ್ಯದವರು ಕೆಲಸ ಮಾಡುತ್ತಿದ್ದರು. ಉದ್ಯೋಗಿಗಳಿಗೆ ಎಚ್.ಎಸ್.ಆರ್. ಲೇಔಟ್ ಮತ್ತು ಬಿಟಿಎಂ ಲೇಔಟ್‌ಗಳಲ್ಲಿ ವಾಸಕ್ಕೆ ಮನೆ, ಊಟದ ವ್ಯವಸ್ಥೆ ಮಾಡಲಾಗಿತ್ತು. ಇಂಟರ್ ನೆಟ್ ಮೂಲಕ ಕರೆ ಮಾಡಿ ಹೇಗೆ ವಂಚನೆ ಮಾಡಬೇಕು ಎಂಬುದರ ಕುರಿತು ಮೂರು ವಾರ ತರಬೇತಿ ನೀಡಲಾಗಿತ್ತು ಎಂದು ಪೊಲೀಸರು ತಿಳಿಸಿದರು.

ವಿದೇಶಿ ಪ್ರಜೆಗಳ ಬಗ್ಗೆ ಆನ್‌ಲೈನ್‌ಲ್ಲಿ ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ನಂಬರ್ ಪಡೆದುಕೊಂಡು, ಅವರಿಗೆ ಕರೆ ಮಾಡಿ, 'ನಿಮ್ಮ ಹೆಸರಿನಲ್ಲಿ ಮಾದಕ ವಸ್ತು ಸಾಗಣೆ ಹಾಗೂ ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ' ಎಂದು ಬೆದರಿಸುತ್ತಿದ್ದರು. ತನಿಖಾ ಸಂಸ್ಥೆ ಹಾಗೂ ಪೊಲೀಸ್ ಅಧಿಕಾರಿಗಳೆಂದು ಹೇಳಿ, ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು. ಕೆಲವರಿಗೆ ಸಹಾಯ ಮಾಡುವ ನೆಪದಲ್ಲಿ ಅವರ ಖಾತೆಯಲ್ಲಿದ್ದ ಹಣವನ್ನು ತನಿಖಾ ಸಂಸ್ಥೆ ಬ್ಯಾಂಕ್ ಖಾತೆಗೆ ಜಮೆ ಮಾಡಿ, ಪುನಃ ವರ್ಗಾವಣೆ ಮಾಡುವ ಭರವಸೆ ನೀಡಿ ವಂಚಿಸಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ಸಂಬಂಧ ವಂಚನೆಗೆ ಒಳಗಾದವರು ಈವರೆಗೂ ದೂರು ನೀಡಿಲ್ಲ. ಇವರಿಗೆ ತರಬೇತಿ ನೀಡಿದವರು ಯಾರು? ಕಚೇರಿಯ ಮಾಲೀಕ ಯಾರು? ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಆರೋಪಿಗಳಿಂದ ವಶಪಡಿಸಿಕೊಂಡಿರುವ ಎಲೆಕ್ಟ್ರಾನಿಕ್ಸ್ ಸಾಧನಗಳು

ಸೈಬರ್ ವಂಚಕರ ಜಾಲ ದೊಡ್ಡ ಮಟ್ಟದಲ್ಲಿ ವಿಸ್ತರಣೆಯಾಗಿದೆ. ತನಿಖೆ ಕೈಗೊಳ್ಳಲು ವಿಶೇಷ ತಂಡ ರಚನೆ ಮಾಡಲಾಗಿದೆ. ಮೂಲ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ

ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಸಿ.ಎಂ, ಡಿಸಿಎಂ ನಿವಾಸ ಸ್ಫೋಟಿಸುವ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ .ಶಿವಕುಮಾರ್ ಅವರ ನಿವಾಸಗಳನ್ನು ಸ್ಫೋಟಿಸುವುದಾಗಿ ತಮಿಳುನಾಡು ಡಿಜಿ-ಐಜಿಪಿ ಕಚೇರಿಗೆ ಇ-ಮೇಲ್ ಮೂಲಕ ಬೆದರಿಕೆ ಹಾಕಿರುವ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ಟೋಬರ್ 11ರಂದು ತಮಿಳುನಾಡಿನ ಡಿಜಿ-ಐಜಿಪಿ ಅವರ ಅಧಿಕೃತ ಇ-ಮೇಲ್ ವಿಳಾಸಕ್ಕೆ ashwinshekher@outlook.com ಎಂಬ ವಿಳಾಸದಿಂದ ಕರ್ನಾಟಕದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಮನೆಯಲ್ಲಿ ಐಇಡಿ ಮತ್ತು ಆರ್‌ಡಿಎಕ್ಸ್ ಬಾಂಬ್ ಇಟ್ಟಿದ್ದು, ಸ್ಫೋಟಿಸಲಾಗುತ್ತದೆ ಎಂದು ಸಂದೇಶ ಬಂದಿತ್ತು.

ಕೂಡಲೇ ಕರ್ನಾಟಕ ಡಿಜಿಪಿ ಕಚೇರಿಗೆ ಮಾಹಿತಿ ರವಾನೆ ಮಾಡಲಾಗಿದ್ದು, ಬಳಿಕ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರ ಮನೆಗಳನ್ನು ತಪಾಸಣೆ ನಡೆಸಲಾಗಿದೆ. ಆದರೆ, ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪ್ರಾಥಮಿಕ ತನಿಖೆಯಲ್ಲಿ ಸಂದೇಶ ಕಳುಹಿಸಿದ ವ್ಯಕ್ತಿ ತಮಿಳುನಾಡು ಮೂಲದವನು ಎಂಬುದು ಗೊತ್ತಾಗಿದೆ. ಆತನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 351(4) (ಕ್ರಿಮಿನಲ್ ಬೆದರಿಕೆ) ಮತ್ತು 353(1) (ಬಿ) (ಸಾರ್ವಜನಿಕ ಕಿಡಿಗೇಡಿತನಕ್ಕೆ ಕಾರಣವಾಗುವ ಹೇಳಿಕೆಗಳು) ಅಡಿಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಿಂದ ಆಯ ತಪ್ಪಿ ಬಿದ್ದು ಕಾರ್ಮಿಕ ಮೃತಪಟ್ಟಿರುವ ಘಟನೆ ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಸ್ಸಾಂ ಮೂಲದ ಪ್ರಬೀನ್ ದೇಬ್ ಬರ್ಮಾನ್ (24) ಮೃತರು.

ಮೃತನ ಸಹೋದರ ನಯಾಮ್ ದೇಬ್ ಬರ್ಮಾನ್ ದೂರಿನ ಮೇರೆಗೆ ಕೆಂಗೇರಿ ಠಾಣೆ ಪೊಲೀಸರು, ವಿ2 ವಜ್ರ ಎಲಿಗೆನ್ಸ್ ಅಪಾರ್ಟ್‌ಮೆಂಟ್‌ನ ನಿರ್ಮಾಣ ಹಂತದ ಕಟ್ಟಡದ ಸೆಂಟ್ರಿಂಗ್ ಮೇಸ್ತ್ರಿ ಬಾದಮ್ ಬರ್ಮಾನ್, ಸೆಂಟ್ರಿಂಗ್ ಮಾಲೀಕ ಮಂಜುನಾಥ್, ವಿ2 ಹೋಲ್ಡಿಂಗ್ ಹೌಸಿಂಗ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಚೌಡರೆಡ್ಡಿ, ವೆಂಕಟರಮಣರೆಡ್ಡಿ ಹಾಗೂ ಇತರರ ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೂರು ತಿಂಗಳ ಹಿಂದಷ್ಟೇ ಸಹೋದರ ನಯಾಮ್ ದೇಬ್ ಜತೆ ನಗರಕ್ಕೆ ಬಂದಿದ್ದ ಪ್ರಬೀನ್ ದೇಬ್ ಬರ್ಮಾನ್, ಉತ್ತರಹಳ್ಳಿ ರಸ್ತೆ ಅರೋಹಿ ಆಸ್ಪತ್ರೆಯ ಪಕ್ಕ ನಿರ್ಮಾಣ ಮಾಡುತ್ತಿದ್ದ ವಿ2 ವಜ್ರ ಎಲಿಗೆನ್ಸ್ ಅಪಾರ್ಟ್‌ಮೆಂಟ್‌ನಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ. ಪಕ್ಕದ ಶೆಡ್‌ನಲ್ಲಿ ಸಹೋದರರು ವಾಸವಾಗಿದ್ದರು. ಅ.13ರಂದು ಬೆಳಿಗ್ಗೆ 9 ಗಂಟೆಗೆ ಕೆಲಸ ಮಾಡುವಾಗ 6ನೇ ಮಹಡಿಯಿಂದ ಬಿದ್ದು ಅಸುನೀಗಿದ್ದಾರೆ ಎಂದು ಪೊಲೀಸರು ಹೇಳಿದರು.

ಮೊಬೈಲ್ ರಿಚಾರ್ಜ್ ಮಾಡಿಸದ ಸಿಟ್ಟಿಗೆ ಆತ್ಮಹತ್ಯೆ

ಬೆಂಗಳೂರು: ಮೊಬೈಲ್ ರಿಚಾರ್ಜ್ ಮಾಡಿಸಲಿಲ್ಲ ಎಂಬ ಕಾರಣಕ್ಕೆ ಪತಿಯ ಮೇಲೆ ಕೋಪಗೊಂಡು ಪತ್ನಿ ಮನೆಯ ಮೂರನೇ ಮಹಡಿಯಿಂದ ಕಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಉತ್ತರ ಪ್ರದೇಶದ ಮೂಲದ ಶಿಖಾ ದೇವಿ (28) ಮೃತ ಮಹಿಳೆ. 2019ರಲ್ಲಿ ಸಂದೀಪ್ ಕುಮಾರ್ ಅವರನ್ನು ಶಿಖಾದೇವಿ ಮದುವೆಯಾಗಿದ್ದು, ಎರಡು ವರ್ಷದ ಮಗನ ಜತೆ ದಂಪತಿ ಕೆಂಗೇರಿಯಲ್ಲಿ ವಾಸವಿದ್ದರು.

ಸಂದೀಪ್ ಕುಮಾರ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಭಾನುವಾರ ಸಂಜೆ ತನ್ನ ಮೊಬೈಲ್ ಕರೆನ್ಸಿ ಖಾಲಿಯಾಗಿದ್ದು, ರಿಚಾರ್ಜ್ ಮಾಡಿಸುವಂತೆ ಪತಿಯನ್ನು ಕೇಳಿದ್ದರು. ಆದರೆ, ಸಂದೀಪ್ ನಿರಾಕರಿಸಿದ್ದರು. ಈ ವೇಳೆ ಪತಿ ಮೇಲೆ ಕೋಪಗೊಂಡು, ಮೊಬೈಲ್ ಮನೆಯಲ್ಲೇ ಬಿಸಾಡಿ 3ನೇ ಮಹಡಿಯಿಂದ ಕೆಳಗೆ ಹಾರಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಪತ್ನಿಯನ್ನು ಆಸ್ಪತ್ರೆಗೆ ಕೊಂಡೊಯ್ದರೂ ಮಾರ್ಗಮಧ್ಯೆ ಅಸುನೀಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಪೊಲೀಸರಿಗೆ ಮಾಹಿತಿ ನೀಡಿರುವ ಶಿಖಾ ಅವರ ತಂದೆ ಅನಿಲ್ ಕುಮಾರ್ ತ್ರಿಪಾಠಿ, 'ದಂಪತಿ ಈ ಹಿಂದೆ ಜಗಳವಾಡಿರಲಿಲ್ಲ. ಸಾವಿನ ಹಿಂದೆ ಯಾವುದೇ ಅನುಮಾನವಿಲ್ಲ' ಎಂದು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ

ಬೆಂಗಳೂರು, 19 ಸೆಪ್ಟೆಂಬರ್ 2025

S. O. 4246(E) – ರೈಲ್ವೆ ಕಾಯ್ದೆ 1989 (1989ರ 24) ರ ಕಲಂ 20ಇ ರ ಉಪಕಲಂ (1) ರಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ, ತುಮಕೂರು ರವರು ವರದಿಯನ್ನು ಸಲ್ಲಿಸಿರುವಂತೆ, ರೈಲ್ವೆ ಕಾಯ್ದೆ–1989 ರ ಕಲಂ 20ಎ ರಲ್ಲಿನ ಉಪಕಲಂ(1) ರ ಅಧಿಸೂಚನೆ ಸಂಖ್ಯೆ 2203(ಇ) ದಿನಾಂಕ: 15.05.2025 ರಂತೆ ತಯಾರಿಸಿರುವ ರ ಅಧಿಸೂಚನೆಯಲ್ಲಿ ವಿವರಿಸಿರುವಂತೆ ಎಲ್.ಸಿ. 35 ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುವುದು.

ಯಾವುದೇ ವ್ಯಕ್ತಿಯು ಸದರಿ ಅಧಿಸೂಚನೆಗೆ ಸಂಬಂಧಿಸಿದಂತೆ ರೈಲ್ವೆ ಕಾಯ್ದೆ– 1989 ರ ಕಲಂ 20ಎ ರಡಿ ಹೊರಡಿಸಿರುವ ಅಧಿಸೂಚನೆಯನ್ವಯ ಆಕ್ಷೇಪಣೆ ಸಲ್ಲಿಸಲು 30 ದಿನಗಳು ಕಾಲಾವಕಾಶವಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ, ತುಮಕೂರು–ರಾಯದುರ್ಗ ಹಾಗೂ ತುಮಕೂರು–ದಾವಣಗೆರೆ ರೈಲ್ವೆ ರವರಿಗೆ ಎಲ್.ಸಿ 35ರಲ್ಲಿ ಸಂಬಂಧಿಸಿದ ಆಕ್ಷೇಪಣೆಗಳನ್ನು ಲಿಖಿತ ಮೂಲಕವಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಸಲ್ಲಿಸುವ ಅವಕಾಶವಿದ್ದು, ಸದರಿ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯು ಅನುಮತಿಸುವ ಹಾಗೂ ನಿರಾಕರಿಸಬಹುದು.

ಸಕ್ಷಮ ಪ್ರಾಧಿಕಾರವು ರೈಲ್ವೆ ಕಾಯ್ದೆ–1989 ರ ಕಲಂ 20ಡಿ(2) ರಂತೆ ನೀಡಿರುವ ಆದೇಶವು ಅಂತಿಮವಾಗಿರುತ್ತದೆ.

ದಿನಾಂಕ: 25.07.2025 ರಂದು ಸಕ್ಷಮ ಪ್ರಾಧಿಕಾರದಿಂದ 20 ಡಿ ನೋಟೀಸುಗಳನ್ನು ನೀಡಿರುವ ಸಂಬಂಧ ಸ್ವೀಕೃತವಾದ ಆಕ್ಷೇಪಣೆಗಳಿಗೆ ವಿಚಾರಣೆ ನಡೆಸಲಾಯಿತು ಹಾಗೂ ಕೋರಿಕೆ ಇಲಾಖೆಯವರು ಸಲ್ಲಿಸಿರುವ ವರದಿಯಂತೆ ಅಲೈನ್ಮೆಂಟ್ ಬದಲಾವಣೆಗೆ ಭೂಮಾಲೀಕರಿಂದ ಒಪ್ಪಿಗೆ ಪಡೆದು ವಿಸ್ತೀರ್ಣ ಬದಲಾವಣೆ ಮಾಡಲಾಗಿರುತ್ತದೆ.

ಈ ಅಧಿಸೂಚನೆಗೆ ಸಂಬಂಧಿಸಿದ ನಕ್ಷೆ ಹಾಗೂ ಜಮೀನಿನ ವಿವರಗಳನ್ನು ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು–ರಾಯದುರ್ಗ ಹಾಗೂ ತುಮಕೂರು–ದಾವಣಗೆರೆ ರೈಲ್ವೆ ಯೋಜನೆ, ತುಮಕೂರು ರವರ ಕಾರ್ಯಾಲಯದಲ್ಲಿ ಪರಿಶೀಲಿಸಬಹುದು.

ಅನುಸೂಚಿ

ಲೆವೆಲ್ ಕ್ರಾಸಿಂಗ್ ಸಂಖ್ಯೆ 35ರಲ್ಲಿ ದ್ವಿಪಥ ಮಾರ್ಗದ ಮೇಲೇತುವೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ.

ವಿವರಣಾ ಪಟ್ಟಿ

ಜಿಲ್ಲೆ : ತುಮಕೂರು — ತಾಲೂಕು: ತುಮಕೂರು
ಹೋಬಳಿ: ಊರ್ಡಿಗೆರೆ — ಗ್ರಾಮ: ತಿಮ್ಮಾಪುರ

ಕ್ರ. ಸಂ	ಸ. ಸಂ.	ಫಲಾನುಭವಿ	ವಿಸ್ತಾರ (ಎಕರೆಗಳಲ್ಲಿ–ಗುಂಟಾದಲ್ಲಿ) ಒಟ್ಟು (ಎ–ಗುಂ)	ಎ ಖರಬ್ (ಎ–ಗುಂ)	ಬಿ ಖರಬ್ (ಎ–ಗುಂ)	ಬಾಕಿ (ಎ–ಗುಂ)	ತರಹೆ
1	1/1	ಸಿ. ಚಿಕ್ಕಗಂಗಯ್ಯ ಬಿನ್ ಲೇಟ್ ಚಿಕ್ಕಣ್ಣ ಕೃಷ್ಣಮೂರ್ತಿ ಬಿನ್ ಲೇಟ್ ಚಿಕ್ಕಣ್ಣ ಕಲಾವತಿ ಕೋಂ. ಲೇಟ್ ಗಂಗಾಧರ	0-09 1/4	-	0-03	0-06 1/4	ಒಣ
2	2	ಫಮೀದಾ ಖಾನಂ ಕೋಂ. ಲೇ. ಅಬ್ದುಲ್ ವಜೀದ್, ಯಕ್ಬಾಲ್ ಅಹಮ್ಮದ ಬಿನ್ ಲೇ. ಅಬ್ದುಲ್ ಬಸೀದಸಾಬ ಉರುಫ್ ಅಬ್ದುಲ್ ಬಸೀತ್	0-08	-	0-03	0-05	ಒಣ
3	3/1	ವೀಣಾ ಕೋಂ. ಲೇ. ನಾಗರಾಜು	0-05	-	0-03	0-02	ಒಣ
4	3/1	ಕೆ.ಎನ್ ಮನೋಹರ ಬಿನ್ ಲೇ. ವಿ. ನಾಗರಾಜು, ಕೆ. ಎನ್. ಮಹೇಶ ಬಿನ್ ಲೇ. ಕೆ.ವಿ. ನಾಗರಾಜು	0-05	-	0-03	0-02	ಒಣ
5	3/2	ಫಮೀದಾ ಖಾನಂ ಕೋಂ. ಲೇ. ಅಬ್ದುಲ್ ವಜೀದ್ ಯಕ್ಬಾಲ್ ಅಹಮದ್ ಬಿನ್ ಲೇ. ಅಬ್ದುಲ್ ಬಸೀದ್‌ಸಾಬ್ ಉರುಫ್ ಅಬ್ದುಲ್ ಬಸೀತ್	0-16	-	0-06	0-10	ಒಣ
6	3/3	ಸುಶೀಲಾ ಕೋಂ. ಲೇ. ಕೆ. ಎನ್. ಜಯರಾಮಯ್ಯ	0-03	-	0-01	0-02	ಒಣ
7	4/3	ಟಿ ಉಮಾದೇವಿ ಬಿನ್ ಗಂಗಮ್ಮ	0-02	-	-	0-02	ಒಣ
8	4/4,4/5, 4/6	ಪಾರ್ಕ ಲೇಔಟ್ ರಸ್ತೆ	0-03 0-01	-	-	0-03 0-01	ಪಾರ್ಕ್ ಲೇಔಟ್ ರಸ್ತೆ
9	4/9	ಬಿ ರಮೇಶ್ ಬಿನ್ ಬುದ್ಧ ತಿಮ್ಮಯ್ಯ	0-00 3/4	-	-	0-00 3/4	ವಸತಿ ಉದ್ದೇಶಕ್ಕೆ ಭೂಪರಿವರ್ತನೆ
		Total	**1-13**	-	**0-19**	**0-34**	-

ಜಿಲ್ಲೆ: ತುಮಕೂರು — ತಾಲ್ಲೂಕು:ತುಮಕೂರು
ಹೋಬಳಿ: ಉರ್ಡಿಗೆರೆ — ಗ್ರಾಮ: ಕ್ಯಾತ್ಸಂದ್ರ

ಕ್ರ. ಸಂ	ಸ. ಸಂ.	ಫಲಾನುಭವಿ	ವಿಸ್ತಾರ (ಎಕರೆಗಳಲ್ಲಿ–ಗುಂಟಾದಲ್ಲಿ) ಒಟ್ಟು (ಎ–ಗುಂ)	ಎ ಖರಬ್ (ಎ–ಗುಂ)	ಬಿ ಖರಬ್ (ಎ–ಗುಂ)	ಬಾಕಿ (ಎ–ಗುಂ)	ತರಹೆ
1	83/ಬ್ಲಾಕ್ 1	ನಾಗರಿಕ ಸೌಲಭ್ಯ	0-02	-	-	0-02	ಸಿ ಎ ಜಾಗ
2	83/3	ಎ ಕೆ.ಎನ್.ಗೋಪಾಲ್ ಬಿನ್ ಲೇಟ್ ನರಸೀಯಪ್ಪ	0-00 3/4	-	-	0-00 3/4	ಖುಷ್ಕಿ
3	83/5	ಸುಶೀಲಾ ವಿ. ಕೋಂ. ಕೆ. ಎನ್. ಜಯರಾಮಯ್ಯ	0-01 1/4	-	-	0-01 1/4	ಖುಷ್ಕಿ
4	83/6	ಕೆ.ಎನ್.ಕೃಷ್ಣಪ್ಪ ಬಿನ್ ಲೇಟ್ ನರಸೀಯಪ್ಪ	0-01	-	-	0-01	ಖುಷ್ಕಿ
5	83/ಬ್ಲಾಕ್ 2	ಲೇಔಟ್ ರಸ್ತೆ	0-01	-	-	0-01	ರಸ್ತೆ
6	83/ಬ್ಲಾಕ್ 3	ಟಾಟಾ ಲಾಟ್ ಪಾರ್ಕ್	0-01	-	-	0-01	ಪಾರ್ಕ್
7	84/4A	ನಾರಾಯಣಪ್ಪ ಬಿನ್ ನರಸೀಯಪ್ಪ ಭೋಗ ನರಸಿಂಹಯ್ಯ ಬಿನ್ ಕೆ. ಎನ್. ನರಸಣ್ಣ ಲಕ್ಷ್ಮಮ್ಮ ಕೋಂ ಲೇಟ್ ಕೆ.ಎನ್. ನರಸಣ್ಣ ಕೃಷ್ಣಮೂರ್ತಿ ಬಿನ್ ಲೇಟ್ ಕೆ.ಎನ್. ನರಸಣ್ಣ	0-04	-	-	0-04	ಖುಷ್ಕಿ
8	84/9	ಅನಂತ್ ಅತ್ರಿ ಬಿನ್ ಎ. ರಾಜರಾಮ್	0-04	_	_	0-04	ಖುಷ್ಕಿ
		ಒಟ್ಟೂ	**0-15**	-	-	**0-15**	-

ಜಿಲ್ಲೆ: ತುಮಕೂರು — ತಾಲ್ಲೂಕು: ತುಮಕೂರು
ಹೋಬಳಿ: ಉರ್ಡಿಗೆರೆ — ಗ್ರಾಮ: ಬಸವಪಟ್ಟಣ

ಕ್ರ. ಸಂ	ಸ. ಸಂ. ಸೈಟ್ ಸಂ.	ಭೂಮಾಲೀಕರ ಹೆಸರು	ವಿಸ್ತಾರ (ಎಕರೆಗಳಲ್ಲಿ–ಗುಂಟಾದಲ್ಲಿ, ಚದರ ಅಡಿಯಲ್ಲಿ) ಒಟ್ಟು (ಎ–ಗುಂ ಚದರ ಅಡಿ)	ಎ (ಎ–ಗುಂ ಚದರ ಅಡಿ)	ಬಿ (ಎ–ಗುಂ ಚದರ ಅಡಿ)	ಬಾಕಿ (ಎ–ಗುಂ ಚದರ ಅಡಿ)	ತರಹೆ
1	15/2	ತಿಮ್ಮಪ್ಪ ಬಿನ್ ತಿಮ್ಮಕ್ಕ	0-00 1/4	-	-	0-00 1/4	ಖುಷಿ
2	15/38	ರಾಜಶೇಖರ್ ಮೂರ್ತಿ ಬಿನ್ ಲೇಟ್ ಕುಂಬಯ್ಯ ಪ್ರದೀಪ್. ಎ.ಕೆ. ಬಿನ್ ಲೇಟ್ ಕುಂಬಯ್ಯ	0-00 1/2	-	-	0-00 1/2	ಖುಷಿ
3	15/25	ನರಸೇಗೌಡ ಬಿನ್ ನರಸಿಂಹಯ್ಯ	0-00 1/2	-	-	0-00 1/2	ಖುಷಿ
4	15/25	ಜಯಮ್ಮ ಕೋಂ. ನರಸೀಯಪ್ಪನ	0-00 1/2	-	-	0-00 1/2	ಖುಷಿ
5	15/27	ಪ್ರೇಮಕುಮಾರಿ ಕೋಂ ಶಿವಕುಮಾರ	0-00 1/2	_	_	0-00 1/2	ಖುಷಿ
6	15	ಸರ್ಕಾರಿ ರಸ್ತೆ	0-00 1/4	-	-	0-00 1/4	ಸರ್ಕಾರಿ ರಸ್ತೆ
7	15/37	ಚಂದ್ರಹಾಸ್ ಬಿನ್ ಲೇಟ್ ಎಂ. ಈಶ್ವರ ಆರ್. ಕೆ. ವಸಂತಿ ಕೋಂ. ಚಂದ್ರಹಾಸ್	43.00 ಚದರ ಅಡಿ	-	-	43.00 ಚದರ ಅಡಿ	ಸೈಟ್
8	16/4	ಸೀನಪ್ಪ ಬಿನ್ ನಾರಾಯಣಪ್ಪ	0-01 1/4	-	_	0-01 1/4	ವಸತಿ ಉದ್ದೇಶಕ್ಕೆ ಭೂಪರಿವರ್ತನೆ
		ಒಟ್ಟೂ	**0-03 3/4 + 43 ಚದರ ಅಡಿ**	-	-	**0-03 3/4 + 43 ಚದರ ಅಡಿ**	-

ಘೋಶ್ವಾರೆ

ಕ್ರ. ಸಂ.	ಗ್ರಾಮ	ತರಹೆ	ವಿಸ್ತಾರ (ಎಕರೆಗಳಲ್ಲಿ–ಗುಂಟಾದಲ್ಲಿ, ಚದರ ಅಡಿಯಲ್ಲಿ) ಒಟ್ಟು (ಎ–ಗುಂ ಚದರ ಅಡಿ)	ಎ ಖರಬ್ (ಎ–ಗುಂ ಚದರ ಅಡಿ)	ಬಿ ಖರಬ್ (ಎ–ಗುಂ ಚದರ ಅಡಿ)	ಬಾಕಿ (ಎ–ಗುಂ ಚದರ ಅಡಿ)
1	ತಿಮ್ಮಾಪುರ	ಖುಷ್ಕಿ	1-08 1/4	_	0-19	0-29 1/4
		ಪಾರ್ಕ್	0-03	_	_	0-03
		ಲೇಔಟ್ ರಸ್ತೆ	0-01	_	_	0-01
		ವಸತಿ ಉದ್ದೇಶಕ್ಕೆ ಭೂಪರಿವರ್ತನೆ	0-00 3/4	_	_	0-00 3/4
		ಒಟ್ಟು	**1-13**	_	**0-19**	**0-34**
2	ಕ್ಯಾತ್ಸಂದ್ರ	ಖುಷ್ಕಿ	0-11	_	_	0-11
		ನಾಗರಿಕ ಸೌಲಭ್ಯ	0-02	_	_	0-02
		ಲೇಔಟ್ ರಸ್ತೆ	0-01	_	_	0-01
		ಪಾರ್ಕ್	0-01	_	_	0-01
		ಒಟ್ಟು	**0-15**	-	-	**0-15**
3	ಬಸವಾಪಟ್ಟಣ	ಖುಷ್ಕಿ	0-02 1/4	_	_	0-02 1/4
		ರಸ್ತೆ	0-00 1/4	_	_	0-00 1/4
		ಸೈಟ್	43 ಚದರ ಅಡಿ	_	_	43 sq.ft
		ವಸತಿ ಉದ್ದೇಶಕ್ಕೆ ಭೂಪರಿವರ್ತನೆ	0-01 1/4	_	_	0-01 1/4
		ಒಟ್ಟು	**0-03 3/4 + 43 ಚದರ ಅಡಿ**	_	_	**0-03 3/4 + 43 ಚದರ ಅಡಿ**
		ಒಟ್ಟು ಮೊತ್ತ	**1-31 3/4 + 43 ಚದರ ಅಡಿ**	-	-	**1-31 3/4 + 43 ಚದರ ಅಡಿ**

* ತಿಮ್ಮಾಪುರ ಗ್ರಾಮದ ಸ.ನಂ. 3/1 ರಲ್ಲಿನ ವೀಣಾ ಕೋಂ ಲೇಟ್ ಕೆ.ವಿ.ನಟರಾಜು, ಕೆ.ಎನ್.ಮನೋಹರ್ ಬಿನ್ ಲೇಟ್ ಕೆ.ವಿ.ನಾಗರಾಜು ಮತ್ತು ಕೆ.ಎನ್.ಮಹೇಶ್ ಬಿನ್ ಲೇಟ್.ಕೆ.ವಿ.ನಟರಾಜು ರವರುಗಳು ಒಪ್ಪಿಗೆ ಪತ್ರವನ್ನು ದಿನಾಂಕ: 24.07.2025 ರಂದು ನೀಡಿದ್ದು, ವಿಶೇಷ ರೈಲ್ವೆ ಯೋಜನೆ ಅಡಿಯಲ್ಲಿ ಭೂಸ್ವಾಧೀನಕ್ಕೆ ರೈಲ್ವೆ ಕಾಯ್ದೆ–1989ರ ಅಡಿ 20ಇ ಅಧಿಸೂಚನೆಗೆ ಜಮೀನು ನೀಡಲು ಒಪ್ಪಿಗೆ ಪತ್ರ ನೀಡಿರುತ್ತಾರೆ.

* ತಿಮ್ಮಾಪುರ ಗ್ರಾಮದ ಸ.ನಂ. 3/3 ರಲ್ಲಿನ ಸುಶಿಲ.ವಿ ಕೋಂ ಲೇ. ಜಯರಾಮಯ್ಯ.ಕೆ.ಎನ್ ರವರು ಒಪ್ಪಿಗೆ ಪತ್ರವನ್ನು ದಿನಾಂಕ: 24.07.2025 ರಂದು ನೀಡಿದ್ದು, ವಿಶೇಷ ರೈಲ್ವೆ ಯೋಜನೆಯ ಅಡಿಯಲ್ಲಿ ಭೂಸ್ವಾಧೀನಕ್ಕೆ ರೈಲ್ವೆ ಕಾಯ್ದೆ–1989ರ ಅಡಿ 20ಇ ಅಧಿಸೂಚನೆಗೆ ಜಮೀನು ನೀಡಲು ಒಪ್ಪಿಗೆ ಪತ್ರ ನೀಡಿರುತ್ತಾರೆ.

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್‌ಎಸ್‌ಆರ್‌ಪಿ/1727

ಹೆಚ್ಚಿನ ಮಾಹಿತಿಗಳಿಗಾಗಿ: **https://egazette.gov.in** ಲಾಗಿನ್ ಮಾಡಿ

ಪರದೀಪ್ ಪುರಿ
ಮುಖ್ಯ ಅಭಿಯಂತರರು/ಬೆಂಗಳೂರು ದಂಡು

PUB/537/AAD360/PRB/SWR/2025-26

Download the **UTS** Moblie App from **Google Play Store** for ease of booking of unreserved tickets

South Western Railway - SWR | SWRRLY | @SWRAILWAYHQ | @sw_railways

---

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಸಾಚ್ಮೊ ಹೋಲ್ಡಿಂಗ್ಸ್ ಲಿಮಿಟೆಡ್ (ಈ ಹಿಂದೆ ಎನ್‌ಇಎಲ್ ಹೋಲ್ಡಿಂಗ್ಸ್ ಲಿಮಿಟೆಡ್ ಮತ್ತು ನಿತೇಶ್ ಎಸ್ಟೇಟ್ಸ್ ಲಿಮಿಟೆಡ್ ಎನ್ನಲಾಗುತ್ತಿದ್ದ) (ಇಲ್ಲಿ ಇನ್ನುಮುಂದೆ "ಡೆವಲಪರ್" ಎನ್ನಲಾಗುವ) ಇವರಿಂದ, ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ (ಇಲ್ಲಿ ಇನ್ನುಮುಂದೆ ಷೆಡ್ಯೂಲ್ ಪ್ರಾಪರ್ಟಿ ಎನ್ನಲಾಗುವ) ಸ್ವತ್ತಿಗೆ ಸಂಬಂಧಿತ ಅಭಿವೃದ್ಧಿ ಹಕ್ಕುಗಳನ್ನು ಪಡೆದುಕೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಡೆವಲಪರ್‌ರವರು, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಯು ಶ್ರೀಮತಿ. ಮಾಹೀನ್ ಖಲೀಲ್, ಶ್ರೀಮತಿ. ಸನಾ ನಾಜಿರ್ ಕಾಜಿ ಮತ್ತು ಶ್ರೀ. ಜೈನ್ ಥಾನಾವಾಲಾ (ಇವರಿಬ್ಬರೂ ಶ್ರೀಮತಿ. ಮಾಹೀನ್ ಖಲೀಲ್‌ರವರ ಮಕ್ಕಳು), ಶ್ರೀಮತಿ. ವಾಜೀಹಿ ಖಲೀಲ್, ಶ್ರೀಮತಿ. ಶಾಜೀಯೆ ಕಿರ್ಮಾಣಿ ಮತ್ತು ಶ್ರೀಮತಿ. ಅಫಶಾನ್ ಕಿರ್ಮಾಣಿ (ಇವರಿಬ್ಬರೂ ಶ್ರೀಮತಿ. ವಾಜೀಹಿ ಖಲೀಲ್‌ರವರ ಮಕ್ಕಳು), ಶ್ರೀಮತಿ. ಜೆಟಿ ಕಜಿರೂನಿ ಮತ್ತು ಶ್ರೀ. ಮನ್ಸೂರ್ ಹಸನ್ ಕಜಿರೂನಿ (ಇಲ್ಲಿ ಇನ್ನುಮುಂದೆ "ಮಾಲೀಕರು" ಎನ್ನಲಾಗುವ) ಎಂಬುವವರ ಮಾಲೀಕತ್ವದಲ್ಲಿದೆ ಎಂದು ಪ್ರತಿಪಾದಿಸಿರುತ್ತಾರೆ.

ಸದರಿ ಮಾಲೀಕರುಗಳೇ ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಯ ಸಂಪೂರ್ಣ ಮಾಲೀಕರಾಗಿದ್ದಾರೆ ಮತ್ತು ಡೆವಲಪರ್ ಅಭಿವೃದ್ಧಿ ಹಕ್ಕುಗಳ ನಿಬಂಧನೆಗೊಳಪಟ್ಟಂತೆ, ಸದರಿ ಮಾಲೀಕರು ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಅನಿರ್ಬಂಧಿತ ಹಕ್ಕುಗಳನ್ನು ಹೊಂದಿದ್ದಾರೆ ಹಾಗೂ ಸದರಿ ಷೆಡ್ಯೂಲ್ ಪ್ರಾಪರ್ಟಿಯು ಎಲ್ಲಾ ರೀತಿಯ ಋಣಭಾರಗಳಿಂದ ಮುಕ್ತವಾಗಿದೆ ಮತ್ತು ಇದರ ಮೇಲೆ ಯಾವುದೇ ರೀತಿಯ ಅಡಮಾಣಗಳು, ಚಾರ್ಜ್, ನ್ಯಾಯಾಲಯದ ಪ್ರಕರಣಗಳು, ಅಟ್ಯಾಚ್‌ಮೆಂಟ್ಸ್, ಲೀನ್, ತಗಾದೆ ಮತ್ತು/ಅಥವಾ ಇನ್ನಾವುದೆ ಮೂರನೇ ಪಕ್ಷಗಾರರ ಯಾವುದೇ ಸ್ವರೂಪದ ಹಕ್ಕು ಅಥವಾ ಕ್ಲೇಮ್‌ಗಳು ಇರುವುದಿಲ್ಲವೆಂದು ಕೂಡ ಡೆವಲಪರ್‌ರವರು ಪ್ರತಿಪಾದಿಸಿರುತ್ತಾರೆ.

ಅಲ್ಲದೆ, ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲಿನ ತಮ್ಮ ಅಭಿವೃದ್ಧಿ ಹಕ್ಕುಗಳು ಅಧಿಕೃತವಾಗಿವೆ, ಚಾಲ್ತಿಯಲ್ಲಿವೆ, ಅಭಾದಿತವಾಗಿವೆ ಮತ್ತು ಸಂಪೂರ್ಣ ಜಾರಿಯಲ್ಲಿವೆ ಎಂದು ಕೂಡ ಡೆವಲಪರ್‌ರವರು ಪ್ರತಿಪಾದಿಸಿರುತ್ತಾರೆ. ಮುಂದುವರಿದಂತೆ, ತಾನೊಬ್ಬ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಡೆವಲಪರ್ ಆಗಿಯಾಗಲಿ ಅಥವಾ ಮಾಲೀಕರುಗಳ ಪವರ್ ಆಫ್ ಅಟಾರ್ನಿ ಹೋಲ್ಡರ್ ಆಗಿಯೂ ಕೂಡ, ತಹಲ್ ದಿನಾಂಕದವರೆಗೆ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಯಾವುದೇ ಮೂರನೇ ಪಕ್ಷಗಾರರ ಹಿತಾಸಕ್ತಿಗಳನ್ನು ಸೃಷ್ಟಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಯು, ಮಾರಾಟ, ವಿನಿಮಯ, ಅಡಮಾನ, ಭೋಗ್ಯ, ಲೀನ್, ಚಾರ್ಜ್, ನಿರ್ವಹಣೆ, ಪರವಾನಿಗೆ, ಉಡುಗೊರೆ, ಆನುವಂಶಿಕ, ಪಾಲು, ಸ್ವಾಧೀನ, ಈಸ್‌ಮೆಂಟ್, ಟ್ರಸ್ಟ್, ಬಿಕ್ವೆಸ್ಟ್, ಅಸೈನ್‌ಮೆಂಟ್ ಅಥವಾ ಯಾವುದೇ ಸ್ವರೂಪದ ಋಣಭಾರ ಮಾದರಿಯ ಯಾವುದೇ ರೀತಿಯ ಹಕ್ಕು, ಅಧಿಕಾರ, ಕ್ಲೇಮ್, ಡಿಮಾಂಡ್ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಡೆವಲಪರ್‌ರವರಿಂದ ಅಭಿವೃದ್ಧಿ ಹಕ್ಕುಗಳನ್ನು ಪಡೆದುಕೊಳ್ಳಲು ಉದ್ದೇಶಿಸಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 7 (ಏಳು) ದಿನಗಳೊಳಗೆ, ತಮ್ಮ ಕ್ಲೇಮ್, ಆಕ್ಷೇಪಣೆ ಇತ್ಯಾದಿಗಳನ್ನು, ಎಲ್ಲಾ ಅಗತ್ಯ ಹಾಗೂ ಪೂರಕ ದಾಖಲಾತಿಗಳ ಸಮೇತ, ಲಿಖಿತ ರೂಪದಲ್ಲಿ ಕೆಳಕಂಡ ಸಹಿದಾರರ ವಿಳಾಸಕ್ಕೆ ಮಾಹಿತಿ ನೀಡಬೇಕೆಂದು ಕೋರಲಾಗಿದೆ.

ಈ ಮೇಲೆ ತಿಳಿಸಿರುವ ಕಾಲಾವಧಿಯೊಳಗೆ ಯಾವುದೇ ಆಕ್ಷೇಪಣೆಗಳಾಗಲಿ ಅಥವಾ ಕ್ಲೇಮ್‌ಗಳಾಗಲಿ ಸಲ್ಲಿಕೆಯಾಗದಿದ್ದಲ್ಲಿ, ನಮ್ಮ ಕಕ್ಷಿದಾರರು ಅಂತಹ ಯಾವುದೇ ಹಕ್ಕು, ಕ್ಲೇಮ್ ಉಲೇಖಗಳನ್ನು ಪರಿಗಣಿಸದೆಯೆ, ತಮ್ಮ ಉದ್ದೇಶಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ ಮತ್ತು ಒಂದು ವೇಳೆ, ಅಂತಹ ಯಾವುದೇ ಕ್ಲೇಮ್‌ಗಳು ಎದುರಾದಲ್ಲಿ ಕೂಡ ಅವುಗಳನ್ನು ವಿವೇಚನಾಪೂರ್ವಕವಾಗಿ ಕೈಬಿಡಲಾಗುತ್ತದೆ ಹಾಗೂ ಶಾಶ್ವತವಾಗಿ ನಿರ್ಲಕ್ಷಿಸಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ

ಅಲಿ ಅಸ್ಕರ್ ರಸ್ತೆ, ಸಂಪಂಗಿರಾಮನಗರ, ವಾರ್ಡ್ ನಂ. 110, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ, ಪ್ರಾಪರ್ಟಿ ನಂ. 16 (ಹಳೆಯ ನಂ. 8 ಮತ್ತು ಇದಕ್ಕೂ ಹಿಂದಿನ ಪ್ರಾಪರ್ಟಿ ನಂ. 4 ಹಾಗೂ ಲೇಟ್ ನಂ. 5), ಬಿಬಿಎಂಪಿ ಇಪಿಐಡಿ ನಂ. 5970938679 ಹೊಂದಿರುವ, 1,06,513 ಚದರ ಅಡಿ (9,895.4 ಚದರ ಮೀಟರ್) ವಿಸ್ತೀರ್ಣದಲ್ಲಿ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಪೂರ್ವಕ್ಕೆ : ಅಲಿ ಅಸ್ಕರ್ ರಸ್ತೆ;
ಪಶ್ಚಿಮಕ್ಕೆ : ಪ್ರಾಪರ್ಟಿ ನಂ. 15 (ಹಳೆಯ ನಂ. 7) ಅಲಿ ಅಸ್ಕರ್ ರಸ್ತೆ;
ಉತ್ತರಕ್ಕೆ : ಪ್ರಾಪರ್ಟಿ ನಂ. 17 (ಹಳೆಯ ನಂ. 11) ಅಲಿ ಅಸ್ಕರ್ ರಸ್ತೆ; ಮತ್ತು
ದಕ್ಷಿಣಕ್ಕೆ : ಅಲಿ ಅಸ್ಕರ್ ರಸ್ತೆ;

ಸ್ಥಳ: ಬೆಂಗಳೂರು
ದಿನಾಂಕ: 14.10.2025

ಸಹಿ/–
ಎನ್.ಕೆ. ದಿಲೀಪ್ / ಎಸ್. ರಘುನಂದನ
ತತ್ವ ಲೀಗಲ್ ಬೆಂಗಳೂರು, ವಕೀಲರು
4ನೇ ಮಹಡಿ, ಫೀನಿಕ್ಸ್ ಪಿನ್ನಾಕಲ್, ನಂ.46, ಹಲಸೂರ ರಸ್ತೆ, ಬೆಂಗಳೂರು 560042

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು (**'ಕ್ಲೈಂಟ್'**) ಕೆಳಗಿನ **'ಷೆಡ್ಯೂಲ್'**ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ ಸಮಗ್ರವಾಗಿ **'ಷೆಡ್ಯೂಲ್ ಪ್ರಾಪರ್ಟೀಸ್'** ಎನ್ನಲಾಗುವ ಸ್ಥಿರಾಸ್ತಿಗಳನ್ನು, ಕೆಳಕಂಡ ಕೋಷ್ಟಕದಲ್ಲಿ ಪಟ್ಟಿ ಮಾಡಲಾಗಿರುವ ಮಾಲೀಕರೊಂದಿಗೆ (**'ಮಾಲೀಕರು'**) ವ್ಯವಹರಿಸಲು ಉದ್ದೇಶಿಸಿರುತ್ತಾರೆ. ಸದರಿ ಮಾಲೀಕರು, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗಳ ಸಂಬಂಧಿತ ಭಾಗಗಳಿಗೆ ತಾವೇ ಸಂಪೂರ್ಣ ಮಾಲೀಕರಾಗಿದ್ದೇವೆ, ಜೊತೆಗೆ ಅವುಗಳ ಮೇಲೆ ಅನಿರ್ಬಂಧಿತ ಹಕ್ಕುಗಳನ್ನು ಹೊಂದಿದ್ದೇವೆ ಎಂದು ನಮ್ಮ ಕಕ್ಷಿದಾರರಲ್ಲಿ ಪ್ರತಿಪಾದಿಸಿರುತ್ತಾರೆ.

ಆದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿಸಿದಂತೆ, ಮಾಲೀಕರನ್ನು ಹೊರತುಪಡಿಸಿ ಇನ್ನಾವುದೇ ವ್ಯಕ್ತಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಇನ್ನಾವುದೇ ಹಿತಾಸಕ್ತಿಗಳಿದ್ದಲ್ಲಿ, ಅಂತಹವರು ಸದರಿ ಷೇಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿತ ತಮ್ಮ ಕ್ಲೇಮ್‌ಗಳನ್ನು ಅಥವಾ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿತ ಆಕ್ಷೇಪಣೆಗಳನ್ನು, ಕೆಳಗಿನ ಸಹಿದಾರರಿಗೆ ತಿಳಿಸಬೇಕೆಂದು ಕರೆ ನೀಡಲಾಗಿದೆ. ತಮ್ಮ ಆಕ್ಷೇಪಣೆಗಳನ್ನು ಅಥವಾ ಕ್ಲೇಮ್‌ಗಳನ್ನು ಕಡ್ಡಾಯವಾಗಿ ಲಿಖಿತ ರೂಪದಲ್ಲಿ, ದಾಖಲಾತಿ ಪುರಾವೆಗಳ ಸಮೇತ, ಸದರಿ ಪ್ರಕಟಣೆಯ ದಿನಾಂಕದಿಂದ **10 (ಹತ್ತು) ದಿನಗಳೊಳಗೆ** ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ನಿಗದಿತ 10 (ಹತ್ತು) ದಿನಗಳ ಅವಧಿಯೊಳಗೆ ಯಾವುದೇ ಕ್ಲೇಮ್‌ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗಳ ಮೇಲೆ ಉಲ್ಲೇಖಿತ ಮಾಲೀಕರನ್ನು ಹೊರತುಪಡಿಸಿ, ಇನ್ನಾವುದೇ ಅನ್ಯರ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಹಿತಾಸಕ್ತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ. ಮುಂದುವರಿದಂತೆ, ಒಂದು ವೇಳೆ 10 (ಹತ್ತು) ದಿನಗಳ ಅವಧಿಯೊಳಗೆ ಸಲ್ಲಿಕೆಯಾಗದಿರುವ ಯಾವುದೇ ಕ್ಲೇಮ್ ಅಥವಾ ಆರೋಪಿತ ಹಿತಾಸಕ್ತಿಗಳು ಎದುರಾದಲ್ಲಿ, ಅಂತಹವುಗಳನ್ನು ವಿವೇಚನಾತ್ಮಕವಾಗಿ ಕೈಬಿಡಲಾಗುತ್ತದೆ ಹಾಗೂ ಅವುಗಳನ್ನು ಎಲ್ಲಾ ಉದ್ದೇಶಗಳಲ್ಲೂ ಕಡೆಗಣಿಸಲಾಗುತ್ತದೆ ಮತ್ತು ಅವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾರವು ಹಾಗೂ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿತ ವ್ಯವಹಾರವನ್ನು ಮುಂದುವರಿಸಿಕೊಳ್ಳಲು ಸ್ವತಂತ್ರರಾಗುತ್ತಾರೆ.

ಷೆಡ್ಯೂಲ್
(ಷೆಡ್ಯೂಲ್ ಪ್ರಾಪರ್ಟಿಗಳ ವಿವರ)

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಚಿಕ್ಕಜಾಲ ಗ್ರಾಮದಲ್ಲಿ ಸ್ಥಿತಗೊಂಡಿರುವ ಮತ್ತು ಕೆಳಗಿನ ಕೋಷ್ಟಕದಲ್ಲಿ ಪಟ್ಟಿ ಮಾಡಲಾಗಿರುವ ಸ್ವತ್ತುಗಳಲ್ಲಿ ರೂಪಗೊಂಡಿರುವ ಗ್ರಾಮ ಪಂಚಾಯತಿ ಖಾತಾ ನಂ. 2306/77/6,7,9,15,16,17,3ಎ,3ಬಿ,4,5,78/8,10ಎ1,10ಬಿ ಹೊಂದಿರುವ, ಇ–ಖಾತಾ ನಂ. 150200203101100791ರ ಭಾಗವಾಗಿರುವ, ಸುಮಾರು 05 ಎಕರೆ 28 ಗುಂಟಾ ವಿಸ್ತೀರ್ಣವುಳ್ಳ (ಚಿಕ್ಕಜಾಲ ಗ್ರಾಮ ಪಂಚಾಯತಿಗೆ ಬಿಟ್ಟು ಕೊಡಲಾಗಿರುವ ಸರ್ವೆ ನಂ. 77/5 ರಲ್ಲಿನ ಪ್ರದೇಶವನ್ನು ಹೊರತುಪಡಿಸಿ), ವಾಣಿಜ್ಯ ಬಳಕೆ ಉದ್ದೇಶಕ್ಕೆ ಪರಿವರ್ತನೆಗೊಂಡಿರುವ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತುಗಳ ಚಕ್ಕುಬಂದಿ :

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತಾರ ಎಕರೆ	ಗುಂಟೆ	ಗಡಿಗಳು	ಮಾಲೀಕರ ಹೆಸರು
1.	77/3ಎ	0	19	ಪೂರ್ವಕ್ಕೆ : ನಾಲ / ಕಾಲುವೆ ; ಪಶ್ಚಿಮಕ್ಕೆ : ಸರ್ವೆ ನಂ. 77/3ಬಿ ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ.77/1 ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 77/4 ಹೊಂದಿರುವ ಆಸ್ತಿ.	ಶ್ರೀ ಹೇಮಂತ್ ಕೋಡಿಹಳ್ಳಿ ರಮೇಶ್ (ದಿವಂಗತ ಮುನಿಯಮ್ಮ ಅವರ ಪುತ್ರ)
2.	77/3ಬಿ	0	19	ಪೂರ್ವಕ್ಕೆ : ಸರ್ವೆ ನಂ. 77/3ಎ ಹೊಂದಿರುವ ಆಸ್ತಿ; ಪಶ್ಚಿಮಕ್ಕೆ : ಸರ್ವೆ ನಂ. 78/5ಎ ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ. 77/1 ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 77/4 ಹೊಂದಿರುವ ಆಸ್ತಿ.	
3.	77/4	2	34	ಪೂರ್ವಕ್ಕೆ : ನಾಲ / ಕಾಲುವೆ ; ಪಶ್ಚಿಮಕ್ಕೆ : ಸರ್ವೆನಂ. 78/5ಎ ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ. 77/3ಎ ಮತ್ತು 77/3ಬಿ ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 77/5 ಹೊಂದಿರುವ ಆಸ್ತಿ.	(1) ಶ್ರೀಮತಿ ರತ್ನಮ್ಮ, ದಿವಂಗತ ರಾಮಕೃಷ್ಣಯ್ಯ ಅವರ ಪತ್ನಿ (2) ಶ್ರೀಮತಿ ಆರ್. ಪ್ರಭಾ, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರಿ ಮತ್ತು (3) ಶ್ರೀ ಸಿ. ಆರ್. ಸುರೇಶ್, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರ – 02 ಎಕರೆ 31¾ ಗುಂಟೆಗಳು ಶ್ರೀ ಸಿ. ಆರ್. ಸುರೇಶ್, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರ – 2.2 ಗುಂಟೆಗಳು
4.	77/5	1	09	ಪೂರ್ವಕ್ಕೆ : ನಾಲ / ಕಾಲುವೆ ; ಪಶ್ಚಿಮಕ್ಕೆ : ಸರ್ವೆ ನಂ. 78/10ಎ1 ಮತ್ತು 78/10ಎ2 ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ. 77/4 ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 77/6 ಹೊಂದಿರುವ ಆಸ್ತಿ.	ಶ್ರೀ ಸಿ. ಎನ್. ಅಶೋಕ್ ಮತ್ತು ಶ್ರೀ ಸಿ. ಎನ್. ರಮೇಶ್, ಇಬ್ಬರೂ ದಿವಂಗತ ನಾರಾಯಣಪ್ಪ ಅವರ ಪುತ್ರರು – 01 ಎಕರೆ 05 ಗುಂಟೆಗಳು ಶ್ರೀ ಸಿ. ಆರ್. ಸುರೇಶ್, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರ – 2.2 ಗುಂಟಾಗಳು (ಕಡಿಮೆ, ರಸ್ತೆಗಾಗಿ ಬಿಟ್ಟುಕೊಟ್ಟ ಪ್ರದೇಶ)
5.	78/8	0	10	ಪೂರ್ವಕ್ಕೆ : ಸರ್ವೆ ನಂ. 78/10ಬಿ ಮತ್ತು 78/10ಎ1 ಹೊಂದಿರುವ ಆಸ್ತಿ; ಪಶ್ಚಿಮಕ್ಕೆ : ಸರ್ವೆ ನಂ. 79 ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ. 78/7 ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 78/9 ಹೊಂದಿರುವ ಆಸ್ತಿ.	ಶ್ರೀ ಸಿ. ಆರ್. ಸುರೇಶ್, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರ ಮತ್ತು ಶ್ರೀಮತಿ ರತ್ನಮ್ಮ ದಿವಂಗತ ರಾಮಕೃಷ್ಣಯ್ಯನವರ ಪತ್ನಿ
6.	78/10 ಎ1	0	15	ಪೂರ್ವಕ್ಕೆ : ಸರ್ವೆ ನಂ. 77/4 ಮತ್ತು 77/5 ಹೊಂದಿರುವ ಆಸ್ತಿ; ಪಶ್ಚಿಮಕ್ಕೆ : ಸರ್ವೆ ನಂ. 78/10ಬಿ ಮತ್ತು 78/8 ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ. 78/10ಬಿ ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 78/10ಎ2 ಹೊಂದಿರುವ ಆಸ್ತಿ.	ಶ್ರೀ ಸಿ. ಆರ್. ಸುರೇಶ್, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರ
7.	78/ 10ಬಿ	0	02	ಪೂರ್ವಕ್ಕೆ : ಸರ್ವೆ ನಂ.78/10/ಎ1 ಹೊಂದಿರುವ ಆಸ್ತಿ; ಪಶ್ಚಿಮಕ್ಕೆ : ಸರ್ವೆ ನಂ. 78/8 ಹೊಂದಿರುವ ಆಸ್ತಿ; ಉತ್ತರಕ್ಕೆ : ಸರ್ವೆ ನಂ. 78/5 ಹೊಂದಿರುವ ಆಸ್ತಿ; ಮತ್ತು ದಕ್ಷಿಣಕ್ಕೆ : ಸರ್ವೆ ನಂ. 78/10ಎ1 ಹೊಂದಿರುವ ಆಸ್ತಿ.	ಶ್ರೀ ಸಿ. ಆರ್. ಸುರೇಶ್, ದಿವಂಗತ ರಾಮಕೃಷ್ಣಯ್ಯ ಅವರ ಪುತ್ರ

ದಿನಾಂಕ : 15–10–2025
ಸ್ಥಳ : ಬೆಂಗಳೂರು

ಶ್ರೀಮತಿ. ಬ್ರಿಜಿತ ಪ್ರಕಾಶ್
ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
ವಕೀಲರು ಮತ್ತು ಸಾಲಿಸಿಟರ್ಸ್
18ನೇ ಮಹಡಿ, ಎಸ್‌ಕೆಎವಿ 909, ನಂ. 9/1, ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ವೃತ್ತ
ಬೆಂಗಳೂರು 560 025.
ಫೋನ್: 080–4350 3600/080–4350 3676
ಇಮೇಲ್: brijita.prakash@jsalaw.com

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಎಸ್‌ಜಿ-ಎಸ್‌ಡಬ್ಲ್ಯುಆರ್–ಪಿಆರ್‌ಓಜಿ–ಯುಬಿಎಲ್–ಆರ್‌ಎಫ್‌ಪಿ–ಪಿಎಸ್‌ಎಸ್2 ದಿನಾಂಕ : 10–10–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಸಿಎಸ್‌ಟಿಇ / ಯೋಜನೆ ಹುಬ್ಬಳ್ಳಿ ಮತ್ತು ಸಿಎಸ್‌ಟಿಇ / ಯೋಜನೆ ಬೆಂಗಳೂರು, ನೈಋತ್ಯ ರೈಲ್ವೆಯ ವ್ಯಾಪ್ತಿಯಲ್ಲಿ ಹಲವಾರು ನಿರ್ಮಾಣ ಸ್ಥಳಗಳು / ಸೆಕ್ಷನ್‌ಗಳಲ್ಲಿ ಯೋಜನೆ ಮೇಲ್ವಿಚಾರಣಾ ಸೇವೆಗಳನ್ನು ಒದಗಿಸುವುದಕ್ಕಾಗಿ ಪ್ರಸ್ತಾವನೆಗಾಗಿ ಕೋರಿಕೆ.	ರೂ. 13,80,09,261.96

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **12–11–2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಯೋಜನೆ / ಹುಬ್ಬಳ್ಳಿ

ಪಿಯುಬಿ/555/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಪಿ/ಸಿಎನ್/ಬಿಎನ್‌ಸಿ/147/2025
ದಿನಾಂಕ : 09–10–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಯಶವಂತಪುರ – ಅರಸೀಕೆರೆ ಸೆಕ್ಷನ್ ನಡುವೆ ಆಟೋ ಸಿಗ್ನಲಿಂಗ್ ಕಾಮಗಾರಿಗಳು : ಗೊಲ್ಲಹಳ್ಳಿ, ದೊಡ್ಡಬೆಲೆ ಮತ್ತು ಹಿರೇಹಳ್ಳಿ ನಿಲ್ದಾಣಗಳಲ್ಲಿ ಸ್ಟೇಷನ್ ಕಟ್ಟಡಗಳ ಉದ್ದೇಶಿತ ನಿರ್ಮಾಣ (**ಟೆಂಡರ್ ಉಲ್ಲೇಖ ಸಂ. ವೈಪಿಆರ್–ಎಎಸ್‌ಕೆ–ಆಟೋಗೂಮ್ಟಿ**)	ರೂ. 7,56,11,980/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **31–10–2025 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/554/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

---

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ

ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235867 / 8431235858
ಇ-ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org

No.IFAB/2024-25/SE0022/CALL-5 Date:03.10.2025
No.IFAB/2024-25/SE0017/CALL-6 Date:03.10.2025
No.IFAB/2024-25/SE0018/CALL-6 Date:03.10.2025

ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಯ ಟೆಂಡರ್ ಪ್ರಕಟಣೆ

ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಯ Floral Studio ದ shop No:1, 2 & 4 ನ್ನು ಬಾಡಿಗೆಗೆ ನೀಡುವ ಕುರಿತು ಆಸಕ್ತಿಯುಳ್ಳ ವಹಿವಾಟುದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವಿವರ ಮತ್ತು ದಾಖಲೆಗಳು **ದಿ:03.10.2025** ರಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ಮಾತ್ರ ಲಭ್ಯವಿರುತ್ತದೆ. ಟೆಂಡರ್ ಸಲ್ಲಿಸಲು **ದಿ: 23.10.2025 ಸಂಜೆ 5.00 ಗಂಟೆ** ಕೊನೆಯ ದಿನಾಂಕ ಆಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/3156/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ

ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628,
ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in

ಸಂಖ್ಯೆ: KNMTA-ACT/1/2024 — ದಿನಾಂಕ : 14.10.2025

ಪ್ರಕಟಣೆ

ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆಯ ಹೆಚ್ಚುವರಿ ನಿಧಿಯ ನಿರ್ವಹಣೆಗಾಗಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಇ-ಹರಾಜು ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಇ–ಹರಾಜನ್ನು (ಉಲ್ಲೇಖ ಸಂಖ್ಯೆ: KNMTA/2025-26/AUCTION3) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಡೆಸಲಾಗುತ್ತದೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 24.10.2025 ಸಂಜೆ 5.30** ಬಿಡ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಹರಾಜು ದಾಖಲೆಗಳು ಮತ್ತು ವಿವರಗಳನ್ನು ಪಡೆಯಬಹುದು.
https://kppp.karnataka.gov.in

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆ

ವಾಸಾಸಂಇ/ವಾಪ್ರ/3257/ಎಸ್‌ಎಸ್‌ಸಿ/2025–26

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶೇಷ ವಿಭಾಗ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಟೆಂಡರ್ ಪ್ರಕಟಣೆ ಸಂಖ್ಯೆ : 09/2025–26 — ದಿನಾಂಕ : 09–10–2025

ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2025–26 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ **02 ಸಂಖ್ಯೆಯ ಅಂದಾಜು ಮೊತ್ತ ರೂ. 0.80 ಲಕ್ಷದಿಂದ 6.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ** ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 13–10–2025 ರಿಂದ 27–10–2025 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 27–10–2025 ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸುವುದು. 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 28–10–2025 ರ ಸಂಜೆ 4.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ರಾಮನಗರ/386/ಮಣಿಪಾಲ್/2025–26

ದರ್ಶನ್‌ಗೆ ಸೌಲಭ್ಯ: ಕಾರಾಗೃಹ ಪರಿಶೀಲನೆ

ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳ ಭೇಟಿ • ನ್ಯಾಯಾಲಯಕ್ಕೆ ಶೀಘ್ರ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣ ದಲ್ಲಿ ಜೈಲಿನಲ್ಲಿರುವ ನಟ ದರ್ಶನ್‌ಗೆ ಕನಿಷ್ಠ ಸೌಲಭ್ಯ ನೀಡದ ಆರೋಪಕ್ಕೆ ಸಂಬಂಧಿಸಿದಂತೆ ಮಂಗಳವಾರ ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದರು.


ದರ್ಶನ್

ಮುಖ್ಯಾಂಶಗಳು

- ಕ್ವಾರಂಟೈನ್ ಸೆಲ್‌ನಿಂದ ಸಾಮಾನ್ಯ ಬ್ಯಾರಕ್‌ಗೆ ಸ್ಥಳಾಂತರಕ್ಕೆ ಮನವಿ
- ನೆಪಕ್ಕಷ್ಟೇ ಸೌಲಭ್ಯ ನೀಡಿದ್ದಾರೆ: ದರ್ಶನ್ ಆರೋಪ

ಈ ವೇಳೆ ಕ್ವಾರಂಟೈನ್ ಸೆಲ್‌ನಿಂದ ಸಾಮಾನ್ಯ ಬ್ಯಾರಕ್‌ಗೆ ಸ್ಥಳಾಂತರ ಮಾಡುವಂತೆ ಪ್ರಾಧಿಕಾರದ ಅಧಿಕಾರಿಗಳಿಗೆ ದರ್ಶನ್ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಲಯದ ಸೂಚನೆ ಮೇರೆಗೆ ಪ್ರಾಧಿಕಾರದ ಬೆಂಗಳೂರು ನಗರ ಜಿಲ್ಲಾ ಸದಸ್ಯ ಕಾರ್ಯದರ್ಶಿ ಬಿ.ವರದರಾಜ್ ಮತ್ತು ತಂಡ ಮಂಗಳವಾರ ಮಧ್ಯಾಹ್ನ ದರ್ಶನ್ ಅವರನ್ನು ಇರಿಸಲಾಗಿರುವ ಕ್ವಾರಂಟೈನ್ ಸೆಲ್‌ಗೆ ತೆರಳಿ, ನೀಡಿರುವ ಸೌಲಭ್ಯಗಳ ಬಗ್ಗೆ ತಪಾಸಣೆ ನಡೆಸಿತು.

ಕೈಪಿಡಿ ಅನುಸಾರ ಕನಿಷ್ಠ ಸೌಲಭ್ಯ ಕಲ್ಪಿಸಲಾಗಿದೆಯೇ? ಎಂದು ಜೈಲು ಅಧಿಕಾರಿಗಳನ್ನು ಪ್ರಶ್ನಿಸಿದರು. ಅದಕ್ಕೆ ದರ್ಶನ್, 'ಇಲ್ಲ. ತುಂಬ ಹಿಂಸೆ ಆಗುತ್ತಿದೆ. ನೆಪಕ್ಕಷ್ಟೇ ಸೌಲಭ್ಯ ನೀಡಿದ್ದಾರೆ' ಎಂದು ತಾವು ಅನುಭವಿಸುತ್ತಿರುವ ಆರೋಗ್ಯ ಸಮಸ್ಯೆ ಬಗ್ಗೆ ವರದರಾಜ್ ತಂಡದ ಬಳಿ ಹೇಳಿಕೊಂಡರು ಎಂದು ಗೊತ್ತಾಗಿದೆ.

'ಕೈಗೆ ಫಂಗಸ್ ಬಂದಿದೆ. ಬಿಸಿಲು ನೋಡಿ ಹಲವು ದಿನಗಳೇ ಕಳೆದಿವೆ. ವಾಕಿಂಗ್ ಮಾಡಲು ಅವಕಾಶ ನೀಡುತ್ತಿಲ್ಲ' ಎಂದು ದರ್ಶನ್ ಆರೋಪಿಸಿದ್ದರು. ನ್ಯಾಯಾಲಯದ ಆದೇಶ ಬಳಿಕ ಜೈಲು ಅಧಿಕಾರಿಗಳು ಸೀಮಿತ ಸ್ಥಳದಲ್ಲಿ ವಾಕಿಂಗ್ ಮಾಡಲು ಅನುವು ಮಾಡಿಕೊಟ್ಟಿದ್ದರು.

ಜೈಲಿನ ಕೈಪಿಡಿಯಂತೆ ದರ್ಶನ್‌ಗೆ ನೀಡಲಾಗಿರುವ ಸೌಲಭ್ಯಗಳೇನು? ದರ್ಶನ್‌ಗೆ ಫಂಗಸ್ ಹಾಗೂ ಬೆನ್ನು ನೋವು ಹಿನ್ನೆಲೆಯಲ್ಲಿ ಜೈಲಿನ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆ, ಬಂಧನವಾಗಿ ಎರಡು ತಿಂಗಳು ಕಳೆದರೂ ಕ್ವಾರಂಟೈನ್ ಸೆಲ್‌ನಲ್ಲಿ ಉಳಿಸಿಕೊಂಡಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ ವರದರಾಜ್ ಅವರು ಜೈಲಿನ ಮುಖ್ಯ ಅಧೀಕ್ಷಕ ಸುರೇಶ್ ಅವರೊಂದಿಗೆ ಸುಮಾರು ಎರಡು ತಾಸು ಸಮಾಲೋಚನೆ ನಡೆಸಿ ನಿರ್ಗಮಿಸಿದರು.

ಒಂದೆರಡು ದಿನಗಳಲ್ಲಿ ಸೇವಾ ಪ್ರಾಧಿಕಾರದ ಅಧಿಕಾರಿಗಳು ಕೋರ್ಟ್‌ಗೆ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಂಗ ನಿಂದನೆ ಅರ್ಜಿ ಸಂಬಂಧ ಜೈಲಿಗೆ ತೆರಳಿ ವಸ್ತುಸ್ಥಿತಿ ಪರಿಶೀಲಿಸಿ ಅಕ್ಟೋಬರ್ 18ರೊಳಗೆ ವರದಿ ನೀಡಬೇಕೆಂದು 57ನೇ ಸಿಸಿಎಚ್ ನ್ಯಾಯಾಲಯ ಗಡುವು ನೀಡಿತ್ತು.

ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳ ಬಂಧನ, ಮತ್ತೊಬ್ಬ ನಾಪತ್ತೆ

₹2.15 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ವೀಸಾದಡಿ ನಗರಕ್ಕೆ ಬಂದು ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ನೈಜೀರಿಯಾದ ಮಹಿಳೆ ಸೇರಿ ಇಬ್ಬರನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿ, ₹2.15 ಕೋಟಿ ಮೌಲ್ಯದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ.

ನೈಜೀರಿಯಾದ ಒಕ್ಕಿ ಚೆನ್ಯಾಡು ಸ್ಯಾಮೂಯಲ್, ಕ್ವಿಕಿರಿಜಾ ಟೋಪಿಸ್ಟ್ ಎಂಬುವರನ್ನು ಬಂಧಿಸಿ, 490 ಗ್ರಾಂ ಎಂಡಿಎ ಕ್ರಿಸ್ಟಲ್, 43 ಗ್ರಾಂ ಕೊಕೇನ್, ತೂಕದ ಯಂತ್ರ, ಮೊಬೈಲ್ ಫೋನ್ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ನಾಪತ್ತೆಯಾಗಿರುವ ಮತ್ತೊಬ್ಬ ಪೆಡ್ಲರ್ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಕ್ಕಿ ಚೆನ್ಯಾಡು ಸ್ಯಾಮೂಯಲ್


ಕ್ವಿಕಿರಿಜಾ ಟೋಪಿಸ್ಟ್

ಎಲೆಕ್ಟ್ರಾನಿಕ್ಸ್ ಸಿಟಿ 1ನೇ ಹಂತದ ಮಹಾಲಕ್ಷ್ಮೀ ಲೇಔಟ್‌ನ ಖಾಲಿ ಜಾಗದಲ್ಲಿ ವಿದೇಶಿ ಪ್ರಜೆ ಬೈಕ್‌ನಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿರುವ ಕುರಿತು ಬಾತ್ಮೀದಾರರ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿ, ಒಕ್ಕಿ ಚೆನ್ಯಾಡು ಸ್ಯಾಮೂಯಲ್‌ನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದರು.

'ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ವೈದ್ಯಕೀಯ ವೀಸಾದಡಿ ನಗರಕ್ಕೆ ಬಂದು ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದು, ಕೃತ್ಯದಲ್ಲಿ ಮತ್ತೊಬ್ಬ ವಿದೇಶಿ ಮಹಿಳೆ ಮತ್ತು ವ್ಯಕ್ತಿ ಭಾಗಿಯಾಗಿರುವ ಬಗ್ಗೆ ವಿಚಾರಣೆ ವೇಳೆ ತಿಳಿಸಿದ್ದಾರೆ' ಎಂದು ಹೇಳಿದರು.

ಅಪರಾಧ ಸುದ್ದಿ

ಆರೋಪಿ ನೀಡಿದ ಮಾಹಿತಿ ಆಧರಿಸಿ ತನಿಖೆ ಮುಂದುವರಿಸಿದ ಪೊಲೀಸರು, ಈತನಿಗೆ ಸಹಕರಿಸಿದ ವಿದೇಶಿ ಮಹಿಳೆಯನ್ನು ಎಲೆಕ್ಟ್ರಾನಿಕ್ ಸಿಟಿ 1ನೇ ಹಂತದ ಟೆಕ್ ಸಿಟಿ ಲೇಔಟ್‌ನಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆಕೆಯೂ ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾಳೆ. ಐ.ಟಿ ಉದ್ಯೋಗಿಗಳು ಮತ್ತು ಸ್ಥಳೀಯರನ್ನು ಗುರಿಯಾಗಿಸಿಕೊಂಡು ಮಾದಕ ವಸ್ತು ಮಾರಾಟ ಮಾಡುತ್ತಿದ್ದುದ್ದಾಗಿ ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ತಲೆಮರೆಸಿಕೊಂಡಿರುವ ಮತ್ತೊಬ್ಬ ವಿದೇಶಿ ಪ್ರಜೆಗಾಗಿ ಪತ್ತೆ ಕಾರ್ಯ ಮುಂದುವರಿದಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಂಗ ವಶಕ್ಕೆ ನೀಡಲಾಗಿದೆ. ತನಿಖೆ ವೇಳೆ ನಕಲಿ ಪಾಸ್‌ಪೋರ್ಟ್ ಹೊಂದಿರುವುದು ಪತ್ತೆಯಾಗಿದೆ.

'ನಗರದಲ್ಲಿ ನಿರಂತರವಾಗಿ ಮಾದಕ ವಸ್ತುಗಳು ಪತ್ತೆಯಾಗುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಡ್ರಗ್ಸ್ ಮೂಲವನ್ನು ಪತ್ತೆ ಮಾಡಿ, ಮುಂದೆ ಈ ರೀತಿಯಾಗದಂತೆ ಕ್ರಮ ಕೈಗೊಳ್ಳಲು ಜಂಟಿ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದರು.

ಜೈಲಿನಲ್ಲಿ ಹುಟ್ಟುಹಬ್ಬ: ಕೈದಿಗಳ ಸ್ಥಳಾಂತರಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದ ಸರ್ಜಾಪುರದ ರೌಡಿ ಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಹಾಗೂ ಸಹಚರರ ವಿರುದ್ಧ ದಾಖಲಾಗಿದ್ದ ಪ್ರಕರಣ ಸಂಬಂಧ ನ್ಯಾಯಾಲಯದಿಂದ ಅನುಮತಿ ಪಡೆದು, 12 ಮಂದಿ ವಿಚಾರಣಾಧೀನ ಕೈದಿಗಳನ್ನು ರಾಜ್ಯದ ವಿವಿಧ ಜೈಲುಗಳಿಗೆ ಸ್ಥಳಾಂತರಿಸಲು ಕಾರಾಗೃಹ ಇಲಾಖೆ ಮುಂದಾಗಿದೆ.

ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ಶ್ರೀನಿವಾಸ್ ಸೆಪ್ಟೆಂಬರ್ 9ರಂದು ಹುಟ್ಟುಹಬ್ಬದ ಪ್ರಯುಕ್ತ ಕೇಕ್ ಕತ್ತರಿಸಿ ಸಹ ಕೈದಿಗಳೊಂದಿಗೆ ಸಂಭ್ರಮಿಸಿದ್ದ ಫೋಟೊ, ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಶ್ರೀನಿವಾಸ್‌ನಿಂದ ಕೊಲೆಯಾದ ವೆಂಕಟೇಶ್ ಅವರ ಪತ್ನಿ ನೀಡಿದ ದೂರಿನ ಮೇಲೆ ಇಬ್ಬರನ್ನು ಅಮಾನತು ಮಾಡಿ, ಐವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ದಕ್ಷಿಣ ವಲಯದ ಡಿಐಜಿ ಕೆ.ಸಿ. ದಿವ್ಯಶ್ರೀ ಶಿಫಾರಸು ಮಾಡಿದ್ದರು.

ಜೈಲಿನ ನಿಯಮ ಉಲ್ಲಂಘಿಸಿ, ಹುಟ್ಟುಹಬ್ಬದ ಸಂಭ್ರಮಾಚರಣೆಯಲ್ಲಿ ತೊಡಗಿಕೊಂಡಿದ್ದ ಶ್ರೀನಿವಾಸ ಸೇರಿ 12 ಮಂದಿ ವಿಚಾರಣಾಧೀನ ಕೈದಿಗಳನ್ನು ಆಡಳಿತ, ಭದ್ರತಾ ದೃಷ್ಟಿಯಿಂದ, ಕೋರ್ಟ್‌ನಿಂದ ಅನುಮತಿ ಪಡೆದು ವಿವಿಧ ಜೈಲುಗಳಿಗೆ ಸ್ಥಳಾಂತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಮುಖ ಆರೋಪಿ ಶ್ರೀನಿವಾಸ್, ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆನಂದ್ ಅವರನ್ನು ಬೆಳಗಾವಿ, ಶೇಖರ್, ಪ್ರವೀಣ್– ವಿಜಯಪುರ, ಸೂರ್ಯ, ಮಿಥುನ್– ಧಾರವಾಡ, ಪ್ರೀಕ್ಷಿತ, ಪ್ರಜ್ವಲ್– ಶಿವಮೊಗ್ಗ, ಚೇತನ್, ಅರವಿಂದ್, ಕಾರ್ತಿಕ್ ಅವರನ್ನು ಕಲಬುರಗಿ ಜೈಲಿಗೆ ಸ್ಥಳಾಂತರಿಸಲು ಅಧಿಕಾರಿಗಳು ಶಿಫಾರಸು ಮಾಡಿದ್ದಾರೆ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮತ್ತು
5 ಬೆಂಗಳೂರು ನಗರ ಪಾಲಿಕೆಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

ಆತ್ಮೀಯ ಬೆಂಗಳೂರು ನಾಗರಿಕರೇ,

ಕರ್ನಾಟಕ ಸರ್ಕಾರದಿಂದ ಬೆಂಗಳೂರು ನಗರದ ಬಿ-ಖಾತಾ ಮಾಲೀಕರಿಗೆ ಅತಿ ದೊಡ್ಡ ಉಡುಗೊರೆ

ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ಮತ್ತು ಹೊಸ ನಿವೇಶನಗಳಿಗೂ ಎ-ಖಾತಾ ಲಭ್ಯ

ಇಂದು ಚಾಲನೆ

ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ಮತ್ತು ಹೊಸ ನಿವೇಶನಗಳಿಗೆ ಎ-ಖಾತಾ ಪಡೆಯಲು ಅರ್ಜಿ ಸಲ್ಲಿಸುವ ವಿಧಾನ

2000 ಚ.ಮೀ.ಗಳ ವರೆಗೆ

- ನಿಮ್ಮ ಮೊಬೈಲ್ ಮತ್ತು ಓಟಿಪಿ ಬಳಸಿ https://bbmp.karnataka.gov.in/BtoAKhata ರಲ್ಲಿ ಲಾಗಿನ್ ಆಗಿ
- ನಿಮ್ಮ ಅಂತಿಮ ಬಿ-ಖಾತೆಯ ಇಪಿಐಡಿ ಸಂಖ್ಯೆಯನ್ನು ನಮೂದಿಸಿ ವಿವರಗಳನ್ನು ಪಡೆಯಿರಿ
- ಮಾಲೀಕರ ಆಧಾರ್ ದೃಢೀಕರಿಸಿ
- ನಿವೇಶನವಿರುವ ಸ್ಥಳವನ್ನು ಮತ್ತು ನಿವೇಶನ ಮುಂಭಾಗದ ರಸ್ತೆಯ ಪ್ರಕಾರವನ್ನು ದೃಢಪಡಿಸಿ
- ಭೂ ಪರಿವರ್ತನೆಯಾದ ಮತ್ತು ಭೂ ಪರಿವರ್ತನೆಯಾಗದ ಎರಡೂ ನಿವೇಶನಗಳು ಅರ್ಹ (ಫ್ಲಾಟ್‌ಗಳಿಗೆ ಅರ್ಹತೆಯಿಲ್ಲ)
- ಸ್ವೀಕೃತಿಯನ್ನು ಪಡೆಯಿರಿ
- ನಗರ ಪಾಲಿಕೆ ವತಿಯಿಂದ ನಿವೇಶನಕ್ಕೆ ಭೇಟಿ ಮತ್ತು ದೃಢೀಕರಣ
- ಮಾರುಕಟ್ಟೆ ಮೌಲ್ಯದ ಶೇ. 5% ರಷ್ಟು ಮೊತ್ತವನ್ನು "ಏಕ ನಿವೇಶನ" ಅನುಮೋದನೆ ಶುಲ್ಕವಾಗಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಸುವುದು
- ಸ್ವಯಂಕೃತ "ಏಕ ನಿವೇಶನ" ಅನುಮೋದನೆಯಾಗಿ ಅರ್ಹತಾನುಸಾರ ಎ-ಖಾತಾ ವಿತರಣೆ

2000 ಚ.ಮೀ.ಗೂ ಹೆಚ್ಚಿನ

- ನೋಂದಾಯಿತ ವಾಸ್ತುಶಿಲ್ಪಿ ಅಥವಾ ಎಂಜಿನಿಯರ್‌ರನ್ನು ಸಂಪರ್ಕಿಸಿ
- ಯಾವುದೇ ರೀತಿಯ ನಿವೇಶನಗಳಿಗಾಗಿ https://bpas.bbmpgov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ
- ಅಗತ್ಯ ದಾಖಲೆಗಳು ಮತ್ತು ಕ್ಯಾಡ್ ಡ್ರಾಯಿಂಗ್ ಅನ್ನು ಅಪ್‌ಲೋಡ್ ಮಾಡಿ
- ಆರಂಭಿಕ ಪರಿಶೀಲನಾ ಶುಲ್ಕ ರೂ.500 ಅನ್ನು ಪಾವತಿಸಿ
- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ (ಫ್ಲಾಟ್‌ಗಳಿಗೆ ಅರ್ಹತೆಯಿಲ್ಲ)
- ನಿವೇಶನಕ್ಕೆ ಭೇಟಿ ನೀಡುವ ಮೂಲಕ ಪರಿಶೀಲನೆ
- ಅರ್ಹತಾನುಸಾರ ಅನುಮೋದನೆ
- ಅನ್ವಯವಾಗುವ ಶುಲ್ಕಗಳ ಪಾವತಿ
- ಅರ್ಹತಾನುಸಾರ "ಏಕನಿವೇಶನ" ಅನುಮೋದನೆ ಪ್ರಮಾಣಪತ್ರ, ಡ್ರಾಯಿಂಗ್ ಮತ್ತು ಎ-ಖಾತಾ ವಿತರಣೆ



ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ವಾರ್ಡ್ ವಿಂಗಡಣೆ: ದೂರುಗಳ ಮಹಾಪೂರ

ಐದು ನಗರ ಪಾಲಿಕೆಗಳ 368 ವಾರ್ಡ್ ಮರುವಿಂಗಡಣೆ: ಆಕ್ಷೇಪಣೆ ಸಲ್ಲಿಸಲು ಇಂದೇ ಕೊನೆ ದಿನ

● ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ವಾರ್ಡ್‌ಗಳ ಮರು ವಿಂಗಡಣೆಗೆ ಸಾರ್ವಜನಿಕರು, ಜನ ಪ್ರತಿನಿಧಿಗಳಿಂದ ದೂರು/ ಆಕ್ಷೇಪಣೆಗಳ ಮಹಾಪೂರವೇ ಹರಿದುಬಂದಿದೆ.

ವಾರ್ಡ್ ಗಡಿ, ವಾರ್ಡ್ ಹೆಸರು ಹಾಗೂ ಹಿಂದಿದ್ದ ಒಂದೇ ವಾರ್ಡ್ ಪ್ರದೇಶ ಎರಡು ಪಾಲಿಕೆಗಳಲ್ಲಿ ವಿಂಗಡಣೆಯಾಗಿರುವುದು, ವಿಧಾನಸಭೆ ಕ್ಷೇತ್ರವೊಂದರ ಪ್ರದೇಶಗಳು ಎರಡು ನಗರ ಪಾಲಿಕೆಗಳ ವ್ಯಾಪ್ತಿಗೆ ಸೇರಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಐದೂ ನಗರ ಪಾಲಿಕೆಗಳಲ್ಲಿ ಒಟ್ಟಾರೆಯಾಗಿ 368 ವಾರ್ಡ್‌ಗಳನ್ನು ರಚಿಸಲಾಗಿದ್ದು, ಕರಡು ಅಧಿಸೂಚನೆಯಲ್ಲಿ ವಾರ್ಡ್‌ಗಳು ಒಳಗೊಳ್ಳುವ ಪ್ರದೇಶ ಹಾಗೂ ಗಡಿಯನ್ನು ನಗರಾಭಿವೃದ್ಧಿ ಇಲಾಖೆ ಪ್ರಕಟಿಸಿದ್ದು, ನಕ್ಷೆಯನ್ನು ಜಿಬಿಎ ಪ್ರಕಟಿಸಿದೆ. ಆದರೆ, ಅದರಲ್ಲಿ ಪ್ರತಿ ವಾರ್ಡ್‌ನಲ್ಲಿ ಜನಸಂಖ್ಯೆ ಹಾಗೂ ಮತದಾರರ ವಿವರಗಳು ಇಲ್ಲ. ಒಂದು ವಾರ್ಡ್‌ನಲ್ಲಿ 37 ಸಾವಿರ ಜನಸಂಖ್ಯೆ ಇದ್ದರೆ ಮತ್ತೊಂದರಲ್ಲಿ 17 ಸಾವಿರ ಜನಸಂಖ್ಯೆ ಇದೆ. ಇದು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ (ಜಿಬಿಜಿಎ) ಉಲ್ಲಂಘನೆಯಾಗಿದೆ.

ವಾರ್ಡ್‌ಗಳ ಜನಸಂಖ್ಯೆ ಬಹುಮಟ್ಟಿಗೆ ಒಂದೇ ಆಗಿರಬೇಕು. ವಿಧಾನಸಭೆ ಸದಸ್ಯರ ಕ್ಷೇತ್ರದ ವಾರ್ಡ್ ಅನ್ನು ಇತರೆ ಕ್ಷೇತ್ರಗಳಿಗೆ ವ್ಯಾಪಿಸಬಾರದು ಎಂದು ಹೇಳಲಾಗಿದೆ.

ಮುಖ್ಯಾಂಶಗಳು

- ವಾರ್ಡ್‌ಗಳ ಜನಸಂಖ್ಯೆಯಲ್ಲಿ ಸಾಕಷ್ಟು ವ್ಯತ್ಯಾಸ
- ಜಿಬಿಜಿ ಕಾಯ್ದೆಯಂತೆ ವಾರ್ಡ್ ವಿಂಗಡಿಸಿಲ್ಲ
- ಕರಡು ಅಧಿಸೂಚನೆಯಲ್ಲಿ ವಾರ್ಡ್‌ಗಳ ಸಂಪೂರ್ಣ ಮಾಹಿತಿ ಇಲ್ಲ

‘ಜನಸಂಖ್ಯೆ ಆಧಾರದಲ್ಲಿಲ್ಲ’

ವಿನೋದ್

‘ನಗರ ಪಾಲಿಕೆಗಳಲ್ಲಿ ರಚಿಸಿರುವ ವಾರ್ಡ್‌ಗಳಲ್ಲಿ ಮತದಾರರನ್ನು ಸಮನಾಗಿ ಹಂಚಬೇಕು. ಭೌಗೋಳಿಕವಾಗಿ ಮಾತ್ರ ವಾರ್ಡ್ ರಚಿಸಿದರೆ, ಎಲ್ಲ ಜನರಿಗೆ ಮೂಲಸೌಕರ್ಯ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಐದು ನಗರ ಪಾಲಿಕೆಗಳ ಮೂಲಕ 1.5 ಕೋಟಿಗೂ ಹೆಚ್ಚು ಜನರಿಗೆ ಸೌಲಭ್ಯ ನೀಡಲು ಇನ್ನೂ ಹೆಚ್ಚಿನ ವಾರ್ಡ್‌ಗಳ ಅಗತ್ಯವಿದೆ’ ಎಂದು ನಾಗರಿಕ ಕಾರ್ಯಕರ್ತ ವಿನೋದ್ ಜಾಕೊಬ್ ಹೇಳಿದರು.

ಆದರೆ, ಕೇಂದ್ರ ಭಾಗದ ವಾರ್ಡ್‌ಗಳಲ್ಲಿ 25 ಸಾವಿರದಿಂದ 30 ಸಾವಿರ ಜನಸಂಖ್ಯೆ ಇದ್ದರೆ, ಹೊರಭಾಗದ ವಾರ್ಡ್‌ಗಳಲ್ಲಿ 17 ಸಾವಿರದಿಂದ 25 ಸಾವಿರ ಜನಸಂಖ್ಯೆ ಇದೆ ಎಂದು ಜನಪ್ರತಿನಿಧಿಗಳು ಹಾಗೂ ಪಾಲಿಕೆ ಚುನಾವಣೆಗೆ ಸ್ಪರ್ಧಿಸಲಿರುವ ಟಿಕೆಟ್ ಆಕಾಂಕ್ಷಿಗಳು ಆರೋಪಿಸುತ್ತಿದ್ದಾರೆ.

‘ವಾರ್ಡ್‌ಗಳ ಕರಡು ಅಧಿಸೂಚನೆಯಲ್ಲಿ ಜನಸಂಖ್ಯೆ ಹಾಗೂ ಮತದಾರರ ವಿವರಗಳು ಲಭ್ಯವಿಲ್ಲದ ಕಾರಣ ಹೆಚ್ಚು ಗೊಂದಲ ಸೃಷ್ಟಿಯಾಗಿದೆ. ಒಬ್ಬೊಬ್ಬರು ಒಂದೊಂದು ಲೆಕ್ಕಾಚಾರ ಮಾಡಿರುವುದರಿಂದ ಆಕ್ಷೇಪ, ಅಸಮಾಧಾನಗಳು ಹೆಚ್ಚಾಗಿವೆ’ ಎಂದು ರಾಜಕೀಯ ಪಕ್ಷಗಳ ಮುಖಂಡರು ದೂರುತ್ತಿದ್ದಾರೆ.

ಬಿಬಿಎಂಪಿಯಲ್ಲಿದ್ದ 198 ವಾರ್ಡ್‌ಗಳನ್ನೇ ಐದೂ ನಗರ ಪಾಲಿಕೆಗಳಿಗೆ ವಿಂಗಡಿಸಿ ಜುಲೈ 19ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಜಿಬಿಎ ರಚನೆಯೊಂದಿಗೆ ಕೇಂದ್ರ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ನಗರ ಪಾಲಿಕೆಗಳನ್ನಾಗಿ ಸೆಪ್ಟೆಂಬರ್ 2ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಐದೂ ನಗರ ಪಾಲಿಕೆಗಳಿಗೆ ವಾರ್ಡ್‌ಗಳನ್ನು ಮರು ವಿಂಗಡಿಸಿ, ಗಡಿ ನಿರ್ಧಾರ ಮಾಡಿ ಸೆಪ್ಟೆಂಬರ್ 30ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಇದಕ್ಕೆ ಆಕ್ಷೇಪಣೆ/ ಸಲಹೆ ನೀಡುವ ಗಡುವು ಬುಧವಾರ (ಅಕ್ಟೋಬರ್ 15) ಮುಗಿಯಲಿದೆ.

ಫೆಬ್ರುವರಿಯಲ್ಲಿ ಚುನಾವಣೆ?

ನಗರ ಪಾಲಿಕೆಗಳ ಚುನಾವಣೆಗೆ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಲು, ವಾರ್ಡ್ ಮರುವಿಂಗಡಣೆ ಅಂತಿಮಗೊಳಿಸಲು ಸಮಯ ನಿಗದಿ ಮಾಡಿರುವ ಕಾರ್ಯಸೂಚಿಗೆ ಜಿಬಿಎ ಮೊದಲ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಇದರಂತೆ, 2026ರ ಫೆಬ್ರುವರಿ ಮಧ್ಯಭಾಗದಲ್ಲಿ ನಗರ ಪಾಲಿಕೆಗಳಿಗೆ ಚುನಾವಣೆ ನಡೆಯಲಿದೆ.

ಅಕ್ಟೋಬರ್ ಅಂತ್ಯಕ್ಕೆ ಗ್ರೇಟರ್ ಬೆಂಗಳೂರು ಪ್ರದೇಶಕ್ಕಾಗಿ ಸ್ಥಳೀಯ ಯೋಜನಾ ಪ್ರಾಧಿಕಾರವನ್ನಾಗಿ ಜಿಬಿಎಯನ್ನು ಗುರುತುಪಡಿಸಿ ಅಧಿಸೂಚನೆ ಹೊರಡಿಸಲಾಗುವುದು. ನವೆಂಬರ್ ಆರಂಭದೊಳಗೆ ನಗರ ಪಾಲಿಕೆಗಳ ವಾರ್ಡ್ ಮರು ವಿಂಗಡಣೆ ಅಂತಿಮ ಅಧಿಸೂಚನೆಯಾಗಲಿದೆ. ನವೆಂಬರ್ 30ರಂದು ರಾಜ್ಯ ಚುನಾವಣಾ ಆಯೋಗವು ಮತದಾರರ ಪಟ್ಟಿಗಳ ತಯಾರಿಕೆಯನ್ನು ಆರಂಭಿಸುತ್ತದೆ. 2026ರ ಫೆಬ್ರುವರಿ ಮಧ್ಯಭಾಗದಲ್ಲಿ ರಾಜ್ಯ ಚುನಾವಣಾ ಆಯೋಗ ನಗರ ಪಾಲಿಕೆಗಳ ಚುನಾವಣೆಗೆ ಅಧಿಸೂಚನೆ ಹೊರಡಿಸುವ ನಿರೀಕ್ಷೆ ಇದೆ ಎಂದು ಜಿಬಿಎ ಮೊದಲ ಸಭೆಯಲ್ಲಿ ಅನುಮೋದನೆಯಾದ ಕಾರ್ಯಸೂಚಿಯಲ್ಲಿ ತಿಳಿಸಲಾಗಿದೆ.

ಸಾವಿರಾರು ಆಕ್ಷೇಪ: ಮುನಿರಾಜು

ಮುನಿರಾಜು

‘ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ಎರಡು ನಗರ ಪಾಲಿಕೆಗಳಿಗೆ ಹಂಚಿಹೋಗಿದೆ. ಈ ಬಗ್ಗೆ ನಗರ ಪಾಲಿಕೆಗಳ ಕರಡು ಅಧಿಸೂಚನೆ ಹೊರಡಿಸಿದ್ದ ಸಮಯದಲ್ಲೇ ವಿಧಾನಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದೆ. ಅದನ್ನು ಮೀರಿ ಅಂತಿಮ ಆದೇಶ ಹೊರಡಿಸಲಾಯಿತು. ಇದೀಗ ವಾರ್ಡ್‌ಗಳ ರಚನೆಯಲ್ಲಿ ಸಾಕಷ್ಟು ಸಮಸ್ಯೆಗಳಾಗಿವೆ. ಜನಸಂಖ್ಯೆ ಹಾಗೂ ವ್ಯಾಪ್ತಿಯನ್ನು ಮನಬಂದಂತೆ ಬದಲಾಯಿಸಲಾಗಿದೆ. ಗಡಿ ರಚನೆಯಲ್ಲಿ ಗೊಂದಲವಾಗಿದ್ದು, ನಾಗರಿಕರನ್ನು ಗೊಂದಲಕ್ಕೆ ದೂಡಿದೆ. ನಮ್ಮ ಕ್ಷೇತ್ರದಲ್ಲಿ ಸಾವಿರಾರು ನಾಗರಿಕರು ವಾರ್ಡ್ ರಚನೆ, ಗಡಿ ಬಗ್ಗೆ ಆಕ್ಷೇಪಗಳನ್ನು ಸಲ್ಲಿಸಿದ್ದಾರೆ’ ಎಂದು ದಾಸರಹಳ್ಳಿ ಶಾಸಕ ಎಸ್. ಮುನಿರಾಜು ಹೇಳಿದರು.

ರಾಜಸ್ಥಾನದ ಜೈಸಲ್ಮೇರ್ ಬಳಿ ಖಾಸಗಿ ಬಸ್‌ಗೆ ಮಂಗಳವಾರ ಬೆಂಕಿ ಹೊತ್ತಿಕೊಂಡಿತ್ತು ಪಿಟಿಐ ಚಿತ್ರ

ರಾಜಸ್ಥಾನ: ಬಸ್‌ಗೆ ಬೆಂಕಿ 20 ಮಂದಿ ಸಜೀವ ದಹನ

ಜೈಸಲ್ಮೇರ್(ರಾಜಸ್ಥಾನ) (ಪಿಟಿಐ): ಜೈಸಲ್ಮೇರ್‌ನಿಂದ ಜೋಧಪುರಕ್ಕೆ ಹೊರಟಿದ್ದ ಖಾಸಗಿ ಬಸ್‌ವೊಂದಕ್ಕೆ ಮಂಗಳವಾರ ಬೆಂಕಿ ಹೊತ್ತಿಕೊಂಡ ಪರಿಣಾಮ 20 ಪ್ರಯಾಣಿಕರು ಸಜೀವ ದಹನವಾಗಿದ್ದು, 16 ಮಂದಿ ಗಾಯಗೊಂಡಿದ್ದಾರೆ.

ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂಬುದು ಮೇಲ್ನೋಟಕ್ಕೆ ತಿಳಿದು ಬಂದಿದೆ.

ಸ್ಥಳೀಯರು ಹಾಗೂ ಆ ರಸ್ತೆಯಲ್ಲಿ ಸಾಗುತ್ತಿದ್ದ ಜನರು ಧಾವಿಸಿ, ಪ್ರಯಾಣಿಕರ ರಕ್ಷಣೆ ಮಾಡಿದ್ದಾರೆ. ರಕ್ಷಣಾ ಕಾರ್ಯಕ್ಕೆ ಸೇನೆ ಸಿಬ್ಬಂದಿ ಕೂಡ ಕೈಜೋಡಿಸಿದ್ದಾರೆ.

57 ಪ್ರಯಾಣಿಕರಿದ್ದ ಬಸ್, ಮಧ್ಯಾಹ್ನ 3ರ ಸುಮಾರಿಗೆ ಜೈಸಲ್ಮೇರ್‌ನಿಂದ ಹೊರಟಿದೆ. ದಾರಿ ಮಧ್ಯೆ ಬಸ್‌ನ ಹಿಂಭಾಗದಲ್ಲಿ ಹೊಗೆ ಕಾಣಿಸಿಕೊಂಡಿದೆ. ಬಸ್‌ಅನ್ನು ರಸ್ತೆ ಪಕ್ಕ ನಿಲ್ಲಿಸಲು ಚಾಲಕ ಮುಂದಾಗುತ್ತಿದ್ದ ವೇಳೆಯೇ, ಬೆಂಕಿಯು ಇಡೀ ಬಸ್‌ಗೆ ವ್ಯಾಪಿಸಿಕೊಂಡಿದೆ.

ಜೈಸಲ್ಮೇರ್‌ನಿಂದ ಹೊರಟ 10 ನಿಮಿಷಗಳ ಬಳಿಕ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. 19 ಮಂದಿ ಪ್ರಯಾಣಿಕರು ಸಜೀವ ದಹನವಾಗಿದ್ದರೆ, ಅಸ್ವಸ್ಥಗೊಂಡಿದ್ದ ಒಬ್ಬರು ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಧಾನಿ ಮೋದಿ ಅವರು, ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ, ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ಒಸಿಯಿಂದ ವಿನಾಯಿತಿ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ 1200 ಚದರಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆಯುವುದರಿಂದ ವಿನಾಯಿತಿ ನೀಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 1200 ಚದರಡಿ ನಿವೇಶನದಲ್ಲಿ ನೆಲ + 2 ಅಂತಸ್ತು ಅಥವಾ ಸ್ಟಿಲ್ಟ್ + 3 ಅಂತಸ್ತುಗಳವರೆಗಿನ ವಸತಿ ಕಟ್ಟಡಗಳಿಗೆ ಒಸಿ ಅಗತ್ಯವಿಲ್ಲ. ಅ.9ರಂದು ನಡೆದ ಸಚಿವ ಸಂಪುಟದಲ್ಲಿ ಕೈಗೊಂಡ ನಿರ್ಣಯದಂತೆ ಈ ಆದೇಶ ಹೊರಡಿಸಲಾಗಿದೆ.

ಮತದಾರರ ಪಟ್ಟಿ ತಯಾರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು, ಮತದಾರರ ಪಟ್ಟಿ ತಯಾರಿಸುವ ಸಂಬಂಧ ಚುನಾವಣಾಧಿಕಾರಿಗಳನ್ನು ನೇಮಿಸಿ ರಾಜ್ಯ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ) ಚುನಾವಣೆ ನಿಯಮಗಳಂತೆ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಅಧಿಕಾರಿಗಳನ್ನು ನೇಮಿಸಿದೆ. ರಾಜ್ಯ ಚುನಾವಣಾ ಆಯೋಗವು ಜಿಬಿಎ ಮುಖ್ಯ ಆಯುಕ್ತರನ್ನು ಜಿಲ್ಲಾ ಚುನಾವಣಾ ಅಧಿಕಾರಿ ಎಂದು ನೇಮಿಸಿ, ಐದು ನಗರ ಪಾಲಿಕೆಗಳು ಹಾಗೂ ಅವುಗಳಲ್ಲಿರುವ ಎಲ್ಲ ವಾರ್ಡ್‌ಗಳ ವ್ಯಾಪ್ತಿಯನ್ನು ನೀಡಲಾಗಿದೆ. ಐದು ನಗರ ಪಾಲಿಕೆಗಳ ಆಯುಕ್ತರು ಆಯಾ ನಗರ ಪಾಲಿಕೆಗಳ ಎಲ್ಲ ವಾರ್ಡ್‌ಗಳಿಗೆ ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳಾಗಿರುತ್ತಾರೆ.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳು ತಮ್ಮ ವ್ಯಾಪ್ತಿಯ ವಾರ್ಡ್‌ಗಳ ಚುನಾವಣಾ ಕಾರ್ಯಗಳನ್ನು ವಿಧ್ಯುಕ್ತವಾಗಿ ನಿರ್ವಹಿಸಲು ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಮತದಾರರ ನೋಂದಣಿ) ನಿಯಮಗಳು- 2025ರಂತೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸಲು ಆದೇಶಿಸಿದೆ.

ಕಾನೂನು ಬಾಹಿರ: ‘ವಾರ್ಡ್‌ಗಳ ಕರಡು ಅಧಿಸೂಚನೆಗೆ ಆಕ್ಷೇಪ ಸಲ್ಲಿಸಲು ಇನ್ನೂ ಅವಕಾಶವಿದೆ. ವಾರ್ಡ್‌ಗಳ ಅಂತಿಮ ಅಧಿಸೂಚನೆಗೆ ಮುನ್ನವೇ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸಲು ರಾಜ್ಯ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿರುವುದು ಕಾನೂನುಬಾಹಿರ’ ಎಂದು ಹಿಂದಿನ ಬಿಬಿಎಂಪಿಯ ಆಡಳಿತ ಪಕ್ಷದ ನಾಯಕ ಪದ್ಮನಾಭರೆಡ್ಡಿ ಆರೋಪಿಸಿದರು.

ಜಿಬಿಎ: ಹೈಕೋರ್ಟ್‌ನಲ್ಲೇ ಅರ್ಜಿ ಸಲ್ಲಿಸಲು ‘ಸುಪ್ರೀಂ’ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆ ಪ್ರಶ್ನಿಸಿ ಹೈಕೋರ್ಟ್‌ನಲ್ಲೇ ಅರ್ಜಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಅರ್ಜಿದಾರರಿಗೆ ಮಂಗಳವಾರ ನಿರ್ದೇಶನ ನೀಡಿದೆ.

ಜಿಬಿಎ ರಚನೆ ಕಾನೂನುಬಾಹಿರ ಎಂದು ಆರೋಪಿಸಿ ಹಿರಿಯ ರಂಗಕರ್ಮಿ ಪ್ರಕಾಶ ಬೆಳವಾಡಿ ಹಾಗೂ ಇತರರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜಾಯ್‌ಮಲ್ಯ ಬಾಗ್ಚಿ ಪೀಠವು, ‘ಚುನಾಯಿತ ಜನಪ್ರತಿನಿಧಿಗಳ ಅಧಿಕಾರ ಹರಣ ಆಗುತ್ತಿರುವ ಬಗ್ಗೆ ನೀವು ಎತ್ತಿರುವ ಪ್ರಶ್ನೆ ಸೂಕ್ತವಾಗಿದೆ. ಆದರೆ, ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸದೆ ನೇರವಾಗಿ ಸುಪ್ರೀಂ ಕೋರ್ಟ್‌ಗೆ ಬಂದಿದ್ದು ಏಕೆ’ ಎಂದು ಪ್ರಶ್ನಿಸಿತು.

ಆಗ ಅರ್ಜಿದಾರರ ಪರ ವಕೀಲರು, ‘ಜಿಬಿಎ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ. ಹೀಗಾಗಿ, ಸುಪ್ರೀಂ ಕೋರ್ಟ್‌ಗೆ ಬಂದಿದ್ದೇವೆ’ ಎಂದರು. ಪೀಠವು ಅರ್ಜಿ ಹಿಂಪಡೆಯಲು ಅರ್ಜಿದಾರರಿಗೆ ಸ್ವಾತಂತ್ರ್ಯ ನೀಡಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

PROPERY COLLATERALS/ Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

Finance

WE ARRANGE Mortgage, Purchase Construction and Business Loan from Scheduled Bank. Mrs Jyothi- 8971132289/ 9380509779.

TOURS & TRAVEL

Travel

SRILANKA TOUR, WONDERFUL ONE WEEK, IMPORTANT PLACES INCLUDED, BEST ARRANGEMENTS, LIMITED SEATS. GANESH SHENOY 8310028157

PUBLIC NOTICE

PUBLIC NOTICE

THIS IS TO NOTIFY the General Public that our client proposes to purchase the below mentioned Schedule Property from (1) Mr.Vinod Kumar Agarwal, Son of Mr.Bhagirath Prasad Agarwal, Aged about 64 years, (2) Sri.Kushal Agarwal, Son of Sri.Vinod Kumar Agarwal, Aged about 40 years and (3) Sri.Prateek Agarwal, Son of Sri.Vinod Kumar Agarwal, Aged about 37 years, all are residing at No.952, 21st Main Road, 2nd Cross, Bangalore– 560070, who have represented that they succeeded to the Schedule Property from Smt.Rekha Agarwal. They further represent that Smt.Rekha Agarwal had earlier acquired ownership and possession to the Schedule Property under a registered Sale Deed dated 09/12/1995, registered as Document No.3175/1995-96 in Book-I, Volume 1901 at Pages 128 to 138, in the Office of Sub-Registrar, Jayanagar, Bangalore. Persons objecting for the proposed purchase or having any right in the Schedule Property may lodge their objections and/or claims with the undersigned along with supporting documentary evidence within **Fifteen days** from the date of this publication and objections and/or claims received thereafter will not be binding on our client and our client will proceed to purchase the Schedule property as if there are no claims/objections.

:SCHEDULE PROPERTY:

All that Property consisting of Site with a Residential Building bearing Municipal No.952 (Old Site No.952), situated at 21st Main Road, Banashankari 2nd Stage, Ward No.165/ Ganeshmandira Ward, E-PID No.1401693181, Bangalore and Site measuring East to West : 70 Feet and North to South : 50 Feet and totally measuring 3500 Sq.Ft., and bounded on:-
East by : Site No.929;
West by : Road;
North by : Site No.953;
South by : Site No.951.

YASEEN BABU,
K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001. Ph : +91 9845855933
Email: kmlegaladvocates@gmail.com
Place: Bangalore Date: 15/10/2025

JOB OPPORTUNITIES

Marketing & Sales

WANTED SALES Executives to Promote Pre School Books. Any Graduate with 2 wheeler. Salary 20-25k +TA +Incentives. WhatsApp Resume: 8886436531

REQUIRED M/F Marketing Managers & Marketing Executives B'lore & all Karnataka for Education Projects Salary upto 1Lack: 9036052760.

Teachers/ Professors

BEST SCIENCE, Maths, English, Hindi, Kannada , PE Teachers, NTT (Preferably NORTH EASTERN SIDE) for reputed CBSE SCHOOL (West Bangalore-Metro connected)Good Salary for Honest & dedicated Teachers 9449835744, 9535601743.

THE DECCAN PU COLLEGE BENGALURU
#11, 18th Main Rd, Brindavan Layout, Padmanabhanagar, Bengaluru, Karnataka 560061
Part of Deccan International School, a 23+ year old School with state of the art Infrastructure
JOB OPPORTUNITY
Positions open
- Principal
- A Master's degree in any discipline is required.
- Minimum 10 years of experience in a Pre-University College setting in Karnataka, with at least 5 years in a leadership role.
- Proven ability to lead and inspire teams, fostering collaboration, innovation, and continuous improvement.

LOCATION: PADMANABHANAGAR, SOUTH BANGALORE
✓ Attractive compensation package commensurate with qualification & experience.
✓ We are equal opportunity employer.
Candidates may email their CV with latest photograph
work@deccan.edu.in

DHANWANTARI GROUP OF INSTITUTIONS
39/1, Vinayaka Nagar, Chikkabanavara Bengaluru-560090. Mob: 91 9606996276
FACULTY & STAFF RECRUITMENT
We are inviting applications from highly motivated and qualified candidates for various Teaching and Non - Teaching positions.

TEACHING PROFESSIONALS

DHANWANTARI NURSING COLLEGE
1. ASSISTANT PROFESSOR : Psychiatric Nursing & Medical Surgical Nursing Qualification: M.Sc. Nursing with Minimum 03 Years Experience.
2. NURSING TUTOR : Qualification: M.Sc. Nursing (Any Specialisation); B.Sc. Nursing with Minimum 02 Years Experience.

DHANWANTARI COLLEGE OF PHARMACY
1. ASSISTANT PROFESSOR : Pharmaceutical Chemistry & Pharmaceutical Analysis. Qualification: M. Pharm with Minimum 03 Years Experience.
2. LAB TECHNICIAN : Qualification: B Pharm/ D Pharm / B.Sc. Chemistry with Minimum one year Experience.

DHANWANTARI COLLEGE OF PHYSIOTHERAPY
1. PRINCIPAL : Qualification: MPT with 05 years teaching Experience or Ph.D
2. ASSISTANT PROFESSOR : Qualification: MPT with minimum 02 years teaching Experience

DHANWANTARI INSTITUTE OF ALLIED HEALTH SCIENCE
1. ASSISTANT PROFESSOR : Medical Imaging Technology with minimum 03 Years Experience Qualification: M.Sc. MIT
2. LECTURER/ TUTOR : Medical Imaging Technology; Qualification: M.Sc. / B.Sc. MIT
3. ASSISTANT PROFESSOR : Medical Laboratory Technology with minimum 03 Years Experience Qualification: M.Sc. MLT
4. LECTURER/ TUTOR : Medical Laboratory Technology; Qualification: M.Sc. / B.Sc. MLT
5. ASSISTANT PROFESSOR : Operation Theatre & Anesthesia Technology with Minimum 03 Years Experience. Qualification: M.Sc. OTAT with minimum 03 Years Experience
6. LECTURER/ TUTOR : Operation Theatre & Anesthesia Technology; Qualification: B.Sc. / M.Sc. OTAT

DHANWANTARI ACADEMY FOR MANAGEMENT STUDIES
1. ASSISTANT PROFESSOR : Qualification: MBA with Minimum 02 Years Experience and Specialisation in Business Analytics, Supply Chain Management, Finance

SILVER SPRING INTERNATIONAL SCHOOL
1. HINDI TEACHER : Qualification: Graduation with B. Ed (Specialisation in Hindi) with Minimum 02 Year Experience

NON - TEACHING STAFF
1. HEAD OF DIGITAL MARKETING : (Education Sector) with 3+ Years Experience in Google Ads, SEO, SMM and Lead Generation Campaigns.
2. LIBRARIAN : Qualification: B. Lib or M. Lib Minimum One Year Experience.

Interested and eligible candidates shall mail the CV to hr@majfoundation.com by 23th October 2025

"WANTED TRAINED Home Tutor for 8th Standard CBSE- Math, Science,Social, English`near Yashwantpur and Keyboard Trainers. Contact: 9243101700/ 9243127555"

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

PUBLIC NOTICE
To Place your Classified Ads Contact
9731810277

Multiple Vacancy

ಫ್ರೀಡಂ ಟಿವಿ NEWS
ಫ್ರೀಡಂ ಟಿವಿ
(ಸಂಪಿಗೆ ಮೀಡಿಯಾ ಪ್ರೈವೇಟ್ ಲಿಮಿಟೆಡ್), ಬ್ರಿಗೇಡ್ ಪ್ಲಾಜಾ, 6ನೇ ಮಹಡಿ, ಎಸ್.ಸಿ. ರಸ್ತೆ, ಗಾಂಧಿನಗರ, ಬೆಂಗಳೂರು.
ಬೇಕಾಗಿದ್ದಾರೆ
ಆಫೀಸ್ ಅಡ್ಮಿನಿಸ್ಟ್ರೇಟರ್ 1 ಹುದ್ದೆ
ಅಡ್ಮಿನ್ ಹುದ್ದೆಗೆ ಲಿಮಿಟೆಡ್ ಕಂಪನಿಗಳಲ್ಲಿ 10+ ವರ್ಷಗಳ ಅನುಭವ ಹೊಂದಿರಬೇಕು. ಅಕೌಂಟ್, ಪರ್ಚೇಸ್, ಸೇಲ್ಸ್ ಕೋ ಆರ್ಡಿನೇಷನ್, ಆಡಿಟ್ ಹಾಗೂ ಲೀಗಲ್ ಕಂಪ್ಲೈನ್ಸ್ ನಲ್ಲಿ ಹಿಡಿತ ಹೊಂದಿರಬೇಕು.
ಅಕೌಂಟೆಂಟ್ - 1 ಹುದ್ದೆ
ಅಕೌಂಟೆಂಟ್ ಹುದ್ದೆಗೆ ಕನಿಷ್ಠ ಮೂರುವರ್ಷ CA ಕಚೇರಿಯಲ್ಲಿ ದುಡಿದ ಅನುಭವ ಇರಬೇಕು.
ಸಂಪರ್ಕಿಸಿ: 9448972702
ವಾಟ್ಸಪ್ ನಂ: 6366513906

General

REQUIRED SPORTS teacher, maths and english Teacher for high school contact Kenmore School 9901501185 or email kenmoreschool@gmail.com

WANTED STORE Assistants in Jayanagar and Koramangala Timings 9.30 am to 9 pm Sunday holiday salary Rs. 15,000. Location Room can be provided. Call 8050666007

Wanted

REQUIRED
Advocates with a minimum of 2 years' experience are invited to apply for vacancies to attend matters in the Civil Court, High Court, and other related courts.
We are also hiring for the following positions:
• Office Assistants • Typists
Salary: Negotiable for all positions.
V.B.SHIVAKUMAR, Advocate & Solicitor
VBS LAW INC
No.230, First Floor, 4th Main Road, Chamrajpet, Bengaluru-18
Ph: 080-22426644, 26678443
Mobile: 98861 17443
Email: vbshivakumar_adv@yahoo.com

REAL ESTATE SELLING

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call : 74115 54412

Commerical

Indiranagar

FOR SALE 600 Sq.Ft, 4 Floors - N-E Corner Commercial BDA Property at Indiranagar, Bangalore. Price 3.5 Cr (Nego) Genuine buyers only. Contact – 9845178515

RENTAL PROPERTIES

Accommodation Available

House

LEASE KANAKA Nagar Furnished Two Bhk Ground 1km Manyata Tech Park Contact 9901106749 Brokers Excuse

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Lost

DOCUMENT LOST
I, KALYANA SUNDARAM D, Residing at #352 and 353 Subhash Nagar, A Block, Begur, Bengaluru- 560068, have lost my Original Sale Deed and Khata Document No./ Identification: BAS-1-01379- 2004-05. Lost Report No. 1745170/2025

Change of Name

I, MUHAMMAD YUNUS, father of Mohammed Taqee Residing at #50, 2nd cross, Pampanagar, Yeshwanthpura Bengaluru-22 have changed my name as MOHAMMED YUNUS vide affidavit dated 9/10/2025 before Notary Sivakumara.M.N. Bengaluru

CHANGE OF NAME
I, SHREE LAKSHMI G .S. & SREELAKSHMI G. S. W/o Gopalakrishna Rao K.N, residing at No.167, Gangamma Gudi Road, M.V. Extension, Hosakote, Bengaluru - 562114, declare that the above names pertain to me only. Henceforth I shall be known as SHREE LAKSHMI G.S. vide affidavit 13.10.2025 before notary B.Hanumantharaya, Bengaluru

CHANGE OF NAME
I, D. RAMAKHRISHNAN residing at No. 375, 6th Main, 3rd Block, HBR Layout, Bangalore - 560043 have changed my name to RAMAKHRISHNAA vide affidavit dated 14/10/2025, before Notary C.V. Earappa, Bangalore. Henceforth I shall be known as New name RAMAKHRISHNAA only.

ANNOUNCEMENT
I, Vinod Kumar V S/o Venkateshappa, aged 34 years, residing at #1851/8, 6th Cross, Near Abhayanjaneya Swamy Temple, Shanthinagar, Karanjikatte Kolar-563101, declare in my daughter's Birth certificate /Aadhar wrongly mentioned as Vedhanshi.V, instead of her correct name MANVITHA SKANDANSHI. V, vide affidavit dated 14-10-2025 before notary, N.Krishnegowda Kolar. Henceforth she shall be called as MANVITHA SKANDANSHI. V

I, SYEDA TASLEEMA resident of No.145, Ward No.5, Indiranagara, Anekal Town, Bangalore-562106 have changned my name to TASLEEMA vide affidavit dated 10/10/2025 sworn before notary Amaranarayana, Bangalore

CHANGE OF NAME
I, GOPALA KRISHNA RAO K. N. & GOPAL KRISHNA RAO K. N. S/o Narayana Rao K N, residing at No.167, Gangamma Gudi Road, M.V. Extension, Hosakote, Bengaluru - 562114, declare that the above names pertain to me only. Henceforth I shall be known as GOPALA KRISHNA RAO K. N. vide affidavit 13.10.2025 before notary B.Hanumantharaya, Bengaluru

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact:
9845114560
9886213331

Prestige®

ಕುಕ್ಕಿಂಗನ್ನು ಪ್ರೀತಿಸುವವರು,
ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ.

ಅಭಿಮಾನಕ್ಕೆ ಯೋಗ್ಯವಾದ ನಾವೀನ್ಯತೆಗಳು ಈಗ ಸಂಭ್ರಮಪಡುವ ಬೆಲೆಗಳಲ್ಲಿ

ಶುಭ ಉಳಿತಾಯ (GST ಬೆಲೆ ಇಳಿಕೆ) ಮತ್ತು ಶುಭ ಉತ್ಸವದ ಕೊಡುಗೆಗಳೊಂದಿಗೆ ಸಂಭ್ರಮವನ್ನು ದ್ವಿಗುಣಗೊಳಿಸಿ

75 Years of Prestige

ಖರೀದಿಸಿ*
ಟ್ರೈ-ಪ್ಲೈ 3 ಪೀಸ್ ಕುಕ್‌ವೇರ್ ಸೆಟ್*
ಎಂಆರ್‌ಪಿ: ₹4 990.00
(GST ಇಳಿಕೆ ಬಳಿಕದ ಬೆಲೆ)



ಟ್ರೈ-ಪ್ಲೈ ಶೀಲ್ಡ್ ತಂತ್ರಜ್ಞಾನ

ಪ್ರೆಸ್ಟೀಜ್ ಶುಭ ಉತ್ಸವ
10 ಸೆಪ್ಟೆಂಬರ್ - 31 ಅಕ್ಟೋಬರ್, 2025

ಉಚಿತ*
₹3 440.00 ಮೌಲ್ಯದ
ಸ್ವಚ್ಛ್ ಟ್ರೈ-ಪ್ಲೈ
ಕುಕ್ಕರ್ 2ಲೀ

ಖರೀದಿಸಿ
ಸ್ವಚ್ಛ್ ಟ್ರೈ-ಪ್ಲೈ 3 ಲೀ ಕುಕ್ಕರ್
ಎಂಆರ್‌ಪಿ: ₹3 810.00
(GST ಇಳಿಕೆ ಬಳಿಕದ ಬೆಲೆ)

ಮತ್ತು **ಪಡೆಯಿರಿ**
₹1 530.00 ಮೌಲ್ಯದ
ಸ್ಟೇಯಿನ್‌ಲೆಸ್ ಸ್ಟೀಲ್
ಕಡಾಯಿ 24ಸೆಂಮೀ
ಉಚಿತ*

ಖರೀದಿಸಿ
ಮ್ಯಾಜಿಕ್ ಬೇಸ್ ಪ್ರೀಮಿಯಂ
ಸ್ಟೇಯಿನ್‌ಲೆಸ್ ಸ್ಟೀಲ್ ಕ್ಯಾಸರೋಲ್ 24 ಸೆಂಮೀ
ಎಂಆರ್‌ಪಿ: ₹6 080.00
(GST ಇಳಿಕೆ ಬಳಿಕದ ಬೆಲೆ)

ಮತ್ತು **ಪಡೆಯಿರಿ**
₹3 100.00 ಮೌಲ್ಯದ
ಡೀಲಕ್ಸ್ ಆಲ್ಫಾ
ಸ್ವಚ್ಛ್ ಕುಕ್ಕರ್ 3ಲೀ
ಉಚಿತ*

ಖರೀದಿಸಿ
ಸ್ಟೇಯಿನ್‌ಲೆಸ್ ಸ್ಟೀಲ್ ಪ್ಲಾಟಿನಾ
3 ಪೀಸ್ ಕುಕ್‌ವೇರ್ ಸೆಟ್*
(ಕಡಾಯಿ, ಫ್ರೈ ಪ್ಯಾನ್, ಸಾಸ್ ಪ್ಯಾನ್)
ಎಂಆರ್‌ಪಿ: ₹3 730.00
(GST ಇಳಿಕೆ ಬಳಿಕದ ಬೆಲೆ)

ಮತ್ತು **ಪಡೆಯಿರಿ**
₹2 490.00 ಮೌಲ್ಯದ
ಸ್ಟೇಯಿನ್‌ಲೆಸ್ ಸ್ಟೀಲ್
ಪಾಪ್ಯುಲರ್ ಸ್ವಚ್ಛ್ ಕುಕ್ಕರ್ 3ಲೀ
ಉಚಿತ*

ಎಲ್ಲಾ ಬೆಲೆ ಇಳಿಕೆಗಾಗಿ QR ಕೋಡ್ ಸ್ಕ್ಯಾನ್ ಮಾಡಿ

CUSTOMER CARE NO 080-60004411

Scan to find Prestige Xclusive stores

Shop Online on shop.ttkprestige.com

ttk

ಪರಿಷ್ಕೃತ GST ದರಗಳು 22 ಸೆಪ್ಟೆಂಬರ್ ನಿಂದ ಜಾರಿಯಾಗುತ್ತವೆ.

*ನಿಯಮಗಳು ಮತ್ತು ಶರತ್ತುಗಳು: ಉಲ್ಲೇಖಿಸಿರುವ ಬೆಲೆಗಳು ಎಲ್ಲಾ ತೆರಿಗೆಗಳು ಸೇರಿರುವ MRP ಆಗಿದ್ದು ಇದು ಒಂದು ಯೂನಿಟ್‌ನ ನಿವ್ವಳ ಪ್ರಮಾಣಕ್ಕೆ ಆಗಿರುತ್ತದೆ. ಡಿಸ್ಕೌಂಟ್‌ಗಳು MRP ಮೇಲೆ ಮಾತ್ರ ಅನ್ವಯವಾಗುತ್ತವೆ ಮತ್ತು ಎರಡು ಆಫರ್‌ಗಳನ್ನು ಒಟ್ಟುಗೂಡಿಸುವ ಅವಕಾಶ ಇರುವುದಿಲ್ಲ. ಪ್ರತಿಯೊಂದು ಆಫರ್, ಖರೀದಿಸಿದ ಒಂದು ಯುನಿಟ್ ಮೇಲೆ ಮಾತ್ರ ಅನ್ವಯವಾಗುತ್ತದೆ, ಜೊತೆಗೆ ಅರ್ಹ ಖರೀದಿಗೆ ಒಂದು ಉಚಿತ ಯುನಿಟ್‌ನ್ನು ನೀಡಲಾಗುತ್ತದೆ. ಆಯ್ದ ಮಾಡೆಲ್‌ಗಳ ಮೇಲೆ, ಆಯ್ದ ಸ್ಟೋರ್‌ಗಳಲ್ಲಿ ಮತ್ತು ಸ್ಟಾಕ್‌ಗಳು ಮುಗಿಯುವತನಕ ಮಾತ್ರ ಆಫರ್ ಅನ್ವಯವಾಗುತ್ತದೆ. ಟ್ರೈ-ಪ್ಲೈ 3 ಪೀಸ್ BYK ಕುಕ್‌ವೇರ್ ಸೆಟ್‌ನ ಒಂದು ಯುನಿಟ್‌ನ ಖರೀದಿಯ ಮೇಲೆ, ಗ್ರಾಹಕರು ಒಂದು ಯುನಿಟ್ ಸ್ವಚ್ಛ್ ಟ್ರೈ ಪ್ಲೈ ಕುಕ್ಕರ್ 2ಲೀ ನ್ನು ಉಚಿತವಾಗಿ ಪಡೆಯುತ್ತಾರೆ. ಟ್ರೈ-ಪ್ಲೈ 3-ಪೀಸ್ ಕುಕ್‌ವೇರ್ ಸೆಟ್‌ನಲ್ಲಿ ಫ್ರೈ ಪ್ಯಾನ್ 24 ಸೆಂಮೀ, SS ಲಿಡ್‌ನೊಂದಿಗೆ ಕಡಾಯಿ 24 ಸೆಂಮೀ ಮತ್ತು ಸಾಸ್‌ಪ್ಯಾನ್ 16 ಸೆಂಮೀ ಇರುತ್ತದೆ, ಹಾಗೆಯೇ SS ಪ್ಲಾಟಿನಾ 3-ಪೀಸ್ ಕುಕ್‌ವೇರ್ ಸೆಟ್‌ನಲ್ಲಿ ಫ್ರೈ ಪ್ಯಾನ್ 22 ಸೆಂಮೀ, ಗ್ಲಾಸ್ ಲಿಡ್ ನೊಂದಿಗೆ ಕಡಾಯಿ 22 ಸೆಂಮೀ ಮತ್ತು ಗ್ಲಾಸ್ ಲಿಡ್ ನೊಂದಿಗೆ ಸಾಸ್‌ಪ್ಯಾನ್ 16 ಸೆಂಮೀ ಇರುತ್ತದೆ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ /ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.

Prestige® Xclusive **Outer Ring Road: Hennur Coco:** Ph: 7204250679; **Tumkur Rd. 8th Mile T.Dasarahalli:** Ph: 9972541116; **Koramangala:** Ph: 9663515616, **Tumkur**: Ph: 9164853121; **Bull Temple Rd:** Ph: 26609012; **Malleswaram:** Ph: 9448282470; **Rt Nagar Main Rd:** Ph: 41698761; **Ganganagar Cbi Rd:** Ph: 43705914; **Wheeler Rd:** Ph: 25803080; **Kattriguppe Circle:** Ph: 40900685; **Vijayanagar:** Ph: 9739004750; **Hsr Bda Complex:** Ph: 25726991; **Marathahalli:** Ph: 42197088; **Sanjaynagar,** Ph: 41258300; **Banaswadi Ring Rd:** Ph: 41634115; **Jayanagar:** Ph: 9845066549; **J.P.Nagar:** Ph: 41122235; **Rajarajeshwaringr:** Ph: 28603540, 9008418800; **Kengeri Stl Town,** Ph: 28485296; **Rajajinagar:** Ph: 41731224; **B.T.M.Layout:** Ph: 40939168; **Sarjapura Rd:** Ph: 42038646; **Konankunte Cross:** Ph: 9845057728; **Nagharabhavi Bda Cmplx**: Ph: 9739004750; **Begur:** Ph: 8970366139; **Vidyaranayapura:** Ph: 9845518824; **Wilson Garden:** Ph:9480010720; **Brookefield:** Ph: 28541555; **Ramamurthynagar:** Ph: 08042049545; **Kr Puram:** Ph: 8861494277;**Cambridge Layout,** Ph: 42074468; **Kaggadaspura:** Ph: 7306666610; **Kammanahalli:** Ph:41606044; **Whitefield:** Ph: 40907273;**Chandapura:** Ph: 9036190725; **Dommasandra:** Ph: 9611423555; **Hesarghatta Road:** Ph: 28370400; **Uttarahalli:** Ph: 9986879095; **Anjananagr Magadi Rd:** Ph: 23281206; **Kadugodi:** Ph: 8123042234; **Hosur Rd Huskur Gate:** Ph: 9606406009; **Yelahanka Newtown:** Ph: 8668034376; **Jayamahal Ext,** Ph: 41616484; **Mahalakshmi Lyt:** Ph: 23572233; **Jpnagar 7th Phase, Puttenahalli:** Ph: 41465855; **Kumaraswamy Lyt:** Ph: 8618517716; **Chandra Lyt:** Ph: 9739004750; **Channasandra:** Ph: 9986369569; **Sheshadripuram:** Ph: 8711090976; **Kasturinagar:** Ph: 08049923166; **Attibele:** Ph: 9341221525; **Jigani:** Ph: 8762069852; **Sarjapura Town:** Ph: 9036373175; **Hosa Rd Junction:** Ph: 9845597099; **Mathikere**: Ph: 6366636592; **Basaveshwaranagar:** Ph: 9739591008; **Thalagatapura:** Ph: 9964116888; **Hegganahalli:** Ph: 28360289; **Gottigere:** Ph: 8431241099; **Ullal:** Ph: 9686646565; **Jayanagar 4th Block East Extension:** Ph: 9945446335; **Nelamangala:** Ph: 9632356627; **Kolar:** Ph: 9738882584; **Channapatna:** Ph: 9686661294; **Madhugiri**: Ph: 9611552805; **Gauribidanur:** Ph: 8317399465; **Gubbi: Ph:** 9035195120/8095459040; **Banshankari Stage 2, Bda Complex:** Ph: 49890679, 9740677740; **Vijayabank Colony, Bilekahalli:** Ph: 8970366139; **Whitefield:** Ph: 08040907273; **Malur:** Ph: 9845028859; **Kumbalagodu:** Ph: 9845014860; **Devanahalli:** Ph: 9845737576; **Thanisandra:** Ph: 9686340159; **Hulimavu:** Ph: 8904654433; **Singanayakanahalli:** Ph: 9151717779; **Anekal:** Ph: 8660070202; **Tiptur**, Ph: 9164688773; **Bhyadarahalli:** Ph: 9845982089; **Hennur Bande:** Ph: 9980097982; **Tc Palya Road**: Ph: 9148775224; **Chikkajaala:** Ph: 9036202892; **Mutthanallur**: Ph: 8970736606; **Madnayakhalli:** Ph: 9886230009; **Hoskote**: Ph: 9845028859; **Sira**: Ph: 8310660400. **For Franchisee Enquiry Contact: Ayush Kumar Sahu, Ph: 9993010283.**

Also Available At: Jayanagar: Sarathy, Ph: 41210047; Vishaals, Ph: 08022447285; Royal Mart, Ph: 8790311104; Anjana Superstores, Ph: 41301836; Kitchenmart, Ph: 26652885; Aravinda, Ph: 41301989;**Bankcolony**:Vardhaman Ind, Ph: 22428300;**Banashankari:**Varada Glass & Crky, Ph: 9980949316; Patel Agn, Ph: 26714285;Patel Ktchen Apl, Ph: 9079061706; Chamundi Ind, Ph: 26712633;**Bilekhalli:**Sree Pooja Ha, Ph: 9036919084; **Bommanahalli:**Sri Durga Ha, Ph: 9900674018;**Chamarjpet:**Vadirajstores, Ph: 41517646;**Devarachikkanahalli:**Sapna Ha, Ph: 9738732036;**Electronic City:**Dream Mart Hm, Ph: 9148934858;**Hosa Rd:**Maharaja Kw-9036400829;**Hosakota:**Dream Mart Hm-9964744480;**Isro Layout;**Bhumi Kitchen, Ph: 9916830850; **Jp Nagar**: Surya Kitchen World, Ph: 9449762988;**Kanakapura Rd**: Royal Mart, Ph: 28425777;**Padmanabnagar:**Royalmart, Ph: 9886088993;**Uthrahalli:**Royalmart, Ph: 26394114;Rme Super Market, Ph: 9964228208;**Mysore Road:**The Karnataka Metal Industry, Ph: 9449342727;**Ayyappanagar:**Top Mart Sm, Ph: 7204448111; **Babusapalya**:Karnataka Ha, Ph: 8105754544;**Basaveshwarnagar:**Bigday Hm, Ph: 9972517344; Mahaveer Ha, Ph: 9844173501; Modern Colln, Ph: 23583440;Aadhinath Kitchen Gal, Ph: 41220555;**Gayathri Ngr:**J.K.Steel, Ph: 23320853;**Giri Nagar**:Vidya Ent, Ph: 9449988650;Matahji Ha, Ph: 7019385120; **Bagalgunte**:Royal Mart, Ph: 9538000072;**Chandra Layout:**Rajguru Kw, Ph: 9513034351; Pavan Kw, Ph: 8618028319;**Ganganagar:**Salemindustries, Ph: 41284470;Patel Ind, Ph: 8050899296;**Hesargatta Main Rd:**Royal Mart, Ph: 28398200;**Horamavu:**Mamtha Ha, Ph: 8880050050;**Hrbr Layout:**Bhavani Ha, Ph: 9845916164;**Harlurur**: Vinayaka Ha, Ph: 7760531454:**Katriguppe:**Mk Metal Mart, Ph: 9035779199;**Kr Puram:**Srm Elect, Ph: 9845445748; Pooja Ele, Ph: 9738850503; **Boodhigere Rd**:New Royal Fresh, Ph: 9538038885; **Kamanhalli:**Ramdev Steel, Ph: 7259575732 ;Hm Traders, Ph: 9964797616;**Kasavanahalli:**Mathaji Ha, Ph: 8880796036;**Kunadanahalli:** New Prakash Ha, Ph: 7090444111; **Kengeri**;Falcon Hm, Ph: 7829999066;**Koramangala:**Sowbhagya Traders, Ph: 7337733887;**Kmr Swy Layout**:Patel Ha, Ph: 8951979665;**Laggere:**Top Mart, Ph: 9110246047;**Lnpura:**Arihanth Ent, Ph: 7899633338;**Malleshwaram:**Deviprasad Ha, Ph: 23564536;Bright Novelty, Ph: 23343505;**Mathikere:**M.Bhawarlals Inc, Ph: 41724740; Maharaja Agency, Ph: 41278050; **Kadugodi:**Little Wonder, Ph: 9961224224;**Madiwala:**Surya Ha, Ph: 9449635332;**Malleshpalya:**Bajrang Ha, Ph: 9449526463;New Bheru Ha, Ph: 9448680738;Ramdev Ha, Ph: 9035175860;Sri Bhagawathi Ha, Ph: 9590575427; Maa Ambe Ha, Ph: 8884198322; **Magadiroad:**Royal Mart, Ph: 23584498;**Annaporneshwari Nagar:**Deepak Ha, Ph: 9148912736;**M S Palya:**Royal Mart, Ph: 8147014079;**B Narayanpura:** Ph: Mart; Ph: 7676726487;**Rajajinagar:** R S Mart, Ph: 6363602929; Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World, Ph: 41285801;Jayalakshmi Kw, Ph: 9844755146; Pooja Stl Cent, Ph: 23327014; **Rr Nagar:**Milan Ha, Ph: 28605619;Pavan Kg, Ph: 9739207043;**Tavarakere:**Mytri Mart Sm, Ph: 7996598838;**T C Palya:**Rhk Super Mkt, Ph: 9731668995; Big Day Sm, Ph: 8867604818; Karnataka Ha, Ph: 8105754544;**Tipsandra:**Pawar Ha, Ph: 9980517021;Milan Ha, Ph: 9986196375;Ramdev Ha, Ph: 7406901545;**Ulsoor**:Aishwaryapranam Ha, Ph: 9902788429;Pranam Steel Center, Ph: 9448053781;**Udaynagar**:Mother India-9036189765;**Venkatapura:**Pooja Kg-9900426176;**Vijayanagar:**Vijaylaxmi Kw, Ph: 9845022284; Mahendras, Ph: 23141126;Maruthi Ha, Ph: 8904689155;**Vidyarnapura**:Praksh Kw, Ph: 8050620877,Mahalakshmi Steel House, Ph: 9663375159;All Seasons Hm, Ph: 9946728736;**Whitefield:**Rolla Hm, Ph: 9148003448;Loyalcity, Ph: 7892565797;Royal Mart, Ph: 7079734574;**Yelahanka**:Royalmart, Ph: 41705760;Mutha Electricals, Ph: 22971920;Sai Kitchen World Ph: 9632811797; **Btm Layout**: Patel Agencies, Ph: 9482853401;**Tumkur:**N.R Metal Agency, Ph: 0816-2275003; Kavitha Kitchen Ware; Ph: 9538537166;Surya Metal Store, Ph: 9731351050;Tumkur Trade Centre, Ph: 9901432287; Dharshan Ha, Ph: 9632132567; Sudha Ha, Ph: 9964011253; **Gubbi**:Keerthi Gas Stove, Ph: 9686004169; **Tiptur:** Sri Sai Electronics, Ph: 8861432166;Srirama-Ent, Ph: 9880362018; Kumar And Kumar, Ph: 9141609900;**Turuvekere**:Sri Sai Electronics, Ph: 8861432166; **Pavgada**:Shivanagere Ha, Ph: 9880768236; Meenakshi Appl, Ph: 9880360326; **Sira**:Swamy Ent, Ph: 9741561491; Lakshmi Sreel, Ph: 9060434807; Mallikarjuna Ha, Ph: 8123206930; **Madhugiri**:Akshya Ha, Ph: 9141786066; Vinayaka Store, Ph: 9900219291; **Kunigal:**Karnataka Metal Stores, Ph: 9448550390; New Karnataka Steel Centre, Ph: 08132221548; Karnataka Ha, Ph: 8892197645; **Kgf**-Prakash Ha, Ph: 9845113454;**Bangarpet:** Kumar Stores, Ph: 9845935240; **Gauribidanur:**Sri Raju Ha, Ph: 9448249527; Dhighvijaya Elec, Ph: 7204757456;**Kanakapura:**Sri Kabbalamma Ha, Ph: 9880835508;**Kolar**:Reddy Ele, Ph: 9844472531;Rakesh Ele, Ph: 9880634555;Naveenprakash Ha, Ph: 9844997787;**Malur:**Srm Elec, Ph: 9845445748; Reddy Ele, Ph: 9844435121;**Vijayapura**: Rmcity, Ph: 9845164990;Reddy Ele, Ph: 9900336061;**Devanahalli:**New Sowmya Ele, Ph: 9141335210;**Chintamani:**Great India Ele, Ph: 9742963551;Lavanya Stores, Ph: 9242498294.

Available at: Pai INTERNATIONAL

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಒಳ್ಳೆಯ ಅಭಿರುಚಿ ನಾಗರಿಕತೆಯ ಹೆಗ್ಗುರುತು.

-ಎಸ್.ವಿ. ರಂಗಣ್ಣ

ಸಂಪಾದಕೀಯ

ಇಸ್ರೇಲ್–ಹಮಾಸ್ ಶಾಂತಿ ಒಪ್ಪಂದ ಗಾಜಾದಲ್ಲಿ ನೆಲಸಲಿ ಶಾಶ್ವತ ಶಾಂತಿ

ಸಾವುನೋವುಗಳ ಚೀತ್ಕಾರದಿಂದ ಕಂಗೆಟ್ಟಿದ್ದ ಗಾಜಾ ಪಟ್ಟಿಯೊಳಗೆ ಜೀವಸಂಚಾರದ ಕಲರವ ಕೇಳಿಸತೊಡಗಿದೆ. ನೆರವಿನ ಸಾಮಗ್ರಿಗಳನ್ನು ಹೊತ್ತಿರುವ ಟ್ರಕ್‌ಗಳು ಗಾಜಾ ಪ್ರವೇಶಿಸುತ್ತಿವೆ. ಐರೋಪ್ಯ ಒಕ್ಕೂಟ, ಪ್ಯಾಲೆಸ್ಟೀನಿಯನ್ ಪ್ರಾಧಿಕಾರ ಹಾಗೂ ವಿಶ್ವಸಂಸ್ಥೆಯ ಮಾನವೀಯ ನೆರವು ಸಂಸ್ಥೆ ಸೇರಿದಂತೆ ಹಲವು ಸಂಘಟನೆಗಳು ಪ್ಯಾಲೆಸ್ಟೀನಿಯರಿಗೆ ನೆರವು ನೀಡಲು ಮುಂದಾಗಿವೆ. ಇಸ್ರೇಲ್‌ನ ಸೇನಾಪಡೆಗಳ ಸದ್ದುಗದ್ದಲ ಗಾಜಾಪಟ್ಟಿಯಿಂದ ನಿಧಾನವಾಗಿ ಕಡಿಮೆಯಾಗುತ್ತಿದೆ ಹಾಗೂ ತಮ್ಮ ವಾಸಸ್ಥಳಗಳನ್ನು ತೊರೆದುಹೋಗಿದ್ದ ಅಸಂಖ್ಯಾತ ಪ್ಯಾಲೆಸ್ಟೀನಿಯರು ಮನೆಗಳಿಗೆ ಮರಳುತ್ತಿದ್ದು, ಹೊಸ ಬದುಕು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಹಮಾಸ್ ಸೆರೆಯಲ್ಲಿದ್ದ ಒತ್ತೆಯಾಳುಗಳು ಬಿಡುಗಡೆಗೊಂಡಿದ್ದಾರೆ. ಇಸ್ರೇಲ್ ಜೈಲುಗಳಲ್ಲಿದ್ದ ಪ್ಯಾಲೆಸ್ಟೀನ್ ಕೈದಿಗಳಿಗೂ ಸ್ವಾತಂತ್ರ್ಯ ದೊರೆತಿದೆ. ಇಸ್ರೇಲ್ ಪ್ರಹಾರದಿಂದ ಸದ್ಯಕ್ಕೆ ಪಾರಾಗಿರುವ ಗಾಜಾ ಪಟ್ಟಿಯಲ್ಲಿ ಸಂಕಟ–ಸೂತಕದ ನಡುವೆಯೂ, ಯುದ್ಧ ಕೊನೆಗೊಂಡಿರುವ ಕಾರಣದಿಂದಾಗಿ ನೆಮ್ಮದಿಯ ನಿಟ್ಟುಸಿರು ಹೊರಹೊಮ್ಮುತ್ತಿದೆ. 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸಿದ ದಾಳಿಯೊಂದಿಗೆ ಆರಂಭವಾದ ಯುದ್ಧ ಕೊನೆಗೊಂಡಿದೆ. ಹಮಾಸ್ ದಾಳಿಯಲ್ಲಿ 1,200 ಇಸ್ರೇಲಿಗರು ಮೃತಪಟ್ಟಿದ್ದರು. ಬಂಡುಕೋರರು 251 ಮಂದಿಯನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿದ್ದರು. ಇಸ್ರೇಲ್ ನಡೆಸಿದ ಪ್ರತಿದಾಳಿಯಲ್ಲಿ ಹಮಾಸ್ ಬಂಡುಕೋರರ ಜೊತೆಗೆ, ಪ್ಯಾಲೆಸ್ಟೀನ್‌ನ ಕನಿಷ್ಠ 67 ಸಾವಿರ ನಾಗರಿಕರು ಬಲಿಯಾಗಿದ್ದಾರೆ ಎನ್ನಲಾಗಿದೆ. ಗಾಜಾಪಟ್ಟಿಯಲ್ಲಿ ಎಗ್ಗಿಲ್ಲದೆ ನಡೆದ ಮಾನವಹಕ್ಕುಗಳ ಹರಣ ಹಾಗೂ ಆ ಅಮಾನವೀಯ ವಿದ್ಯಮಾನಕ್ಕೆ ಅಂತರರಾಷ್ಟ್ರೀಯ ಸಮುದಾಯ ಮೂಕ ಪ್ರೇಕ್ಷಕನಾದುದು ಮಾನವೀಯತೆಗಾದ ಬಹು ದೊಡ್ಡ ಗಾಯವಾಗಿದೆ.

ಇಸ್ರೇಲ್ ಮತ್ತು ಹಮಾಸ್ ನಡುವಣ ಎರಡು ವರ್ಷಗಳ ಯುದ್ಧ ಕೊನೆಗೊಂಡಿದೆ. ಗಾಜಾ ಪಟ್ಟಿಯಲ್ಲಿ ಇನ್ನಾದರೂ ಶಾಶ್ವತ ಶಾಂತಿ ಸ್ಥಾಪನೆಯ ಪ್ರಯತ್ನಗಳು ನಡೆಯಲಿ.

ಎರಡು ವರ್ಷಗಳ ಸಂಘರ್ಷದ ನಂತರ, ಅಮೆರಿಕದ ಅಧ್ಯಕ್ಷ ಟ್ರಂಪ್ ಅವರ ನೇತೃತ್ವದಲ್ಲಿ ಇಸ್ರೇಲ್ ಮತ್ತು ಹಮಾಸ್ ಶಾಂತಿ ಒಪ್ಪಂದ ಮಾಡಿಕೊಂಡಿವೆ. ಸುದೀರ್ಘ ಹಾಗೂ ನೋವಿನಿಂದ ಕೂಡಿದ ದುಃಸ್ವಪ್ನ ಕೊನೆಗೊಂಡಿದೆ; ಪಶ್ಚಿಮ ಏಷ್ಯಾದ ಪಾಲಿಗಿದು ಐತಿಹಾಸಿಕ ಮುಂಜಾವು ಎಂದು ಟ್ರಂಪ್ ಬಣ್ಣಿಸಿದ್ದಾರೆ. ಈ ಸಂದರ್ಭವನ್ನು ಶಾಂತಿ ಮತ್ತು ಅಭಿವೃದ್ಧಿಗೆ ಬಳಸಿಕೊಳ್ಳಬೇಕೆಂದು ಅವರು ಕರೆನೀಡಿದ್ದಾರೆ. ಶಾಂತಿಯ ಬಗೆಗಿನ ಟ್ರಂಪ್ ಅವರ ಆಶಯ ಸರಿಯಾಗಿಯೇ ಇದೆ. ಆದರೆ, ಗಾಜಾ ಪಟ್ಟಿಯಲ್ಲಿ ನಡೆದ ವಿಧ್ವಂಸಕ ಕೃತ್ಯಗಳಿಗೆ ಹಾಗೂ ಮಾನವಹಕ್ಕುಗಳ ಹರಣಕ್ಕೆ ಅಮೆರಿಕದ ಪರೋಕ್ಷ ಬೆಂಬಲವೂ ಇತ್ತೆನ್ನುವುದು ಗುಟ್ಟೇನೂ ಅಲ್ಲ. ಯುದ್ಧದ ವ್ಯಾಪಾರಿಗಳೇ ಶಾಂತಿದೂತರೂ ಆಗುವ ದ್ವಿಪಾತ್ರ ಅಭಿನಯಕ್ಕೆ ವಿಶ್ವ ಸಾಕ್ಷಿಯಾಗಿದೆ. ಭಯೋತ್ಪಾದನೆ ಮತ್ತು ಹಿಂಸಾಮಾರ್ಗದಿಂದ ಶಾಶ್ವತವಾಗಿ ಹಿಂದೆ ಸರಿಯುವಂತೆ ಪ್ಯಾಲೆಸ್ಟೀನಿಯರಿಗೆ ಕರೆ ನೀಡಿರುವ ಟ್ರಂಪ್ ಅವರಿಗೆ, ಇದೇ ಮಾತನ್ನು ಅಮೆರಿಕದ ಮಿತ್ರರಾಷ್ಟ್ರ ಇಸ್ರೇಲ್‌ಗೂ ಹೇಳಬೇಕೆಂದು ಅನ್ನಿಸದಿರುವುದೇ ಸಂಘರ್ಷ ಮತ್ತು ಶಾಂತಿಯ ಕಥನವನ್ನು ಹೇಳುವಂತಿದೆ.

ಇಸ್ರೇಲ್ ಮತ್ತು ಹಮಾಸ್ ನಡುವೆ ಶಾಂತಿ ಒಪ್ಪಂದ ಏರ್ಪಟ್ಟಿದ್ದರೂ, ಗಾಜಾ ಪಟ್ಟಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಶಾಂತಿ ನೆಲಸುವ ಬಗ್ಗೆ ಅನುಮಾನಗಳಿದ್ದೇ ಇವೆ. ಒಪ್ಪಂದದ ಪ್ರಕಾರ, ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆ ಮಾಡಿದೆ. ಆದರೆ, ಒತ್ತೆಯಾಳುಗಳ ಮೃತದೇಹಗಳ ಹಸ್ತಾಂತರ ಪೂರ್ಣಗೊಂಡಿಲ್ಲ. ಅನೇಕ ಒತ್ತೆಯಾಳುಗಳ ಮೃತದೇಹಗಳು ನಾಪತ್ತೆಯಾಗಿವೆ. ತನ್ನ ದೇಶದ ಪ್ರತಿ ನಾಗರಿಕನ ದೇಹದ ಹಸ್ತಾಂತರವೂ ನಡೆದು, ಅಂತ್ಯಕ್ರಿಯೆ ನಡೆಯುವವರೆಗೂ ಇಸ್ರೇಲ್ ವಿರಮಿಸುವುದಿಲ್ಲ ಎಂದು ಆ ದೇಶದ ವಕ್ತಾರರೊಬ್ಬರು ಹೇಳಿದ್ದಾರೆ. ಇದರ ಜೊತೆಗೆ, ಹಮಾಸ್ ಸಂಘಟನೆಯ ಭವಿಷ್ಯವೂ ಅಸ್ಪಷ್ಟವಾಗಿದೆ. ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸುವ ಹಮಾಸ್ ಸದಸ್ಯರು ಶಾಂತಿಯುತ ಬದುಕು ಕಟ್ಟಿಕೊಳ್ಳಲು ಅಥವಾ ಬೇರೆ ದೇಶಗಳಿಗೆ ತೆರಳಲು ಇಸ್ರೇಲ್ ಎಷ್ಟರಮಟ್ಟಿಗೆ ಅವಕಾಶ ಮಾಡಿಕೊಡುತ್ತದೆ ಎನ್ನುವುದು ಪ್ರಶ್ನೆಯಾಗಿಯೇ ಇದೆ. ಗಾಜಾದಿಂದ ಇಸ್ರೇಲ್ ಪಡೆಗಳು ಪೂರ್ಣ ಪ್ರಮಾಣದಲ್ಲಿ ಹಿಂದಿರುಗುವ ಸಾಧ್ಯತೆಯ ಬಗ್ಗೆಯೂ ಅನುಮಾನ ಉಳಿದಿದೆ. ಗಾಜಾದ ಆಡಳಿತದ ಮೇಲ್ವಿಚಾರಣೆಗೆ 'ಶಾಂತಿ ಮಂಡಳಿ' ಸ್ಥಾಪಿಸುವ ಚಿಂತನೆಗಳ ನಡುವೆಯೇ, ಮುಂದಿನ ದಿನಗಳಲ್ಲಿ ಗಾಜಾದ ಆಡಳಿತದಲ್ಲಿ ಹಮಾಸ್ ಯಾವುದೇ ಪಾತ್ರವನ್ನು ವಹಿಸುವುದು ಸಾಧ್ಯವಿಲ್ಲ ಎಂದು ಅಮೆರಿಕ ಮತ್ತು ಇಸ್ರೇಲ್ ಪುನರುಚ್ಚರಿಸಿವೆ. ಗಾಜಾದಲ್ಲಿ ಹಮಾಸ್ ಸಂಘಟನೆಯನ್ನು ಅಪ್ರಸ್ತುತಗೊಳಿಸುವ ಪ್ರಯತ್ನ ಸೃಷ್ಟಿಸಬಹುದಾದ ಪರಿಣಾಮಗಳು ಯಾವ ಬಗೆಯದೆನ್ನುವುದನ್ನು ಕಾಲವೇ ನಿರ್ಣಯಿಸಬೇಕು. ಪ್ಯಾಲೆಸ್ಟೀನಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹೋದರೆ, ಶಾಂತಿ ಒಪ್ಪಂದದ ಫಲಿತಾಂಶ ದೀರ್ಘಕಾಲಿಕ ಆಗಿರಲು ಸಾಧ್ಯವಿಲ್ಲ.

ಚಾವಡಿ

ನೂರರ ನೆಪದಲ್ಲಿ...

ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿರುವಾಗಲೇ ಪೆರಿಯಾರ್ ಅವರ 'ಸ್ವಾಭಿಮಾನ ಚಳವಳಿ'ಗೂ (ಸೆಲ್ಫ್ ರೆಸ್ಪೆಕ್ಟ್ ಮೂವ್‌ಮೆಂಟ್) ನೂರು ವರ್ಷ ಆಗಿರುವುದು ಕಾಕತಾಳೀಯ. ನಮ್ಮ ದೇಶದ ಸಾರ್ವಜನಿಕ ಆಸಕ್ತಿ ಯಾರ ಕಡೆಗಿದೆ? ಎಂಬ ಅಂಶ ವಿಚಾರಯೋಗ್ಯ.

ಕೆ. ಮರುಳಸಿದ್ದಪ್ಪ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯುವ ಯತ್ನದ ಘಟನೆಯನ್ನು ಆರ್‌ಎಸ್‌ಎಸ್ ಖಂಡಿಸಿದ್ದನ್ನಾಗಲೀ ವಿರೋಧ ಮಾಡಿದ್ದನ್ನಾಗಲೀ ನಾನು ಕಾಣಲಿಲ್ಲ. ಇವರ ಹಿಂದುತ್ವದ ಪರಿಧಿಯಲ್ಲಿ ಪರಿಶಿಷ್ಟರಿಗೆ ಸ್ಥಾನವಿಲ್ಲ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 15-10-2000

- **ಕೃಷ್ಣಾ: ರಾಜ್ಯದ ಪಾಲು ಬಳಕೆಗೆ ಕಾರ್ಯತಂತ್ರ**

ಕಲ್ಬುರ್ಗಿ, ಅ. 14– ಬಚಾವತ್ ತೀರ್ಪಿನ 'ಬಿ' ಯೋಜನೆಯಂತೆ ರಾಜ್ಯಕ್ಕೆ ದೊರೆಯುವ ಕೃಷ್ಣಾ ನೀರಿನ ಪಾಲನ್ನು ಬಳಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶೀಘ್ರದಲ್ಲಿಯೇ ವಿರೋಧ ಪಕ್ಷಗಳ ಜೊತೆ ಚರ್ಚಿಸಿ ಕಾರ್ಯತಂತ್ರವನ್ನು ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ತಿಳಿಸಿದರು.

ಅವರು ಇಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವನ್ನು ಉದ್ಘಾಟಿಸಿ ಮಾತನಾಡಿದರು.

ಸದ್ಯದಲ್ಲಿಯೇ ಸೇರಲಿರುವ ವಿಧಾನ ಮಂಡಲದ ಅಧಿವೇಶನ ಸಂದರ್ಭದಲ್ಲಿ ವಿರೋಧ ಪಕ್ಷಗಳು ಮತ್ತು ತಜ್ಞರೊಂದಿಗೆ ಈ ಬಗ್ಗೆ ಚರ್ಚಿಸಿ ಸರ್ವಸಮ್ಮತ ಕಾರ್ಯತಂತ್ರವನ್ನು ರೂಪಿಸಲಾಗುವುದು ಎಂದರು.

- **'ಗ್ರೀಟಿಂಗ್ಸ್ ಪೋಸ್ಟ್' ಯೋಜನೆ ಆರಂಭ**

ಮಂಗಳೂರು, ಅ. 14– ಗ್ರಾಹಕರಿಗೆ ಗ್ರೀಟಿಂಗ್ಸ್ ಕಾರ್ಡ್ ಒದಗಿಸುವ 'ಗ್ರೀಟಿಂಗ್ಸ್ ಪೋಸ್ಟ್' ಯೋಜನೆಯನ್ನು ಮಂಗಳೂರು ಅಂಚೆ ಇಲಾಖೆ ಜಾರಿಗೊಳಿಸಿದೆ.

75 ವರ್ಷಗಳ ಹಿಂದೆ

ಭಾನುವಾರ, 15-10-1950

- **ರಾಷ್ಟ್ರಪಿತನಿಗೆ ರಾಷ್ಟ್ರಾಧ್ಯಕ್ಷರ ಕಣ್ಣೀರು ಕಾಣಿಕೆ**

ಅಹ್ಮದಾಬಾದ್, ಅ. 14– ಗಾಂಧೀಜಿ ವಾಸಿಸುತ್ತಿದ್ದ ಸಾಬರಮತಿ ಆಶ್ರಮದಲ್ಲಿನ ಕೋಣೆಗೆ ಭೇಟಿ ಇತ್ತಾಗ ರಾಷ್ಟ್ರಾಧ್ಯಕ್ಷರು ಕಂಬನಿದುಂಬಿ ಕೆಲವೊತ್ತು ಅತ್ತರು. ರಾಜೇಂದ್ರ ಪ್ರಸಾದರು ಮೊದಲು ಗಾಂಧೀಜಿ ವಾಸಿಸುತ್ತಿದ್ದ, ಕುಳಿತುಕೊಳ್ಳುತ್ತಿದ್ದ ಮತ್ತು ಕೆಲಸ ಮಾಡುತ್ತಿದ್ದ ಕೊಠಡಿಗೆ ಭೇಟಿ ಇತ್ತರು. ಗಾಂಧೀಜಿ ಜೊತೆ ಇದ್ದ ಪಂಡಿತಧಾರೆಯ ಪುತ್ರಿ ಮಾಧುರಿ ಪ್ರಾರ್ಥನೆಯನ್ನು ಆರಂಭಿಸಿದಾಗ, ರಾಜೇಂದ್ರ ಪ್ರಸಾದರಿಗೆ ತಡೆಯದಾಯಿತು. 15 ನಿಮಿಷ ಅವರ ಮನಸ್ಸು ನೆಮ್ಮದಿಗೆ ಬರಲಿಲ್ಲ. ಕಣ್ಣೀರು ಕೋಡಿ ಅವರ ಕೆನ್ನೆಯ ಮೇಲೆ ಹರಿಯಿತು.

ಸದಾಶಿವರಾಯರ ಸಮಾಜಧ್ಯಾನ

ವಿಶ್ಲೇಷಣೆ

ವೈ.ಎಸ್.ವಿ. ದತ್ತ

ರಾಜಕಾರಣದಲ್ಲಿನ ಸಚ್ಚಾರಿತ್ರ್ಯ, ಪ್ರಾಮಾಣಿಕತೆ, ಸೇವಾ ಮನೋಭಾವ ಹಾಗೂ ಔದಾರ್ಯಕ್ಕೆ ಅತ್ಯುತ್ತಮ ನಿದರ್ಶನದಂತೆ ಇದ್ದವರು ಕಾರ್ನಾಡ್ ಸದಾಶಿವರಾಯರು. ಅವರ ಆದರ್ಶಗಳನ್ನು ಅವರು ಬಾಳಿಬದುಕಿದ ನೆಲವೇ ಮರೆತಿದೆ. ಅವರ ಹೆಸರಿನ ಬಡಾವಣೆ ಬಲಾಢ್ಯರು, ಪ್ರತಿಷ್ಠಿತರ ಆಡುಂಬೊಲವಾಗಿದೆ.

ಶಿವರಾಮ ಕಾರಂತರ ವ್ಯಕ್ತಿತ್ವ, ವಿಚಾರ, ಸ್ವಭಾವಗಳನ್ನು ಬಲ್ಲವರು ಕಾರಂತರು ಅನ್ಯಾಯ ಕಂಡಾಗ ಪರಶುರಾಮರೇ ಎಂದು ಹೇಳುತ್ತಿದ್ದುದುಂಟು. 'ದಾಕ್ಷಿಣ್ಯಪರ ನಾನಲ್ಲ, ನ್ಯಾಯನಿಷ್ಠುರಿ ಲೋಕವಿರೋಧಿ. ನಾನಾರಿಗೂ ಅಂಜುವವನಲ್ಲ' ಎಂಬ ಜಾಯಮಾನ ಕಾರಂತರದ್ದು. ಆದುದರಿಂದಲೇ ಅವರನ್ನು ಹತ್ತಿರದಿಂದ ಬಲ್ಲವರು, 'ಇವರು ಕಾರಂತರಲ್ಲ, 'ಖಾ'ರಂತರು' ಎಂದು ಹೇಳುತ್ತಿದ್ದುದು.

ಇಂತಹ ಕಾರಂತರು ತಮ್ಮ ಕಾಲದ ರಾಜಕೀಯ ವ್ಯಕ್ತಿಯೊಬ್ಬರ ವ್ಯಕ್ತಿತ್ವ, ಆದರ್ಶ, ಪ್ರಾಮಾಣಿಕತೆ, ಮಾನವೀಯ ಮೌಲ್ಯಗಳಿಗೆ ಮಾರುಹೋಗಿದ್ದಾರೆ. ಆ ರಾಜಕಾರಣಿಯನ್ನೇ ಕಥಾನಾಯಕನನ್ನಾಗಿ ಇಟ್ಟುಕೊಂಡು ಕಾದಂಬರಿ ಬರೆದಿದ್ದಾರೆ. ನಾನು ಹೇಳುತ್ತಿರುವುದು 1947ರಲ್ಲಿ ಕಾರಂತರು ಬರೆದ 'ಔದಾರ್ಯದ ಉರುಳಲ್ಲಿ' ಕಾದಂಬರಿಯ ಬಗ್ಗೆ. ಈಗ್ಗೆ 75 ವರ್ಷಗಳ ಹಿಂದಿನ ಕಾದಂಬರಿ ಇದು. ಈ ಕಾದಂಬರಿಯ ಬಗ್ಗೆ ಮತ್ತು ಅದರ ಕಥಾನಾಯಕನ ಬಗ್ಗೆ ಕಾರಂತರು ತಮ್ಮ 'ಸ್ಮೃತಿಪಟಲದಿಂದ' ಕೃತಿಯಲ್ಲಿ ಹೇಳಿರುವ ಮಾತುಗಳನ್ನು ಕೇಳಿ.

'1947ರಲ್ಲಿ ನಾನೇ ಪ್ರಕಾಶಕನೂ ಮುದ್ರಕನೂ ಆಗಿ ಪ್ರಕಟಿಸಿದ ಒಂದು ಕಾದಂಬರಿ 'ಔದಾರ್ಯದ ಉರುಳಲ್ಲಿ'. ಗಾತ್ರದಿಂದ ಅದು 'ಮರಳಿ ಮಣ್ಣಿಗೆ' ಬರಹಕ್ಕಿಂತ ದೊಡ್ಡದು... ಆ ಕಾದಂಬರಿಯ ವಸ್ತುವಿಗೆ ಮೂಲ ಪ್ರೇರಕರಾಗಿ ಸ್ಫೂರ್ತಿ ಕೊಟ್ಟ ವ್ಯಕ್ತಿ ನಮ್ಮ ಜಿಲ್ಲೆಯ ಆದಿ ಕಾಂಗ್ರೆಸ್ ಧುರೀಣರಾದ ಕಾರ್ನಾಡ್ ಸದಾಶಿವರಾಯರು. ಅವರು ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸ್ಥೆಯ ಸ್ಥಾಪಕರಾಗಿ ಸರಳತೆಯಿಂದ, ಪ್ರಾಮಾಣಿಕತೆಯಿಂದ, ದೀರ್ಘಕಾಲ ದುಡಿದು ಆತ್ಮತೃಪ್ತಿಯಿಂದ ವಿರಮಿಸುವ ಬದಲು, ಅಧಿಕಾರಕ್ಕಾಗಿ ಹಾತೊರೆಯುತ್ತಿದ್ದ ಮುಂದಣ ತಲೆಮಾರಿನ ದೇಶಭಕ್ತರ ಹೊಣೆಗಾರಿಕೆಗೆ ಗುರಿಯಾಗಿ ದುಃಖಮಯ ಜೀವನ ನಡೆಸುವಂತಾಯಿತು. ಕಾಂಗ್ರೆಸ್ಸಿಗಾಗಿ ಆಗಲಿ, ಸಾರ್ವಜನಿಕರ ಹಿತಕ್ಕೇ ಆಗಲಿ ಪಿತ್ರಾರ್ಜಿತವಾಗಿ ಬಂದ ಆಸ್ತಿಪಾಸ್ತಿಗಳನ್ನೆಲ್ಲಾ, ಮನೆಗಳನ್ನೆಲ್ಲಾ ಕಳೆದುಕೊಂಡವರು ಸದಾಶಿವರಾಯರು. ಅವರ ಪ್ರಯತ್ನದಿಂದ, ಅವರ ಹಣದಿಂದ ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನಂತಹ ಸಂಸ್ಥೆ ಹುಟ್ಟಿತು, ಬೆಳೆಯಿತು, ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡಿತು. ನಮ್ಮ ಜಿಲ್ಲೆಯಲ್ಲಿ ಖಾದಿ ಚಳವಳಿ, ರಾಷ್ಟ್ರೀಯ ವಿದ್ಯಾಭ್ಯಾಸ, ಹರಿಜನೋದ್ಧಾರದ ಕೆಲಸ, ಅವರ ಉತ್ಸಾಹ ಸೇವೆಗಳಿಂದ ಸಾಕಷ್ಟು ಮುಂದಕ್ಕೆ ಬಂದವು. ಮನುಷ್ಯರ ಸ್ವಭಾವವನ್ನು ಇಣುಕಿ ನೋಡಲಾರದ, ಕಣ್ಮುಚ್ಚಿ ನಂಬುವ ಪ್ರವೃತ್ತಿ ಅವರದ್ದು. ಹೀಗಾಗಿ ಅವರ ಸರಳತನವನ್ನು ವಂಚಿಸಿ, ಅವರಿಂದ ಲಾಭ ಪಡೆಯುವ ಸಲುವಾಗಿ ಅವರ ಸುತ್ತಲೂ ಕಲೆತ ಠಕ್ಕು ದೇಶಸೇವಕರಂತೂ ಹಲವಾರು ಮಂದಿ ಇದ್ದರು. ಸ್ವಂತ ಹಣದಿಂದ– ಪ್ರಾಮಾಣಿಕರೋ, ಅಪ್ರಾಮಾಣಿಕರೋ ಆದ ಅನೇಕ ದೇಶಸೇವಕರನ್ನು ಅವರು ಪೋಷಿಸಿದರು'.

ಕಾರಂತರಂತಹವರಿಗೇ ಸ್ಫೂರ್ತಿಯ ಸೆಲೆಯಾಗಿದ್ದ ಅವರ ಬದುಕು ಹೇಗಿತ್ತು? ಹೇಗಾಯಿತು?

ಸದಾಶಿವರಾಯರು ಮಂಗಳೂರಿನ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರು (1881). ಆ ಕಾಲದಲ್ಲಿ ಪ್ರಖ್ಯಾತ ವಕೀಲರಾಗಿದ್ದ ರಾಮಚಂದ್ರ ರಾವ್ ಕಾರ್ನಾಡ್‌ರವರ ಏಕೈಕ ಪುತ್ರ ಸದಾಶಿವರಾಯರು. ತಂದೆಯಂತೆಯೇ ಕಾನೂನು ವ್ಯಾಸಂಗವನ್ನು ಮುಂಬಯಿಯಲ್ಲಿ ಮುಗಿಸಿ ಮಂಗಳೂರಿಗೆ ಬಂದು ವಕೀಲಿ ವೃತ್ತಿ ಆರಂಭಿಸಿದರು.

ಮನೆಯಲ್ಲಿ ಸಿರಿ ಸಂಪತ್ತು ತುಂಬಿದ್ದರೂ, ಸದಾಶಿವರಾಯರ ತುಡಿತ ರಾಷ್ಟ್ರೀಯತೆಯತ್ತ. ಬಡಬಗ್ಗರ ಸೇವೆ ಎಂದರೆ ಅವರಿಗೆ ಪ್ರಿಯವಾದ ಸಂಗತಿ. ಇದಕ್ಕೆ ಧಾರಾಳವಾಗಿ ಕೈ ಜೋಡಿಸಿದವರು ಅವರ ಪತ್ನಿ. ದಂಪತಿ ಮೊದಲು ಆರಂಭಿಸಿದ್ದೇ 'ಮಹಿಳಾ ಸಭೆ'ಯನ್ನು. ಆ ಮಹಿಳಾ ಸಭೆ ಬಾಲವಿಧವೆಯರ ಪುನರ್ವಿವಾಹ ಹಾಗೂ ಸಮಾಜ ತಿರಸ್ಕರಿಸಿದಂತಹ ಸ್ತ್ರೀಯರಿಗೆ ಆಶ್ರಯ ತಾಣವಾಯಿತು. ಸದಾಶಿವರಾಯರು ಹರಿಜನರ ಉದ್ಧಾರಕ್ಕಾಗಿ 'ತಿಲಕವಿದ್ಯಾಲಯ' ತೆರೆದರು. ಅದರಲ್ಲಿ ಸರ್ವಧರ್ಮೀಯರಿಗೂ ಪ್ರವೇಶಾವಕಾಶವಿತ್ತು. ಈ ಮಾದರಿಯ 18 ವಿದ್ಯಾಲಯಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆರೆದರು. ದೇವಸ್ಥಾನಗಳಿಗೆ ಹರಿಜನರಿಗೆ ಪ್ರವೇಶ ಕೊಡಿಸುವುದರಲ್ಲಿ ಅವರು ಅಗ್ರಗಣ್ಯರಾಗಿದ್ದರು.

ಗಾಂಧೀಜಿಯವರ ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ ಮೊದಲಾದ ಚಳವಳಿಗಳಲ್ಲಿ ಸದಾಶಿವರಾಯರು ಭಾಗಿಯಾದರು. ಐದು ವರ್ಷ ಸೆರೆಮನೆ ವಾಸ ಅನುಭವಿಸಿದರು. ಗಾಂಧೀಜಿ ಹಾಕಿದ ಗೆರೆ ಅವರಿಗೆ ದಾಟಬಾರದ ಲಕ್ಷ್ಮಣರೇಖೆ. ಹಾಗಾಗಿಯೇ, ಗಾಂಧೀಜಿಯವರ 'ಅಸಂಗ್ರಹ' ಸೂತ್ರ ತಿಳಿದ ಮೇಲೆ ಸದಾಶಿವರಾಯರಿಗೆ 'ಗಾಂಧೀಜಿ ತಮ್ಮನ್ನು ಕಂಡೇ ಹೇಳಿದ್ದಿರಬೇಕು' ಎಂದು ಅನ್ನಿಸಿತೋ ಏನೋ! ಆ ಸೂತ್ರದಂತೆ ತಮ್ಮ ಅಪಾರ ಸಂಪತ್ತು, ಪಿತ್ರಾರ್ಜಿತ ಆಸ್ತಿ, ತಾವಿದ್ದ ಮನೆಯನ್ನೂ ದಾನವಾಗಿ ಕೊಟ್ಟರು. 1923ರಲ್ಲಿ ಒಂದೇ ವರ್ಷದಲ್ಲಿ ಅವರ ಪತ್ನಿ ಮತ್ತು ಒಬ್ಬನೇ ಮಗ ನಿಧನ ಹೊಂದಿದರು. ತಕ್ಷಣವೇ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿ ಸ್ವಯಂಸೇವಕರಾದರು. ಅಲ್ಲಿ, ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡರು.

1924–25ರ ಸಾಲಿನಲ್ಲಿ ದಕ್ಷಿಣ ಕನ್ನಡದಲ್ಲಿ ನೆರೆಹಾವಳಿ ಬಂದಾಗ ಮತ್ತೆ ತವರು ಜಿಲ್ಲೆಗೆ ಬಂದು ಸಂತ್ರಸ್ತರ ಸೇವೆಗೆ ನಿಂತರು. 'ಸೌತ್ ಕೆನರಾ ಡಿಸ್ಟ್ರಿಕ್ಟ್ ರಿಲೀಫ್ ಫಂಡ್' ಸಂಸ್ಥೆ ಸ್ಥಾಪಿಸಿ ನೆರವು ನೀಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ– ರಾಷ್ಟ್ರೀಯ ಭಾವನೆಯನ್ನು ಮೂಡಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಮಾರ್ಗದರ್ಶನ ಮಾಡಿ, ಕಾಂಗ್ರೆಸ್ ಸಂಸ್ಥೆಗೆ ಬುನಾದಿ ಹಾಕಿದವರು ಸದಾಶಿವರಾಯರು. ಆದರೆ, ಅಂದಿನ ಕೆಲವು ಪ್ರಭಾವಿ ರಾಜಕೀಯ ವ್ಯಕ್ತಿಗಳು ಸದಾಶಿವರಾಯರ ಮೇಲ್ಮೈಯನ್ನು ತಮ್ಮ ಪಾಲಿಗೆ ವಿಘ್ನವೆಂದು ತಿಳಿದು ಅವರನ್ನು ಮೂಲೆಗುಂಪು ಮಾಡುತ್ತಲೇ ಬಂದರು ಎನ್ನುತ್ತಾರೆ ಕಾರಂತರು. 1925ರ ಕಾಂಗ್ರೆಸ್ ಅಧಿವೇಶನ ಮಂಗಳೂರಿನಲ್ಲಿ ನಡೆಯಬೇಕೇ ಎಂಬ ಪ್ರಶ್ನೆ ಬಂದಾಗ ವೀರಾವೇಶದ ಸ್ಪರ್ಧೆ ನಡೆದದ್ದನ್ನು ಜ್ಞಾಪಿಸಿಕೊಳ್ಳುವ ಕಾರಂತರು, ಸದಾಶಿವರಾಯರಿಗೆ ಸೋಲುಂಟಾಗಿ ಸಮಾವೇಶ ಬೆಳಗಾವಿಯಲ್ಲಿ ನಡೆಯಿತು ಎನ್ನುತ್ತಾರೆ.

1930ರ ಉಪ್ಪಿನ ಸತ್ಯಾಗ್ರಹ ಕಾಲದಲ್ಲಿ ಸದಾಶಿವರಾಯರ ನೇತೃತ್ವದ ಚಳವಳಿ ತಮ್ಮ ಜಿಲ್ಲೆಗೆ ಹೆಸರು ಮತ್ತು ಪ್ರಸಿದ್ಧಿಯನ್ನು ತಂದುಕೊಟ್ಟಿತಾದರೂ, ಈ ಪ್ರದೇಶಕ್ಕಾಗಿ ತಮ್ಮ ಸಂಪೂರ್ಣವನ್ನೂ ತೆತ್ತು ಸುಧಾಮರಾದ ಅವರ ಪಾಲಿಗೆ ಏನೊಂದೂ ಮನ್ನಣೆ ದೊರೆಯದೇ ಹೋಯಿತು ಎಂದು ಕಾರಂತರು ವಿಷಾದಿಸುತ್ತಾರೆ. 'ಕಾಂಗ್ರೆಸ್ಸಿನ ಧುರೀಣತ್ವವೋ, ಸೂತ್ರಧಾರಿತ್ವವೋ, ಅದೇನಿದ್ದರೂ ಮೇಲಿನಿಂದಲೇ ಬರಬೇಕಾಗಿತ್ತು' ಎಂದು ಅಂದೂ ಇದ್ದ ಕಾಂಗ್ರೆಸ್‌ನ ಹೈಕಮಾಂಡ್ ಸಂಸ್ಕೃತಿಯ ಕಡೆಗೆ ಗಮನ ಸೆಳೆಯುತ್ತಾರೆ.

ಸದಾಶಿವರಾಯರ ಬದುಕು ಕೊನೆ ಕೊನೆಗೆ ತೀರ ಅನಾಥ ಬದುಕೇ ಆಯಿತು ಎಂಬುದನ್ನು ಜ್ಞಾಪಿಸಿಕೊಳ್ಳುವ ಕಾರಂತರು– 'ಅವರ ಅನೇಕ ಹಂತಗಳನ್ನು ನೋಡಿದವನು ನಾನು. ಅವರ ವ್ಯಕ್ತಿತ್ವಕ್ಕೂ ನಮ್ಮ ಮುಂದಾಳುಗಳಾಗಿ ಮೆರೆದ ಇತರ ಕೆಲವು ದೇಶಭಕ್ತರ ವ್ಯಕ್ತಿತ್ವಕ್ಕೂ ಇರುವ ಪ್ರಾಮಾಣಿಕತೆಯ ಅಂತರವನ್ನು ಬಲು ಚೆನ್ನಾಗಿ ಕಂಡಿದ್ದೇನೆ' ಎನ್ನುತ್ತಾರೆ. ಅದಕ್ಕಾಗಿಯೇ 'ಇಂತಹ ರಾಜಕೀಯ ಮತ್ತು ಸಾಮಾಜಿಕ ಪ್ರವೃತ್ತಿಗಳನ್ನೂ, ಅದಕ್ಕೆ ಕಾರಣವಾದ ಹಲವಾರು ವ್ಯಕ್ತಿಗಳನ್ನೂ ಸಮೀಪದಿಂದ ನೋಡಿದ ನಾನು ಇದನ್ನೆಲ್ಲಾ ವಸ್ತುಗಳನ್ನಾಗಿ ಬಳಸಿಕೊಂಡು 'ಔದಾರ್ಯದ ಉರುಳಲ್ಲಿ' ಎಂಬ ಕಾದಂಬರಿ ಬರೆದೆ. ಅದರ ಕಥಾನಾಯಕ ಕಾರ್ನಾಡ್ ಸದಾಶಿವರಾಯರೇ ಇರಬೇಕು ಎಂದು ಬೊಟ್ಟಿಟ್ಟು ತೋರಿಸಬಹುದಾದರೂ, ಉಳಿದ ಪಾತ್ರಗಳ ಚಿತ್ರಣದಲ್ಲಿ ಅವರ್‍ಯಾರು, ಎಂಥವರು, ಎಂದು ನನಗೆ ತಿಳಿದಿದ್ದರೂ, ನಿರ್ದಿಷ್ಟ ವ್ಯಕ್ತಿಗಳನ್ನು ಉದ್ದೇಶಿಸದೇ ಜನಗಳಲ್ಲಿ ಕಂಡುಬಂದ ದುಷ್ಟ ಪ್ರವೃತ್ತಿಗಳನ್ನು ಒತ್ತಿ ಹೇಳಲು ಸೃಷ್ಟಿ ಪಾತ್ರಗಳನ್ನು ತರಬೇಕಾಯಿತು' ಎಂದು ಕಾದಂಬರಿ ರಚನೆಯ ಕಾರಣವನ್ನು ಕಾರಂತರು ಸ್ಪಷ್ಟವಾಗಿ ಹೇಳಿದ್ದಾರೆ.

30ರ ದಶಕದ ರಾಜಕಾರಣವನ್ನೂ, ಇಂದಿನ ರಾಜಕಾರಣವನ್ನೂ ಹೋಲಿಸಿ ನೋಡಲು ನಾವು 'ಔದಾರ್ಯದ ಉರುಳಲ್ಲಿ' ಕಾದಂಬರಿಯನ್ನು ಓದಬೇಕು. ಆದರೆ, ನಮಗೆ ನಿರಾಶೆ ತಪ್ಪಿದ್ದಲ್ಲ. ಬದಲಾಗದ ರಾಜಕೀಯ ವ್ಯವಸ್ಥೆಯ ಬಗ್ಗೆ ಸಿಟ್ಟೋ ಸಿನಿಕತನವೋ ಕಾಡುವುದಂತೂ ನಿಜ. 1937ರಲ್ಲಿ ನಿಧನರಾದಾಗ ರಾಯರ ಅಂತ್ಯಕ್ರಿಯೆ ಮಾಡುವು ದಕ್ಕೂ ಕುಟುಂಬದವರು ಅಶಕ್ಯರಾಗಿದ್ದರು. ಸದಾಶಿವರಾಯರು ಸತ್ತ ಮೇಲೆ ಅವರ ವೃದ್ಧ ತಾಯಿ ಮತ್ತು ಹೆಣ್ಣುಮಕ್ಕಳ ವಾಸ ಬಾಡಿಗೆ ಮನೆಯಲ್ಲಿ.

ಸದಾಶಿವರಾಯರ ತ್ಯಾಗ, ಆದರ್ಶದ ಬದುಕಿಗೆ ತದ್ವಿರುದ್ಧವಾದ ಕ್ರೂರವ್ಯಂಗ್ಯ ಮತ್ತು ಘೋರ ವಿಪರ್ಯಾಸದ ಸಂಗತಿಯನ್ನು ನೋಡಿ. 1960ರಲ್ಲಿ ಬೆಂಗಳೂರಿನ ಅಂದಿನ 'ಸಿ.ಐ.ಟಿ.ಬಿ.'ಯು ಬೆಂಗಳೂರಿನ ಒಂದು ಬಡಾವಣೆಗೆ ಸದಾಶಿವರಾಯರ ಹೆಸರಿನಲ್ಲಿ 'ಸದಾಶಿವ ನಗರ' ಎಂದು ಹೆಸರಿಟ್ಟು ಧನ್ಯವಾಯಿತು! ಈ ಸದಾಶಿವ ನಗರವಾದರೋ ಇಂದು ಶ್ರೀಮಂತರು, ಧನಿಕಾತಿಧನಿಕರು, ಬಲಾಢ್ಯರು, ಪ್ರತಿಷ್ಠಿತರ ಐಷಾರಾಮಿ ಆಡುಂಬೊಲವಾಗಿದೆ. ಅಲ್ಲಿನ ಭವ್ಯಮಹಲುಗಳಲ್ಲಿ ಸಿರಿ ಸಂಪತ್ತು ಕಾಲುಮುರಿದುಕೊಂಡು ಬಿದ್ದಿದೆ; ಗಾಂಧೀಜಿಯವರ 'ಅಸಂಗ್ರಹ', 'ಸರಳತೆ' ಸೂತ್ರಗಳನ್ನು ಅಣಕಿಸುತ್ತಿದೆ. ಕಾರಂತರು ಹೇಳಿದ ಪ್ರಾಮಾಣಿಕರೋ, ಅಪ್ರಾಮಾಣಿಕರೋ, ಆದ ಅನೇಕ 'ದೇಶಸೇವಕ'ರ ನೆಚ್ಚಿನ ಬೀಡಾಗಿದೆ!

ಎಲ್ಲಿಯ ಸದಾಶಿವರಾಯರು, ಎಲ್ಲಿಯ ಸದಾಶಿವನಗರ! ತಮ್ಮ ಹೆಸರು ಹೊತ್ತ ಬಡಾವಣೆಯ ಐಸಿರಿಯನ್ನು ನೋಡಿ ಸದಾಶಿವರಾಯರ ಆತ್ಮ ಅದೆಷ್ಟು ಕೊರಗುತ್ತಿದೆಯೋ!

ವಾಚಕರ ವಾಣಿ

ಎ.ಐ ಪಠ್ಯ ಬೇಡ; ಮೌಲ್ಯಶಿಕ್ಷಣ ಬೇಕು

2026–27ರಿಂದ ಸಿಬಿಎಸ್‌ಇ 3ನೇ ತರಗತಿ ಪಠ್ಯಕ್ರಮದಲ್ಲಿ 'ಕೃತಕ ಬುದ್ಧಿಮತ್ತೆ' (ಎ.ಐ) ಸೇರ್ಪಡೆಗೆ ಕೇಂದ್ರ ಸರ್ಕಾರ ಮುಂದಾಗಿರುವುದು ನಿಜಕ್ಕೂ ಆತಂಕಕಾರಿ. ಕೋವಿಡ್‌ಗೂ ಮೊದಲು ಮಕ್ಕಳು ಸಾಮಾಜಿಕ ಜಾಲತಾಣದಿಂದ ಸಾಕಷ್ಟು ಅಂತರ ಕಾಯ್ದುಕೊಂಡಿದ್ದರು. ಆಗ ಅವರಲ್ಲಿ ಕ್ರಿಯಾಶೀಲ ಅನ್ವೇಷಣಾ ಸಾಮರ್ಥ್ಯ ಕಂಡುಬರುತ್ತಿತ್ತು. ತದನಂತರ ಆನ್‌ಲೈನ್ ಮೂಲಕ ಶಿಕ್ಷಣ ಕಲಿಸುವ ಬದಲಾವಣೆ ಕಂಡುಬಂತು. ಅದರ ಪರಿಣಾಮ ಮಕ್ಕಳು ಸಾಮಾಜಿಕ ಜಾಲತಾಣದ ವ್ಯಸನಕ್ಕೆ ಒಳಗಾದರು. ಮೊಬೈಲ್‌ನಲ್ಲಿ ನೋಡಿದ್ದೇ ಸರಿ, ಓದಿದ್ದೇ ನಿಜ ಎಂಬ ಗ್ರಹಿಕೆಗೆ ಒಳಗಾಗಿದ್ದಾರೆ. ಮೌಲ್ಯಶಿಕ್ಷಣ ಹಾಗೂ ನೈತಿಕಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪ್ರೈಮರಿ ಶಾಲಾ ಮಕ್ಕಳಿಗೆ ಈಗ ಬೇಕಿರುವುದು ಮೌಲ್ಯಶಿಕ್ಷಣ ಹಾಗೂ ಸಂಸ್ಕಾರಯುತ ಜೀವನಕ್ಕೆ ತಳಹದಿ ಒದಗಿಸುವ ನೈತಿಕಶಿಕ್ಷಣವೇ ಹೊರತು ಕೃತಕ ಬುದ್ಧಿಮತ್ತೆ ಅಲ್ಲ.

ಸುರೇಂದ್ರ ಪೈ, ಭಟ್ಕಳ

ಮಹಿಳಾ ಸುರಕ್ಷತೆ; ಸಿಗಬೇಕಿದೆ ಆದ್ಯತೆ

ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ ಸುದ್ದಿಗಳು ಪತ್ರಿಕೆಗಳಲ್ಲಿ ರಾರಾಜಿಸುತ್ತಿವೆ. ಆದರೆ, ಅತ್ಯಾಚಾರಿಗಳನ್ನು ಮಟ್ಟಹಾಕುವ ದಿಸೆಯಲ್ಲಿ ರಾಜ್ಯ ಸರ್ಕಾರ ಇನ್ನೂ ದಿಟ್ಟಹೆಜ್ಜೆ ಇಟ್ಟಂತೆ ಕಾಣುತ್ತಿಲ್ಲ. ಮಹಿಳಾ ಸಬಲೀಕರಣಕ್ಕೆ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದರೂ, ಸುರಕ್ಷತೆಯಲ್ಲಿ ಹಿಂದುಳಿದಿರುವುದು ಸ್ಪಷ್ಟ. ರಾಜ್ಯದಲ್ಲಿ ಮಹಿಳೆಯರು ಯಾವುದೇ ಭಯವಿಲ್ಲದೆ ಓಡಾಡುವಂತಹ ವಾತಾವರಣ ಸೃಷ್ಟಿಸುವ ಜರೂರಿದೆ.

ಸಿಂಧು ಬಿ.ಯು., ಹಾಸನ

ಜಗತ್ತಿನಲ್ಲಿ ಅಜಾತಶತ್ರು ಇದ್ದಾರೆಯೇ?

ಗಣ್ಯ ವ್ಯಕ್ತಿಗಳನ್ನು ಹೊಗಳುವ ಭರದಲ್ಲಿ ಅವರನ್ನು ಅಜಾತಶತ್ರು ಎಂದು ಹೇಳುವುದು ಸಾಮಾನ್ಯ ಎನ್ನುವಂತಾಗಿದೆ. ಆದರೆ, ಜಗತ್ತಿನಲ್ಲಿ ಯಾವುದೇ ವ್ಯಕ್ತಿ ಯಾರಿಂದಲೂ ದ್ವೇಷಕ್ಕೆ ಒಳಗಾಗದೆ ಇರಲು ಸಾಧ್ಯವೇ? ದೇವರು ಕೂಡ ದ್ವೇಷದ ಜ್ವಾಲೆಗೆ ಸಿಲುಕಿರುವುದು ದಿಟ. ಹಾಗಾಗಿ, ಮನುಷ್ಯ ಅಜಾತಶತ್ರು ಎಂಬ ಗುಣವಿಶೇಷಣಕ್ಕೆ ಹೇಗೆ ಅರ್ಹ? ಅದರ ಬದಲು, ಹೆಚ್ಚಿನ ಜನರಿಗೆ ಪ್ರೀತಿಪಾತ್ರ ಆಗಿರುವವರು ಎಂದರೆ ಸಾಕು.

ಮಹೇಶ ಪಿ. ಪುಟ್ಟೇಗೌಡನಹುಂಡಿ, ಚಾಮರಾಜನಗರ

ರಾಜು ತಾಳಿಕೋಟೆ 'ನಗೆಯ ಸರದಾರ'

ಕಲಾವಿದ ರಾಜು ತಾಳಿಕೋಟೆ ಅವರ ನಿಧನವು ಉತ್ತರ ಕರ್ನಾಟಕದ ರಂಗಭೂಮಿಗೆ ಆದ ದೊಡ್ಡ ನಷ್ಟ. ಉತ್ತರ ಕರ್ನಾಟಕದ ಭಾಷಾಶೈಲಿಯ ರಸದೌತಣವನ್ನು ಸಮಗ್ರ ಕರ್ನಾಟಕಕ್ಕೆ ಉಣಬಡಿಸಿದ್ದು ಅವರ ಹೆಗ್ಗಳಿಕೆ. ಸಿನಿಮಾಗಳಲ್ಲಿ ಅಭಿನಯಿಸಿದರೂ ಅವರ ಆದ್ಯತೆ ರಂಗಭೂಮಿಯಾಗಿತ್ತು. ಬನಶಂಕರಿ ಜಾತ್ರೆಯಲ್ಲಿ ಕಂಪನಿ ನಾಟಕಗಳ ಪ್ರದರ್ಶನದ ಮೂಲಕ ಸತತ ಹತ್ತು ವರ್ಷ 'ಬಾಕ್ಸ್ ಆಫೀಸ್ ಸುಲ್ತಾನ'ನಾಗಿ ಮೆರೆದಿದ್ದು ಅವರ ಹಿರಿಮೆ.

'ಮಾನವಂತರ ಮನೆತನ', 'ಕುಂಕುಮ ಭಾಗ್ಯ' ನಾಟಕಗಳು ಅವರ ಅಭಿನಯ ಚತುರತೆಗೆ ಸಾಕ್ಷಿ. ರಾಜ್ಯದಲ್ಲಿ ರಂಗಭೂಮಿಗೆ ಮರುಹುಟ್ಟು ನೀಡಿದ ಅಗ್ರಗಣ್ಯರಲ್ಲಿ ಅವರೂ ಒಬ್ಬರು. 'ಗರತಿ ಗೆದ್ದಳು ಸವತಿ ಸೋತಳು' ನಾಟಕದಲ್ಲಿನ ಅಭಿನಯಕ್ಕೆ ಖ್ಯಾತ ರಾಜಕಾರಣಿಯೊಬ್ಬರು, ಅವರಿಗೆ ಬೆಳ್ಳಿ ಖಡ್ಗ ನೀಡಿದ್ದರು. ಕನ್ನಡ ರಂಗಭೂಮಿ ಇರುವವರೆಗೂ ಅವರ ಹೆಸರು ಅಜರಾಮರವಾಗಿರಲಿದೆ.

ಅಬ್ದುಲ ರಝಾಕ ಡಿ. ಟಪಾಲ, ಕೆರೂರ

ಋತುಚಕ್ರ ರಜೆ: ಮೇಲ್ಪಂಕ್ತಿಯಾಗಲಿ

ಹೆಣ್ಣುಮಕ್ಕಳ ಮಾಸಿಕ ಚಕ್ರದ ಅವಧಿಯ ದೈಹಿಕ–ಮಾನಸಿಕ ವೇದನೆಯನ್ನು ಸಹನೀಯಗೊಳಿಸುವ ದಿಸೆಯಲ್ಲಿ ಸರ್ಕಾರ 'ಋತುಚಕ್ರ ರಜೆ ನೀತಿ' ಜಾರಿಗೊಳಿಸುತ್ತಿರುವುದು ಶ್ಲಾಘನೀಯ.

ಸಾಮಾನ್ಯವಾಗಿ ಮುಟ್ಟಿನ ಅವಧಿಯಲ್ಲಿ ಬಹುತೇಕ ಹೆಣ್ಣುಮಕ್ಕಳು ತೀವ್ರತರದ ಕಿಬ್ಬೊಟ್ಟೆ–ಸೊಂಟನೋವು, ವಾಕರಿಕೆ, ಆಯಾಸದ ಜೊತೆಗೆ ಮಾನಸಿಕವಾಗಿಯೂ ಜರ್ಜರಿತರಾಗುತ್ತಾರೆ. ಹಾರ್ಮೋನ್‌ಗಳ ಅಸಮತೋಲನದ ಪರಿಣಾಮದಿಂದ ಈ ಲಕ್ಷಣಗಳು ಮಹಿಳೆಯಿಂದ ಮಹಿಳೆಗೆ ಭಿನ್ನವಾಗಿ, ಅಧಿಕ ರಕ್ತಸ್ರಾವದೊಂದಿಗೆ ತೀವ್ರ ರೂಪ ಪಡೆಯುತ್ತವೆ. ಇಂತಹ ಸಮಯದಲ್ಲಿ ವೇತನಸಹಿತ ರಜೆ ನೀಡುವ ಕ್ರಮದಿಂದ ಋತುಚಕ್ರದ ನೋವಿನಿಂದ ಚೇತರಿಸಿಕೊಳ್ಳಲು ಮಹಿಳೆಯರಿಗೆ ಉಪಕಾರಿಯಾಗಿದೆ. ಗ್ರಾಮೀಣ ಭಾಗದ ಖಾಸಗಿ ಕಂಪನಿ–ಸಂಸ್ಥೆಗಳಲ್ಲಿಯೂ ಈ ನೀತಿಯು ಕಟ್ಟುನಿಟ್ಟಾಗಿ ಅನುಷ್ಠಾನವಾಗಲಿ. ರಾಜ್ಯದ ನೀತಿಯು ಇತರ ರಾಜ್ಯಗಳಿಗೆ ಮೇಲ್ಪಂಕ್ತಿಯಾಗಲಿ.

ಸಮೀರ ಹಾದಿಮನಿ, ಆಲಮೇಲ

ಹಸಿರು ಹೊದಿಕೆಗೆ ಆಪತ್ತು ಗ್ಯಾರಂಟಿ

ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಸರ್ಕಾರ ಜೋಡಿ ಸುರಂಗ ರಸ್ತೆ ನಿರ್ಮಾಣಕ್ಕೆ ಮುಂದಾಗಿದೆ. ಇದು ನಗರದ ಹಸಿರು ಹೊದಿಕೆಗೆ ಧಕ್ಕೆ ತರಲಿದೆ.

ಈಗಾಗಲೇ, ಉದ್ಯಾನನಗರಿಯಲ್ಲಿ ದೊಡ್ಡಮಟ್ಟದಲ್ಲಿ ಮೆಟ್ರೊ ಪಿಲ್ಲರ್‌ಗಳನ್ನು ನಿರ್ಮಿಸಲಾಗಿದೆ. ಲಕ್ಷಗಟ್ಟಲೆ ಕೊಳವೆಬಾವಿ ಕೊರೆಯಲಾಗಿದೆ. ಅನೇಕ ಅಪಾರ್ಟ್‌ಮೆಂಟ್‌ಗಳು ಮಲ್ಟಿ–ಲೆವೆಲ್ ಬೇಸ್‌ಮೆಂಟ್ ಪಾರ್ಕಿಂಗ್ ಹೊಂದಿವೆ. ಸುರಂಗ ಕೊರೆಯುವ ಪ್ರಕ್ರಿಯೆ ಬಂಡೆ ಮತ್ತು ಬಿರುಕುಗಳಿಂದ ನೀರಿನ ಮೂಲದ ಮೇಲೆ ಪರಿಣಾಮ ಬೀರಬಹುದು. ಈಗಾಗಲೇ, ವಿಪರೀತ ನಗರೀಕರಣ ದಿಂದಾಗಿ ನಗರದ ಭೂಪ್ರದೇಶವು ಮಳೆನೀರನ್ನು ಹೀರಿಕೊಳ್ಳುವ ಸಾಮರ್ಥ್ಯ ಕಳೆದುಕೊಂಡಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದೆ. ಅವೈಜ್ಞಾನಿಕ ಹಾಗೂ ದುಂದುವೆಚ್ಚದ ಈ ಯೋಜನೆಯನ್ನು ಕೈಬಿಡುವುದೇ ಒಳಿತು.

ಬಾಬು ಶಿರಮೋಜಿ, ಬೆಳಗಾವಿ

ಚುರುಮುರಿ

ಶುದ್ಧಿಗೋಷ್ಠಿ!

• ಮಣ್ಣೆ ರಾಜು

'ನೀತಿನಿಯಮಗಳನ್ನು ಪರಿಷ್ಕರಣೆ ಮಾಡಿದ್ದೇವೆ. ನಮ್ಮ ಪಕ್ಷದ ಶಿಸ್ತು ಸಮಿತಿಯ ಸೂಚನೆಯಂತೆ ಸುದ್ದಿಗೋಷ್ಠಿಗಳು ನಡೆಯಲಿವೆ...' ಎಂದು ರಾಜಕೀಯ ಪಕ್ಷದ ನಾಯಕರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪತ್ರಕರ್ತೆಯರನ್ನು ಯಾವ ಸಂದರ್ಭದಲ್ಲಿ ಹೊರಗಿಟ್ಟು ಪ್ರೆಸ್‌ಮೀಟ್ ಮಾಡ್ತೀರಿ ಸಾರ್?' ವರದಿಗಾರ್ತಿಯ ಪ್ರಶ್ನೆ.

'ಯಾವಾಗ, ಯಾವ್ಯಾವ ವರದಿಗಾರರನ್ನು ಹೊರಗಿಡಬೇಕು ಎಂಬುದನ್ನು ನಮ್ಮ ಶಿಸ್ತು ಸಮಿತಿ ನಿರ್ಧರಿಸುತ್ತದೆ. ನಮ್ಮ ನಿಲುವಿಗೆ ಬದ್ಧವಾಗಿರುವ, ಅರ್ಹ, ಆಯ್ದ ಪತ್ರಕರ್ತರನ್ನು ಮಾತ್ರವೇ ಗೋಷ್ಠಿಗೆ ಆಹ್ವಾನಿಸಿ, ಉಳಿದವರನ್ನು ದೂರವಿಡುವ ಬಗ್ಗೆಯೂ ಚಿಂತನೆ ನಡೆದಿದೆ'.

'ಇದು ಪತ್ರಕರ್ತರಿಗೆ ನೀಡುವ ಎಚ್ಚರಿಕೆಯೆ ಸಾರ್?' ಪತ್ರಕರ್ತರೊಬ್ಬರ ಪ್ರಶ್ನೆ.

'ಅಲ್ಲ, ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು ಎಂಬ ಮುನ್ನೆಚ್ಚರಿಕೆ' ನಾಯಕರು ನಕ್ಕರು.

'ಪತ್ರಿಕಾಗೋಷ್ಠಿಗೆ ನೀವೇ ಕೊಶ್ಚನ್ ಪೇಪರ್ ಕೊಡ್ತೀರಾ?' ಇನ್ನೊಬ್ಬ ಪತ್ರಕರ್ತನ ಪ್ರಶ್ನೆ.

'ಹೌದು. ನಾವು ಕೊಡುವ ಕೊಶ್ಚನ್ ಪೇಪರ್‌ನಲ್ಲಿರುವ ಪ್ರಶ್ನೆಗಳನ್ನು ಹಾಗೂ ಅದಕ್ಕೆ ಪೂರಕವಾದ ಉಪಪ್ರಶ್ನೆಗಳನ್ನು ಮಾತ್ರ ನೀವು ಕೇಳಬೇಕು. ಅದರ ಹೊರತಾಗಿ ಉದ್ಧಟತನದ ಪ್ರಶ್ನೆ ಕೇಳಿದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ'.

'ಪತ್ರಿಕಾಗೋಷ್ಠಿಯ ನಿಯಮಗಳ ಪರಿಷ್ಕರಣೆಗೆ ಕಾರಣವೇನು ಸಾರ್?'

'ಖಡ್ಗಕ್ಕಿಂಥಾ ಲೇಖನಿ ಹರಿತ, ಲೇಖನಿಗಿಂಥಾ ನೀವು ಕೇಳುವ ಪ್ರಶ್ನೆಗಳು ಹರಿತ ಎಂಬುದು ನಮ್ಮ ಅನುಭವಕ್ಕೆ ಬಂದಿದೆ'.

'ನಮ್ಮ ಪ್ರಶ್ನೆಗಳು ನಿಮಗೆ ಮಾರಕವಾಗುತ್ತವೆಯೆ ಸಾರ್?!'

'ಹೌದು. ಮೊನ್ನೆಯ ಪತ್ರಿಕಾಗೋಷ್ಠಿಯಲ್ಲಿ ನೀವು ಕೇಳಿದ ಅಪಾಯಕಾರಿ ಪ್ರಶ್ನೆಗಳಿಂದ ನಮ್ಮ ನಾಯಕರು ಆಘಾತಗೊಂಡು ಆಸ್ಪತ್ರೆ ಸೇರಿದ್ದಾರೆ. ಆ ಗೋಷ್ಠಿಯ ನಿಮ್ಮ ವರದಿಯೂ ಪಕ್ಷದ ಘನತೆಗೆ ಧಕ್ಕೆ ತಂದಿದೆ... ಸುದ್ದಿಗೋಷ್ಠಿಗಳನ್ನು 'ಶುದ್ಧಿಗೋಷ್ಠಿ' ಮಾಡಬೇಕಾಗಿದೆ. ಉದ್ಧಟತನದ ಪ್ರಶ್ನೆ ಕೇಳುವ ಪತ್ರಕರ್ತರನ್ನು ನಮ್ಮ ಭದ್ರತಾ ಸಿಬ್ಬಂದಿಯವರು ಎತ್ತಿ ಹೊರಗೆ ಹಾಕುತ್ತಾರೆ...' ಎಂದ ನಾಯಕರು ಪತ್ರಿಕಾಗೋಷ್ಠಿ ಮುಗಿಸಿ ಎದ್ದರು.

ಸಂಗತ

ಶಕ್ತಿ ಯೋಜನೆ 'ಶಕ್ತಿ'ಯುತ ಆಗಬೇಕಾದರೆ...

'ಶಕ್ತಿ' ಯೋಜನೆಯ ಬಗ್ಗೆ ಕೆಲವು ಪುರುಷ ಪ್ರಯಾಣಿಕರಿಗೆ ಅಸಹನೆಯಿದೆ. ಕೆಲವು ಬದಲಾವಣೆಗಳ ಮೂಲಕ ಯೋಜನೆಯನ್ನು ಪ್ರಯಾಣಿಕಸ್ನೇಹಿ ಆಗಿಸಬಹುದು.

• ಮುಸ್ತಾಫ ಕೆ.ಎಚ್.

ಸರ್ಕಾರಿ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವ 'ಶಕ್ತಿ' ಯೋಜನೆ ಜಾರಿ ಆದಾಗಿನಿಂದ, ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿನ ಚಿತ್ರಣವೇ ಬದಲಾಗಿದೆ. ಆ ವಿದ್ಯಮಾನಗಳನ್ನು ಗಮನಿಸಿದರೆ, ಕೆಲವು ಪರಿವರ್ತನೆಗಳು ಸಾಧ್ಯವಾಗದೇ ಹೋದರೆ ಜನಪರವಾದ ಯೋಜನೆಯೊಂದರ ಕಾರ್ಯಾನುಷ್ಠಾನದ ನೆಲೆಯಲ್ಲಿ ತೊಡಕುಗಳು ಎದುರಾಗುವುದರಲ್ಲಿ ಸಂಶಯವಿಲ್ಲ.

ಸಾಲು ಸಾಲು ರಜೆಗಳಿರುವ ಸಂದರ್ಭದಲ್ಲಿ ಬೆಂಗಳೂರಿನಂತಹ ಕೇಂದ್ರ ನಗರದಿಂದ ತಮ್ಮ ಊರುಗಳಿಗೂ ಮತ್ತು ರಜೆ ಮುಗಿಸಿ ತಮ್ಮ ಊರಿನಿಂದ ಬೆಂಗಳೂರಿನಂತಹ ಮಹಾನಗರಗಳ ಕಡೆಗೆ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿದೆ. ವಿಶೇಷ ಬಸ್ಸುಗಳ ಹೊರತಾಗಿಯೂ, ಬಿಎಂಟಿಸಿ ಬಸ್ಸುಗಳನ್ನು ಜಿಲ್ಲಾ ಕೇಂದ್ರಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಪ್ರಯಾಣಿಕರ ದಟ್ಟಣೆ ಸಂದರ್ಭದಲ್ಲಿ ಮಾಡಲಾಗುತ್ತದೆ. ಇಷ್ಟಾದರೂ ಕಿಕ್ಕಿರಿದು ತುಂಬುವ ಬಸ್ಸುಗಳಿಗೇನೂ ಕಮ್ಮಿ ಇರುವುದಿಲ್ಲ.

ಒತ್ತಡದಿಂದ ವರ್ತಿಸುವ, ಕೋಪಗೊಳ್ಳುವ, ಪ್ರಯಾಣಿಕರನ್ನು ಏಕವಚನದಲ್ಲಿ ಮಾತನಾಡಿಸುವ, ಉಚಿತವಾಗಿ ಪ್ರಯಾಣಿಸುವ ಮಹಿಳೆಯರ ಜೊತೆಯಲ್ಲಿ ಅಗೌರವದಿಂದ ನಡೆದುಕೊಳ್ಳುವ ಸಾಕಷ್ಟು ನಿರ್ವಾಹಕರು, ಚಾಲಕರನ್ನು ನೋಡಬಹುದಾಗಿದೆ. ಈ ಪ್ರತಿಕ್ರಿಯೆಗಳೆಲ್ಲವೂ, ಜನರನ್ನು ಬಸ್ಸಿನೊಳಗೆ ನಿಯಂತ್ರಿಸಲು ಹರಸಾಹಸ ಪಡುವ ನಿರ್ವಾಹಕ ಮತ್ತು ಚಾಲಕರ ಕಾರ್ಯ ನಿರ್ವಹಣೆಯಲ್ಲಿ ಉಂಟಾದ ಒತ್ತಡದಿಂದಾಗಿ ನಿರೂಪಿತಗೊಂಡ ಮಾನಸಿಕ ಪ್ರತಿಕ್ರಿಯೆಗಳೇ ಆಗಿವೆ. ಕುಟುಂಬದಿಂದ ದೂರ ಉಳಿದ ಸಾರಿಗೆ ಸಂಸ್ಥೆಯ ನೌಕರರು ಬಿಡುವಿಲ್ಲದೆ, ರಜೆ ಇಲ್ಲದೆ ದುಡಿಯುತ್ತಾರೆ. ಮಾನಸಿಕ ಸ್ವಾಸ್ಥ್ಯಕ್ಕೆ ಅಗತ್ಯವಾದ ಕೌನ್ಸೆಲಿಂಗ್, ತರಬೇತಿ ಅವರಿಗಿರುವುದಿಲ್ಲ. ಹಾಗಾಗಿಯೇ, ಅವರು ಅಸಹನೆಯಿಂದ ವರ್ತಿಸುತ್ತಾರೆ. ಅವರ ವರ್ತನೆಗಳು ಸಾಮಾಜಿಕ ವ್ಯವಸ್ಥೆಯನ್ನು ಸ್ವಲ್ಪಮಟ್ಟಿಗೆ ಕಲುಷಿತಗೊಳಿಸುತ್ತವೆ.

ನಿರ್ವಾಹಕರ ಜೊತೆಯಲ್ಲಿ ಸಣ್ಣ ವಿಚಾರಕ್ಕೂ ವಾಗ್ವಾದಕ್ಕಿಳಿದು ಕೈ ಕೈ ಮಿಲಾಯಿಸುವ ಮಟ್ಟಿಗೆ ನಮ್ಮ ಜನಸಾಮಾನ್ಯರು ತಾಳ್ಮೆ ಕಳೆದುಕೊಳ್ಳುವುದೂ ಇದೆ. ಪ್ರಯಾಣಿಕರ ಜೊತೆಯಲ್ಲಿ ನಿರ್ವಾಹಕ ಮತ್ತು ಚಾಲಕರು ಸೌಜನ್ಯಯುತವಾಗಿ ವರ್ತಿಸಬೇಕು ಎನ್ನುವಂತೆಯೇ, ಪ್ರಯಾಣಿಕರೂ ನೌಕರರ ಸಂಕಷ್ಟವನ್ನರಿತುಕೊಂಡು ಸಹಕಾರ ಮನೋಭಾವ ಬೆಳೆಸಿಕೊಳ್ಳುವ ಅಗತ್ಯವಿದೆ. ಸಾರಿಗೆ ಸಂಸ್ಥೆ ನೌಕರರಿಗೆ ತರಬೇತಿ, ಕಾರ್ಯಾಗಾರವನ್ನು ಸರ್ಕಾರ ಹಮ್ಮಿಕೊಳ್ಳಬೇಕು. ವಿಶ್ರಾಂತಿ, ರಜೆ, ಆರೋಗ್ಯ ಸಂಬಂಧಿ ತಪಾಸಣೆಯಂತಹ ನೌಕರರ ಕ್ಷೇಮಾಭಿವೃದ್ಧಿಗೂ ಕೌಶಲಾಭಿವೃದ್ಧಿಗೂ ಸಂಬಂಧಿಸಿದ ಕಾರ್ಯಸೂಚಿಗಳನ್ನು ಅನುಷ್ಠಾನಗೊಳಿಸಬೇಕು.

ಬಸ್ಸಿನೊಳಗೆ ಮಹಿಳೆಯರಿಗೆ, ಅಂಗವಿಕರಿಗೆ ಹಾಗೂ ಹಿರಿಯ ನಾಗರಿಕರಿಗೆ ಮೀಸಲಿರಿಸಿದ ಸೀಟುಗಳಲ್ಲಿ ಮೀಸಲಾತಿಗೆ ಅರ್ಹರು ನಿಂತುಕೊಂಡು, ಮೀಸಲಾತಿ ಅನ್ವಯಿಸದವರು ಆ ಜಾಗಗಳನ್ನು ಆಕ್ರಮಿಸಿಕೊಂಡು ಪ್ರಯಾಣಿಸುವ ಸ್ಥಿತಿಯು ಸಹಜ ಎಂಬಂತೆ ಕಾಣಸಿಗುತ್ತದೆ. ಇಯರ್ ಫೋನ್ ಬಳಸದೆ ಜೋರಾಗಿ ಮೊಬೈಲಿನಲ್ಲಿ ಹಾಡು, ಸಿನಿಮಾಗಳನ್ನು ಹಾಕುವ, ಗಟ್ಟಿ ಧ್ವನಿಯಲ್ಲಿ ಫೋನಿನಲ್ಲಿ ಗಂಟೆಗಟ್ಟಲೆ ಮಾತನಾಡುವ, ಅನುಚಿತವಾಗಿ ವರ್ತಿಸುವ– ವಿಶೇಷವಾಗಿ ಯುವತಲೆಮಾರಿನ ವಿದ್ಯಾರ್ಥಿಗಳ– ನಡವಳಿಕೆ, ಇತ್ಯಾದಿ ಕುರಿತು ನಿರ್ವಾಹಕ ಮತ್ತು ಪ್ರಯಾಣಿಕರು ತುಟಿಕ್‌ಪಿಟಿಕ್ ಎನ್ನಲಾರರು. ಪ್ರಯಾಣಿಕರು ಪ್ರಯಾಣಿಸುವ ಸಂದರ್ಭದಲ್ಲಿ ನಿರ್ವಹಿಸಬೇಕಾದ ಸಾಮಾನ್ಯ ನಿಯಮಗಳನ್ನು ಪಾಲಿಸಲು ನಿರ್ವಾಹಕನೂ ಬದ್ಧನಾಗಿರಬೇಕು.

ಗರ್ಭಿಣಿಯರಿಗೆ ಬಸ್ಸುಗಳಲ್ಲಿ ಮೀಸಲು ಸೀಟನ್ನು ನಿಗದಿಪಡಿಸಬೇಕು. ಅಥವಾ ಮಹಿಳೆಯರಿಗೆ ಮೀಸಲಿರಿಸದ ಸೀಟುಗಳಲ್ಲಿ ಒಂದು ಸೀಟನ್ನು ಗರ್ಭಿಣಿಗೆ ಎಂದು ಮೀಸಲಿರಿಸುವುದು ಉತ್ತಮ. ಹಾಗೆಯೇ, ಕೆಂಪು ಬಸ್ಸುಗಳಲ್ಲಿ ಹೆಚ್ಚಾಗಿ ಪ್ರಯಾಣಿಸದ ವಿಧಾನಸಭಾ ಸದಸ್ಯರ, ಲೋಕಸಭಾ ಸದಸ್ಯರ ಮೀಸಲು ಸೀಟುಗಳನ್ನು ತೆಗೆದುಹಾಕುವುದು ಉತ್ತಮ. ಲಿಂಗತ್ವ ಅಲ್ಪಸಂಖ್ಯಾತರಿಗೂ ಒಂದೆರಡು ಸೀಟುಗಳನ್ನು ಮೀಸಲಿರಿಸಬಹುದು.

'ಶಕ್ತಿ' ಯೋಜನೆ ಆರಂಭವಾದ ನಂತರ ಪುರುಷ ಪ್ರಯಾಣಿಕರ ಮನೋಭಾವದಲ್ಲಿ ವಿಪರೀತ ಬದಲಾವಣೆ ಕಂಡುಬರುತ್ತಿದೆ. ಸೀಟು ಸಿಗದೆ ಹೋದಾಗ ಮಹಿಳೆಯರ ಜೊತೆಯಲ್ಲಿ ವಾಗ್ವಾದಕ್ಕಿಳಿಯುವುದು ಕಾಣಿಸುತ್ತಿದೆ. ಹಣ ಕೊಟ್ಟು ಪ್ರಯಾಣಿಸುವ ಪುರುಷರಿಗೂ ನಾಲ್ಕು ಸೀಟುಗಳನ್ನು ಮೀಸಲಿರಿಸಿದರೆ ಶಕ್ತಿ ಯೋಜನೆಯ ಕಾರಣದಿಂದ ನಿಂತುಕೊಂಡೇ ಗೊಣಗುತ್ತಾ ಪ್ರಯಾಣಿಸುವ ಗಂಡಸರಿಗೂ ಕೊಂಚ ಸಮಾಧಾನ ತರಬಹುದು.

ರಾತ್ರಿ ಚಲಿಸುವ ಕೆಂಪು ಬಸ್ಸುಗಳಲ್ಲಿ ಮಹಿಳೆಯರಿಗೆ ಆನ್‌ಲೈನ್ ಮೂಲಕ ಉಚಿತವಾಗಿ ಸೀಟು ಕಾಯ್ದಿರಿಸುವ ಅವಕಾಶವಿದೆ. ಇದರ ಬದಲಾಗಿ, ಆನ್‌ಲೈನ್ ಕಾಯ್ದಿರಿಸುವಿಕೆಗೆ ಪ್ರಯಾಣ ವೆಚ್ಚದ ಐವತ್ತು ಪ್ರತಿಶತವನ್ನಾದರೂ ಪಾವತಿಸುವಂತೆ ಮಾಡಿ, ಬಸ್ಸಿನಲ್ಲೇ ಟಿಕೆಟ್ ಪಡೆಯುವ ಮಹಿಳೆಯರಿಗೆ ಮಾತ್ರ ಪೂರ್ಣ ಉಚಿತ ಪ್ರಯಾಣಕ್ಕೆ ಅನುವು ಮಾಡಿಕೊಡುವ ಮಾದರಿಯನ್ನು ಪರಿಚಯಿಸಬೇಕು. ಆ ಮೂಲಕ ಎಲ್ಲರನ್ನೂ ಒಳಗೊಳ್ಳುವ ವ್ಯವಸ್ಥೆಯನ್ನು ರೂಪಿಸುವ ಪ್ರಯತ್ನ ಮಾಡಬಹುದಾಗಿದೆ. ಇಂಥ ಬದಲಾವಣೆಗಳ ಮೂಲಕ, 'ಶಕ್ತಿ' ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿ ಹಾಗೂ ಪ್ರಯಾಣಿಕಸ್ನೇಹಿ ಆಗಿಸಬಹುದಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಮಾಸ್ ಮತ್ತು ಇಸ್ರೇಲ್ ನಡುವಿನ ಸಂಘರ್ಷದಿಂದ ಜರ್ಜರಿತವಾಗಿದ್ದ ಗಾಜಾ ಪಟ್ಟಿಯಲ್ಲಿ ಹೊಸ ಬೆಳಕು ಮೂಡುವ ಸಾಧ್ಯತೆಗಳು ಗೋಚರಿಸುತ್ತಿವೆ. ಅಮೆರಿಕ ಮತ್ತಿತರ ದೇಶಗಳ ಮಧ್ಯಸ್ಥಿಕೆಯಲ್ಲಿ ಶಾಂತಿ ಒಪ್ಪಂದ ಏರ್ಪಟ್ಟಿದ್ದು, ಎರಡೂ ಗುಂಪುಗಳು ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿವೆ. ಗಾಜಾ ಪಟ್ಟಿಯ ಶೇ 80ರಷ್ಟು ಕಟ್ಟಡಗಳು ಹಾನಿಗೊಳಗಾಗಿದ್ದು, ಆಹಾರ, ವೈದ್ಯಕೀಯ ನೆರವು, ಶಾಂತಿಗಾಗಿ ಅಲ್ಲಿನ ಜನರು ಎದುರು ನೋಡುತ್ತಿದ್ದಾರೆ. ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿಯ ಪ್ರಮುಖ 'ಸ್ಪರ್ಧಿ'ಯಾಗಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾತ್ರ ಈ ಒಪ್ಪಂದದಲ್ಲಿ ಪ್ರಮುಖವಾಗಿದೆ

ಕದನ ವಿರಾಮ ಘೋಷಣೆ ನಂತರ ನಿರಾಶ್ರಿತರ ಕೇಂದ್ರದಲ್ಲಿದ್ದ ಗಾಜಾದ ನಾಗರಿಕರು ಅವಶೇಷಗಳ ನಡುವಿನ ರಸ್ತೆಯಲ್ಲಿ ತಮ್ಮ ಮನೆಗಳತ್ತ ಸಾಗಿದರು —ಎಎಫ್‌ಪಿ ಚಿತ್ರ

ಗಾಜಾದಲ್ಲಿ ಹೊಸ ಬೆಳಕು?

ಪ್ರಜಾವಾಣಿ ವಾರ್ತೆ

ಒಂದು ಕಡೆ ಕಣ್ಣೀರು. ಮತ್ತೊಂದು ಕಡೆ ಹರ್ಷೋದ್ಗಾರ. ಕೆಲವರಿಗೆ ಮಾತೇ ಹೊರಡದೇ ಗದ್ಗದಿತರಾಗಿದ್ದರು. ಇನ್ನೆಂದಿಗೂ ಮುಖ ಕಾಣಲು ಸಾಧ್ಯವಿಲ್ಲ ಎಂದುಕೊಂಡಿದ್ದ, ಜೀವಂತ ಇರಲಾರರು ಎಂದುಕೊಂಡಿದ್ದ ಪ್ರೀತಿಪಾತ್ರರು ಎದುರಿಗೆ ಬಂದು ನಿಂತಿದ್ದರು. ಯಾವುದು ಅಸಾಧ್ಯ ಎಂದು ಭಾವಿಸಲಾಗಿತ್ತೋ, ಅದು ಸಾಧ್ಯವಾಗಿದ್ದಕ್ಕಾಗಿ...

ಎರಡು ವರ್ಷಗಳ ಯುದ್ಧದಿಂದ ಜರ್ಜರಿತವಾಗಿರುವ ಗಾಜಾ ಪಟ್ಟಿಯಲ್ಲಿ ಈಗ ಇಂತಹ ಕಲಕುವ ದೃಶ್ಯಗಳು ಕಾಣುತ್ತಿವೆ. ಅಮೆರಿಕ ಮತ್ತು ಇತರ ದೇಶಗಳ ಪ್ರಯತ್ನದಿಂದ ಶಾಂತಿ ಒಪ್ಪಂದ ಏರ್ಪಟ್ಟಿದ್ದು, ಒಪ್ಪಂದಕ್ಕೆ ಅಮೆರಿಕದೊಂದಿಗೆ ಈಜಿಪ್ಟ್, ಕತಾರ್, ಟರ್ಕಿ ದೇಶಗಳು ಸಾಕ್ಷಿದಾರರಾಗಿ ಸಹಿ ಹಾಕಿವೆ. ಸೋಮವಾರ, ಹಮಾಸ್ ತನ್ನ ವಶದಲ್ಲಿದ್ದ 20 ಇಸ್ರೇಲಿಗರನ್ನು ಬಿಡುಗಡೆ ಮಾಡಿದ್ದರೆ, ಇಸ್ರೇಲ್ 2,000 ಕೈದಿಗಳ ಪೈಕಿ ಪ್ಯಾಲೆಸ್ಟೀನ್‌ನ 1,700 ಮಂದಿಯನ್ನು ಬಿಡುಗಡೆ ಮಾಡಿದೆ.

ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಗೆ ತಾನು ಅರ್ಹ ವ್ಯಕ್ತಿ ಎಂದು ಸ್ವಯಂ ಪ್ರತಿಪಾದಿಸಿಕೊಂಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಶಾಂತಿ ಒಪ್ಪಂದದಲ್ಲಿ ಮುಖ್ಯ ಪಾತ್ರ ವಹಿಸಿದ್ದು ಗಮನಾರ್ಹ. ಆದರೆ, ಗಾಜಾ ಪಟ್ಟಿಯಲ್ಲಿ ಸಂಪೂರ್ಣ ಶಾಂತಿ ಸ್ಥಾಪನೆ, ಮರು ನಿರ್ಮಾಣ ಸುಲಭದ ಕೆಲಸವಲ್ಲ. ಅದು ಬಹು ದೊಡ್ಡ ಸವಾಲು. ಅಂತರರಾಷ್ಟ್ರೀಯ ಸಮುದಾಯದ ಆಶಯದಂತೆ ಅಲ್ಲಿ ಪೂರ್ಣ ಪ್ರಮಾಣದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಅವರು ಇದುವರೆಗೆ ವಹಿಸಿದ ಪಾತ್ರಕ್ಕಿಂತಲೂ ಹೆಚ್ಚಿನ ಶ್ರಮವನ್ನು ಮುಂದಿನ ದಿನಗಳಲ್ಲಿ ಹಾಕಬೇಕಿದೆ ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ವಿಶ್ಲೇಷಿಸಿವೆ.

ಯಾಕೆಂದರೆ, ಈ ಹಿಂದೆಯೂ ಇಸ್ರೇಲ್ ಮತ್ತು ಹಮಾಸ್ ನಡುವೆ ಕದನ ವಿರಾಮಕ್ಕೆ ಹಲವು ಪ್ರಯತ್ನಗಳು ನಡೆದಿದ್ದವು. ಆದರೆ, ಇಸ್ರೇಲ್ ಇದಕ್ಕೆ ಪೂರಕವಾಗಿ ನಡೆದುಕೊಂಡಿರಲಿಲ್ಲ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕೆಲವು ನಿರ್ಧಾರಗಳು ಕದನ ವಿರಾಮ ಪ್ರಕ್ರಿಯೆಗೆ ಹಿನ್ನಡೆ ನೀಡಿದ್ದವು.

ಮಾತು ಬದಲಿಸುವರೇ ನೆತನ್ಯಾಹು?: ನೆತನ್ಯಾಹು ಅವರೊಂದಿಗೆ ವ್ಯವಹರಿಸುವುದು ಅಷ್ಟು ಸುಲಭವಲ್ಲ. ಅಮೆರಿಕದ ಹಿಂದಿನ ಅಧ್ಯಕ್ಷರಾದ ಬಿಲ್ ಕ್ಲಿಂಟನ್ ಮತ್ತು ಜೋ ಬೈಡನ್ ಅವರಿಗೂ ಇದರ ಅನುಭವ ಆಗಿದೆ. ಅಮೆರಿಕದ ಸಲಹೆಯನ್ನೂ ಮೀರಿ ಹಲವು ಬಾರಿ ಗಾಜಾ ಪಟ್ಟಿಯ ಮೇಲೆ ಸೇನಾ ದಾಳಿ ನಡೆಸುವ ಮೂಲಕ ಟ್ರಂಪ್ ಅವರ ಆಡಳಿತಕ್ಕೂ ನೆತನ್ಯಾಹು ಹಲವು ಸಂದರ್ಭಗಳಲ್ಲಿ ತಲೆನೋವು ತಂದಿದ್ದರು.

ಆದರೆ, ಈ ಬಾರಿ ಟ್ರಂಪ್ ಬಿಗಿ ಪಟ್ಟು ಹಿಡಿದು ನೆತನ್ಯಾಹು ಅವರನ್ನು ಕದನ ವಿರಾಮಕ್ಕೆ ಒಪ್ಪಿಸಿದ್ದಾರೆ. ತಮ್ಮ ಮಿತ್ರ ಪಕ್ಷಗಳ ವಿರೋಧದ ನಡುವೆಯೂ ನೆತನ್ಯಾಹು ಅವರು ಒಲ್ಲದ ಮನಸ್ಸಿನಿಂದಲೇ ಕದನವಿರಾಮಕ್ಕೆ ಒಪ್ಪಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಅದೇ ರೀತಿಯಲ್ಲಿ ಇತ್ತ, ಒತ್ತೆಯಾಳುಗಳ ಬಿಡುಗಡೆಗೆ ಹಮಾಸ್ ಅನ್ನು ಒಪ್ಪಿಸುವಂತೆ ಪಶ್ಚಿಮ ಏಷ್ಯಾದ ರಾಷ್ಟ್ರಗಳ ಮುಖಂಡರ ಮೇಲೆ ಟ್ರಂಪ್ ಒತ್ತಡ ಹಾಕಿದ್ದರು. ಟ್ರಂಪ್ ಅವರ ಪ್ರಯತ್ನ ಫಲಿಸಿ, ಒಪ್ಪಂದ ಏರ್ಪಟ್ಟಿದೆ. ಆದರೆ, ಮುಂದಿನ ದಾರಿ ಇಷ್ಟು ಸುಲಭವಿಲ್ಲ ಎನ್ನಲಾಗುತ್ತಿದೆ.

ಟ್ರಂಪ್ ಉಸ್ತುವಾರಿಯಲ್ಲಿ ರೂಪು ತಳೆದಿರುವ ಒಪ್ಪಂದದ 20 ಅಂಶಗಳಲ್ಲಿ ಕೆಲವು ವಿಚಾರಗಳ ಬಗ್ಗೆ ಹಮಾಸ್ ಮತ್ತು ಇಸ್ರೇಲ್ ಭಿನ್ನಮತ ವ್ಯಕ್ತಪಡಿಸಿವೆ. ಜತೆಗೆ, ಇಸ್ರೇಲ್‌ನಲ್ಲಿ ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ತಮ್ಮ ಬಲಪಂಥೀಯ ಮಿತ್ರರನ್ನು ಉಳಿಸಿಕೊಳ್ಳಲು, ವಿರೋಧಿಗಳನ್ನು ಅಧಿಕಾರದಿಂದ ದೂರವಿಡಲು ನೆತನ್ಯಾಹು ಕದನ ವಿರಾಮ ಕುರಿತ ತಮ್ಮ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳುವ ಸಾಧ್ಯತೆಯೂ ಇದೆ.

ಟ್ರಂಪ್ ರೂಪಿಸಿರುವ ಶಾಂತಿ ಸೂತ್ರದ ಸಾಮರ್ಥ್ಯವೇ ಅದರ ದೌರ್ಬಲ್ಯವೂ ಆಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಒಪ್ಪಂದದಲ್ಲಿ ಅನೇಕ ಅಂಶಗಳನ್ನು ವಿವರವಾಗಿ ನಮೂದಿಸಿಲ್ಲ. ವಾಸ್ತವವಾಗಿ, ಅದರಲ್ಲಿನ ಅಸ್ಪಷ್ಟತೆಯೇ ಎರಡೂ ಗುಂಪುಗಳು ಕದನ ವಿರಾಮಕ್ಕೆ ಸಮ್ಮತಿಸಲು ಕಾರಣವಾಗಿದೆ. ಟ್ರಂಪ್ ಒಪ್ಪಂದದ ಬಗ್ಗೆ ಅತ್ಯುತ್ಸಾಹ ತೋರುತ್ತಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲೆಸಿದೆ ಎಂದೂ, ಇದು ಚಾರಿತ್ರಿಕ ಎಂದೂ ಪ್ರತಿಪಾದಿಸುತ್ತಿದ್ದಾರೆ. ಆದರೆ, ಶಾಂತಿ ಮಾತುಕತೆಯ ಮುಖ್ಯ ಭಾಗ ಈಗಷ್ಟೇ ಆರಂಭವಾಗಿದೆ ಎಂದು ಪರಿಣತರು ಹೇಳುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಗಾಜಾ ಜನರ ಶಾಂತಿಯ ಕನಸು ನನಸಾಗುವುದೇ ಇಲ್ಲಾ, ಕನಸಾಗಿಯೇ ಉಳಿಯುವುದೇ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ.

ಆಧಾರ: ರಾಯಿಟರ್ಸ್, ಬಿಬಿಸಿ, ಟೈಮ್ ಮ್ಯಾಗಜಿನ್, ಸಂಘರ್ಷದ ಕುರಿತ ಬ್ರೌನ್ ವಿವಿ ವರದಿ

ಮರುನಿರ್ಮಾಣದ ಸವಾಲು

ಗಾಜಾವನ್ನು ಮರುನಿರ್ಮಿಸುವುದು ಒಂದು ಸವಾಲಾಗಿದೆ. ಸಂಘರ್ಷದಿಂದ ಗಾಜಾ ಪಟ್ಟಿಯಲ್ಲಿ ಶೇ 10ರಷ್ಟು ಮಂದಿ ಸತ್ತಿದ್ದರೆ, ಶೇ 90ರಷ್ಟು ಮಂದಿ ನಿರ್ವಸಿತರಾಗಿದ್ದಾರೆ. ಈ ಪ್ರದೇಶದ ಶೇ 80ರಷ್ಟು ಕಟ್ಟಡಗಳು ಹಾನಿಗೊಳಗಾಗಿವೆ. ಶೇ 95ರಷ್ಟು ಆಸ್ಪತ್ರೆಗಳು, ಶೇ 90ರಷ್ಟು ಶಾಲೆಗಳು ಹಾನಿಗೊಳಗಾಗಿವೆ. ಗಾಜಾ ನಗರದಲ್ಲಿ ಹಾನಿಯ ಪ್ರಮಾಣ ಶೇ 92ರಷ್ಟು ಎನ್ನಲಾಗಿದೆ. ವಿಶ್ವಸಂಸ್ಥೆಯು ಪರಿಹಾರ ಕಾರ್ಯಗಳನ್ನು ನಡೆಸುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯು ಸಂತ್ರಸ್ತರಿಗೆ ವೈದ್ಯಕೀಯ ನೆರವು ನೀಡುವ ತನ್ನ ಚಟುವಟಿಕೆಗಳನ್ನು ತೀವ್ರಗೊಳಿಸಿದೆ.

ಈ ಪ್ರದೇಶದಲ್ಲಿ ಕನಿಷ್ಠ 5.5 ಕೋಟಿ ಟನ್‌ಗಳಷ್ಟು ಅವಶೇಷಗಳನ್ನು ತೆರವುಗೊಳಿಸಬೇಕಿದೆ. ಅವಶೇಷಗಳಡಿ ಶವಗಳು ಸಿಗುತ್ತಿದ್ದು, ಅವುಗಳನ್ನು ಪತ್ತೆ ಹಚ್ಚುವುದು, ಸಂಬಂಧಪಟ್ಟವರನ್ನು ಹುಡುಕಿ ಹಸ್ತಾಂತರಿಸುವುದು ಪ್ರಯಾಸದ ಕೆಲಸವಾಗಿದೆ. ಗಾಜಾ ವನ್ನು ವಾಸಯೋಗ್ಯ ಪ್ರದೇಶವನ್ನಾಗಿ ರೂಪಿಸಲು 7,000 ಕೋಟಿ ಡಾಲರ್ (₹6.21 ಲಕ್ಷ ಕೋಟಿ) ಅಗತ್ಯವಿದೆ ಎಂದು ವಿಶ್ವಸಂಸ್ಥೆ, ಐರೋಪ್ಯ ಒಕ್ಕೂಟ ಮತ್ತು ವಿಶ್ವಬ್ಯಾಂಕ್ ಅಂದಾಜಿಸಿವೆ.

ಮಧ್ಯಂತರ ಸರ್ಕಾರ

2007ರಿಂದ ಗಾಜಾವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುವ ಹಮಾಸ್ ಬಂಡುಕೋರ ಸಂಘಟನೆಯು ಶಾಂತಿ ಒಪ್ಪಂದಕ್ಕೆ ಸಮ್ಮತಿ ಸೂಚಿಸಿದ್ದರೂ, ಗಾಜಾದ ನಿಯಂತ್ರಣವನ್ನು ಬಿಟ್ಟುಕೊಡಲು ಅದಕ್ಕೆ ಮನಸ್ಸಿಲ್ಲ ಎಂದು ಹೇಳಲಾಗುತ್ತಿದೆ.

ಗಾಜಾ ಪಟ್ಟಿಯನ್ನು ಭಯೋತ್ಪಾದನ ಮುಕ್ತ ವಲಯವನ್ನಾಗಿ ಮಾಡಲಾಗುವುದು; ಅದು ನೆರೆ ರಾಷ್ಟ್ರಗಳಿಗೆ ಇನ್ನು ಮುಂದೆ ಬೆದರಿಕೆ ಒಡ್ಡದು ಎಂಬುದು 20 ಅಂಶಗಳ ಒಪ್ಪಂದದ ಮೊದಲ ಅಂಶ. ಬಂಡುಕೋರರು ಶಸ್ತ್ರ ತ್ಯಜಿಸಬೇಕು. ಅಂತಹವರಿಗೆ ಕ್ಷಮಾದಾನ ನೀಡಲಾಗುವುದು ಎಂದೂ ಒಪ್ಪಂದದಲ್ಲಿ ಹೇಳಲಾಗಿದೆ.

ಗಾಜಾದಲ್ಲಿ ತಾತ್ಕಾಲಿಕವಾಗಿ ಮಧ್ಯಂತರ ಸರ್ಕಾರ ರಚನೆಯಾಗಲಿದ್ದು, ರಾಜಕೀಯೇತರ ವ್ಯಕ್ತಿಗಳಿಂದ ಕೂಡಿದ ಪ್ಯಾಲೆಸ್ಟೀನ್ ಸಮಿತಿಯು ಗಾಜಾಪಟ್ಟಿ ಆಡಳಿತ ನಿರ್ವಹಿಸಲಿದೆ. ಪ್ಯಾಲೆಸ್ಟೀನ್ ಮತ್ತು ಅಂತರರಾಷ್ಟ್ರೀಯ ತಜ್ಞರು ಈ ಸಮಿತಿಯಲ್ಲಿರಲಿದ್ದಾರೆ. ಡೊನಾಲ್ಡ್ ಟ್ರಂಪ್ ಅಧ್ಯಕ್ಷತೆಯ 'ಶಾಂತಿ ಸ್ಥಾಪನಾ ಮಂಡಳಿ'ಯು ಮಧ್ಯಂತರ ಸರ್ಕಾರದ ಮೇಲ್ವಿಚಾರಣೆ ಮಾಡಲಿದೆ ಎಂದು ಒಪ್ಪಂದ ಹೇಳಿದೆ.

21 ಲಕ್ಷ
ಗಾಜಾದ ಜನಸಂಖ್ಯೆ

67,075
ಇಸ್ರೇಲ್ ದಾಳಿಯಲ್ಲಿ ಮೃತಪಟ್ಟ ಗಾಜಾದಲ್ಲಿನ ಪ್ಯಾಲೆಸ್ಟೀನಿಯನ್ನರು

20 ಸಾವಿರ
ಮೃತಪಟ್ಟ ಮಕ್ಕಳ ಸಂಖ್ಯೆ

19 ಲಕ್ಷ
ನಿರಂತರ ದಾಳಿಯಿಂದಾಗಿ ಗಾಜಾದಲ್ಲಿ ನಿರಾಶ್ರಿತರಾದ ಜನರು

1,048
ವೆಸ್ಟ್‌ಬ್ಯಾಂಕ್‌ನಲ್ಲಿ ಮೃತಪಟ್ಟ ನಾಗರಿಕರು



1,195
2023ರ ಅಕ್ಟೋಬರ್ 7ರಂದು ಹಮಾಸ್ ನಡೆಸಿದ ದಾಳಿಯಲ್ಲಿ ಮೃತಪಟ್ಟ ಇಸ್ರೇಲಿಗರು (ಇವರಲ್ಲಿ 815 ನಾಗರಿಕರು)

195
ಗಾಜಾದಲ್ಲಿ ಮೃತಪಟ್ಟ ಪತ್ರಕರ್ತರು/ ಮಾಧ್ಯಮಗಳ ಸಿಬ್ಬಂದಿ

554
ಸಂಘರ್ಷದಲ್ಲಿ ಕೊನೆಯುಸಿರೆಳೆದ ಮಾನವೀಯ ನೆರವಿನ ಕಾರ್ಯಕರ್ತರು

466
ಗಾಜಾದಲ್ಲಿ ಮೃತಪಟ್ಟ ಇಸ್ರೇಲ್ ಭದ್ರತಾ ಪಡೆ ಸಿಬ್ಬಂದಿ

ಪ್ಯಾಲೆಸ್ಟೀನ್‌ಗೆ ಸಿಗುವುದೇ ದೇಶದ ಸ್ಥಾನಮಾನ?

ಇಸ್ರೇಲ್ ಮತ್ತು ಹಮಾಸ್ ನಡುವೆ ಕದನ ವಿರಾಮ ಒಪ್ಪಂದ ಏರ್ಪಡುತ್ತಿದ್ದಂತೆಯೇ ಪ್ಯಾಲೆಸ್ಟೀನ್‌ಗೆ ರಾಷ್ಟ್ರದ ಸ್ಥಾನಮಾನ ನೀಡುವ ಬಗ್ಗೆ ಚರ್ಚೆ ಆರಂಭವಾಗಿದೆ. ಅಮೆರಿಕವನ್ನು ಬಿಟ್ಟು ಇತರೆ ಪಶ್ಚಿಮದ ರಾಷ್ಟ್ರಗಳು ಕೂಡ ಪ್ಯಾಲೆಸ್ಟೀನ್ ಅನ್ನು ರಾಷ್ಟ್ರವಾಗಿ ಘೋಷಿಸುವುದಕ್ಕೆ ಬೆಂಬಲ ಸೂಚಿಸಿವೆ. ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 157 ದೇಶಗಳು ಪ್ಯಾಲೆಸ್ಟೀನ್ ಅನ್ನು 'ಸಾರ್ವಭೌಮ ರಾಷ್ಟ್ರ' ಎಂದು ಪರಿಗಣಿಸಿವೆ. ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಲು ಪ್ಯಾಲೆಸ್ಟೀನ್ ದಶಕಗಳಿಂದ ಯತ್ನಿಸುತ್ತಿದೆಯಾದರೂ, ಅಮೆರಿಕ ಈ ನಿರ್ಣಯವನ್ನು ವಿರೋಧಿಸುತ್ತಿರುವುದರಿಂದ ಪ್ಯಾಲೆಸ್ಟೀನ್ ಈಗಲೂ ವಿಶ್ವಸಂಸ್ಥೆಯಲ್ಲಿ ಸದಸ್ಯಯೇತರ ವೀಕ್ಷಕ ರಾಷ್ಟ್ರವಾಗಿಯೇ ಇದೆ.

ಈಗ ಇಸ್ರೇಲ್ ಮತ್ತು ಹಮಾಸ್ ನಡುವೆ ಏರ್ಪಟ್ಟಿರುವ 20 ಅಂಶಗಳ ಕದನವಿರಾಮ ಒಪ್ಪಂದದಲ್ಲಿ ಪ್ರತ್ಯೇಕ ರಾಷ್ಟ್ರದ ಸ್ಥಾನಮಾನ ನೀಡುವ ಬಗ್ಗೆ ಸ್ಪಷ್ಟವಾಗಿ ಉಲ್ಲೇಖ ಮಾಡಿಲ್ಲ. ಆದರೆ, 19ನೇ ಅಂಶದಲ್ಲಿ ಇದರ ಬಗ್ಗೆ ಪ್ರಸ್ತಾಪವಿದೆ.

ಗಾಜಾದ ಮರು ಅಭಿವೃದ್ಧಿ ಮತ್ತು ಪ್ಯಾಲೆಸ್ಟೀನ್ ಪ್ರಾಧಿಕಾರದ (ಪಿಎ) ಸುಧಾರಣಾ ಕಾರ್ಯಕ್ರಮಗಳು ಯೋಜಿಸಿದಂತೆಯೇ ಪೂರ್ಣವಾದಾಗ, ಜನರ ಬಯಕೆಯಂತೆ ಪ್ಯಾಲೆಸ್ಟೀನಿಯನ್ನರ ದೃಢ ಸಂಕಲ್ಪ ಮತ್ತು ರಾಷ್ಟ್ರದ ಸ್ಥಾನಮಾನ ಹೊಂದುವ ವಿಶ್ವಾಸಾರ್ಹ ಸನ್ನಿವೇಶಗಳು ನಿರ್ಮಾಣವಾಗಲಿವೆ ಎಂದು ಒಪ್ಪಂದದ 19ನೇ ಅಂಶ ಹೇಳುತ್ತದೆ.

ಶಾಂತಿಯುತ ಮತ್ತು ಸಮೃದ್ಧ ಸಹಬಾಳ್ವೆಗಾಗಿ ರಾಜಕೀಯ ವ್ಯವಸ್ಥೆಯೊಂದನ್ನು ರೂಪಿಸುವುದಕ್ಕಾಗಿ ಇಸ್ರೇಲ್ ಮತ್ತು ಪ್ಯಾಲೆಸ್ಟೀನಿಯನ್ನರ ನಡುವೆ ಮಾತುಕತೆ ನಡೆಯುವಂತೆ ಅಮೆರಿಕ ನೋಡಿಕೊಳ್ಳಲಿದೆ ಎಂದು ಒಪ್ಪಂದದ 20ನೇ ಅಂಶದಲ್ಲಿ ಹೇಳಲಾಗಿದೆ.

ಇಸ್ರೇಲ್ ವಿರೋಧ: ಪ್ಯಾಲೆಸ್ಟೀನ್‌ಗೆ ರಾಷ್ಟ್ರದ ಸ್ಥಾನಮಾನ ನೀಡುವುದಕ್ಕೆ ಇಸ್ರೇಲ್ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದೆ. ಪೂರ್ವ ಜೆರುಸಲೇಂ, ವೆಸ್ಟ್‌ಬ್ಯಾಂಕ್ ಮತ್ತು ಗಾಜಾ ತನಗೆ ಸೇರಿದ್ದು ಎಂಬುದು ಪ್ಯಾಲೆಸ್ಟೀನ್‌ನ ವಾದ. ಆದರೆ, ಇದನ್ನು ಇಸ್ರೇಲ್ ಒಪ್ಪುತ್ತಿಲ್ಲ. ಹಾಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಈ ಹಿಂದೆ ಪ್ರಧಾನಿಯಾಗಿದ್ದಾಗಲೂ ಪ್ಯಾಲೆಸ್ಟೀನ್ ಪ್ರತ್ಯೇಕ ರಾಷ್ಟ್ರ ಸ್ಥಾನಮಾನ ನೀಡುವುದನ್ನು ವಿರೋಧಿಸುತ್ತಲೇ ಬಂದಿದ್ದಾರೆ.

ರಾಷ್ಟ್ರೀಯ

ಕಾಡಾನೆ ಸಂಖ್ಯೆಯಲ್ಲಿ ಶೇ 18ರಷ್ಟು ಇಳಿಕೆ



ನವದೆಹಲಿ (ಪಿಟಿಐ): ದೇಶದಲ್ಲಿ ಕಾಡಾನೆಗಳ ಸಂಖ್ಯೆ ಪ್ರಸ್ತುತ 22,446 ಇದ್ದು, ಇವುಗಳ ಸಂಖ್ಯೆಯಲ್ಲಿ ಶೇಕಡ 18ರಷ್ಟು ಇಳಿಕೆ ಕಂಡುಬಂದಿದೆ. ದೇಶದಲ್ಲಿ ಮೊಟ್ಟಮೊದಲ ಬಾರಿಗೆ ನಡೆಸಿದ ಡಿಎನ್‌ಎ ಆಧಾರಿತ ಗಣತಿಯಿಂದ ಈ ಅಂಶ ತಿಳಿದುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಮಂಗಳವಾರ ಬಿಡುಗಡೆ ಮಾಡಿರುವ, 'ಅಖಿಲ ಭಾರತ ಸಮಕಾಲಿಕ ಆನೆ ಗಣತಿ' (ಎಸ್‌ಎ-ಐಇಇ)–2025ರ ವರದಿಯಲ್ಲಿ ಈ ಮಾಹಿತಿ ಇದೆ. 2021ರಲ್ಲಿ ಈ ಗಣತಿ ನಡೆದಿತ್ತು.

2017ರಲ್ಲಿ ಕಾಡಾನೆಗಳ ಸಂಖ್ಯೆ 27,312 ಇತ್ತು. ಸದ್ಯ, ದೇಶದಲ್ಲಿ ಕಾಡಾನೆಗಳ ಸಂಖ್ಯೆ ಸರಾಸರಿ 22,446 ಇದೆ ಎಂದು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಪ್ರತಿ ಸಲ ವಾಡಿಕೆಯಂತೆ ನಡೆಯುವ ಗಣತಿ ಹಾಗೂ ಡಿಎನ್‌ಎ ಆಧಾರಿತ ಗಣತಿಗೆ ಬಳಸುವ ವಿಧಾನಗಳು ಬೇರೆ. ಹೀಗಾಗಿ ಈ ಎರಡೂ ವಿಧಾನಗಳನ್ನು ಹೋಲಿಕೆ ಮಾಡಬಾರದು' ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

'ಸಿಂಧೂರ: ಪಾಕ್‌ನ 100ಕ್ಕೂ ಹೆಚ್ಚು ಯೋಧರ ಸಾವು'

ನವದೆಹಲಿ (ಪಿಟಿಐ): 'ಸಿಂಧೂರ' ಕಾರ್ಯಾಚರಣೆ ಸಂದರ್ಭದಲ್ಲಿ ಪಾಕಿಸ್ತಾನವು 100ಕ್ಕೂ ಹೆಚ್ಚು ಯೋಧರನ್ನು ಕಳೆದುಕೊಂಡಿದೆ ಎಂದು ಭಾರತ ಸೇನೆಯ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ ಹೇಳಿದ್ದಾರೆ.

ಪಾಕಿಸ್ತಾನ ಸೇನೆಯು ಮರಣೋತ್ತರವಾಗಿ ನೀಡಿದ ಪ್ರಶಸ್ತಿಗಳ ಪಟ್ಟಿಯನ್ನು ಉಲ್ಲೇಖಿಸಿ ಅವರು ಈ ಹೇಳಿಕೆ ನೀಡಿದ್ದಾರೆ. ಮೇ ತಿಂಗಳಲ್ಲಿ ನಡೆದ ಸಂಘರ್ಷದಲ್ಲಿ ಪಾಕಿಸ್ತಾನವು 12 ಯುದ್ಧ ವಿಮಾನಗಳನ್ನು ಕಳೆದುಕೊಂಡಿದೆ ಎಂದು ಘಯಿ ತಿಳಿಸಿದ್ದಾರೆ.

'ಪಾಕಿಸ್ತಾನದವರು ತಮ್ಮ ಯೋಧರಿಗೆ ಮರಣೋತ್ತರವಾಗಿ ನೀಡಿದ ಪ್ರಶಸ್ತಿಗಳ ಪಟ್ಟಿಯನ್ನು ಆಗಸ್ಟ್ 14ರಂದು ಬಿಡುಗಡೆ ಮಾಡಿದ್ದಾರೆ. ಮರಣೋತ್ತರ ಪ್ರಶಸ್ತಿಗಳ ಸಂಖ್ಯೆಯು, ಸಿಂಧೂರ ಕಾರ್ಯಾಚರಣೆ ವೇಳೆ ಎಲ್‌ಒಸಿ ಬಳಿ ಅವರು 100ಕ್ಕೂ ಹೆಚ್ಚು ಯೋಧರನ್ನು ಕಳೆದುಕೊಂಡಿರುವುದನ್ನು ಸೂಚಿಸುತ್ತದೆ' ಎಂದಿದ್ದಾರೆ.

ರೈಲ್ವೆ: ವೇಗಗತಿಯ ಸರಕು ಸಾಗಣೆಗೆ ನೂತನ ಕ್ರಮ

ಅಶ್ವಿನಿ ವೈಷ್ಣವ್

ನವದೆಹಲಿ (ಪಿಟಿಐ): ಉದ್ಯಮಗಳು ಮತ್ತು ಕೈಗಾರಿಕೆಗಳ ಸರಕುಗಳನ್ನು ಕಾಲಮಿತಿಯಲ್ಲಿ ನಿಗದಿತ ಸ್ಥಳಕ್ಕೆ ಸಾಗಣೆ ಮಾಡಲು ನೆರವಾಗುವ ನಿಟ್ಟಿನಲ್ಲಿ ಮೂರು ನೂತನ ಉಪಕ್ರಮಗಳಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಮಂಗಳವಾರ ಚಾಲನೆ ನೀಡಿದರು.

ಉತ್ತರ ಪ್ರದೇಶದ ಸಮಗ್ರ ಲಾಜಿಸ್ಟಿಕ್ ಕೇಂದ್ರ, ದೆಹಲಿ–ಕೋಲ್ಕತ್ತ ಕಾಲಮಿತಿ ಸರಕುಸಾಗಣೆ ರೈಲು, ಮುಂಬೈ–ಕೋಲ್ಕತ್ತ ಮನೆಮನೆಗೆ ಪಾರ್ಸೆಲ್ ಸೇವೆಗೆ ಚಾಲನೆ ನೀಡಿದರು.

ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಸಿಒಎನ್‌ಸಿಒಆರ್) ಸಹಭಾಗಿತ್ವದಲ್ಲಿ ಈ ಉಪಕ್ರಮಗಳನ್ನು ಜಾರಿ ಮಾಡಲಾಗಿದೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ರಸ್ತೆ ಮೂಲಕ ಸರಕು ಸಾಗಣೆ ಮಾಡುವ ವಿಧಾನಗಳಿಗೆ ಹೋಲಿಸಿದರೆ ಮನೆಮನೆಗೆ ಪಾರ್ಸೆಲ್ ಸೇವೆಯಿಂದ ಶೇ 7.5ರಷ್ಟು ಹಣ ಉಳಿತಾಯವಾಗುತ್ತದೆ ಮತ್ತು ಸರಕುಗಳನ್ನು ಶೇ 30ರಷ್ಟು ವೇಗವಾಗಿ ನಿರ್ದಿಷ್ಟ ಸ್ಥಳಕ್ಕೆ ತಲುಪಿಸಬಹುದು' ಎಂದು ಅಶ್ವಿನಿ ವೈಷ್ಣವ್ ಅವರು ಹೇಳಿದರು.

ದೆಹಲಿ–ಕೋಲ್ಕತ್ತ ಸರಕುಸಾಗಣೆ ರೈಲುಗಳಂತೆ ಭವಿಷ್ಯದಲ್ಲಿ ಬೇರೆ ಮಾರ್ಗಗಳಲ್ಲಿಯೂ ಇದೇ ರೀತಿಯ ರೈಲು ಸೇವೆಯನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ **ಅಮೆರಿಕದ** ಕೇಂದ್ರ ಗುಪ್ತಚರ ಸಂಸ್ಥೆಯ (ಸಿಐಎ) ತಂಡವು ದಶಕಗಳ ಹಿಂದೆ ಹಿಮಾಲಯದ ನಂದಾದೇವಿ ಶಿಖರದಲ್ಲಿ ವಿಕಿರಣಯುಕ್ತ ಪ್ಲುಟೋನಿಯಂ ಅನ್ನು ಹೊಂದಿದ್ದ ಪರಮಾಣು ವಿದ್ಯುತ್ ಜನರೇಟರ್ ಅನ್ನು ಕಳೆದುಕೊಂಡಿದ್ದು, ಆ ಸಿಐಎ ತಂಡದಲ್ಲಿ ಪರಿಸರವಾದಿ ಸೋನಮ್ ವಾಂಗ್ಚುಕ್ ಅವರ ತಂದೆ ಸೋನಮ್ ವಾಂಗ್ಯಾಲ್ ಕೂಡ ಇದ್ದರು ಎಂದು ಪ್ರತಿಪಾದಿಸುವ ಪೋಸ್ಟ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪೋಸ್ಟ್ ಜೊತೆಗೆ ಈ ಸಂಬಂಧದ ಸುದ್ದಿಯ ತಲೆಬರಹ ಇರುವ ದಿನಪತ್ರಿಕೆಯ ಕ್ಲಿಪ್ಪಿಂಗ್ ಕೂಡ ಹಾಕಲಾಗಿದೆ. ಆದರೆ, ಇದು ಸುಳ್ಳು.

✅ **ಉತ್ತರಾಖಂಡದ** ನಂದಾದೇವಿ ಶಿಖರದ ವ್ಯಾಪ್ತಿಯಲ್ಲಿ ಅಮೆರಿಕದ ಸಿಐಎ ಮತ್ತು ಭಾರತದ ಗುಪ್ತಚರ ಸಂಸ್ಥೆ(ಐಬಿ) ಜಂಟಿಯಾಗಿ ಪರಮಾಣು ವಿದ್ಯುತ್ ಉತ್ಪಾದನಾ ಘಟಕವನ್ನು ನಿರ್ಮಿಸುವ ಯೋಜನೆಯನ್ನು 1965ರಲ್ಲಿ ರೂಪಿಸಿದ್ದವು. ವಾಷಿಂಗ್ಟನ್ ಪೋಸ್ಟ್ ಸೇರಿದಂತೆ ಹಲವು ಮಾಧ್ಯಮಗಳು ಈ ಬಗ್ಗೆ ವರದಿ ಮಾಡಿದ್ದವು. ಪೋಸ್ಟ್‌ನಲ್ಲಿರುವುದು 1978ರ ವಾಷಿಂಗ್ಟನ್ ಪೋಸ್ಟ್‌ನ ಪತ್ರಿಕಾ ವರದಿಯ ಕ್ಲಿಪ್ಪಿಂಗ್. ಚೀನಾದ ಪರಮಾಣು ಚಟುವಟಿಕೆಯ ಮೇಲೆ ಕಣ್ಣಿಡುವ ಉದ್ದೇಶದಿಂದ ನಂದಾದೇವಿ ಶಿಖರದಲ್ಲಿ 1965ರ ಅಕ್ಟೋಬರ್‌ನಲ್ಲಿ ಸಿಐಎ ಮತ್ತು ಐಬಿ ಜಂಟಿಯಾಗಿ ಪ್ಲುಟೋನಿಯಂ ಆಧಾರಿತ ನಿಗಾ ಸಲಕರಣೆಯನ್ನು ಅಳವಡಿಸಲು ಮುಂದಾಗಿದ್ದ ಬಗ್ಗೆ ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಪ್ರತಿಕೂಲ ಹವಾಮಾನದ ಕಾರಣಕ್ಕೆ ಪರಮಾಣು ಸಾಮರ್ಥ್ಯದ ಜನರೇಟರ್ ಅನ್ನು ಅಲ್ಲೇ ಬಿಟ್ಟು ಬರಬೇಕಾಯಿತು. ನಂತರ ಆ ಸಾಧನ ಅಲ್ಲಿಂದ ನಾಪತ್ತೆಯಾಗಿತ್ತು ಎಂದು ಈ ವರದಿ ಹೇಳಿದೆ.

ಈ ಪೋಸ್ಟ್‌ನಲ್ಲಿ ಸೋನಮ್ ವಾಂಗ್ಯಲ್ ಎಂಬವರ ಹೆಸರೂ ಇದೆ. ಅವರು ಸೋನಮ್ ವಾಂಗ್ಚುಕ್ ತಂದೆ ಎಂದು ಹೇಳಲಾಗಿದೆ. ವಾಂಗ್ಚುಕ್ ತಂದೆಯ ಹೆಸರು ಸೋನಮ್ ವಾಂಗ್ಯಲ್ ಎಂಬುದು ನಿಜವೇ ಆಗಿದ್ದರೂ ಅವರು ಸಿಐಎ ತಂಡದಲ್ಲಿ ಇದ್ದವರಲ್ಲ. ತಂಡದಲ್ಲಿ ಅದೇ ಹೆಸರಿನ ಚಾರಣಿಗರೊಬ್ಬರು ಇದ್ದರು. ಈ ವಾಂಗ್ಯಲ್ ಅವರು 23ನೇ ವರ್ಷದಲ್ಲಿ ಮೌಂಟ್ ಎವರೆಸ್ಟ್ ಏರಿದವರು. 1965ರಲ್ಲಿ ಭಾರತೀಯ ಎವರೆಸ್ಟ್ ಚಾರಣ ತಂಡದ ಭಾಗವಾಗಿದ್ದರು. ಅರ್ಜುನ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಭಾರತ–ಟಿಬೆಟ್ ಗಡಿ ಪೊಲೀಸ್ ಪಡೆಗೆ ನಿಯೋಜನೆಗೊಂಡಿದ್ದ ವಾಂಗ್ಯಲ್ ಅವರು 1993ರಲ್ಲಿ ಸಹಾಯಕ ನಿರ್ದೇಶಕರಾಗಿ ನಿವೃತ್ತಿಹೊಂದಿದ್ದರು. 2005ರ ಸಂದರ್ಶನವೊಂದರಲ್ಲಿ ಅವರು ನಂದಾ ದೇವಿ ಕಾರ್ಯಾಚರಣೆಯ ಬಗ್ಗೆ ವಿವರಗಳನ್ನು ನೀಡಿದ್ದರು. ವಾಂಗ್ಚುಕ್ ತಂದೆ ಸೋನಮ್ ವಾಂಗ್ಯಲ್ ಅವರು ರಾಜಕಾರಣಿಯಾಗಿದ್ದವರು. 1975ರಲ್ಲಿ ಅವರು ಜಮ್ಮು ಮತ್ತು ಕಾಶ್ಮೀರ ಸರ್ಕಾರದಲ್ಲಿ ಸಚಿವರಾಗಿದ್ದರು. 1998ರ ನ. 10ರಂದು ನಿಧನರಾಗಿದ್ದಾರೆ. ಪೋಸ್ಟ್‌ನಲ್ಲಿ ಪ್ರಸ್ತಾಪಿಸಲಾಗಿರುವ ಸೋನಮ್ ವಾಂಗ್ಯಲ್ ಅವರು ಈಗಲೂ ಇದ್ದಾರೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಮೂವರು ಅತಿಥಿಗಳು

ನುಡಿ ಬೆಳಗು

ವಾಸುದೇವ ನಾಡಿಗ್

ಕಿಟಕಿಯಿಂದ ಆಚೆ ನೋಡಿದರೆ ಪಕ್ಕದಲ್ಲೇ ಒಂದು ಕಲ್ಲು ಬೆಂಚು. ಯಥಾವತ್ತಿನ ಹಾಗೆ ಗಂಟೆ ಹೊಡೆದಂತೆ ಮಧ್ಯ ವಯಸ್ಕ ಮೂವರು ವ್ಯಕ್ತಿಗಳು ಬಂದು ಕುಳಿತಿರುತ್ತಿದ್ದರು. ಬೆಳಗ್ಗೆ ಬಂದರೆ ಕತ್ತಲಾಗುವ ತನಕವೋ ಅಥವಾ ಅನಂತರವೂ ಕುಳಿತೇ ಇರುತ್ತಿದ್ದ ಹಾಗೆ ಕಾಣಿಸುತ್ತಿದ್ದರು. ಹಸಿವೋ ನೀರಡಿಕೆಯೋ ನಿದ್ದೆಯೋ ಏನೂ ಕಾಣಿಸದ ಹಾಗೆ, ತೋರಿಸಿಕೊಳ್ಳದ ಹಾಗೆ. ಸುತ್ತಮುತ್ತ ಹತ್ತಾರು ಮನೆ ಮಾತು ಕತೆ ಗದ್ದಲ ಗೌಜು ಮತ್ತು ನೀರವ ಮೌನ ಕೂಡಾ. ಈ ಮನೆಯ ಕಿಟಕಿಯಿಂದ ನಿತ್ಯವೂ ಈ ಮೂವರನ್ನು ನೋಡುತ್ತ ನಿಲ್ಲುತ್ತಿದ್ದ ಪುಟ್ಟ ಹುಡುಗಿಗೆ ಆ ಮೂವರನ್ನು ಮನೆಗೆ ಕರೆಸಿ ಏನಾದರೂ ತಿಂಡಿ ಊಟ ಕೊಡುವ ಹಂಬಲ. ಅಪ್ಪ ಅಮ್ಮ ಒಪ್ಪಿದ ಮೇಲೆ ಆ ಮೂವರನ್ನು ಮಾತನಾಡಿಸಲು ಹೊರಟಳು. 'ನನ್ನ ಅಪ್ಪ ಅಮ್ಮ ನೀವು ಮೂವರನ್ನೂ ಮನೆಗೆ ಕರೆದಿದ್ದಾರೆ, ದಯವಿಟ್ಟು ಬನ್ನಿ' ಎಂದಳು. ಪುಟ್ಟ ಹುಡುಗಿಯ ಕರೆಗೆ ಅವಾಕ್ಕಾದ ಮೂವರಲ್ಲಿ ಒಬ್ಬ 'ಇಲ್ಲ ಕಂದ, ಮೂವರೂ ಒಟ್ಟಿಗೆ ಮನೆ ಒಳಗೆ ಬರಲಾರೆವು. ನೀನು ಯಾರಾದರೂ ಒಬ್ಬರನ್ನು ಕರೆದುಕೊಂಡು ಹೋಗಬಹುದು' ಎಂದ.

ಪುಟ್ಟಿ ಕೇಳಿದಳು: 'ಸರಿ ಹಾಗಾದರೆ ನಿಮ್ಮ ಹೆಸರೇನು, ನೀವು ಮೂವರೂ ಯಾರು?' ಮೂವರಲ್ಲಿ ಒಬ್ಬ, 'ನಾನು ಸಂಪತ್ತು' ಎಂದ. ಇನ್ನೊಬ್ಬ 'ನಾನು ಯಶಸ್ಸು' ಅಂದ. ಮೂರನೇ ವ್ಯಕ್ತಿ 'ನಾನು ಪ್ರೀತಿ' ಅಂದ. ಯಾರನ್ನು ಕರೆಯುವುದು ಎನ್ನುವುದು ಗೊತ್ತಾಗದೆ ಹುಡುಗಿ ಮನೆಯ ಒಳಗೆ ಹೋಗಿ ಚರ್ಚೆ ಮಾಡಿದಳು.

ಅಮ್ಮ, 'ಸಂಪತ್ತು ಇರಲಿ. ಅವನನ್ನು ಬರಹೇಳು' ಎಂದಳು.

ಅಪ್ಪ, 'ಯಶಸ್ಸು ಇರಲಿ. ಅವನನ್ನು ಬರಹೇಳು' ಎಂದನು.

ಮೂಲೆಯಲ್ಲಿ ಆರಾಮ ಚೇರಿನಲ್ಲಿ ಕೂತಿದ್ದ ಅಜ್ಜ, 'ಯಾರೂ ಬೇಡ ಕಂದ ಪ್ರೀತಿಯನ್ನು ಅಹ್ವಾನಿಸು' ಎಂದನು.

ಪುಟ್ಟ ಹುಡುಗಿ ಅಜ್ಜನ ಮಾತನ್ನು ಕೇಳಿ ಮತ್ತೆ ಓಡಿ ಹೋಗಿ ಆ ಮೂವರಲ್ಲಿ ಪ್ರೀತಿ ಎಂಬ ವ್ಯಕ್ತಿಯನ್ನು ಮನೆಗೆ ಬರಲು ಹೇಳಿದಳು. ಯಾವಾಗ ಆ ವ್ಯಕ್ತಿ ಎದ್ದು ನಿಂತು ಪುಟ್ಟ ಹುಡುಗಿಯ ಮನೆಗೆ ಹೊರಟನೋ, ಆಗ ಉಳಿದ ಇಬ್ಬರೂ, ಅಂದರೆ ಸಂಪತ್ತು ಮತ್ತು ಯಶಸ್ಸು ಹಿಂಬಾಲಿಸಿದರು.

ಎಷ್ಟೋ ಮನೆಗಳಲ್ಲಿ ಎಲ್ಲ ಇರುತ್ತದೆ, ಆದರೆ ಪ್ರೀತಿ ಇರುವುದಿಲ್ಲ. ಪರಸ್ಪರ ಕಾಳಜಿ ಇರುವುದಿಲ್ಲ. ಅವರವರ ಲೋಕದಲ್ಲೇ ಬಾಳುತ್ತಾ ಉಳಿದುದರ ಬಗ್ಗೆ ಗಮನ ವಹಿಸುವುದಿಲ್ಲ. ಏನಿದ್ದರೇನು ಪ್ರೀತಿ ಇರದೇ ಇದ್ದರೆ ಎಂಬಂತಾದ ಈ ಬಾಳಿನಲ್ಲಿ ಪ್ರೀತಿಯ ಗೈರು ಸಂಪತ್ತು ಮತ್ತು ಯಶಸ್ಸನ್ನು ಕಳೆಗುಂದಿಸುತ್ತದೆ. ಪ್ರೀತಿ ಇದ್ದಲ್ಲಿ ಸಂಪತ್ತು, ಯಶಸ್ಸು ಎಲ್ಲದಕ್ಕೂ ಬೆಲೆ ಎಂಬಂತೆ ಉಳಿದ ಇಬ್ಬರೂ ಆ ಮನೆಯನ್ನು ಪ್ರವೇಶಿಸುತ್ತಾರೆ.

ಪರಸ್ಪರರ ಮಧ್ಯೆ ಇರದ ಆದರ ಮತ್ತು ಕಾಳಜಿಗಳ ಈ ಕಾಲಮಾನದ ಲಾಭಕಾರಿ ಸಂಬಂಧಗಳ ಜಾಲದಲ್ಲಿ ಪ್ರೀತಿ ಅದೆಷ್ಟು ದುಬಾರಿ ನೋಡಿ. ದೊಡ್ಡ ದೊಡ್ಡ ಬಂಗಲೆಗಳಲ್ಲಿ ಕಾಣುವ ಪ್ರೀತಿಯ ಅನುಪಸ್ಥಿತಿ ಉಳಿದೆಲ್ಲವನ್ನೂ ಅಪಹಾಸ್ಯ ಮಾಡುತ್ತದೆ.

ಗುಂಡಣ್ಣ

ಪದಬಂಧ 6194

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸವತಿಯ ಪುತ್ರ (4)
3.ರಾಜನ ದರ್ಬಾರು (4)
5.ಒಲುಮೆಯಿಂದಲೇ ಮಾಡಿದ ಒತ್ತಾಯ (3)
6.ಅಶ್ವವನ್ನೇರಲು ಬಳಸುವ ಬಳೆ (3)
8.ಮರುಳನ ಹತ್ತಿರವೇ ನೀಚ ವ್ಯಕ್ತಿ ನಿಂತಿದ್ದಾನಲ್ಲಾ! (3)
9.ಕಣ್ಣು ಮುಚ್ಚಿ ತೆಗೆಯುವಷ್ಟು ಕಾಲ (3)
10.ಕೈಯ್ಯಲ್ಲಿರುವ ಹಣ (3)
12.ಇದು ಒದಗಬಹುದಾದದ್ದು (3)
14.ಯುದ್ಧದ ನಗಾರಿ (4)
15.ಅದೃಷ್ಟವೇ ಇಲ್ಲದವ (4)

ಮೇಲಿಂದ ಕೆಳಕ್ಕೆ
1.ಮತ್ತೇರಿದ ಆನೆ (4)
2.ಛೇ! ಗಲ್ಲಿಯ ಆಜುಬಾಜು ಎಲ್ಲಾ ಕಡೆ ಕೊಳೆ! (3)
3.ಜುಲುಮೆಯಿಂದ ಮೂಡಿತೇ ಈ ಪ್ರೀತಿ? (3)
4.ಕುಳ್ಳನಲ್ಲ! ಭಾರೀ ಶ್ರೀಮಂತ! (4)
7.ಹರುಷ ತೋರುತ್ತಿರುವ ಗಂಡು ವ್ಯಕ್ತಿ (3)
8.ಸನ್ಮಾನ ಮಾಡಿದರೂ ಹೀಗೆ ದುಗುಡವೇ? (3)
9.ಅಕ್ಷರಜ್ಞಾನ ಇಲ್ಲದವನು (4)
11.ಕೆಟ್ಟ ಅದೃಷ್ಟವಿದು (4)
12.ತಿರುಗುತ್ತಲೇ ಇರುವವನು (3)
13.ವ್ಯವಸಾಯಗಾರನು ತೋಡಿಕೊಂಡ ದುಃಖ (3)



6193ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕಳಂಕ 5.ಮೈಲಿಗಲ್ಲು
6.ಪಾಕ 8.ಪುರಸ್ಕಾರ
9.ನರ 10.ಕಾಡು
11.ಹಾಲಾಹಲ 12.ಹತ್ತ
13.ಪರಾಭವ 15.ಪರಿಣಯ

ಮೇಲಿಂದ ಕೆಳಕ್ಕೆ:
2.ಕನಕಪುರ
3.ಮಾಲಿ 4.ಹಲ್ಲು
5.ಮೈಲಾರಮಹಾದೇವ
7.ಬರಡು 9.ನಗದು
10.ಕಾಲಹರಣ 13.ಪನ್ನ 14.ಭರ್ಜಿ

ಸುಡೊಕು 6578

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				7		1	4
8		7	6		4			
	2			8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

6577 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಅಕ್ಟೋಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ನವಮಿ ಗಂ. 10-34 **ನಕ್ಷತ್ರ:** ಪುಷ್ಯ ಗಂ. 12-00, **ಯೋಗ:** ಸಾಧ್ಯ ಗಂ. 26-57 **ಕರಣ:** ಗರ ಗಂ. 10-34 ಕನ್ಯಾ ಮಾಸದ 28 ನೇ ದಿನ. ಮಳೆ ನಕ್ಷತ್ರ : ಚಿತ್ತಾ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 , **ಸೂರ್ಯೋದಯ :** 06-24 ಸೂರ್ಯಾಸ್ತ : 06-08, **ಮುಸ್ಲಿಂ ದಿನಾಂಕ :** 22 ರಬಿಯುಸ್ಸಾನಿ , **ಅದೃಷ್ಟ ಸಂಖ್ಯೆ :** 10, 12

ಮೇಷ: ಮನೆಯ ಪ್ರತಿಯೊಬ್ಬರ ಬೇಕು-ಬೇಡಗಳನ್ನು ಅರಿತು ತುಂಬು ಕುಟುಂಬವನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಖಾಸಗಿ ಕಂಪನಿಯಲ್ಲಿರುವವರು ಉದ್ಯೋಗದಲ್ಲಿ ಅನುಕೂಲ ಪಡೆಯುವರು.

ವೃಷಭ: ಪೂರ್ವಿಕರ ಸಂಪಾದನೆಯ ಆಸ್ತಿಯ ಮಾರಾಟ ವಿಚಾರದಲ್ಲಿ ಅನೇಕ ಅನಿರೀಕ್ಷಿತ ತೊಂದರೆಗಳು ಎದುರಾಗುವ ಸಾಧ್ಯತೆಗಳಿವೆ. ಆತ್ಮೀಯರ ದುರ್ಮರಣದ ವಾರ್ತೆಯು ಕಂಗಾಲು ಪಟ್ಟುಕೊಳ್ಳುವಂತೆ ಮಾಡುತ್ತದೆ.

ಮಿಥುನ: ಸ್ವಪ್ರಯತ್ನದಿಂದಾಗಿ ತಲುಪಿದ ಸ್ಥಾನವು, ಇತರರ ಸಹಾಯದಿಂದ ಪಡೆದದ್ದು ಎನ್ನುವ ರೀತಿಯಲ್ಲಿ ಜನರ ಬಾಯಲ್ಲಿ ಕೇಳಿಬಂದು ಮನಸ್ಸಿಗೆ ನೋವಾಗಬಹುದು. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ.

ಕರ್ಕಾಟಕ: ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆ ಪೂರ್ಣಗೊಳಿಸುವ ಬಗ್ಗೆ ಮಗನಲ್ಲಿ ಪ್ರಸ್ತಾಪಿಸಿ. ವಂಚನೆಯ ಬುದ್ಧಿಯನ್ನು ತೋರಿಸುವವರನ್ನು ಕಂಡು ಮನಸ್ಸು ಕೊರಗುವುದು.

ಸಿಂಹ: ಸೂತ್ರಧಾರನ ಸ್ಥಾನದಲ್ಲಿ ನಿಂತು ನೀವಾಡಿಸುತ್ತಿರುವ ಕೆಲವು ಕೆಲಸ ಉತ್ತಮವಾದದ್ದು. ಆದರೆ ಗುಪ್ತಕಾರ್ಯಗಳ ಅನುಭವ ಹೊಂದಿದವರು ಕಾಣದ ಕೈಯನ್ನು ಸ್ಮರಿಸಲಿದ್ದಾರೆ.

ಕನ್ಯಾ: ಚಾರಣಗಾರರಿಗೆ ರೋಮಾಂಚನಕಾರಿ ಸ್ಥಳಗಳನ್ನು ಸ್ನೇಹಿತರಿಂದ ತಿಳಿದು ಅಲ್ಲಿಗೆ ಭೇಟಿ ನೀಡುವ ಯೋಚನೆ ಮಾಡುವಿರಿ. ನಿರ್ಲಕ್ಷಿಸುತ್ತಿದ್ದ ಒಡಹುಟ್ಟಿದವರ ಸಲಹೆಗಳೇ ನಿಮ್ಮ ಸಹಾಯಕ್ಕೆ ಬರಲಿವೆ.

ತುಲಾ: ಯೋಗದಲ್ಲಿ ಸಾಧನೆ ಮಾಡುತ್ತಿರುವವರಿಗೆ ಅತ್ಯಾನಂದ ಹೊಂದುವ ಸ್ಥಿತಿ ತಲುಪಲಿದ್ದೀರಿ. ಮಗಳ ಉತ್ತಮ ನಡವಳಿಕೆ ಹೆಮ್ಮೆ ತರುತ್ತದೆ. ಮಧುರವಾದ ಕಂಠ ಸಿರಿಗೆ ಮನ್ನಣೆ ದೊರೆಯಲಿದೆ.

ವೃಶ್ಚಿಕ: ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದೇಹಕ್ಕೆ ಉಷ್ಣದಂತಹ ಸಮಸ್ಯೆಗಳು ಕಾಡಬಹುದು. ಮಾತನಾಡುವಾಗ ಬಳಸುವ ಪದಗಳಿಂದಾಗಿ ಇಂದು ಕೆಲವರು ವ್ಯಕ್ತಿತ್ವವನ್ನು ಲೆಕ್ಕ ಹಾಕುತ್ತಾರೆ.

ಧನು: ವಿದ್ಯಾರ್ಥಿಗಳಾದ ನಿಮಗೆ ಹಳೆಯ ತಪ್ಪುಗಳು ಮತ್ತೆ ಮರುಕಳಿಸಿದಾಗ ಪೋಷಕರಿಗಾಗುವ ಅಸಮಾಧಾನವು ಮರ್ಯಾದೆಯ ಪ್ರಶ್ನೆಯಾಗುತ್ತದೆ. ರೇಷ್ಮೆ ಬೆಳೆಗಾರರಿಗೆ ಉತ್ತಮ ಆದಾಯ ಪ್ರಾಪ್ತಿ.

ಮಕರ: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ತಾಳ್ಮೆಯಿಂದ ಮತ್ತು ಜಾಣತನದಿಂದ ಒಪ್ಪಿಕೊಳ್ಳಿ. ಸಂತೋಷಕ್ಕಾಗಿ ಮಾಡುವ ಖರ್ಚು ದುಂದುವೆಚ್ಚವಾಗಿ ಕಾಣಬಹುದು.

ಕುಂಭ: ಹೋಟೆಲ್ ಉದ್ದಿಮೆದಾರರಿಗೆ ಸ್ವಲ್ಪ ಮಟ್ಟಿನ ನಷ್ಟಗಳು ಸಂಭವಿಸಬಹುದು ಅಥವಾ ಕೆಲಸಗಾರರ ಬೇಡಿಕೆಯಂಥ ಸಮಸ್ಯೆಗಳು ಎದುರಾಗಬಹುದು. ಏಕಾಂಗಿತನ ಕಾಡುವ ಸಾಧ್ಯತೆ ಇದೆ.

ಮೀನ: ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದು ಅನಿವಾರ್ಯ. ವಿಚಿತ್ರ ರಾತ್ರಿಯ ಕನಸುಗಳು ಹಗಲನ್ನು ಚಿಂತೆಯಲ್ಲಿ ಕಳೆಯುವಂತೆ ಮಾಡಬಹುದು.

ಷೇರುಪೇಟೆ ವಹಿವಾಟು

ಹಿಂದಿನ ಅಂತ್ಯ 82,327 — ಇಂದಿನ ಅಂತ್ಯ 82,029 (297)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,227
ಇಂದಿನ ಅಂತ್ಯ:	25,145
ದಿನದ ಕನಿಷ್ಠ:	25,060
	81

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹565
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹366-620
ದ್ವಿತಳಿ (ಬಿ.ವಿ)	₹260-802

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹165

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29500
ಎಸಿ	₹15200
ಆರ್‌ಪಿ	₹19500
ಆರ್‌ಸಿ	₹11180

ಕೈಗಾರಿಕೆ: ಮಹಿಳಾ ಮೀಸಲಿಗೆ ಒತ್ತಾಯ

ಕೈಗಾರಿಕಾ ಪಾರ್ಕ್‌ಗಳಲ್ಲಿ ಮಹಿಳಾ ಉದ್ಯಮಿಗಳಿಗೆ ಅವಕಾಶ ಕಲ್ಪಿಸಿ: ಉಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹೊಸ ಕೈಗಾರಿಕಾ ಪಾರ್ಕ್‌ಗಳಲ್ಲಿ ಶೇಕಡ 30ರಷ್ಟು ಸ್ಥಳಾವಕಾಶವನ್ನು ಮಹಿಳಾ ಉದ್ಯಮಿಗಳಿಗೆ ಮೀಸಲಾಗಿ ಇರಿಸಬೇಕು ಎಂಬ ಕೋರಿಕೆಯನ್ನು ಸರ್ಕಾರದ ಮುಂದೆ ಇರಿಸಲಾಗುತ್ತದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷೆ ಉಮಾ ರೆಡ್ಡಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು 'ಈ ಬಗೆಯಲ್ಲಿ ಸೌಲಭ್ಯವನ್ನು ಕಲ್ಪಿಸಿದಾಗ ರಾಜ್ಯದ ಉದ್ಯಮ ವಲಯದಲ್ಲಿ ಮಹಿಳೆಯರಿಗೆ ಸೂಕ್ತ ಅವಕಾಶಗಳು ಸಿಗುವಂತೆ ಆಗುತ್ತವೆ' ಎಂದು ಹೇಳಿದರು. ಎಫ್‌ಕೆಸಿಸಿಐ ಅಧ್ಯಕ್ಷೆಯಾಗಿ ಈಚೆಗಷ್ಟೇ ಅಧಿಕಾರ ವಹಿಸಿಕೊಂಡಿರುವ ಉಮಾ ಅವರು ಸಂಘಟನೆಯ ಕುರಿತಾದ ತಮ್ಮ ಆಲೋಚನೆಗಳನ್ನು ಹಂಚಿಕೊಂಡರು.

ಸೇವಾ ವಲಯದಲ್ಲಿ ಇರುವ ಮಹಿಳಾ ಉದ್ಯಮಗಳಿಗೆ ರಿಯಾಯಿತಿ ದರಕ್ಕೆ ಸಾಲ ಕೊಡುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ರೂಪಿಸಿದೆ. ಇದನ್ನು ತಯಾರಿಕಾ ವಲಯದ ಮಹಿಳಾ ಉದ್ಯಮಿಗಳಿಗೂ ವಿಸ್ತರಿಸಬೇಕು ಎಂದು ಕೋರುವುದಾಗಿ ಅವರು ತಿಳಿಸಿದರು. ಎಫ್‌ಕೆಸಿಸಿಐನಲ್ಲಿ ಈಗಿನ ಸದಸ್ಯರ ಪೈಕಿ ಶೇ 15ರಷ್ಟು ಮಂದಿ ಮಹಿಳೆಯರು ಇದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯದಲ್ಲಿ ಎಂಎಸ್‌ಎಂಇ ಉದ್ಯಮ ವಲಯದಲ್ಲಿ ಅತಿಸಣ್ಣ ಹಾಗೂ ಸಣ್ಣ ಗಾತ್ರದ ಉದ್ಯಮಗಳ ಪಾಲು ಶೇ 90ಕ್ಕೂ ಹೆಚ್ಚು ಇದೆ. ಮಧ್ಯಮ ಗಾತ್ರದ ಉದ್ಯಮಗಳ ಪಾಲು ಕಡಿಮೆ ಇದೆ. ಹೀಗಾಗಿ ಮೊದಲ ಎರಡು ವರ್ಗಗಳಿಗೆ ಸೇರಿದ ಉದ್ಯಮಗಳಿಗಾಗಿ ಪ್ರತ್ಯೇಕ ನೀತಿಯೊಂದನ್ನು ರೂಪಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒತ್ತಾಯಿಸುವುದಾಗಿ ಅವರು ಹೇಳಿದರು.

'ರಾಜ್ಯದಲ್ಲಿ 10 ಲಕ್ಷ ಹೊಸ ಉದ್ಯಮಿಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಲಾಗಿದೆ. ಈ ಗುರಿಯನ್ನು ನಾನು ಒಂದು ವರ್ಷದ ಅವಧಿಯಲ್ಲಿಯೇ ತಲುಪುವೆ ಎನ್ನುತ್ತಿಲ್ಲ. ಇದು ದೀರ್ಘಾವಧಿಯ ಒಂದು ಗುರಿ. ಪ್ರತಿಯೊಬ್ಬ ಹೊಸ ಉದ್ಯಮಿಯು ₹2 ಲಕ್ಷದಷ್ಟು ತೊಡಗಿಸಿದರೂ, ರಾಜ್ಯದ ಉದ್ಯಮ ವಲಯದಲ್ಲಿ ₹20 ಸಾವಿರ ಕೋಟಿಯಷ್ಟು ಹೂಡಿಕೆ ಆದಂತಾಗುತ್ತದೆ' ಎಂದು ಅವರು ತಮ್ಮ ಕನಸನ್ನು ಹಂಚಿಕೊಂಡರು.

'₹26 ಸಾವಿರ ಕನಿಷ್ಠ ವೇತನಕ್ಕೆ ಸಹಮತವಿಲ್ಲ'

ಉಮಾ ರೆಡ್ಡಿ

ವಿವಿಧ ವಲಯಗಳ ನೌಕರರಿಗೆ ₹26 ಸಾವಿರ ಕನಿಷ್ಠ ಮಾಸಿಕ ವೇತನ ನಿಗದಿ ಮಾಡಬೇಕು ಎಂಬ ನಿಯಮಕ್ಕೆ ಎಫ್‌ಕೆಸಿಸಿಐ ಸಹಮತ ಇಲ್ಲ ಎಂದು ಉಮಾ ಅವರು ಸ್ಪಷ್ಟಪಡಿಸಿದರು.

ಈ ಪ್ರಮಾಣದ ಕನಿಷ್ಠ ವೇತನವು ಎಂಎಸ್‌ಎಂಇ ವಲಯಕ್ಕೆ ಹೊರೆಯಾಗುತ್ತದೆ. ಕೈಗಾರಿಕೆಗಳು ಕರ್ನಾಟಕದಲ್ಲೇ ಉಳಿಯಬೇಕು. ನೆರೆ ರಾಜ್ಯಗಳಿಗೆ ಅವು ವಲಸೆ ಹೋಗಬಾರದು. ಅಲ್ಲಿಯ ಕನಿಷ್ಠ ವೇತನವು ಕರ್ನಾಟಕದಲ್ಲಿ ಜಾರಿಗೆ ಉದ್ದೇಶಿಸಿರುವ ಕನಿಷ್ಠ ವೇತನದ ಮೊತ್ತಕ್ಕಿಂತ ಕಡಿಮೆ ಇದೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜೀವ್, ಮೈಸೂರು ರಸ್ತೆ, ಬೆಂಗಳೂರು

• **ಪ್ರಶ್ನೆ: ನನ್ನ ತಂದೆಯವರು 2010ರಲ್ಲಿ ₹25 ಲಕ್ಷಕ್ಕೆ ಕೊಂಡ ಜಮೀನು ಹಾಗೂ ಅದರಲ್ಲಿ ಇತ್ತೀಚೆಗೆ ಕಟ್ಟಿಸಿದ ಮನೆಯನ್ನು ನಾನು ಮಾರಾಟ ಮಾಡಲಿದ್ದೇನೆ. ಈ ಮನೆಯನ್ನು 2024ರ ಡಿಸೆಂಬರ್‌ನಲ್ಲಿ ನಿರ್ಮಿಸಲಾಗಿತ್ತು. ಕಾರಣಾಂತರಗಳಿಂದ ಈ ಮನೆ ಮಾರಬೇಕಾಗಿದೆ. ಮನೆ ನಿರ್ಮಾಣಕ್ಕೆ ₹35 ಲಕ್ಷ ಖರ್ಚಾಗಿದೆ. ಈಗ ಅಂದಾಜು ₹1 ಕೋಟಿ ಈ ಮನೆ ಮಾರಾಟದಿಂದ ಬರಬಹುದು. ನಾನು ವೈಯಕ್ತಿಕವಾಗಿ ಯಾವುದೇ ಮೊತ್ತ ವ್ಯಯಿಸಿಲ್ಲ. ಆದರೆ ನನ್ನ ತಂದೆ ಹಣ ಹೂಡಿದ್ದರು. ನನ್ನ ಪ್ರಶ್ನೆ ಏನೆಂದರೆ, ಈ ಲಾಭ ಯಾವ ವರ್ಗದ ಬಂಡವಾಳ ಲಾಭದ ಅಡಿ ತೆರಿಗೆಗೊಳಪಡುತ್ತದೆ? ಇದಕ್ಕೆ ತೆರಿಗೆ ಹೇಗೆ ಅನ್ವಯಿಸುತ್ತದೆ?**

ಉತ್ತರ: ನಿಮ್ಮ ತಂದೆಯವರು 2010ರಲ್ಲಿ ₹25 ಲಕ್ಷಕ್ಕೆ ಖರೀದಿಸಿದ ಜಮೀನು ನಿಮ್ಮ ಸ್ವಾಧೀನಕ್ಕೆ ಬಂದಿರುವುದರಿಂದ, ನೀವು ಅದನ್ನು ಮಾರಾಟ ಮಾಡಿದಾಗ ಬಂಡವಾಳ ಲಾಭ ತೆರಿಗೆ ಪಾವತಿಸಬೇಕಾಗುತ್ತದೆ. ಜಮೀನಿನ ಒಡೆತನವು ಖರೀದಿ ವರ್ಷ 2010ರಿಂದ 2025ರವರೆಗೆ 24 ತಿಂಗಳಿಗಿಂತ ಹೆಚ್ಚು ಅವಧಿ ಕಳೆದಿರುವುದರಿಂದ, ಈ ವ್ಯವಹಾರವು ದೀರ್ಘಾವಧಿ ಬಂಡವಾಳ ಲಾಭ ಆಗಿ ಪರಿಗಣಿತವಾಗುತ್ತದೆ ಮತ್ತು ತೆರಿಗೆ ದರ ಶೇ 12.5ರಷ್ಟು ಅನ್ವಯಿಸುತ್ತದೆ. ಇಂಡೆಕ್ಸೇಷನ್ ಪ್ರಯೋಜನದ ಸಹಿತ ನೀವು ತೆರಿಗೆ ಲೆಕ್ಕ ಹಾಕಿದಾಗ ನಿಮಗೆ ಒಟ್ಟಾರೆಯಾಗಿ ಅನುಕೂಲ ಆಗುತ್ತದೆಯೇ ಎಂಬುದನ್ನು ಪರಿಶೀಲಿಸಿ, ಇದರ ಅಡಿ ಶೇ 20ರಷ್ಟು ತೆರಿಗೆ ದರ ಅನ್ವಯಿಸುತ್ತದೆ. ಆದರೆ, ಇದನ್ನು ಜಮೀನು ಮತ್ತು ಮನೆ ನಡುವೆ ಸಮರ್ಪಕವಾಗಿ ಮೌಲ್ಯ ವರ್ಗೀಕರಣ ಮಾಡುವ ಮೂಲಕ ಲೆಕ್ಕ ಹಾಕಬೇಕಾಗುತ್ತದೆ. ಇದಕ್ಕೆ ನೀವು ಹೆಚ್ಚಿನ ಸಮಾಲೋಚನೆ ಮಾಡುವ ಅಗತ್ಯ ಇದೆ.

ಮನೆಯ ನಿರ್ಮಾಣಕ್ಕೆ 2023-24ರಲ್ಲಿ ₹35 ಲಕ್ಷ ವೆಚ್ಚ ಮಾಡಿದ್ದೀರಿ. ಇದರ ನಿರ್ಮಾಣದ ನಂತರದ ಅವಧಿ 24 ತಿಂಗಳಿಗಿಂತ ಕಡಿಮೆ. ಹೀಗಾಗಿ ಇದಕ್ಕೆ ಅಲ್ಪಾವಧಿ ಬಂಡವಾಳ ತೆರಿಗೆ ಬರುತ್ತದೆ. ಜಮೀನು ಹಾಗೂ ಮನೆ, ಇವೆರಡೂ ಪ್ರತ್ಯೇಕ ವರ್ಗಗಳಲ್ಲಿ ತೆರಿಗೆಗೊಳಪಡುತ್ತವೆ. ಇನ್ನೂ ಒಂದು ವಿಚಾರವೆಂದರೆ, ನಿಮ್ಮ ತಂದೆಯವರು ಜಮೀನು ಖರೀದಿ-ಮನೆ ನಿರ್ಮಾಣಕ್ಕೆ ವ್ಯಯಿಸಿದ ಮೊತ್ತ ಹಾಗೂ ಹೂಡಿಕೆ ಅವಧಿ ಲೆಕ್ಕಾಚಾರಕ್ಕೆ ಅವರು ಖರೀದಿಸಿದ ಹಳೆಯ ದಿನವೇ ಅನ್ವಯಿಸುತ್ತದೆ.

ಆದರೆ, ನೀವು ಈ ಲಾಭದ ಮೊತ್ತವನ್ನು ಸೆಕ್ಷನ್ 54ರ ಅಡಿ ಉಲ್ಲೇಖಿಸಿರುವಂತೆ ಇನ್ನೊಂದು ಮನೆ ಖರೀದಿ ಅಥವಾ ನಿರ್ಮಾಣಕ್ಕೆ ಬಳಸಿಕೊಂಡರೆ ಅಥವಾ ಮುಂದಿನ 3 ವರ್ಷದೊಳಗೆ ಹೊಸ ಮನೆ ಖರೀದಿಗೆ ಕ್ಯಾಪಿಟಲ್ ಗೈನ್ಸ್ ಅಕೌಂಟ್ ಸ್ಕೀಮ್‌ನಲ್ಲಿ ಠೇವಣಿ ಮಾಡಿ ಬಳಸಿಕೊಂಡರೆ, ತೆರಿಗೆ ವಿನಾಯಿತಿ ಪಡೆಯಬಹುದು.

ಜಯಚಂದ್ರ, ವೈಟ್‌ಫೀಲ್ಡ್, ಬೆಂಗಳೂರು

• **ಪ್ರಶ್ನೆ: ನನ್ನ ವಯಸ್ಸು 57 ವರ್ಷ, ಉದ್ಯೋಗದಲ್ಲಿದ್ದೇನೆ. ಇತ್ತೀಚಿನ ಎಸ್.ಐ.ಎಫ್ ವರ್ಗದ ಹೊಸ ಮ್ಯೂಚುವಲ್ ಫಂಡ್ ಯೋಜನೆಗಳು ಹೂಡಿಕೆದಾರರ ಗಮನ ಸೆಳೆಯುತ್ತಿವೆ. ಈ ಬಗ್ಗೆ ಅನೇಕ ಕಡೆ ಜಾಹೀರಾತು ನೋಡಿದ್ದೇನೆ. ಈ ಹೊಸ ಯೋಜನೆಗಳಲ್ಲಿ ಹೂಡಿಕೆ ಮಾಡುವ ಆಯ್ಕೆ ಹೂಡಿಕೆದಾರರಿಗೆ ಯಾವ ರೀತಿಯಲ್ಲಿ ಪ್ರಯೋಜನಕಾರಿ? ಇವುಗಳು ಇತರ ಮ್ಯೂಚುವಲ್ ಫಂಡ್‌ಗಳಿಗಿಂತ ವಿಭಿನ್ನವಾದ ಹೂಡಿಕೆ ತಂತ್ರ ಹೊಂದಿವೆಯೇ? ಪ್ರಸ್ತುತ ನನ್ನ ಷೇರು ಹೂಡಿಕೆಯ ಹಣವನ್ನು ಇದಕ್ಕೆ ವರ್ಗಾಯಿಸುವುದು ಸೂಕ್ತವೇ? ಇದರಲ್ಲಿ ಹೂಡಿಕೆ ಮಾಡಲು ಕನಿಷ್ಠ ₹10 ಲಕ್ಷ ಅಗತ್ಯ ಎನ್ನುತ್ತದೆ ಹೂಡಿಕೆಯ ಮಾಹಿತಿ ದಾಖಲೆ. ಇದರಲ್ಲಿ ಲಾಭದ ಸಾಧ್ಯತೆ ಮತ್ತು ಅಪಾಯ ನಿರ್ವಹಣೆ ಯಾವ ರೀತಿಯಲ್ಲಿದೆ? ನಿವೃತ್ತಿ ಅಂಚಿನಲ್ಲಿರುವ ನನ್ನಂತಹವರಿಗೆ ಈ ಯೋಜನೆ ಸೂಕ್ತ ಆಯ್ಕೆಯಾಗಬಹುದೇ?**

ಉತ್ತರ: ನಿಮ್ಮ ವಯಸ್ಸು, ಉದ್ಯೋಗಸ್ಥಿತಿ ಮತ್ತು ನಿವೃತ್ತಿಯ ಅಂಚಿನಲ್ಲಿರುವ ಹಿನ್ನೆಲೆಯನ್ನು ಗಮನಿಸಿದರೆ, ಎಸ್.ಐ.ಎಫ್‌ನ ಹೊಸ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ಹೂಡಿಕೆ ಮಾಡುವುದನ್ನು ತ್ವರಿತ ನಿರ್ಧಾರವಾಗಿ ಕೈಗೊಳ್ಳುವುದಕ್ಕಿಂತ ಮೊದಲು ವಿಶ್ಲೇಷಣಾತ್ಮಕವಾಗಿ ಪರಿಗಣಿಸುವುದು ಅಗತ್ಯ. ಇವು 'ನಿಫ್ಟಿ 500' ಟೋಟಲ್ ರಿಟರ್ನ್ಸ್ ಇಂಡೆಕ್ಸ್ ಆಧರಿಸಿ ನಡೆಯುತ್ತವೆ ಮತ್ತು ಇತ್ತೀಚೆಗೆ ಪರಿಚಯಿಸಲಾದ ಲಾಂಗ್ ಶಾರ್ಟ್ ಮ್ಯೂಚುವಲ್ ಫಂಡ್‌ಗಳು ಸಾಮಾನ್ಯವಾಗಿ ನಿರ್ದಿಷ್ಟ ಪ್ರತಿಶತ ಪ್ರಮಾಣದ ಮೊತ್ತವನ್ನು ಈಕ್ವಿಟಿ ಷೇರುಗಳಲ್ಲಿ ತೊಡಗಿಸುತ್ತವೆ. ಇದರ ಆಧಾರದಲ್ಲಿ ತುಸು ಪ್ರಮಾಣದ ಫ್ಯೂಚರ್ಸ್-ಆಪ್ಷನ್ ಹಾಗೂ ಒಂದಷ್ಟು ಮೊತ್ತವನ್ನು ಏಕಮುಖ ಫ್ಯೂಚರ್ಸ್-ಆಪ್ಷನ್‌ನಲ್ಲಿ ಹೂಡಿಕೆ ಮಾಡುವ ವೈಶಿಷ್ಟ್ಯಪೂರ್ಣ ಹೂಡಿಕೆ ತಂತ್ರಗಳೂ ಇದರಲ್ಲಿ ಇವೆ. ಇದು ಈಗ ಮೊದಲ ಹಂತದ ಪ್ರಯೋಗ. ಹೀಗಾಗಿ ಇನ್ನಷ್ಟು ಕಾಲ ಯೋಚಿಸಿ ಹೂಡಿಕೆ ಮಾಡುವುದೊಳಿತು.

ಈ ಹೂಡಿಕೆ ಯೋಜನೆಗೆ ಕನಿಷ್ಠ ₹10 ಲಕ್ಷ ಬಂಡವಾಳದ ಅಗತ್ಯವಿದೆ. ಇದು ಸ್ವಲ್ಪ ಹೆಚ್ಚಿನ ಹೂಡಿಕೆ ಆಗಿದ್ದು, ನಿವೃತ್ತಿಯ ಹಂತದ ಹೂಡಿಕೆದಾರರಿಗೆ ಹಣದ ಅಗತ್ಯ ಬಂದರೆ ದ್ರವ್ಯತೆಯ ಸಮಸ್ಯೆ ಉಂಟುಮಾಡಬಹುದು. ಷೇರು ಮಾರುಕಟ್ಟೆಯಲ್ಲಿನ ಅಸ್ಥಿರತೆಯಿಂದ ನಿಮ್ಮ ಹೂಡಿಕೆ ಮೌಲ್ಯದಲ್ಲಿ ಬದಲಾವಣೆ ಸಾಧ್ಯತೆ ಹೆಚ್ಚಿರುತ್ತದೆ. ಹೀಗಾಗಿ ಷೇರು ಹೂಡಿಕೆಯಿಂದ ನೇರವಾಗಿ ಈ ಹೊಸ ಫಂಡ್‌ಗೆ ಸಂಪೂರ್ಣ ಹಣ ವರ್ಗಾಯಿಸುವುದಕ್ಕಿಂತ, ಇದೇ ಫಂಡ್‌ನಲ್ಲಿ ಎಸ್‌ಐಪಿ ಮೂಲಕ ಹಂತ ಹಂತವಾಗಿ ಹೂಡಿಕೆ ಮಾಡುವುದು ಸುರಕ್ಷಿತ.

ತೆರಿಗೆ ದೃಷ್ಟಿಯಿಂದ, ಈಕ್ವಿಟಿ-ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿನ ಬಂಡವಾಳ ವೃದ್ಧಿಗೆ ಇರುವ ನಿಯಮಗಳು ಅನ್ವಯಿಸುತ್ತವೆ. ಒಂದು ವರ್ಷದೊಳಗಿನ ಹೂಡಿಕೆ ಮಾರಾಟದ ಮೇಲೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಶೇ 20ರಷ್ಟು ಆಗಿದ್ದು, ಒಂದು ವರ್ಷಕ್ಕಿಂತ ಹೆಚ್ಚು ಕಾಲದ ಹೂಡಿಕೆ ಮಾರಾಟದ ಲಾಭಕ್ಕೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಶೇ 12.50ರಷ್ಟು ಆಗಿರುತ್ತದೆ. ಆದರೆ, ವಾರ್ಷಿಕ ₹1.25 ಲಕ್ಷಕ್ಕಿಂತ ಅಧಿಕ ಮೊತ್ತದ ಲಾಭಕ್ಕೆ ಮಾತ್ರ ಇದನ್ನು ವಿಧಿಸಲಾಗುತ್ತದೆ. ನಿವೃತ್ತಿಯ ಹಂತದಲ್ಲಿ ಸ್ಥಿರ ಆದಾಯದ ಅವಶ್ಯಕತೆಗನುಗುಣವಾಗಿ ತೆರಿಗೆ ಬಳಿಕದ ನಿಜವಾದ ಲಾಭದ ಮೊತ್ತವನ್ನು ಪರಿಗಣಿಸಿ ನಿರ್ಧಾರ ಮಾಡುವುದು ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

6ನೇ ವರ್ಷದ ಪುಣ್ಯ ಸ್ಮರಣೆ

ಡಾ|| ಕೆ.ಸಿ.ಲಾವಣ್ಯ
ನಿಧನ : 15-10-2019
ನೀವು ಕಣ್ಮರೆಯಾದ ಈ ಆರು ವರ್ಷದಲ್ಲಿ
ನಿಮ್ಮ ಪ್ರೀತಿ ಮಮತೆ ವಾತ್ಸಲ್ಯದ ಸವಿನೆನಪು ನಮ್ಮೆಲ್ಲರನ್ನು ಸದಾ ಕಾಡುತ್ತಿದೆ
ಪ್ರತಿ ಹೆಜ್ಜೆಯಲ್ಲೂ ನೀವು ತೋರಿದ ತಾಳ್ಮೆ ಹಾಗೂ ಸಹನೆಯನ್ನು ನಾವು ಗೌರವಿಸುತ್ತೇವೆ.
ನೀವು ಕಣ್ಮರೆಯಾದ ಈ ಆರು ವರ್ಷದಲ್ಲಿ
ನಾವೆಲ್ಲರೂ ಅನುಭವಿಸಿದ ನೋವು ಹಂಚಿಕೊಳ್ಳಲು ಅಸಾಧ್ಯ.
ಜನರ ಸೇವೆಯೆ ಜನಾರ್ಧನ ಸೇವೆ ಎಂದು ಭಾವಿಸಿ ಸಲ್ಲಿಸಿದ ನಿಮ್ಮ ಆತ್ಮವಿಶ್ವಾಸದ ಅಚ್ಚು ಮೆಚ್ಚಿನ ಸೇವೆಯಿಂದ
ಇಂದಿಗೂ ಎಂದೆಂದಿಗೂ ಪ್ರತಿಯೊಬ್ಬರಲ್ಲೂ ನಿಮ್ಮ ನೆನಪು ಶಾಶ್ವತವಾಗಿ ಉಳಿದಿದೆ.
ಅಪರೂಪದ ಪ್ರತಿರೂಪ ನಿಮ್ಮದು ಎಂಬ ಹೆಮ್ಮೆ ನಮ್ಮದಾಗಿದೆ.
ಇಂತಿ ಸದಾ ನಿಮ್ಮ ನೆನಪಿನಲ್ಲಿರುವ
ಪತಿ ಡಾ|| ಬಿ.ಎನ್. ತ್ಯಾಗರಾಜ್
ಮಕ್ಕಳು ಪ್ರೀತಮ್ ಟಿ., ನೇಹರಾಜ್ ಟಿ. ಹಾಗೂ ಕುಟುಂಬ ವರ್ಗದವರು

ಗೂಗಲ್‌ನಿಂದ ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ಮೂಲಸೌಕರ್ಯ ಕೇಂದ್ರ ನಿರ್ಮಾಣಕ್ಕಾಗಿ ಆಂಧ್ರಪ್ರದೇಶದಲ್ಲಿ ಒಟ್ಟು 15 ಬಿಲಿಯನ್ ಡಾಲರ್ (ಸರಿಸುಮಾರು ₹1.33 ಲಕ್ಷ ಕೋಟಿ) ಹೂಡಿಕೆ ಮಾಡುವುದಾಗಿ ಗೂಗಲ್ ಕಂಪನಿಯು ಮಂಗಳವಾರ ತಿಳಿಸಿದೆ. ಇದು ಈ ಕಂಪನಿಯು ಭಾರತದಲ್ಲಿ ಮಾಡಲಿರುವ ಅತಿದೊಡ್ಡ ಹೂಡಿಕೆ.

ಎ.ಐ. ಮೂಲಸೌಕರ್ಯ ಕೇಂದ್ರವು ಅದಾನಿ ಸಮೂಹದ ಪಾಲುದಾರಿಕೆಯಲ್ಲಿ ಗಿಗಾವಾಟ್ ಗಾತ್ರದ ದತ್ತಾಂಶ ಕೇಂದ್ರವೊಂದನ್ನು ನಿರ್ಮಾಣ ಮಾಡುವುದನ್ನು ಕೂಡ ಒಳಗೊಂಡಿದೆ. ಈ ಯೋಜನೆಯು ಆಂಧ್ರಪ್ರದೇಶದಲ್ಲಿ ನೇರವಾಗಿ ಆರು ಸಾವಿರ ಉದ್ಯೋಗಗಳನ್ನು, ಪರೋಕ್ಷವಾಗಿ ಒಟ್ಟು 30 ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ.

ಇದು ಅಮೆರಿಕದ ಆಚೆಗೆ ಗೂಗಲ್ ಕಂಪನಿಯು ನಿರ್ಮಿಸಲಿರುವ ಅತಿದೊಡ್ಡ ಎ.ಐ. ಕೇಂದ್ರವಾಗಲಿದೆ. ವಿಶಾಖಪಟ್ಟಣದಲ್ಲಿ ಇದು ತಲೆ ಎತ್ತಲಿದೆ. ಈ ದತ್ತಾಂಶ ಕೇಂದ್ರಕ್ಕೆ ಪರಿಸರ ಪೂರಕ ಇಂಧನದ ಪೂರೈಕೆ ಇರಲಿದೆ. ಉದ್ಯಮಿ ಗೌತಮ್ ಅದಾನಿ ಒಡೆತನದ ಅದಾನಿ ಕನೆಕ್ಸ್ ಈ ಯೋಜನೆಗಾಗಿ ಗೂಗಲ್ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಿದೆ.

ಈ ಯೋಜನೆಯಲ್ಲಿ ಭಾರ್ತಿ ಏರ್‌ಟೆಲ್ ಕೂಡ ಕೈಜೋಡಿಸಲಿದೆ. ₹1.33 ಲಕ್ಷ ಕೋಟಿಯನ್ನು ಮುಂದಿನ ಐದು ವರ್ಷಗಳಲ್ಲಿ ತೊಡಗಿಸಲಾಗುತ್ತದೆ. ಮುಂಬೈ ಮಹಾನಗರಕ್ಕೆ ವರ್ಷವೊಂದಕ್ಕೆ ಬೇಕಾಗುವಷ್ಟು ವಿದ್ಯುತ್ತಿನ ಶೇಕಡ 50ರಷ್ಟನ್ನು ಈ ದತ್ತಾಂಶ ಕೇಂದ್ರ ಬಳಸಲಿದೆ. ಈ ಕೇಂದ್ರಕ್ಕೆ ಅದಾನಿ ಸಮೂಹದಿಂದ ಪರಿಸರ ಪೂರಕ ಇಂಧನದ ಪೂರೈಕೆ ಆಗುವ ಸಾಧ್ಯತೆ ಇದೆ.

'ಈ ಹೂಡಿಕೆಯು ವಿಕಸಿತ ಭಾರತ ನಿರ್ಮಿಸುವ ನಮ್ಮ ದೂರದೃಷ್ಟಿಗೆ ಅನುಗುಣವಾಗಿ ಇದೆ. ಇದು ತಂತ್ರಜ್ಞಾನವನ್ನು ಎಲ್ಲರಿಗೂ ಲಭ್ಯವಾಗಿಸುವಲ್ಲಿ ಬಲಿಷ್ಠ ಶಕ್ತಿಯಾಗಿ ನೆರವಿಗೆ ಬರಲಿದೆ. ಎ.ಐ. ಎಲ್ಲರಿಗೂ ಲಭ್ಯವಾಗುವಂತೆ ಇದು ಮಾಡಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಕ್ರಿಯಿಸಿದ್ದಾರೆ.

ದೂರಗಾಮಿ ಕ್ಷಿಪಣಿಗಾಗಿ ಝೆಲೆನ್‌ಸ್ಕಿ ಅಮೆರಿಕ ಭೇಟಿ



ವೊಲೊಡಿಮಿರ್ ಝೆಲೆನ್‌ಸ್ಕಿ

ಕೀವ್ (ಎಪಿ): ದೂರಗಾಮಿ ಶಸ್ತ್ರಾಸ್ತ್ರಗಳನ್ನು ಅಮೆರಿಕದಿಂದ ಪಡೆದುಕೊಳ್ಳುವ ಸಂಭವನೀಯತೆ ಕುರಿತ ಮಾತುಕತೆಗಾಗಿ ಈ ವಾರ ವಾಷಿಂಗ್ಟನ್ ಪ್ರವಾಸ ಕೈಗೊಳ್ಳುವುದಾಗಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಸೋಮವಾರ ಹೇಳಿದ್ದಾರೆ.

ಯುದ್ಧವನ್ನು ನಿಲ್ಲಿಸದಿದ್ದರೆ ಉಕ್ರೇನ್‌ಗೆ ಟೊಮಹಾಕ್ ದೂರಗಾಮಿ ಕ್ಷಿಪಣಿಯನ್ನು ಕಳುಹಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ರಷ್ಯಾಗೆ ಎಚ್ಚರಿಕೆ ನೀಡಿದ್ದರು.

ಶುಕ್ರವಾರಕ್ಕೆ ಮೊದಲು ಟ್ರಂಪ್ ಜೊತೆಗೆ ಸಭೆ ನಡೆಯಬಹುದು ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ. ಭದ್ರತಾ ಮತ್ತು ಇಂಧನ ಕಂಪನಿಗಳನ್ನು ಹಾಗೂ ಅಮೆರಿಕದ ಸಂಸದರನ್ನೂ ಭೇಟಿ ಮಾಡುವುದಾಗಿ ತಿಳಿಸಿದ್ದಾರೆ.

'ರಷ್ಯಾದ ಮೇಲೆ ಒತ್ತಡ ಹೇರುವ ನಿಟ್ಟಿನಲ್ಲಿ ವಾಯುರಕ್ಷಣೆ ಮತ್ತು ನಮ್ಮ ದೂರಗಾಮಿ ಸಾಮರ್ಥ್ಯದ ಶಸ್ತ್ರಾಸ್ತ್ರಗಳೇ ಸಭೆಯ ಮುಖ್ಯ ವಿಚಾರವಾಗಿರಲಿವೆ' ಎಂದು ಅವರು ಹೇಳಿದ್ದಾರೆ.

ಡ್ರೋನ್ ದಾಳಿ: ಝೆಲೆನ್‌ಸ್ಕಿ ಅವರು ಅಮೆರಿಕ ಭೇಟಿಯ ವಿಷಯ ಪ್ರಸ್ತಾಪಿಸಿದ ಸಂದರ್ಭದಲ್ಲೇ ರಷ್ಯಾದಿಂದ ಕೀವ್ ನಗರದ ಪ್ರಮುಖ ಸ್ಥಳಗಳ ಮೇಲೆ ಡ್ರೋನ್, ಜಾರು ಬಾಂಬ್‌ಗಳ ದಾಳಿ ನಡೆದಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

14-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1410)
ಒಂದು ವಾರದ ಡೆಲಿವರಿ	1405 (1405)
ಪಾಮ್ ವಾರದ ಡೆಲಿವರಿ	1288 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,25,450 (1,23,800)
ಬೆಳ್ಳಿ ಕೆ.ಜಿಗೆ	1,77,400 (1,75,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಭದ್ರಾವತಿ		ರಾಶಿ	50899-65939	ಕೋಕ	20319-31819
ಇತರೆ	27700-27700	ಸಿಪ್ಪೆಗೋಟು	22530-23200	ಕೆಂಪುಗೋಟು	26319-36600
ರಾಶಿ	57199-66000	**ಶಿವಮೊಗ್ಗ**		ರಾಶಿ	45099-61899
ಸಿಪ್ಪೆಗೋಟು	10000-10000	ಬೆಟ್ಟೆ	57209-72352	ತಟ್ಟಿಬೆಟ್ಟೆ	38099-54599
ಪುತ್ತೂರು		ಗೊರಬಲು	19200-44444	**ಯಲ್ಲಾಪುರ**	
ಕೋಕ	15000-28500	ಹೊಸತು	60529-66509	ಬಿಳಿಗೋಟು	21899-36909
ಹೊಸತು	26000-35000	ರಾಶಿ	50009-66199	ಚಾಲಿ	38169-47609
ಸಾಗರ		ಸರಕು	60005-99596	ಕೋಕ	12812-28799
ಬಿಳಿಗೋಟು	16410-33800	**ಸಿದ್ದಾಪುರ**		ಕೆಂಪುಗೋಟು	24199-35699
ಚಾಲಿ	37209-42899	ಬಿಳಿಗೋಟು	25949-34699	ರಾಶಿ	50600-63999
ಕೋಕ	15850-36619	ಚಾಲಿ	36999-45299	ತಟ್ಟಿಬೆಟ್ಟೆ	35009-50410
ಕೆಂಪುಗೋಟು	37399-40899				

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1400 (1400)
ಸೋಯಾ (ರಿಫೈನ್ಡ್)	₹1285 (1285)
ಸೂರ್ಯಕಾಂತಿ (ರಿಫೈನ್ಡ್)	₹1475 (1475)
ಪಾಮೋಲಿನ್	₹1290 (1290)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1600
ಮಧ್ಯಮ	₹500-1000
ಸಣ್ಣ	₹100-500

ಪ್ರಜಾವಾಣಿ

ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS, ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC, Degree, ITI, Diplomaದವರು. 18,000/- ದಿಂದ 86,000/- .(ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

CAREER OPPORTUNITY, part-time there is no age limit. WA: 7019246661.

Wanted

CHILD HELP Foundation reqd Exprd outbound Telecallers, Age 35+ Female , earn (Salary+ Incentives) BLR, Banshankari Contact: 9353446403

Teachers/ Professors

WANTED ACADEMIC Counselor, Admission Consultants for well Reputed college for BE, MBA, B.Sc Agri, M.Sc Agri(all districts of karnataka)Apply on or before 16/10/2025 avssham@yahoo.com Call:9482009262

ಪ್ರವಾಸ

Travel

13.11.2025 ರಿಂದ 16 ದಿನಗಳ ಅಷ್ಟಜ್ಯೋತಿರ್ಲಿಂಗಗಳು ಶಿರಡಿ, ನಾಸಿಕ್ ಓಂಕಾರೇಶ್ವರ ಮಹಾಕಾಳೇಶ್ವರ ದ್ವಾರಕಾ ಸೋಮನಾಥ್ ನಿಷ್ಕಳಂಕಮಹಾದೇವ್ ಮಲ್ಟಿಎಕ್ಸಲ್ ಬಸ್ಸು ವಿಮಾನದಲ್ಲಿ ಪ್ರಯಾಣ ಕೆಲವೇ ಸೀಟುಗಳಿವೆ. 20.12.2025 ರಿಂದ 12 ದಿನಗಳ ವಿಜಯವಾಡ ಭದ್ರಾಚಲಂ ವಾಸವಿಪೆನುಗೊಂಡ ವಿಶಾಖಪಟ್ಟಣ ಕೋಲ್ಕತ್ತಾ ಗಂಗಾಸಾಗರ್ ಕೋನಾರ್ಕ್ ಭುವನೇಶ್ವರ್ ಪುರಿಜಗನ್ನಾಥ್ ಜನವರಿಯಲ್ಲಿ ಆಗ್ರಾ, ಮಥುರ ಜೈಪುರ್, ಪುಷ್ಕರ್ ಜೈಸಲ್ಮೇರ್ ಜೋಧ್‌ಪುರ್ ಉದಯಪುರ್ ಸಂಪರ್ಕಿಸಿ. ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70. 9342287551 9482239855

ಕಾಶಿ ಅಯೋಧ್ಯ ಗಯಾ, ಕೊಲ್ಕತ್ತಾ ಪುರಿಜಗನ್ನಾಥ್ ಭುವನೇಶ್ವರ್ 10 ದಿನಗಳು. ವೈಷ್ಣೋದೇವಿ ಕಾಶ್ಮೀರ್ ಫ್ಯಾಮಿಲಿ ಪ್ರವಾಸ 10 ದಿನಗಳು. ಗ್ಯಾಂಟಾಕ್ ಡಾರ್ಜಲಿಂಗ್, ಸಿಕ್ಕಿಂ ಫ್ಯಾಮಿಲಿ ಪ್ರವಾಸಗಳಿಗಾಗಿ ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಮಲ್ಲೇಶ್ವರ ಬೆಂಗಳೂರು.3. 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಸಾಮರಸ್ಯದ ಹೊಸ ಯುಗ ಆರಂಭಿಸಿ'



ಡೊನಾಲ್ಡ್ ಟ್ರಂಪ್

ಶರ್ಮ್ ಎಲ್ ಶೇಖ್ (ಈಜಿಪ್ಟ್) (ಎಪಿ): ಪಶ್ಚಿಮ ಏಷ್ಯಾದಲ್ಲಿ ಸಾಮರಸ್ಯದ ಹೊಸ ಯುಗದ ಆರಂಭಕ್ಕೆ ಕರೆ ನೀಡಿದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಹಳೆಯ ದ್ವೇಷ ಮತ್ತು ಹಗೆತನ ಬಿಡುವುದಕ್ಕೆ ಸಿಕ್ಕಿರುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು' ಎಂದು ಮಂಗಳವಾರ ಆಗ್ರಹಿಸಿದರು.

ಹಮಾಸ್-ಇಸ್ರೇಲ್ ನಡುವಿನ ಸಂಘರ್ಷ ಶಮನಗೊಳಿಸಲು ತನ್ನ ಮಧ್ಯಸ್ಥಿಕೆಯಲ್ಲಿ ಸಿದ್ಧವಾದ ಕದನ ವಿರಾಮ ಸೂತ್ರ ಫಲಪ್ರದವಾದ ಬೆನ್ನಲ್ಲೇ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸುಧಾರಣೆಯ ಭಾಗವಾಗಿ ಗಾಜಾ ಭವಿಷ್ಯ ಕುರಿತು ನಡೆದ ಜಾಗತಿಕ ಶೃಂಗದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಹಿಂದಿನ ಕಹಿ ಮತ್ತು ದ್ವೇಷವನ್ನು ಬಿಡಲು ಜೀವಿತಾವಧಿಯಲ್ಲಿ ಒಮ್ಮೆ ಅವಕಾಶ ಸಿಕ್ಕಿದೆ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು, ಭವಿಷ್ಯದ ಪೀಳಿಗೆಯವರು ಹೋರಾಟಗಳಲ್ಲಿ ಸಿಲುಕುವುದನ್ನು ತಪ್ಪಿಸಬೇಕು. ಈ ನಿಟ್ಟಿನಲ್ಲಿ ಇಲ್ಲಿನ ನಾಯಕರು ತಮ್ಮ ಬದ್ಧತೆ ವ್ಯಕ್ತಪಡಿಸಬೇಕು' ಎಂದು ಅವರು ಒತ್ತಾಯಿಸಿದರು.

ಗಾಜಾದ ಭವಿಷ್ಯಕ್ಕೆ ಅಡಿಪಾಯ ಹಾಕುವ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶಾಲ ದೃಷ್ಟಿಕೋನವನ್ನು ವಿವರಿಸುವ ದಾಖಲೆಗೆ ಟ್ರಂಪ್, ಎಲ್-ಸಿಸಿ, ಟರ್ಕಿಯ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್, ಕತಾರ್ ದೊರೆ ತಮೀಮ್ ಬಿನ್ ಹಮದ್ ಅಲ್ ಥಾನಿ ಸಹಿ ಹಾಕಿದರು.

'ಬಿಪಿಎಲ್' ಅರ್ಹತೆ: 45 ದಿನ ಗಡುವು

ಒಂದನೇ ಪುಟದಿಂದ...

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 2023ರ ಮೇ 20ರಂದು ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ಅರ್ಹ ಫಲಾನುಭವಿಗಳಿಗೆ ಹೊಸತಾಗಿ ಬಿಪಿಎಲ್ ಪಡಿತರ ಚೀಟಿ ವಿತರಿಸಿಲ್ಲ. ಆದ್ದರಿಂದ, ಅನರ್ಹ ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಯಾಗಿ ಪರಿವರ್ತಿಸಿದ ನಂತರ ಅಷ್ಟೇ ಸಂಖ್ಯೆಯ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಸತಾಗಿ ಅರ್ಹ ಫಲಾನುಭವಿಗಳಿಗೆ ನೀಡುವುದು ಸೂಕ್ತ. ಈ ಪ್ರಕ್ರಿಯೆಯಿಂದ ಯಾವುದೇ ಅರ್ಹ ಪಡಿತರ ಫಲಾನುಭವಿಗಳನ್ನು ಪಡಿತರ ಮುಖ್ಯ ವಾಹಿನಿಯಿಂದ ಹೊರಗೆ ಇಟ್ಟಂತೆ ಆಗುವುದಿಲ್ಲ ಎಂದು ಆಹಾರ ಇಲಾಖೆ ತನ್ನ ಪ್ರಸ್ತಾವದಲ್ಲಿ ಅಭಿಪ್ರಾಯಪಟ್ಟಿದೆ.

ಅಲ್ಲದೆ, ಬಿಪಿಎಲ್ ಪಡಿತರಚೀಟಿ ಹೊಂದಿರುವ ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಿ ನಿಯಮಾನುಸಾರ ಕ್ರಮ ಕೈಗೊಳ್ಳುವ ಕುರಿತು ಆದೇಶ ಹೊರಡಿಸಲು ಆಹಾರ ಇಲಾಖೆ ನಿರ್ಧರಿಸಿದೆ.

ಆದರೆ, ಹಣಕಾಸಿನ ನಿರ್ಬಂಧಗಳ ಕಾರಣ ಮುಂದಿಟ್ಟು ಹೊಸತಾಗಿ ಪಡಿತರ ಚೀಟಿ ವಿತರಿಸುವ ಪ್ರಕ್ರಿಯೆಗೆ ಆರ್ಥಿಕ ಇಲಾಖೆ ಕೆಲವು ಷರತ್ತುಗಳನ್ನು ವಿಧಿಸಿದೆ.

ಹೊಸ ಕಾರ್ಡ್: ಆರ್ಥಿಕ ಇಲಾಖೆಯ ಷರತ್ತುಗಳೇನು?

ಒಂದನೇ ಪುಟದಿಂದ...

- ಆರು ತಿಂಗಳಿನಿಂದ ಆಹಾರ ಧಾನ್ಯಗಳನ್ನು ಪಡೆಯದ ಬಿಪಿಎಲ್ ಕಾರ್ಡ್‌ಗಳನ್ನು ಅಮಾನತು ಪ್ರಕ್ರಿಯೆ ಮತ್ತು 2.96 ಲಕ್ಷಗಳ ಅರ್ಜಿಗಳ ವಿಲೇವಾರಿ ಏಕಕಾಲದಲ್ಲಿ ನಡೆಯಬೇಕು
- ತಹಶೀಲ್ದಾರ್ ಸ್ಥಳ ತನಿಖೆ ಮತ್ತು ದಾಖಲೆಗಳ ಪರಿಶೀಲನೆ ನಡೆಸಿದ ಬಳಿಕ ಮಾನದಂಡಗಳ ಪ್ರಕಾರ ಅರ್ಹತೆ ಇದ್ದರೆ ಉಪ ನಿರ್ದೇಶಕರು ಬಿಪಿಎಲ್ ಕಾರ್ಡ್‌ಗಳಾಗಿ ಮರು ಸ್ಥಾಪಿಸಬೇಕು

ಆರ್‌ಎಸ್‌ಎಸ್ ಟೀಕೆ: ಪ್ರಿಯಾಂಕ್‌ಗೆ ಬೆದರಿಕೆ

ಎರಡನೇ ಮುಖಪುಟದಿಂದ...

ಸರ್ಕಾರಿ ಸ್ಥಳಗಳಲ್ಲಿ ಶಾಖೆ, ಸಾಂಘಿಕ್ ಅಥವಾ ಬೈಠಕ್ ಹೆಸರಿನಲ್ಲಿ ಆರ್‌ಎಸ್‌ಎಸ್ ನಡೆಸುವ ಎಲ್ಲ ಬಗೆಯ ಚಟುವಟಿಕೆಗಳಿಗೂ ನಿಷೇಧ ಹೇರಬೇಕೆಂದು ಮುಖ್ಯಮಂತ್ರಿಗೆ ಪ್ರಿಯಾಂಕ್ ಅವರು ಇತ್ತೀಚೆಗೆ ಪತ್ರ ಬರೆದಿದ್ದರು.

ಬೆದರಿಕೆ ಕರೆಗಳ ಬಗ್ಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ತಂದೆಯವರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಈ ರೀತಿಯ ಕರೆಗಳು ಹಿಂದೆ ಬಂದಿದ್ದವು. ಈ ಬಗ್ಗೆ ಎಫ್‌ಐಆರ್ ದಾಖಲಿಸಬಹುದು. ಆದರೆ, ಕಂಡುಹಿಡಿಯುವುದು ಕಷ್ಟ' ಎಂದರು.

'ನಾನು ಮುಖ್ಯಮಂತ್ರಿಗೆ ಪತ್ರ ಬರೆದಿರುವುದಕ್ಕೆ ಆರ್‌ಎಸ್‌ಎಸ್ ಮಾತನಾಡುತ್ತಿಲ್ಲ, ಬಿಜೆಪಿ ಮಾತನಾಡುತ್ತಿದೆ. ಸದನದಲ್ಲಿ ಆರ್‌ಎಸ್‌ಎಸ್ ಬಗ್ಗೆ ಮಾತನಾಡಿದರೆ ಗದ್ದಲ ಎಬ್ಬಿಸಿ ಸದನವನ್ನೇ ಮುಗಿಸುತ್ತಾರೆ. ಆರ್‌ಎಸ್‌ಎಸ್ ಸೋ ಕಾಲ್ಡ್ ಒಂದು ಸಂಸ್ಥೆ ಅಷ್ಟೆ, ಅದೂ ನೋಂದಣಿಯಾಗದ ಸಂಸ್ಥೆ' ಎಂದರು.

'ಎಲ್ಲೇ ಕಾರ್ಯಕ್ರಮ ಮಾಡಿದರೂ ಅನುಮತಿ ತೆಗದುಕೊಳ್ಳಲೇಬೇಕು. ಆರ್‌ಎಸ್‌ಎಸ್‌ನವರು ಯಾಕೆ ಅನುಮತಿ ತೆಗೆದುಕೊಂಡಿಲ್ಲ. ಇದು ನನ್ನ ಬೇಡಿಕೆಯಲ್ಲ, ಸಲಹೆ. ನಾನು ಒಂದು ಕರೆ ಕೊಟ್ಟು ಅಂಬೇಡ್ಕರ್ ಕಾರ್ಯಕ್ರಮ ಮಾಡೋಣವೆಂದರೆ ಬಿಡುತ್ತೀರಾ' ಎಂದು ಪ್ರಶ್ನಿಸಿದರು.

'ಸಂವಿಧಾನದಲ್ಲಿ ನನಗೆ ನಂಬಿಕೆ. ಇದು ನನ್ನ ಸಿದ್ಧಾಂತ. ಈ ಸಿದ್ಧಾಂತದಿಂದ ನಾನು ಯಾಕೆ ಹಿಂದೆ ಸರಿಯಲಿ' ಎಂದೂ ಹೇಳಿದರು.

'ಹಿಂದಿ, ಇಂಗ್ಲಿಷ್‌ನಲ್ಲಿ ನಿಂದನೆ'

ಎರಡನೇ ಮುಖಪುಟದಿಂದ...

'ವ್ಯವಸ್ಥೆ ವಿರುದ್ಧ ಧ್ವನಿ ಎತ್ತಿದಾಗ ಇಂತಹ ಕರೆಗಳು ಸಹಜ. ಹೊರ ದೇಶದಿಂದ ಈ ಕರೆಗಳು ಬರುತ್ತಿವೆ. ವಿರೋಧ ಪಕ್ಷದಲ್ಲಿ ಇದ್ದಾಗಲೂ 2-3 ಬಾರಿ ದೂರು ಕೊಟ್ಟಿದ್ದೆ. ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ತನಿಖೆ ಮಾಡಿಸಿದ್ದರು' ಎಂದರು.

11ನೇ ಸ್ಟಾರ್‌ಶಿಪ್ ರಾಕೆಟ್‌ನ ಪ್ರಾಯೋಗಿಕ ಉಡಾವಣೆ

ವಾಷಿಂಗ್ಟನ್ (ಎಪಿ): ಇಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' ಸಿದ್ಧಪಡಿಸಿರುವ 11ನೇ ಸ್ಟಾರ್‌ಶಿಪ್ ರಾಕೆಟ್‌ನ ಪ್ರಾಯೋಗಿಕ ಉಡಾವಣೆಯನ್ನು ಯಶಸ್ವಿಯಾಗಿ ಸೋಮವಾರ ನಡೆಸಲಾಯಿತು. ಈ ಹಿಂದಿನಂತೆ ಉಪಗ್ರಹಗಳ ಪ್ರತಿಕೃತಿಗಳನ್ನು ಅಂತರಿಕ್ಷದಲ್ಲಿ ಯಶಸ್ವಿಯಾಗಿ ಬಿಡುಗಡೆ ಮಾಡಿತು.

ಈವರೆಗೆ ನಿರ್ಮಿಸಲಾದ ಅತಿ ದೊಡ್ಡ ಮತ್ತು ಅತ್ಯಂತ ಶಕ್ತಿಶಾಲಿ ರಾಕೆಟ್ 'ಸ್ಟಾರ್‌ಶಿಪ್'. ಟೆಕ್ಸಾಸ್‌ನಿಂದ ಈ ರಾಕೆಟ್ ಅನ್ನು ಉಡಾವಣೆ ಮಾಡಲಾಯಿತು. ಯೋಜನೆಯಂತೆಯೇ ಬಾಹ್ಯಾಕಾಶ ನೌಕೆಯ ಬೂಸ್ಟರ್ ಮೆಕ್ಸಿಕೊ ಕೊಲ್ಲಿಯಲ್ಲಿ ಯಶಸ್ವಿಯಾಗಿ ಇಳಿಯಿತು. ನೌಕೆಯು ಅಂತರಿಕ್ಷದಲ್ಲಿ ಕೆಲಹೊತ್ತು ಸುತ್ತಿ ಬಳಿಕ ಹಿಂದೂ ಮಹಾಸಾಗರದಲ್ಲಿ ಬಿತ್ತು.

ಮಾನವರನ್ನು ಮಂಗಳನ ಅಂಗಳಕ್ಕೆ ಕಳುಹಿಸುವ ಉದ್ದೇಶದಿಂದ 'ಸ್ಪೇಸ್‌ಎಕ್ಸ್' ಸಂಸ್ಥೆಯು ಸ್ಟಾರ್‌ಶಿಪ್ ರಾಕೆಟ್ ಅನ್ನು ಅಭಿವೃದ್ಧಿಪಡಿಸುತ್ತಿದೆ.

ಟಾಟಾ ಸನ್ಸ್: ಚಂದ್ರಶೇಖರನ್‌ಗೆ ಇನ್ನೊಂದು ಅವಧಿ?

ನವದೆಹಲಿ (ಪಿಟಿಐ): ಟಾಟಾ ಸನ್ಸ್‌ನ ಅಧ್ಯಕ್ಷ ಸ್ಥಾನಕ್ಕೆ ಎನ್. ಚಂದ್ರಶೇಖರನ್ ಅವರ ಹೆಸರನ್ನು ಟಾಟಾ ಟ್ರಸ್ಟ್ಸ್ 3ನೇ ಅವಧಿಗೆ ಶಿಫಾರಸು ಮಾಡಿದೆ.

ಟಾಟಾ ಸನ್ಸ್‌ನಲ್ಲಿ ಟಾಟಾ ಟ್ರಸ್ಟ್ಸ್ ಶೇ 66ರಷ್ಟು ಷೇರು ಹೊಂದಿವೆ. ಟಾಟಾ ಟ್ರಸ್ಟ್ಸ್ ಎಂಬುದು ದಾನ ಕಾರ್ಯಗಳಲ್ಲಿ ತೊಡಗಿರುವ ವಿವಿಧ ಟ್ರಸ್ಟ್‌ಗಳ ಒಕ್ಕೂಟ ದಂತಿದೆ. ಈ ಶಿಫಾರಸು ಕುರಿತಾಗಿ ಟಾಟಾ ಸನ್ಸ್ ಯಾವ ತೀರ್ಮಾನ ತೆಗೆದುಕೊಂಡಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ.

ಗಾಜಾ ಶಾಂತಿ ಒಪ್ಪಂದ • ವೆಸ್ಟ್ ಬ್ಯಾಂಕ್, ಗಾಜಾದ ಬೆಟುನಿಯಾದಿಂದ ಬಿಡುಗಡೆಯಾದ ಕೈದಿಗಳು

ಸೆರೆಯಾಳು ಬಿಡುಗಡೆ: ಪ್ಯಾಲೆಸ್ಟೀನಿಯನ್ನರ ಸಂಭ್ರಮ

ಇಸ್ರೇಲ್ ಜೈಲಿನಲ್ಲಿ ಬಂಧಿಯಾಗಿದ್ದ ಪ್ಯಾಲೆಸ್ಟೀನ್‌ನ ಕೈದಿಗಳು ಗಾಜಾಪಟ್ಟಿಗೆ ಬಂದ ಬಳಿಕ ಬೆಂಬಲಿಗರ ಜೊತೆ ಸಂಭ್ರಮಾಚರಣೆಯಲ್ಲಿ ತೊಡಗಿದ್ದರು —ಎಪಿ ಚಿತ್ರ

ವೆಸ್ಟ್ ಬ್ಯಾಂಕ್ (ಎಪಿ): ಗಾಜಾ ಶಾಂತಿ ಒಪ್ಪಂದದ ಅನ್ವಯ ಸುಮಾರು 2000 ಸೆರೆಯಾಳುಗಳನ್ನು ಇಸ್ರೇಲ್ ಬಿಡುಗಡೆ ಮಾಡಿದ್ದು, ಪ್ಯಾಲೆಸ್ಟೀನಿಯನ್ನರು ಸಂಭ್ರಮಾಚರಣೆ ಮಾಡಿದರು.

ಇಸ್ರೇಲ್ ಆಕ್ರಮಿತ ವೆಸ್ಟ್ ಬ್ಯಾಂಕ್ ಹಾಗೂ ಗಾಜಾದ ಖಾನ್ ಯೂನಿಸ್ ಖಾನ್‌ನ ಬೆಟುನಿಯಾದಿಂದ ಬಿಡುಗಡೆಯಾದ ಕೈದಿಗಳನ್ನು ಅಸಂಖ್ಯ ಪ್ಯಾಲೆಸ್ಟೀನಿಯನ್ನರು ಸ್ವಾಗತಿಸಿದರು. ರೆಡ್‌ಕ್ರಾಸ್ ಬಸ್‌ಗಳಲ್ಲಿ ಬಂದ ಸೆರೆಯಾಳುಗಳಿಗೆ ಗೆಲುವಿನ ಚಿಹ್ನೆ ತೋರಿದರು. ಸಾಂಪ್ರದಾಯಿಕ ಶಾಲುಗಳನ್ನು ಧರಿಸಿ ಬಂದ ಒತ್ತೆಯಾಳುಗಳನ್ನು ಹೆಗಲ ಮೇಲೆ ಹೊತ್ತು ಸಂಭ್ರಮಿಸಿದರು.

ವೆಸ್ಟ್ ಬ್ಯಾಂಕ್‌ನಲ್ಲಿ ಸಂಭ್ರಮಾಚರಣೆ ಮಾಡದಂತೆ ಇಸ್ರೇಲ್ ಈ ಹಿಂದೆಯೇ ಎಚ್ಚರಿಕೆ ನೀಡಿತ್ತು. ಯಾವುದನ್ನೂ ಲೆಕ್ಕಿಸದೆ ಪ್ಯಾಲೆಸ್ಟೀನಿಯನ್ನರು ಸಂಭ್ರಮದಲ್ಲಿ ತೇಲಾಡಿದರು. ಇಸ್ರೇಲ್‌ನ ಶಸ್ತ್ರಸಜ್ಜಿತ ವಾಹನಗಳು ಸಂಚರಿಸಿ, ಅಶ್ರುವಾಯು, ರಬ್ಬರ್ ಬುಲೆಟ್‌ಗಳನ್ನು ಸಿಡಿಸಿದವು. ಈ ವೇಳೆ ಗುಂಪು ಸ್ವಲ್ಪ ಮಟ್ಟಿಗೆ ಚದುರಿತು. ಈ ಬೆಳವಣಿಗೆ ಕುರಿತು ಇಸ್ರೇಲ್ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸೋಮವಾರ ಇಸ್ರೇಲ್‌ನಿಂದ ಬಿಡುಗಡೆಯಾದವರ ಪೈಕಿ ಇಬ್ಬರು ಮಹಿಳೆಯರು, ಅಪ್ರಾಪ್ತ ವಯಸ್ಸಿನ ಆರು ಮಂದಿಯೂ ಸೇರಿದ್ದಾರೆ ಎಂದು ಹಮಾಸ್ ಬಿಡುಗಡೆಗೊಳಿಸಿದ ಪಟ್ಟಿಯಲ್ಲಿ ತಿಳಿಸಿದೆ. ಇದಲ್ಲದೆ, ಶಿಕ್ಷೆಗೊಳಗಾದ 250 ಕೈದಿಗಳು ಬಿಡುಗಡೆಯಾಗಿದ್ದಾರೆ. ಈ ಪೈಕಿ 159 ಮಂದಿ 'ಫತಾ'ದ ಜೊತೆ ಸಂಬಂಧ ಹೊಂದಿದ್ದು, 63 ಮಂದಿ ಹಮಾಸ್ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದರು ಎಂದು ತಿಳಿಸಿದೆ.

ಸೋಮವಾರ ಪ್ಯಾಲೆಸ್ಟೀನ್‌ನ 1,700 ಮಂದಿ ಕೈದಿಗಳನ್ನು ಬಿಡುಗಡೆಗೊಳಿಸಲಾಗಿದೆ. ಇನ್ನೂ 1,300 ಪ್ಯಾಲೆಸ್ಟೀನ್‌ನ ಕೈದಿಗಳು ಇಸ್ರೇಲ್‌ನ ವಶದಲ್ಲಿದ್ದಾರೆ ಎಂದು ಇಸ್ರೇಲ್‌ನ ಮಾನವ ಹಕ್ಕು ಸಂಘಟನೆ 'ಹಮೊಕೆಡ್' ತಿಳಿಸಿದೆ.

ಬಿಪಿನ್ ಜೋಶಿ ಮೃತ: ಹಮಾಸ್ ಘೋಷಣೆ

ಬಿಪಿನ್ ಜೋಶಿ

ಟೆಲ್ ಅವೀವ್ (ಎಪಿ): ಇಸ್ರೇಲ್-ಹಮಾಸ್ ನಡುವೆ ಕದನ ವಿರಾಮ ಏರ್ಪಟ್ಟು ಕೈದಿಗಳ ವಿನಿಮಯದ ಬಳಿಕ ಮಂಗಳವಾರವೂ ಮಾತುಕತೆ ಮುಂದುವರಿಯಿತು.

ಬದುಕಿಳಿದಿದ್ದ ಇಸ್ರೇಲ್‌ನ 20 ಮಂದಿ ಕೈದಿಗಳನ್ನು ಸೋಮವಾರ ಬಿಡುಗಡೆಗೊಳಿಸಲಾಗಿತ್ತು. ಮೃತಪಟ್ಟಿದ್ದಾರೆ ಎನ್ನಲಾದ 28 ಮಂದಿಯ ಮೃತದೇಹಗಳನ್ನು ಯಾವಾಗ ಹಸ್ತಾಂತರಿಸಲಾಗುತ್ತದೆ ಎಂದು ತಿಳಿದುಬಂದಿಲ್ಲ.

ತನ್ನ ವಶದಲ್ಲಿ ಮೃತಪಟ್ಟ ನಾಲ್ಕು ಮಂದಿಯ ಹೆಸರನ್ನು ಹಮಾಸ್‌ನ ಸೇನಾ ವಿಭಾಗ ಅಲ್-ಖಸಮ್ ಬ್ರಿಗೇಡ್ ಬಿಡುಗಡೆಗೊಳಿಸಿದೆ. ಇದರಲ್ಲಿ ನೇಪಾಳದ ಬಿಪಿನ್ ಜೋಶಿ ಹೆಸರು ಕೂಡ ಇದೆ.

23 ವರ್ಷದ ಬಿಪಿನ್ ಜೋಶಿ ಅವರು, ಇಸ್ರೇಲ್-ನೇಪಾಳ ಸರ್ಕಾರದ ನಡುವಿನ ಒಪ್ಪಂದದಂತೆ 'ಗಳಿಕೆ-ಕಲಿಕೆ' ಶೈಕ್ಷಣಿಕ ಕಾರ್ಯಕ್ರಮದಡಿಯಲ್ಲಿ ಅಲ್ಲಿ ನೆಲಸಿದ್ದರು. ಹಮಾಸ್ ದಾಳಿ ವೇಳೆ ಇಸ್ರೇಲ್ ನಾಗರಿಕರಿಗೆ ಸುರಕ್ಷಿತ ಆಶ್ರಯತಾಣ ನೀಡುತ್ತಿದ್ದ ವೇಳೆ ಹಮಾಸ್ ಕೈಗೆ ಸಿಕ್ಕಿಬಿದ್ದಿದ್ದರು.

ಸದ್ಯದಲ್ಲೇ ಮೃತದೇಹ ಸ್ವದೇಶಕ್ಕೆ (ಕಠ್ಮಂಡು ವರದಿ): ಇಸ್ರೇಲ್ ಮೇಲೆ ಹಮಾಸ್ ದಾಳಿಯ ವೇಳೆ ಹಲವರ ಜೀವ ಉಳಿಸಿದ್ದ ಜೋಶಿ ಅವರ ಮೃತದೇಹವನ್ನು ಶೀಘ್ರದಲ್ಲಿ ಸ್ವದೇಶಕ್ಕೆ ಕಳುಹಿಸಲಾಗುವುದು ಎಂದು ಇಸ್ರೇಲ್‌ನ ರಕ್ಷಣಾ ಪಡೆ ತಿಳಿಸಿದೆ.

ಸರಣಿ ಕ್ಲೀನ್ ಸ್ವೀಪ್ ಮಾಡಿದ ಭಾರತ

ಕೆಲವರಿಂದ ಅವಕಾಶದ ಸದ್ಬಳಕೆ
• ದಕ್ಷಿಣ ಆಫ್ರಿಕಾ ಸರಣಿಗೆ ಸಜ್ಜು

• ಸಿಡ್ನಿ ಕಿರಣ್

ಟ್ರೋಫಿ ಜೊತೆಗೆ ಸಂಭ್ರಮಿಸಿದ ಭಾರತ ತಂಡದ ಆಟಗಾರರು ಪಿಟಿಐ ಚಿತ್ರ

ನವದೆಹಲಿ: ವೆಸ್ಟ್ ಇಂಡೀಸ್ ತಂಡದ ಹೋರಾಟದ ಪರಿಣಾಮ ಅಂತಿಮ ದಿನದವರೆಗೆ ಸಾಗಿದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಭಾರತ ಮಂಗಳವಾರ ಏಳು ವಿಕೆಟ್‌ಗಳಿಂದ ಸುಲಭವಾಗಿಯೇ ಗೆದ್ದುಕೊಂಡಿತು. ಸರಣಿಯನ್ನು ನಿರೀಕ್ಷೆಯಂತೆ 2–0ಯಿಂದ ಕ್ಲೀನ್‌ಸ್ವೀಪ್ ಮಾಡಿತು. ಮುಂದಿನ ತಿಂಗಳ ಕಠಿಣ ದಕ್ಷಿಣ ಆಫ್ರಿಕಾ ಸರಣಿಗೆ ಸಜ್ಜಾಯಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಗೆಲುವಿಗೆ 121 ರನ್‌ಗಳ ಗುರಿ ಎದುರಿಸಿದ್ದ ಭಾರತ 1 ವಿಕೆಟ್‌ಗೆ 63 ರನ್ ಗಳಿಸಿ ದಿನದಾಟ ಮುಂದುವರಿಸಿತು. ಗೆಲ್ಲಲು ಎಷ್ಟು ಹೊತ್ತು ಹಿಡಿಯಬಹುದೆಂಬ ಆಸಕ್ತಿಯಷ್ಟೇ ಉಳಿದಿತ್ತು. ಸರಿಯಾಗಿ ಒಂದು ಗಂಟೆಯಲ್ಲಿ ಈ ಔಪಚಾರವನ್ನು ಪೂರೈಸಿತು. ಇನಿಂಗ್ಸ್‌ಗೆ ಲಂಗರು ಹಾಕಿದ ಕೆ.ಎಲ್.ರಾಹುಲ್ (ಅಜೇಯ 58, 108ಎ, 4x6, 6x2) ಅವರು ಜೊಮೆಲ್ ವಾರಿಕನ್ ಬೌಲಿಂಗ್‌ನಲ್ಲಿ ಮಿಡ್‌ಆನ್‌ಗೆ ಬೌಂಡರಿ ಬಾರಿಸಿ ಗೆಲುವಿನ ರನ್ ಗಳಿಸಿದರು.

ಇದು ನಾಯಕನಾಗಿ ಗಿಲ್ ಅವರಿಗೆ ಮೊದಲ ಸರಣಿ ಗೆಲುವು. ವೆಸ್ಟ್ ಇಂಡೀಸ್ ವಿರುದ್ಧ ಇದು ಭಾರತಕ್ಕೆ ಸತತ ಹತ್ತನೇ ಸರಣಿ ಜಯ. ಒಂದು ಕಾಲದಲ್ಲಿ ಜಗತ್ತಿನ ಪ್ರಬಲ ಶಕ್ತಿಯಾಗಿದ್ದ ವೆಸ್ಟ್ ಇಂಡೀಸ್ ತಂಡ 2002ರ ಮೇ ನಂತರ ಭಾರತ ವಿರುದ್ಧ ಒಂದೂ ಟೆಸ್ಟ್ ಗೆದ್ದಿಲ್ಲ.

ಇಂಗ್ಲೆಂಡ್ ಸರಣಿಯಲ್ಲಿ ವಿಫಲರಾಗಿದ್ದ ಸಾಯಿ ಸುದರ್ಶನ್ ಅವರಿಗೆ ಇಲ್ಲಿ ಒಳ್ಳೆಯ ಅವಕಾಶ ದೊರೆಯಿತು. ಕುಲದೀಪ್ ಯಾದವ್ ಅವರಿಗೆ ಆ ಪ್ರವಾಸದಲ್ಲಿ ಒಂದೂ ಪಂದ್ಯ ಆಡುವ ಅವಕಾಶ ದೊರೆತಿರಲಿಲ್ಲ. ಇಲ್ಲಿ ದೊರೆತ ವೇದಿಕೆಯನ್ನು ಸಮರ್ಥವಾಗಿ ಬಳಸಿಕೊಂಡ ಕುಲದೀಪ್ ತಾವೆಷ್ಟು ಅಮೂಲ್ಯ ಆಟಗಾರ ಎಂಬುದನ್ನು ಸಾಬೀತುಪಡಿಸಿದರು.

ಇದಕ್ಕೆ ಮೊದಲು ಏಷ್ಯಾ ಕಪ್ ಟಿ20 ಟೂರ್ನಿಯಲ್ಲೂ ಕುಲದೀಪ್ ಅವರು ಪರಿಣಾಮಕಾರಿ ಎನಿಸಿದ್ದರು. ವಿಶ್ವದ ಶ್ರೇಷ್ಠ ಸ್ಪಿನ್ನರ್ ತಾವೆಂಬುದನ್ನು ಕಲೆಗಾರಿಕೆ ಮೂಲಕ ತೋರಿಸಿಕೊಟ್ಟರು. ಮೊದಲ ಇನಿಂಗ್ಸ್‌ನಲ್ಲಿ 82 ರನ್ನಿಗೆ 5 ವಿಕೆಟ್ ಪಡೆದಿದ್ದರು. ಎರಡನೇ ಸರದಿಯಲ್ಲಿ ಮತ್ತೆ ಮೂರು ವಿಕೆಟ್ ಪಡೆದು 'ಪಂದ್ಯದ ಆಟಗಾರ'ನಾದರು. ಕೋಟ್ಲದಂಥ ನಿರ್ಜೀವ ಪಿಚ್‌ನಲ್ಲೂ ಚಮತ್ಕಾರ ಮೆರೆದರು.

ಈ ಸರಣಿಯ ಮೊದಲ ಟೆಸ್ಟ್‌ನಲ್ಲಿ ಸಾಯಿ ಸುದರ್ಶನ್ ಮತ್ತೆ ವಿಫಲರಾಗಿದ್ದರು. ಅವರ ಮೇಲೆ ಒತ್ತಡವಿತ್ತು. ಆದರೆ 23 ವರ್ಷದ ಎಡಗೈ ಆಟಗಾರ ಮೊದಲ ಇನಿಂಗ್ಸ್‌ನಲ್ಲಿ 87 ರನ್ ಬಾರಿಸುವ ಮೂಲಕ ಟೀಕಾಕಾರರ ಬಾಯಿಮುಚ್ಚಿಸಿದರು. ಅವರಿಗೆ ಈ ಇನಿಂಗ್ಸ್ ಅಗತ್ಯವಿದ್ದ ಆತ್ಮವಿಶ್ವಾಸ ತುಂಬಿತು.

ಈ ಸರಣಿಯಲ್ಲಿ ರಾಹುಲ್, ಜೈಸ್ವಾಲ್ ಮತ್ತು ಗಿಲ್ ಶತಕಗಳನ್ನು ಬಾರಿಸಿ ಇಂಗ್ಲೆಂಡ್ ವಿರುದ್ಧದ ಸರಣಿಯ ಯಶಸ್ಸನ್ನು ಇಲ್ಲೂ ಮುಂದುವರಿಸಿದರು. ರಾಹುಲ್ ಅವರು ನಾಲ್ಕನೇ ದಿನ ಕೊಟ್ಟ ಸುಳಿವು ಕ್ಯಾಂಪ್‌ಬೆಲ್ ವಿಕೆಟ್ ಪಡೆಯುವಲ್ಲಿ ಜಡೇಜಗೆ ನೆರವಾಯಿತು. ಹಿರಿಯ ಆಟಗಾರನಾಗಿ ಅವರು ನೆಟ್ಸ್‌ನಲ್ಲೂ ಯುವ ಆಟಗಾರರಿಗೆ ಸಲಹೆಗಳನ್ನು ನೀಡುತ್ತ ಬಂದಿದ್ದಾರೆ.

36 ವರ್ಷ ವಯಸ್ಸಿನ ಜಡೇಜ ತಮ್ಮ ಆಲ್‌ರೌಂಡ್ ಆಟಕ್ಕಾಗಿ ಸರಣಿ ಶ್ರೇಷ್ಠ ಆಟಗಾರನಾದರು. ಪಂತ್ ಗಾಯಾಳಾದ ನಂತರ ಅವರು ಉಪನಾಯಕರಾಗಿದ್ದರು. ನಿಸ್ಸಂದೇಹವಾಗಿಯೂ ತಂಡದ ಪಾಲಿಗೆ ಅತಿ ಮೌಲ್ಯಯುತ ಆಟಗಾರ ಎನಿಸಿದರು. ಈ ಸರಣಿಯ ಸದುಪಯೋಗ ಪಡೆದ ಮತ್ತೊಬ್ಬರೆಂದರೆ ವಿಕೆಟ್ ಕೀಪರ್ ಧ್ರುವ್ ಜುರೆಲ್. ಗಾಯಾಳಾಗಿದ್ದ ಪಂತ್ ಅವರ ಬದಲು ಅವಕಾಶ ಪಡೆದ ಉತ್ತರ ಪ್ರದೇಶದ ಈ ಆಟಗಾರ ಮೊದಲ ಟೆಸ್ಟ್‌ನಲ್ಲಿ ಶತಕ ಬಾರಿಸಿದ್ದರು. ಇಲ್ಲಿ ಬಿರುಸಿನ 44 ರನ್ ಹೊಡೆದರು.

ಆದರೆ ನಿತೀಶ್ ಕುಮಾರ್ ರೆಡ್ಡಿ ಅವರನ್ನು ಸಮರ್ಥವಾಗಿ ಬಳಸಿಕೊಳ್ಳದಿರುವುದು ಮಾತ್ರ ಹಿನ್ನಡೆ ಎನಿಸಿತು. ಭಾರತ ಅನುಭವಿಸುತ್ತಿರುವ ಕೊರತೆ ಎಂದರೆ ವೇಗದ ಬೌಲಿಂಗ್ ಆಲ್‌ರೌಂಡರ್ ಸ್ಥಾನ. ತಂಡ ಆ ಸ್ಥಾನಕ್ಕೆ ನಿತೀಶ್ ಅವರನ್ನು ಬೆಳೆಸುತ್ತಿದೆ ಎಂದು ಗಿಲ್ ಪಂದ್ಯಕ್ಕೆ ಮೊದಲು ಹೇಳಿದ್ದರು. ಆದರೆ ಅವರು ಮೊದಲ ಟೆಸ್ಟ್‌ನಲ್ಲಿ ಬರೇ ನಾಲ್ಕು ಓವರ್ ಮಾಡಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಬೌಲ್ ಮಾಡಲಿಲ್ಲ. ನವದೆಹಲಿಯಲ್ಲಿ ತಂಡ 200 ಓವರ್‌ಗಳನ್ನು ಮಾಡಿದರೂ ನಿತೀಶ್ ಅವರಿಂದ ಗಿಲ್ ಒಂದೂ ಓವರ್ ಮಾಡಿಸಲಿಲ್ಲ. ಈ ಪಂದ್ಯದಲ್ಲಿ ವೇಗವಾಗಿ 43 ರನ್ ಗಳಿಸಿದ್ದೊಂದೇ ಅವರಿಗೆ ಸಮಾಧಾನದ ಅಂಶ.

ಭಾರತ ತಂಡ ಈಗ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲು ಆಸ್ಟ್ರೇಲಿಯಾಕ್ಕೆ ತೆರಳಲಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 5ಕ್ಕೆ 518 ಡಿಕ್ಲೇರ್ಡ್ (134.2 ಓವರ್‌ಗಳಲ್ಲಿ)
ವೆಸ್ಟ್ ಇಂಡೀಸ್: 248 (81.5 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್:
ವೆಸ್ಟ್ ಇಂಡೀಸ್ (ಫಾಲೊ ಆನ್) 390 (118.5 ಓವರುಗಳಲ್ಲಿ)
ಭಾರತ 3ಕ್ಕೆ 124 (35.2 ಓವರುಗಳಲ್ಲಿ) ಗುರಿ: 121
(ಸೋಮವಾರ: 1 ವಿಕೆಟ್‌ಗೆ 63)
ರಾಹುಲ್ ಔಟಾಗದೇ 58 (108ಎ, 4x6, 6x2)
ಸುದರ್ಶನ್ ಸಿ ಹೋಪ್ ಬಿ ಚೇಸ್ 39 (76ಎ, 4x5)
ಗಿಲ್ ಸಿ ಗ್ರೀವ್ಸ್ ಬಿ ಚೇಸ್ 13 (15ಎ, 4x1, 6x1)
ಜುರೆಲ್ ಔಟಾಗದೇ 6 (6ಎ, 4x1)
ವಿಕೆಟ್ ಪತನ: 2–88 (ಸಾಯಿ ಸುದರ್ಶನ್, 28.3), 3–108 (ಶುಭಮನ್ ಗಿಲ್, 32.6)
ಬೌಲಿಂಗ್: ಜೇಡನ್ ಸೀಲ್ಸ್ 3–0–14–0; ಜೋಮೆಲ್ ವಾರಿಕನ್ 15.2–4–39–1; ಖಾರಿ ಪಿಯರ್ 8–0–35–0; ರೋಸ್ಟನ್ ಚೇಸ್ 9–2–36–2
ಪಂದ್ಯದ ಆಟಗಾರ: ಕುಲದೀಪ್ ಯಾದವ್
ಸರಣಿಯ ಆಟಗಾರ: ರವೀಂದ್ರ ಜಡೇಜ
ಫಲಿತಾಂಶ: ಭಾರತಕ್ಕೆ 7 ವಿಕೆಟ್ ಜಯ; 2–0 ಸರಣಿ ಗೆಲುವು

ರಣಜಿ ಋತು ಇಂದಿನಿಂದ: ಪಡಿಕ್ಕಲ್ ಮೇಲೆ ನಿರೀಕ್ಷೆ
ಕರ್ನಾಟಕ ತಂಡಕ್ಕೆ ಸೌರಾಷ್ಟ್ರ ಸವಾಲು

ಪ್ರಜಾವಾಣಿ ವಾರ್ತೆ

ಕರುಣ್ ನಾಯರ್ (ಎಡ) ದೇವದತ್ತ ಪಡಿಕ್ಕಲ್

ಬೆಂಗಳೂರು: 2014–15ರ ಋತುವಿನಲ್ಲಿ ಚಾಂಪಿಯನ್ ಆದ ಬಳಿಕ ಪ್ರಶಸ್ತಿಯ ಬರವನ್ನು ಎದುರಿಸುತ್ತಿರುವ ಕರ್ನಾಟಕ ತಂಡವು ರಣಜಿ ಟ್ರೋಫಿ ಹಾಲಿ ಋತುವಿನಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ. ರಾಜ್‌ಕೋಟ್‌ನ ನಿರಂಜನ್ ಶಾ ಕ್ರೀಡಾಂಗಣದಲ್ಲಿ ಆತಿಥೇಯ ಸೌರಾಷ್ಟ್ರ ವಿರುದ್ಧ ಮಯಂಕ್ ಅಗರವಾಲ್ ಬಳಗವು ಬುಧವಾರ ಅಭಿಯಾನ ಆರಂಭಿಸಲಿದೆ.

ಉಭಯ ತಂಡಗಳು ಎಲೀಟ್ ಬಿ ಗುಂಪಿನಲ್ಲಿವೆ. ಈ ಗುಂಪಿನಲ್ಲಿ ಕಳೆದ ಬಾರಿಯ ರನ್ನರ್ಸ್ ಅಪ್ ಕೇರಳ ಸೇರಿದಂತೆ ಎಂಟು ತಂಡಗಳಿವೆ.

ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡಕ್ಕೆ ಒಂದು ದಶಕದಿಂದ ಪ್ರಶಸ್ತಿ ಸುತ್ತು ತಲುಪಲು ಸಾಧ್ಯವಾಗಿಲ್ಲ. ಈ ಬಾರಿ ತಂಡವು ಅನುಭವಿಗಳು ಮತ್ತು ಉದಯೋನ್ಮುಖ ಆಟಗಾರರ ಮಿಶ್ರಣದೊಂದಿಗೆ ಸಮತೋಲನದಿಂದ ಕೂಡಿದೆ.

ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದ ಬ್ಯಾಟರ್ ದೇವದತ್ತ ಅವರು ತಂಡವನ್ನು ಸೇರಿಕೊಂಡಿದ್ದಾರೆ. ಅನುಭವಿ ಬ್ಯಾಟರ್ ಕರುಣ್ ನಾಯರ್ ಎರಡು ವರ್ಷಗಳ ಬಳಿಕ ತಂಡಕ್ಕೆ ಮರಳಿದ್ದಾರೆ.

ಪಡಿಕ್ಕಲ್ ಅವರು ಅಗರವಾಲ್ ಅವರೊಂದಿಗೆ ಇನಿಂಗ್ಸ್ ಆರಂಭಿಸುವ ನಿರೀಕ್ಷೆಯಿದೆ. ಆರ್. ಸ್ಮರಣ್, ನಾಯರ್, ಶ್ರೀಜಿತ್ ಕೆ.ಎಲ್ ಮತ್ತು ಅಭಿನವ್ ಮನೋಹರ್ ಬ್ಯಾಟಿಂಗ್ ಜವಾಬ್ದಾರಿ ಹಂಚಿಕೊಳ್ಳಲಿದ್ದಾರೆ.

ಪಡಿಕ್ಕಲ್ ಸೇರ್ಪಡೆಯಿಂದಾಗಿ ಯುವ ಆರಂಭಿಕ ಆಟಗಾರ ಅನೀಶ್ ಕೆ.ವಿ. ಅವರು ಬೆಂಚ್‌ನಲ್ಲಿ ಉಳಿಯುವ ಸಾಧ್ಯತೆಯೇ ಹೆಚ್ಚು.

33 ವರ್ಷದ ನಾಯರ್ ಎರಡು ವರ್ಷಗಳ ಬಳಿಕ ಮತ್ತೆ ರಾಜ್ಯಕ್ಕೆ ವಾಪಸಾಗಿರುವುದು ತಂಡದಲ್ಲಿ ಆತ್ಮವಿಶ್ವಾಸ ವೃದ್ಧಿಸಿದೆ. ಕಳೆದ ಎರಡು ಋತುವಿನಲ್ಲಿ ಅವರು ವಿದರ್ಭ ತಂಡದಲ್ಲಿ ರನ್ ಹೊಳೆ ಹರಿಸಿದ್ದರು. ಹೋದ ಸಾಲಿನಲ್ಲಿ ವಿದರ್ಭ ಪ್ರಶಸ್ತಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಯಶಸ್ಸಿನ ಬಳಿಕ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಗೂ ಆಯ್ಕೆಯಾಗಿದ್ದರು. ಆದರೆ, ಅಲ್ಲಿ ನಿರಾಸೆ ಮೂಡಿಸಿದ್ದರಿಂದ ವೆಸ್ಟ್ ಇಂಡೀಸ್ ವಿರುದ್ಧ ಸರಣಿಗೆ ಕೈಬಿಡಲಾಗಿತ್ತು.

ಹೋದ ವರ್ಷ ರಣಜಿ ಟ್ರೋಫಿಗೆ ಪದಾರ್ಪಣೆ ಮಾಡಿದ್ದ ಸ್ಮರಣ್ ಅವರು ಅಮೋಘ ಪ್ರದರ್ಶನ ನೀಡಿದ್ದರು. ತಮ್ಮ ಮೊದಲ ವರ್ಷದಲ್ಲೇ 64.50 ಸರಾಸರಿಯಲ್ಲಿ 516 ರನ್ ಗಳಿಸಿ ಕರ್ನಾಟಕದ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಹೀಗಾಗಿ, ಈ ಬಾರಿಯೂ ಅವರ ಮೇಲೆ ನಿರೀಕ್ಷೆಯ ಭಾರವಿದೆ.

ಕರ್ನಾಟಕದ ಬ್ಯಾಟಿಂಗ್ ಮತ್ತು ವೇಗದ ಬೌಲಿಂಗ್ ವಿಭಾಗ ಮೇಲ್ನೋಟಕ್ಕೆ ಬಲಿಷ್ಠವಾಗಿದೆ. ಆದರೆ ಉತ್ತಮ ಸ್ಪಿನ್ನರ್‌ಗಳ ಕೊರತೆ ತಂಡವನ್ನು ಕಾಡುತ್ತಿದೆ. ಕಳೆದ ಆವೃತ್ತಿಯಲ್ಲಿ ಕೇರಳಕ್ಕೆ ಆಡಿದ್ದ ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ತಂಡಕ್ಕೆ ವಾಪಸಾಗಿರುವುದು ಕೊಂಚ ಬಲಬಂದಿದೆ. ಅವರಿಗೆ ಆಫ್ ಸ್ಪಿನ್ನರ್ ಮೊಹ್ಸಿನ್ ಖಾನ್ ಅಥವಾ ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ ಸಾಥ್ ನೀಡಲಿದ್ದಾರೆ. ವೈಶಾಖ ವಿಜಯಕುಮಾರ್ ಮತ್ತು ವಿದ್ವತ್ ಕಾವೇರಪ್ಪ ಅವರು ವೇಗದ ಬೌಲಿಂಗ್ ವಿಭಾಗವನ್ನು ಮುನ್ನಡೆಸಲಿದ್ದಾರೆ.

ಎಲೀಟ್ ಬಿ ಗುಂಪಿನ ಇತರ ಪಂದ್ಯಗಳು:
ಕೇರಳ– ಮಹಾರಾಷ್ಟ್ರ
ಗೋವಾ– ಚಂಡೀಗಢ
ಮಧ್ಯಪ್ರದೇಶ– ಪಂಜಾಬ್
ಎಲ್ಲ ಪಂದ್ಯಗಳು ಆರಂಭ: ಬೆಳಿಗ್ಗೆ 9.30

ಹಿಮಾಂಶು ಮಿಂಚು: ಜೈಂಟ್ಸ್‌ಗೆ ಜಯ

ಪಟ್ನಾ ರೇಡರ್‌ನನ್ನು ಹಿಡಿದ ಗುಜರಾತ್ ಜೈಂಟ್ಸ್ ಆಟಗಾರರು

ದೆಹಲಿ (ಪಿಟಿಐ): ಹಿಮಾಂಶು ಅವರ ಅಮೋಘ ರೇಡಿಂಗ್ ಬಲದಿಂದ ಗುಜರಾತ್ ಜೈಂಟ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಮಂಗಳವಾರ 40–32ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು.

ಇಲ್ಲಿನ ತ್ಯಾಗರಾಜ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಜೈಂಟ್ಸ್ ತಂಡವು 23–17ರಿಂದ ಮುನ್ನಡೆ ಸಾಧಿಸಿತ್ತು. ದ್ವಿತೀಯಾರ್ಧದಲ್ಲೂ ಗುಜರಾತ್ ಆಟಗಾರರು ಪಾರಮ್ಯ ಮುಂದುವರಿಸಿದರು.

ಗುಜರಾತ್ ತಂಡಕ್ಕೆ 14 ಪಂದ್ಯಗಳಲ್ಲಿ ಇದು ಐದನೇ ಗೆಲುವಾಗಿದೆ. ಪಟ್ನಾ ತಂಡಕ್ಕೆ 13 ಪಂದ್ಯಗಳಲ್ಲಿ ಇದು 10ನೇ ಸೋಲಾಗಿದೆ. ಲೀಗ್ ಪಟ್ಟಿಯಲ್ಲಿ ಗುಜರಾತ್ (10 ಅಂಕ) 10ನೇ ಸ್ಥಾನದಲ್ಲಿದ್ದರೆ, ಪಟ್ನಾ (6 ಅಂಕ) ಕೊನೆಯ ಸ್ಥಾನದಲ್ಲಿದೆ.

ಜೈಂಟ್ಸ್ ಪರ ಹಿಮಾಂಶು 11 ಅಂಕ ಗಳಿಸಿದರೆ, ಆಲ್‌ರೌಂಡರ್ ಮೊಹಮ್ಮದ್ ರೆಜಾ ಶಾಡ್ಲೊಯಿ 8 ಪಾಯಿಂಟ್ಸ್ ಗಳಿಸಿದರು. ಪಟ್ನಾ ಪರ ಮನ್‌ದೀಪ್ ಕುಮಾರ್ (12 ಅಂಕ) ಏಕಾಂಗಿ ಹೋರಾಟ ನಡೆಸಿದರು.

ಯೋಧಾಸ್‌ಗೆ ಗೆಲುವು: ರೋಚಕವಾಗಿದ್ದ ದಿನದ ಮತ್ತೊಂದು ಪಂದ್ಯದಲ್ಲಿ ಗುಮನ್ ಸಿಂಗ್ (8) ಮತ್ತು ಹಿತೇಶ್ (7) ಅವರ ಆಟದ ಬಲದಿಂದ ಯು.ಪಿ ಯೋಧಾಸ್ ತಂಡ 32–31ರಿಂದ ತಮಿಳು ತಲೈವಾಸ್ ತಂಡವನ್ನು ಮಣಿಸಿತು. ಪಂದ್ಯದ ಮೊದಲಾರ್ಧದಲ್ಲಿ ತಲೈವಾಸ್ ತಂಡ 17–14ರಿಂದ ಮುನ್ನಡೆಯಲ್ಲಿತ್ತು. ದ್ವಿತೀಯಾರ್ಧದಲ್ಲಿ ಯೋಧಾಸ್ ಪಾರಮ್ಯ ಮೆರೆಯಿತು.

ಇಂದಿನ ಪಂದ್ಯಗಳು:
ತೆಲುಗು ಟೈಟನ್ಸ್–ಬೆಂಗಾಲ್ ವಾರಿಯರ್ಸ್ (ರಾತ್ರಿ 8)
ಜೈಪುರ ಪಿಂಕ್ ಪ್ಯಾಂಥರ್ಸ್–ಪುಣೇರಿ ಪಲ್ಟನ್ (ರಾತ್ರಿ 9)

ಅಂಕ ಹಂಚಿಕೊಂಡ ಲಂಕಾ, ಕಿವೀಸ್

ಚಾಮರಿ ಅಟಪಟ್ಟು

ಕೊಲಂಬೊ (ಪಿಟಿಐ): ಆತಿಥೇಯ ಶ್ರೀಲಂಕಾ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಣ ಮಹಿಳಾ ಏಕದಿನ ವಿಶ್ವಕಪ್ ಪಂದ್ಯ ಮಂಗಳವಾರ ಮಳೆಯಿಂದಾಗಿ ಅಪೂರ್ಣಗೊಂಡಿತು. ಎರಡೂ ತಂಡಗಳು ತಲಾ ಒಂದು ಪಾಯಿಂಟ್ ಪಡೆದವು.

ಲಂಕನ್ನರು ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿ 6 ವಿಕೆಟ್‌ಗೆ 258 ರನ್‌ಗಳ ಸವಾಲಿನ ಮೊತ್ತ ಗಳಿಸಿದ್ದರು. ಟಾಸ್ ಗೆದ್ದು ಬ್ಯಾಟ್ ಮಾಡಿದ ಆತಿಥೇಯರಿಗೆ ವಿಶ್ಮಿ ಗುಣರತ್ನೆ (42, 83ಎ) ಮತ್ತು ನಾಯಕಿ ಚಾಮರಿ ಅಟಪಟ್ಟು (53, 72ಎ) ಅವರು 101 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾಗಿ ಉತ್ತಮ ಆರಂಭ ಒದಗಿಸಿದ್ದರು. ಮೂರನೇ ಕ್ರಮಾಂಕದಲ್ಲಿ ಹಸಿನಿ ಪೆರೇರಾ (44, 61ಎ) ಕೂಡ ಉಪಯುಕ್ತ ಕೊಡುಗೆ ನೀಡಿದ್ದರು.

ಆದರೆ ತಂಡ 250ರ ಗಡಿ ದಾಟಲು ನೀಲಾಕ್ಷಿಕಾ ಡಿಸಿಲ್ವ ಅವರ ಅಜೇಯ ಅರ್ಧ ಶತಕ ಕಾರಣವಾಯಿತು. ಬಿರುಸಿನ ಆಟವಾಡಿದ ಅವರು ಕೇವಲ 28 ಎಸೆತಗಳಲ್ಲಿ ಒಂದು ಸಿಕ್ಸರ್ ಮತ್ತು ಏಳು ಬೌಂಡರಿಗಳಿದ್ದ 55 ರನ್ ಗಳಿಸಿದರು. ಕಿವೀಸ್ ಕಡೆ ಸೋಫಿ ಡಿವೈನ್ 3 ವಿಕೆಟ್ ಗಳಿಸಿದರು.

ಆದರೆ ನ್ಯೂಜಿಲೆಂಡ್ ತಂಡ ಇನಿಂಗ್ಸ್ ಆರಂಭಿಸುವಷ್ಟರಲ್ಲಿ ಮಳೆ ಆರಂಭವಾಯಿತು.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಲಂಕಾ 4 ಪಂದ್ಯಗಳಿಂದ 2 ಪಾಯಿಂಟ್ಸ್ ಗಳಿಸಿದ್ದು ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿ ಮುಂದುವರಿದಿದೆ. ಮೂರು ಪಾಯಿಂಟ್ಸ್ ಹೊಂದಿರುವ ನ್ಯೂಜಿಲೆಂಡ್ ಐದನೇ ಸ್ಥಾನದಲ್ಲಿದೆ. ಶ್ರೀಲಂಕಾ– ಆಸ್ಟ್ರೇಲಿಯಾ ನಡುವಣ ಪಂದ್ಯವೂ ಮಳೆಗೆ ಕೊಚ್ಚಿಹೋಗಿತ್ತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರುಗಳಲ್ಲಿ 6ಕ್ಕೆ 258 (ವಿಶ್ಮಿ ಗುಣರತ್ನೆ 42, ಚಾಮರಿ ಅಟಪಟ್ಟು 53, ಹಸಿನಿ ಪೆರೇರಾ 44, ಹರ್ಷಿತಾ ಸಮರವಿಕ್ರಮ 26, ನೀಲಾಕ್ಷಿಕಾ ಸಿಲ್ವ ಔಟಾಗದೇ 55; ಬ್ರೀ ಇಲಿಂಗ್ 39ಕ್ಕೆ2, ಸೋಫಿ ಡಿವೈನ್ 54ಕ್ಕೆ3) ವಿರುದ್ಧ ನ್ಯೂಜಿಲೆಂಡ್; ಪಂದ್ಯ ರದ್ದು.

ಗುಕೇಶ್‌ಗೆ ಅಗ್ರ ಶ್ರೇಯಾಂಕ

ನವದೆಹಲಿ (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಇದೇ ತಿಂಗಳ 30ರಂದು ಗೋವಾದಲ್ಲಿ ಆರಂಭವಾಗಲಿರುವ ಫಿಡೆ ವಿಶ್ವಕಪ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದಾರೆ. ಅರ್ಜುನ್ ಇರಿಗೇಶಿ ಮತ್ತು ಆರ್.ಪ್ರಜ್ಞಾನಂದ ಎರಡು ಮತ್ತು ಮೂರನೇ ಶ್ರೇಯಾಂಕ ಗಳಿಸಿದ್ದಾರೆ.

ನವೆಂಬರ್ 27ರಂದು ಕೊನೆಗೊಳ್ಳಲಿರುವ ಈ ಪ್ರತಿಷ್ಠಿತ ಟೂರ್ನಿಯಲ್ಲಿ ಹಲವು ತಾರಾ ಆಟಗಾರರು ಕಾಣಿಸಿಕೊಳ್ಳಲಿದ್ದಾರೆ. ನೆದರ್ಲೆಂಡ್ಸ್‌ನ ಅನಿಶ್ ಗಿರಿ ನಾಲ್ಕನೇ ಶ್ರೇಯಾಂಕ ಗಳಿಸಿದ್ದಾರೆ.

ಸುಮಾರು ₹17.75 ಕೋಟಿ ಬಹುಮಾನ ಮೊತ್ತ ಹೊಂದಿರುವ ಈ ಟೂರ್ನಿಯಲ್ಲಿ ವಿಶ್ವದ 206 ಆಟಗಾರರು ಭಾಗವಹಿಸಲಿದ್ದಾರೆ. ಆಕರ್ಷಕ ಬಹುಮಾನದ ಜೊತೆ ಈ ವಿಶ್ವಕಪ್‌ನಲ್ಲಿ ಮೊದಲ ಮೂರು ಸ್ಥಾನ ಪಡೆದವರು 2026ರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅವಕಾಶ ಗಳಿಸಲಿದ್ದಾರೆ.

ಭಾರತ–ಪಾಕಿಸ್ತಾನ ಜೂನಿಯರ್ ಹಾಕಿ ತಂಡಗಳ ಆಟಗಾರರು ಪರಸ್ಪರ 'ಹೈಫೈ' ಮಾಡಿ ಶುಭಕೋರಿದರು

ಕ್ರೀಡಾಸ್ಫೂರ್ತಿ ಮೆರೆದ ಭಾರತ– ಪಾಕ್ ಯುವ ಹಾಕಿ ಆಟಗಾರರು

ಜೋಹರ್ (ಮಲೇಷ್ಯಾ) (ಪಿಟಿಐ): ಸೆಪ್ಟೆಂಬರ್‌ನಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯ ಭಾರತ–ಪಾಕಿಸ್ತಾನ ಪಂದ್ಯಗಳು ನಕಾರಾತ್ಮಕ ಕಾರಣಗಳಿಂದ ಸುದ್ದಿಯಾಗಿದ್ದವು. ಈ ಚಿತ್ರಣಕ್ಕೆ ಭಿನ್ನವೆಂಬಂತೆ ಈ ಎರಡು ದೇಶಗಳ ಜೂನಿಯರ್ ಹಾಕಿ ತಂಡಗಳ ಆಟಗಾರರು ಸುಲ್ತಾನ್ ಆಫ್ ಜೋಹರ್ ಕಪ್ ಟೂರ್ನಿಯಲ್ಲಿ ಪರಸ್ಪರರಿಗೆ ಶುಭ ಹಾರೈಸಿ, ಕ್ರೀಡಾಸ್ಫೂರ್ತಿ ಮೆರೆದರು.

ಟಾಸ್ ವೇಳೆ ಉಭಯ ತಂಡಗಳ ನಾಯಕರು 'ಸಾಂಪ್ರದಾಯಿಕ' ಹಸ್ತಲಾಘವವನ್ನು ನಿರಾಕರಿಸಿದ್ದರು. ಪಂದ್ಯಗಳ ವೇಳೆಯೂ ಆಟಗಾರರ ನಡುವೆ ವಾಗ್ವಾದಗಳು ನಡೆದಿದ್ದವು. ಪಂದ್ಯದ ಬಳಿಕ ಆಟಗಾರರು ಹಸ್ತಲಾಘವ ಮಾಡಿರಲಿಲ್ಲ. ಭಾರತ ಕ್ರಿಕೆಟ್ ತಂಡವು ಏಷ್ಯಾ ಕಪ್ ಗೆದ್ದ ನಂತರ ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥ, ಪಾಕಿಸ್ತಾನದ ಮೊಹ್ಸಿನ್ ನಕ್ವಿ ಅವರಿಂದ ಟ್ರೋಫಿ ಸ್ವೀಕರಿಸಿರಲಿಲ್ಲ. ಭಾರತ ಮಹಿಳಾ ತಂಡವೂ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಪಾಕ್ ಆಟಗಾರ್ತಿಯರ ಕೈಕುಲುಕಿರಲಿಲ್ಲ.

ಈ ಎಲ್ಲವೂ ಹಸಿರಾಗಿರುವಾಗಲೇ ಹಾಕಿ ತಂಡದ ಯುವ ಆಟಗಾರರು ಪರಸ್ಪರ ಶುಭಕೋರಿ, ಹೈಫೈ ಮಾಡುತ್ತಿರುವ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪಂದ್ಯ 3–3 ಡ್ರಾ: ಭಾರತ ಜೂನಿಯರ್ ಪುರುಷರ ಹಾಕಿ ತಂಡವು ಮಂಗಳವಾರ ನಡೆದ ಟೂರ್ನಿಯ ಗುಂಪು ಹಂತದ ತನ್ನ ಮೂರನೇ ಪಂದ್ಯದಲ್ಲಿ 3–3ರಿಂದ ಪಾಕಿಸ್ತಾನ ವಿರುದ್ಧ ಡ್ರಾ ಸಾಧಿಸಿತು.

ಮೊದಲ ಎರಡು ಪಂದ್ಯಗಳನ್ನು ಗೆದ್ದಿದ್ದ ಭಾರತ ಯುವ ತಂಡವು ಈ ಮೂಲಕ ಟೂರ್ನಿಯಲ್ಲಿ ಅಜೇಯವಾಗಿ ಉಳಿಯಿತು.

ಅಥ್ಲೆಟಿಕ್ಸ್: ನಾಗಿನಿಗೆ ಬೆಳ್ಳಿ ಪದಕ

ಬೆಂಗಳೂರು: ಕರ್ನಾಟಕದ ನಾಗಿನಿ ಅವರು ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಮಂಗಳವಾರ ಬೆಳ್ಳಿ ಪದಕ ಗೆದ್ದರು.

18 ವರ್ಷದೊಳಗಿನ ಮಹಿಳೆಯರ 1000 ಮೀಟರ್ ಓಟದಲ್ಲಿ 2 ನಿಮಿಷ 52.26 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ನಾಗಿನಿ ಎರಡನೇ ಸ್ಥಾನ ಪಡೆದರು. ಹರಿಯಾಣದ ಹೀನಾ (2:50.69ಸೆ) ಚಿನ್ನದ ಪದಕ ಗೆದ್ದರು.

20 ವರ್ಷದೊಳಗಿನ ಮಹಿಳೆಯರ 4x400 ಮೀಟರ್ ರಿಲೆ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು ಕಂಚಿನ ಪದಕ ತನ್ನದಾಗಿಸಿಕೊಂಡಿತು. ಎರಡನೇ ಸ್ಥಾನ ಪಡೆದಿದ್ದ ಪಂಜಾಬ್ ಮತ್ತು ಮೂರನೇ ಸ್ಥಾನ ಪಡೆದಿದ್ದ ಕೇರಳ ತಂಡಗಳು ಲೇನ್ ಉಲ್ಲಂಘನೆಗಾಗಿ ಅನರ್ಹಗೊಂಡ ನಂತರ ಕರ್ನಾಟಕಕ್ಕೆ ಈ ಪದಕ ಒಲಿಯಿತು.

ವೈಷ್ಣವಿ ರಾವಲ್, ಇಶಾ ರೆಂಜಿತ್, ಗೀತಾ ಸಿ. ಮತ್ತು ಸಾನಿಯಾ ಮೌಲಾಲಿ ಅವರಿದ್ದ ರಾಜ್ಯ ತಂಡವು 3 ನಿಮಿಷ 59.93 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ದೆಹಲಿ ತಂಡ (3:55.39ಸೆ) ಮತ್ತು ತಮಿಳುನಾಡು ತಂಡ (3:43.87ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡವು.

ಏಷ್ಯನ್ ಕಪ್: ಭಾರತದ ಕನಸು ಭಗ್ನ

ಮಡಗಾಂವ್ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡವು ಮಂಗಳವಾರ 1–2 ಗೋಲುಗಳಿಂದ ಸಿಂಗಪುರ ತಂಡಕ್ಕೆ ಮಣಿಯಿತು. ಈ ಮೂಲಕ ಎಎಫ್‌ಸಿ ಏಷ್ಯನ್ ಕಪ್ 2027ರ ಪ್ರಧಾನ ಟೂರ್ನಿಯಲ್ಲಿ ಆಡುವ ಭಾರತ ತಂಡದ ಕನಸು ಭಗ್ನಗೊಂಡಿತು.

ಕೊರಿಯಾ ಮೂಲದ ಮಿಡ್‌ಫೀಲ್ಡರ್ ಸಾಂಗ್ ಉಯಿ ಯಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಸಿಂಗಪುರ ತಂಡವು ನಿರ್ಣಾಯಕ ಹಣಾಹಣಿಯಲ್ಲಿ ಜಯಭೇರಿ ಬಾರಿಸಿತು.

ಅ.9ರಂದು ಸಿಂಗಪುರದಲ್ಲಿ ನಡೆದ ಮೊದಲ ಲೆಗ್‌ನ ಪಂದ್ಯ 1-1ರಿಂದ ಡ್ರಾ ಆಗಿತ್ತು.

ಉದ್ಯೋಗ ವಾಣಿ

A leading private university located in South Bangalore is looking to hire Admission Counsellors & Telecallers immediately for internships

Qualifications: Graduation in any stream. Postgraduates are preferred

Experience: 0–5 years of experience in admissions with an educational institute or university preferred. Freshers are welcome to apply.

Skills/Ability: Excellent written and verbal communication skills in English. Knowledge of Kannada & Hindi would be an advantage.

Please apply in confidence by sharing your updated testimonials to **admissions.talent@gmail.com**

Attractive compensation above market standards for deserving candidates

Last date of application: 31 October 2025

Maheshwari Vidya Pracharak Mandal, Pune's
KirtiShree Kabra Vidyalaya
Laxminarayan Shiksha Sankul, Behind Lokmangal Oxypark, Nirale Vasti, Murarji Peth, Solapur 413001. Maharashtra.
॥ विद्याधनं सर्वधनप्रधानम् ॥

MVPM, Pune is a 96 years old organization, with Educational Institutes in Pune, Mumbai, Solapur, Ahilyanagar and is now setting up a State-of-the Art CBSE School at Solapur and REQUIRES

PRINCIPAL
1. Age : Around 45 years
2. Experience : Around 5 Years Teaching cum Administrative
3. Educational Qualification : B.Ed. plus Masters Degree
4. Remunerations : Rs. 1.00 - 1.25 Lakhs/ Month
5. Joining Date : December 2025
6. Strong leadership, organizational & communication skills are must

P.R.O. (Public Relation Officer)
1. Any Masters Degree
2. Proficiency in Computer skills
3. Excellent Writing, Oral Presentation & communication skills
4. Prior experience with Media will be an added advantage

Salary is no bar for deserving Candidate. Interested Candidates may apply with complete CV, credentials and a recent passport size photograph on or before **31-10-2025** at the email id - **admin@ kskv.in** or send the same by courier at the above address.

Dt. 14-10-2025 | Solapur Contact : 9422066744 / 9422065710
Jhaveri

भारत इलेक्ट्रॉनिक्स
BHARAT ELECTRONICS
QUALITY. TECHNOLOGY. INNOVATION.
ಟೆಕ್ ಪರ್ಫೆಕ್ಟ್ ಸಲ್ಯೂಷನ್ಸ್ ದೇಶದ ರಕ್ಷಣೆಗಾಗಿ
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ರಕ್ಷಣಾ ಎಲೆಕ್ಟ್ರಾನಿಕ್ಸ್ ಕಂಪನಿಗೆ ತನ್ನ ಬೆಂಗಳೂರು ಘಟಕಕ್ಕೆ ಈ ಕೆಳಕಂಡ ಅಧಿಕಾರೇತರರುಗಳ ಆವಶ್ಯಕತೆ ಇವೆ:

ಕ್ರ.ಸಂ.	ಹುದ್ದೆ	ವಿದ್ಯಾರ್ಹತೆ	ವೃತ್ತಿ / ವಿಷಯ	ಹುದ್ದೆಗಳ ಸಂಖ್ಯೆ
1	ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ.ಎ.ಟಿ.)	ಮಾನ್ಯತೆ ಪಡೆದ ಸಂಸ್ಥೆಯಿಂದ ಕನಿಷ್ಠ 03 ವರ್ಷಗಳು ಇಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ.	ಎಲೆಕ್ಟ್ರಾನಿಕ್ಸ್	40
			ಮೆಕ್ಯಾನಿಕಲ್	29
			ಕಂಪ್ಯೂಟರ್ ಸೈನ್ಸ್	05
			ಎಲೆಕ್ಟ್ರಿಕಲ್	06
			ಒಟ್ಟು	80
2	ತಂತ್ರಜ್ಞ'ಸಿ'	ಎಸ್.ಎಸ್.ಎಲ್.ಸಿ. + ಐ.ಟಿ.ಐ. + 01 ವರ್ಷ ಶಿಷ್ಯವೃತ್ತಿ ಅಥವಾ ಎಸ್.ಎಸ್.ಎಲ್.ಸಿ. + 03 ವರ್ಷಗಳ ರಾಷ್ಟ್ರೀಯ ಶಿಷ್ಯವೃತ್ತಿ ಪ್ರಮಾಣಪತ್ರ ಅಧ್ಯಯನ	ಎಲೆಕ್ಟ್ರಾನಿಕ್ ಮೆಕ್ಯಾನಿಕ್	46
			ಫಿಟ್ಟರ್	26
			ಮೆಶಿನಿಸ್ಟ್	04
			ಎಲೆಕ್ಟ್ರಿಷಿಯನ್	06
			ಒಟ್ಟು	82

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವಿವರಣಾತ್ಮಕ ಜಾಹೀರಾತಿಗೆ ದಯವಿಟ್ಟು www.bel-india.in ನಲ್ಲಿ "ಕೆರಿಯರ್ಸ್" ಭಾಗವನ್ನು ವೀಕ್ಷಿಸಿ.
ಹರ್ ಏಕ್ ಕಾಮ್ ದೇಶ್ ಕೆ ನಾಮ್

ಕ್ವಾರ್ಟರ್‌ಗೆ ಧೀರ್, ಅರ್ಮಾನ್

15, 17 ವರ್ಷದೊಳಗಿನವರ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮೂರನೇ ಶ್ರೇಯಾಂಕದ ಧೀರ್ ಬೆಂಗೇರಿ ಮತ್ತು ನಾಲ್ಕನೇ ಶ್ರೇಯಾಂಕಿತ ಅರ್ಮಾನ್ ಖಾನ್ ಅವರು ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟರು.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯ (ಡಿಡಿಬಿಎ) ಆಶ್ರಯದಲ್ಲಿ ಇಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬೆಂಗಳೂರಿನ ಧೀರ್ 15–11, 15–6ರಿಂದ ಓಂಕಾರ್ ಭಟ್ ವಿರುದ್ಧ ಗೆದ್ದರು.

16ರ ಘಟ್ಟದ ಇನ್ನೊಂದು ಹಣಾಹಣಿಯಲ್ಲಿ ಬೆಂಗಳೂರಿನ ಅರ್ಮಾನ್ 15–10, 15–4ರಿಂದ ಬಿ.ಪ್ರಜ್ವಲ್ ಅವರನ್ನು ಮಣಿಸಿದರು.

ಇತರ ಪ್ರಮುಖ ಪಂದ್ಯಗಳಲ್ಲಿ ನಿಶಾನ್ ಆರ್ಯ 15–9, 15–11ರಿಂದ ಕೆ.ಬಿ.ಚಂದನ್ ಎದುರು, ದೇವಿನ್‌ಚಂದ್ರ ಜಿ.ಸಿ 15–9, 15–12ರಿಂದ ದರ್ಶನ್ ಮಣಿಕಂಠನ್ ಎದುರು, ದೇವಾಂಶ್ ಲಾಲ್ 15–4, 15–9ರಿಂದ ಅಮೋಘ್ ಪ್ರೊಲೀಸ್ ಪಾಟೀಲ ಎದುರು, ಕಾನಿಷ್ಕ್ ಬೇಂಗ್ರೆ 15–1, 15–11ರಿಂದ ಸಿದ್ಧಾಂತ್ ಬಾಲಕುಮಾರನ್ ಎದುರು ಜಯ ಗಳಿಸಿದರು.

ಪ್ರಿ ಕ್ವಾರ್ಟರ್‌ಗೆ ಚಂದನಾ: ಬಾಲಕಿಯರ ಸಿಂಗಲ್ಸ್‌ನಲ್ಲಿ ಬೆಂಗಳೂರಿನ ಚಂದನಾ ಸಿ. ಮತ್ತು ಪ್ರಣಿಕಾ ಪ್ರಭಾಕರನ್ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಎರಡನೇ ಸುತ್ತಿನ ಹಣಾಹಣಿಯಲ್ಲಿ ಚಂದನಾ 15–7, 15–5ರಿಂದ ನಾಗಪ್ರಗ್ನ್ಯಾ ಅವರನ್ನು ಸೋಲಿಸಿದರೆ, ಪ್ರಣಿಕಾ 15–2, 15–4ರಿಂದ ಸಂಜನಾ ಹೀರಾ ಎದುರು ಜಯಿಸಿದರು.

ಇತರ ಪ್ರಮುಖ ಪಂದ್ಯಗಳಲ್ಲಿ ನಿತ್ಯಾ 15–8, 15–9ರಿಂದ ದೀಕ್ಷಾಶ್ರೀ ಬಾಲಾಜಿ ವಿರುದ್ಧ, ಆರ್ನಾ ಅಸುಂಡಿ 16–14, 15–11ರಿಂದ ಸೋನಾಲಿ ಎಸ್ ವಿರುದ್ಧ, ಕಾವ್ಯಾ ಬಾಂದೇಕರ್ 15–13, 15–12ರಿಂದ ಕೆ.ಗೆಹ್ನಾ ಭೀಮಯ್ಯ ವಿರುದ್ಧ ಗೆಲುವು ಕಂಡರು.

ಎಂಟರ ಘಟ್ಟಕ್ಕೆ ವಿಶಾಲ್: 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಆಟಗಾರ ವಿಶಾಲ್ ಡಿ.ಆನಂದ್ ಎಂಟರ ಘಟ್ಟಕ್ಕೆ ಮುನ್ನಡೆದರು. ಮೂರನೇ ಸುತ್ತಿನ ಪಂದ್ಯದಲ್ಲಿ ಅವರು 15–10, 15–1ರಿಂದ ಅಥರ್ವ ತಿಮ್ಮಯ್ಯ ಅವರನ್ನು ಪರಾಭವಗೊಳಿಸಿದರು.

ಇತರ ಪಂದ್ಯಗಳಲ್ಲಿ ಪ್ರಣವ್ ಅಗರವಾಲ್ 17–15, 15–8ರಿಂದ ವೇದಾಂತ್ ರಾಜೀವ ಎದುರು, ರಿಷಿಕ್ ಬಸವರಾಜ್ 11–15, 19–17, 15–9ರಿಂದ ಅಶ್ವಿನ್ ಎ.ಶೆಟ್ಟಿ ವಿರುದ್ಧ ಜಯ ಸಾಧಿಸಿದರು.

ಬಾಲಕಿಯರ ವಿಭಾಗದ 16ರ ಘಟ್ಟದ ಹೋರಾಟಗಳಲ್ಲಿ ಸಂಸ್ಕೃತಿ ಚವ್ಹಾಣ್ 15–8, 17–15ರಲ್ಲಿ ಭುವಿ ಮಾನೆ ಎದುರು, ಚಂದನಾ ಬಿ.ಎಸ್ 13–15, 15–13, 15–9ರಲ್ಲಿ ಹರ್ಷಿಣಿ ಶಂಕರ್ ವಿರುದ್ಧ, ಲೇಖನಿ ಶ್ರೀನಿವಾಸ್ 15–7, 15–8ರಿಂದ ಮಧುರ ಪ್ರಸಾದ್ ವಿರುದ್ಧ ವಿಜಯಿಯಾದರು.

17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಸಿ.ಚಂದನಾ ಚಿತ್ರ: ಸತೀಶ್ ಬಡಿಗೇರ

18ಕ್ಕೆ ಸಹಾಯಾರ್ಥ ಪಿಕಲ್‌ಬಾಲ್ ಟೂರ್ನಿ

ಬೆಂಗಳೂರು: ದುರ್ಬಲ ಸಮುದಾಯಗಳಿಗೆ ಸೇರಿದ ಮಹಿಳಾ ಉದ್ಯಮಿಗಳಿಗೆ ಸೌರದೀಪಗಳನ್ನು ನೀಡುವ ‘ಬಿ ಪ್ರೊಲೈಟ್’ ಯೋಜನೆಗೆ ದೇಣಿಗೆ ಸಂಗ್ರಹಿಸಲು ಇದೇ 18ರಂದು ಜಯಮಹಲ್‌ನ ಗೋ ರ್‍ಯಾಲಿಯ ಡಿಪೊ–18ರಲ್ಲಿ ಪಿಕಲ್ ಬಾಲ್ ಟೂರ್ನಿ ಏರ್ಪಡಿಸಲಾಗಿದೆ.

ಆಕರ್ಷ್ ಶಾಮನೂರು ಅವರ ಕನಸಿನ ಈ ಯೋಜನೆಯಡಿ ಬೀದಿಬದಿ ವ್ಯಾಪಾರ ನಡೆಸುವ ಮಹಿಳೆಯರಿಗೆ ಕೊಡೆಯ ಸಹಿತ ಸೌರಶಕ್ತಿ ಆಧಾರಿತ ದೀಪಗಳನ್ನು ನೀಡಲಾಗುವುದು. ಇದರಲ್ಲಿ ಮೊಬೈಲ್ ಚಾರ್ಜಿಂಗ್ ವ್ಯವಸ್ಥೆಯೂ ಇರಲಿದೆ. ಇದನ್ನು ಆಕರ್ಷ್ ಅವರೇ ವಿನ್ಯಾಸಗೊಳಿಸಿದ್ದಾರೆ.

ಸೌರ ಮಂಡಲ ಫೌಂಡೇಷನ್ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಪಿಕಲ್‌ಬಾಲ್ ಟೂರ್ನಿಯು ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಇದರಿಂದ ಬರುವ ಹಣದಲ್ಲಿ ಮೇಘಾಲಯದಲ್ಲಿ ಬೀದಿಬದಿಯಲ್ಲಿ ವ್ಯಾಪಾರ ನಡೆಸುವ ನೂರಕ್ಕೂ ಹೆಚ್ಚು ಮಹಿಳೆಯರಿಗೆ ಸೌರದೀಪಗಳನ್ನು ನೀಡಿ ಅವರ ಕಾರ್ಯಕ್ಷೇತ್ರದಲ್ಲಿ ಸುಧಾರಣೆಗೆ ನೆರವಾಗುವ ವಿಶ್ವಾಸ ಹೊಂದಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ನೋಂದಾಯಿಸಲು ಸೆಂಥುರ್ ಕೃತಿಕ್ ಅವರನ್ನು (9591928188) ಸಂಪರ್ಕಿಸಬಹುದು.

ತನ್ವಿ, ಉನ್ನತಿಗೆ ನಿರಾಯಾಸ ಗೆಲುವು

ಗುವಾಹಟಿ (ಪಿಟಿಐ): ಪದಕದ ಭರವಸೆಗಳಾಗಿರುವ ತನ್ವಿ ಶರ್ಮಾ ಮತ್ತು ಉನ್ನತಿ ಹೂಡ ಅವರು ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಸಿಂಗಲ್ಸ್‌ನಲ್ಲಿ ತಮ್ಮ ಪಂದ್ಯಗಳನ್ನು ಗೆದ್ದು ಮಂಗಳವಾರ ಶುಭಾರಂಭ ಮಾಡಿದರು. ಇವರೂ ಸೇರಿ ಭಾರತದ ಏಳು ಮಂದಿ ಎರಡನೇ ಸುತ್ತಿಗೆ ಮುನ್ನಡೆದರು.

ಅಗ್ರ ಶ್ರೇಯಾಂಕದ ತನ್ವಿ 15–2, 15–1 ರಿಂದ ಪೋಲೆಂಡ್‌ನ ವಿಕ್ಟೋರಿಯಾ ಕಲೆಟ್ಕಾ ಅವರನ್ನು ನಿರಾಯಾಸವಾಗಿ ಸೋಲಿಸಿದರು. ಗೆಲ್ಲಲು ಅವರು ತೆಗೆದುಕೊಂಡಿದ್ದು 11 ನಿಮಿಷಗಳನ್ನಷ್ಟೇ. ಎಂಟನೇ ಶ್ರೇಯಾಂಕದ ಉನ್ನತಿ ಹೂಡ 15–8, 15–9 ರಿಂದ ಹಾಂಗ್‌ಕಾಂಗ್‌ನ ಲಿಯು ಹೊಯಿ ಅನ್ನಾ ಅವರನ್ನು ಪರಾಭವಗೊಳಿಸಲು 23 ನಿಮಿಷ ತೆಗೆದುಕೊಂಡರು.

ರಕ್ಷಿತಾ ಶ್ರೀ ಅವರು 15–5, 15–9 ರಿಂದ ಕೆನಡಾದ ಲೂಸಿ ಯಂಗ್ ವಿರುದ್ಧ ಗೆಲುವು ದಾಖಲಿಸಿ ಅಂತಿಮ 32ರ ಸುತ್ತಿಗೆ ಮುನ್ನಡೆದರು.

ಬಾಲಕರ ವಿಭಾಗದಲ್ಲಿ 11ನೇ ಶ್ರೇಯಾಂಕದ ರೌನಕ್ ಚೌಹಾನ್ 15–3, 15–6 ರಿಂದ ಶ್ರೀಲಂಕಾದ ತಿಸತ್ ರೂಪತುಂಗ ಅವರನ್ನು ಹಿಮ್ಮೆಟ್ಟಿಸಿದರೆ, 15ನೇ ಶ್ರೇಯಾಂಕದ ಸೂರ್ಯಾಕ್ಷ ರಾವತ್ 15–5, 15–8 ರಿಂದ ಟರ್ಕಿಯ ಯಿಜಿಟ್‌ಕನ್ ಇರೋಲ್ ಅವರನ್ನು ಮಣಿಸಿದರು.

ಜ್ಞಾನ ದತ್ತು 15–10, 15–13ರಲ್ಲಿ ಬ್ರೆಜಿಲ್‌ನ ಜೋಕಿಮ್ ಮೆಂಡೋನ್ಸಾ ವಿರುದ್ಧ ಜಯಗಳಿಸಿದರು. ಅವರು ಪ್ರಿಕ್ವಾರ್ಟರ್‌ಫೈನಲ್‌ಗೆ ಸ್ಥಾನ ಕಾದಿರಿಸುವ ಪಂದ್ಯದಲ್ಲಿ ಸೂರ್ಯಾಕ್ಷ ಅವರನ್ನು ಎದುರಿಸಲಿದ್ದಾರೆ.

ಹಿನ್ನಡೆ: ಸಿಂಗಲ್ಸ್‌ನಲ್ಲಿ ಭಾರತಕ್ಕೆ ಒದಗಿದ ಏಕೈಕ ಹಿನ್ನಡೆಯೆಂದರೆ ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತರಾದ ವೆನ್ನಲ ಕೆ. ಸೋಲು. ಲಯಕ್ಕೆ ಪರದಾಡಿದ ಅವರು ಎರಡನೇ ಸುತ್ತಿನಲ್ಲಿ 6–15, 5–15ರಲ್ಲಿ ಐದನೇ ಶ್ರೇಯಾಂಕದ ತೊನ್ರುಗ್ ಸೇಹೆಂಗ್ (ಥಾಯ್ಲೆಂಡ್) ಅವರಿಗೆ ಮಣಿದರು.

ತನ್ವಿ ಶರ್ಮಾ

ಆಯುಷ್ ಶೆಟ್ಟಿ, ಅನ್ಮೋಲ್ ನಿರ್ಗಮನ

ಒಡೆನ್ಸ್ (ಪಿಟಿಐ): ಭಾರತದ ಯುವ ಆಟಗಾರ ಆಯುಷ್ ಶೆಟ್ಟಿ ಅವರು ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಮಂಗಳವಾರ ಫ್ರಾನ್ಸ್‌ನ ಟೊಮಾ ಜೂನಿಯರ್ ಪೊಪೊವ್ ಅವರಿಗೆ ಮಣಿಯುವ ಮುನ್ನ ತೀವ್ರ ಹೋರಾಟ ತೋರಿದರು.

ಮಹಿಳಾ ವಿಭಾಗದಲ್ಲಿ ಅನ್ಮೋಲ್ ಖಾರ್ಬ್ ಸಹ ಸೋತರು.

ಫ್ರೆಂಚ್ ತಾರೆ ಟೊಮಾ ಅವರು 1 ಗಂಟೆ 17 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 21–19, 17–21, 21–15 ರಿಂದ ವಿಶ್ವ ಕ್ರಮಾಂಕದಲ್ಲಿ 30ನೇ ಸ್ಥಾನದಲ್ಲಿರುವ ಆಯುಷ್ ಅವರನ್ನು ಸೋಲಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅನ್ಮೋಲ್ ಅವರು 9–21, 14–21ರಲ್ಲಿ ಏಳನೇ ಶ್ರೇಯಾಂಕದ ಪುತ್ರಿ ಕುಸುಮ ವಾರ್ಧನಿ (ಇಂಡೊನೇಷ್ಯಾ) ಅವರಿಗೆ 34 ನಿಮಿಷಗಳಲ್ಲಿ ಮಣಿದರು.